ಕಸ್ತೂರಿ

ಡಿಸೆಂಬರ್ ೧೯೭೮



ಬೆಲೆ: ೧-೨೫



ಅತ್ಯಧಿಕ ಶಕ್ತಿಶಾಲಿ ಒಗೆಯುವ ಪೌಡರ್

ಹೊಸ ಫಾರ್ಮ್ಯುಲಾ ಡೆಟ್
ಹೆಚ್ಚು ಶಕ್ತಿಶಾಲಿ
ವಿಪುಲವಾದ ನೊರೆ
ತಾಜಾ ಪರಿಮಳ

ಉಜ್ವಲ ಬಿಳಿಪು, ಡೆಟ್‌ನ ಬಿಳಿಪು

Shilpi dm 11b/76 kan

ಕಸ್ತೂರಿ

ಪ್ರಕಟನೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು :
ಪಾದ್ರಿ ಶಾಮಣ್ಣ

ಸಂಪಾದಕರು :
ದ. ಬ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :
ಬ್ಯಾಂಕಾಕ್
ದೇವಾಲಯದ ಸಿಂಹ
ಡಾ. ವಾಮನ ಆದವಾನಿ

ಚಂದಾದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	"	ರೂ. ೨೫-೦೦
೧ ವರ್ಷ	"	ರೂ. ೧೪-೦೦
ಅರ್ಧ ವರ್ಷ	"	ರೂ. ೭-೫೦

KSTURI December 1976

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಅನುಕೂಲವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖನಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೇಕಾಗುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. 'ಇದುವೆ ಜೀವ' ಹೊರತಾದ ಟಿಪ್ಪಣಿಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖನ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು

ಈ ಸಂಚಿಕೆಯಲ್ಲಿ

ಸಹಚಿಂತನ

ಕ್ಲಿಷ್ಟ ವಿವರಗಳು

ನವೆಂಬರ್ ಸಂಚಿಕೆಯಲ್ಲಿ ಬಂದ ಶ್ರೀ ಸಂಜಯ ಹಾವನೂರರ ಪತ್ರ ಮತ್ತು ಅಲ್ಲಿ ಅವರು ವ್ಯಕ್ತಪಡಿಸಿರುವ ಸಂದೇಹವನ್ನು ನೋಡಿದೆ.

$E=mc^2$ ಸೂತ್ರ ಶಕ್ತಿ-ಕಣ ಸಂಬಂಧವನ್ನೂ $E=h\nu$ ಸೂತ್ರ ಶಕ್ತಿ-ತರಂಗ ಸಂಬಂಧವನ್ನೂ ನಿರೂಪಿಸುವ ಭಿನ್ನ ಸಮೀಕರಣಗಳು. ಇವನ್ನು ತಳಕು ಹಾಕುವುದು ಆಯಾ ಸಮೀಕರಣವನ್ನು ನಿಗಮಿಸಿರುವ ಪರಿಕಲ್ಪನೆ-ಪ್ರಯೋಗ-ನಿಯಮಗಳ ಮಿತಿಯೊಳಗೆ ಸಾಧು ಎನಿಸದು. ಫೋಟಾನಿನ ನಿಶ್ಚಲ ರಾಶಿ ಶೂನ್ಯ; ಚಲನ ರಾಶಿಯನ್ನೇ (ಆ ಲೇಖನದಲ್ಲಿ) ಬರೆದದ್ದಾಗಿದೆ. ಇದನ್ನು ಪಡೆದ ಪ್ರಯೋಗದ ವಿವರಗಳು ಜಟಿಲ ತಾಂತ್ರಿಕ ಭಾಷೆ ಸಮೀಕರಣಗಳನ್ನು ಬೇಡುತ್ತವೆ.

ಮೈಸೂರು -ಜಿ. ಟಿ. ನಾರಾಯಣರಾವ್

ಹೆಚ್ಚಿನ ಗಂಡಾಂತರ

ನವೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ ಬರಗೂರು ರಾಮಚಂದ್ರಪ್ಪ ಹಾಗು ಲೀಲಾದೇವಿಯವರ ಲೇಖನಗಳು ಒಂದು ರೀತಿಯಲ್ಲಿ ಒಂದಕ್ಕೊಂದು ಪೂರಕವಾಗಿವೆ. ಗಾಂಧಿಯವರು ಹೊಲೆ-ಮಾದಿಗರಿಗೆ 'ಹರಿಜನ' ಎಂಬ ಲೇಬಲ್ಲು ಕೊಟ್ಟದ್ದು, ರಾಮಾನುಜಾಚಾರ್ಯರು 'ಶ್ರೀಕುಲದವರು' ಎಂಬ ಹೆಸರು ಕೊಟ್ಟದ್ದು ಅವರ ಪ್ರಗತಿಪರತೆಯ ವೈಯಕ್ತಿಕ ಮುಖಗಳು. ಆದರೆ ಇದರಿಂದ ಆ ಜನಾಂಗದಲ್ಲಿ ಮತ್ತೂ ಅಷ್ಟು 'ಪ್ರತ್ಯೇಕತೆ' ಉಳಿಯಿತೇ ಹೊರತು ಸಮಾಜದ ಒಟ್ಟು ಜೀವನದಲ್ಲಿ ಅವರನ್ನು ಅಭಿನ್ನವಾಗಿ ತೊಡಗಿಸುವ ಕೆಲಸ ಆಗಲೇ ಇಲ್ಲ. ಈ ನಿಟ್ಟಿನಲ್ಲಿ ಬಸವಣ್ಣನವರಿಗಿಂತ ಗಾಂಧಿ-ರಾಮಾನುಜಾಚಾರ್ಯರು ಬಹಳ ಹಿಂದೆ ಅನ್ನಿಸಿದರೂ, ಕಾಲಮಾನದ ದೃಷ್ಟಿಯಿಂದ (೧೨ ಹಾಗು ೨೦ ನೇ ಶತಮಾನ) ಗಾಂಧಿಗಿಂತ ರಾಮಾನುಜಾಚಾರ್ಯರೇ ಪ್ರಗತಿಪರರೆಂದು ಹೇಳಬೇಕು.

ಈ ಮೂವರ ಅರೆ ಕೊರೆಗಳೇನೇ ಇರಲಿ, ಅವರ ವೈಯಕ್ತಿಕ ನಿಷ್ಠೆ, ಪ್ರಾಮಾಣಿಕತೆ, ತಾತ್ವಿಕ ನೆಲೆಗಟ್ಟುಗಳನ್ನು ಯಾರೂ ಶಂಕಿಸುವಂತಿಲ್ಲ. ಆದರೂ ಬರಗೂರರು ಎತ್ತಿ ತೋರಿಸಿದಂತೆ ಉಡುಪಿಯ ಪೇಜಾವರ ಶ್ರೀಗಳಂಥವರು, ಹಾಗು ಅವರನ್ನು ಕಾಪಿ ಮಾಡಲು ಪ್ರಯತ್ನಿಸುತ್ತಿರುವ ಕೆಲ ವೀರಶೈವ ಸ್ವಾಮಿಗಳು ಹರಿಜನಕೇರಿಗೆ ಬಿಜಯಂಗೈದು, ಅವರ ಮೈದಡವಿ, ಅವರಿಗೆ ಮುತ್ತಿನ ಹಾರ ಹಾಕಲು ಪ್ರಯತ್ನಿಸುತ್ತಿರುವುದು ಬರಿ ಬೂಟಾಟಿಕೆ ಅನಿಸುತ್ತದೆ. ಪ್ರಗತಿಯ ಮುಖವಾಡದ ಇಂಥ ಪ್ರತಿಗಾಮಿತನದ ಹಿಂದೆ 'ಸದರೀ ವ್ಯವಸ್ಥೆಯ ಬೇರು ಭದ್ರಗೊಳಿಸುವ' ಕುಹಕವೇ ಇದೆ. ಅಥವಾ ಸಮಾಜದಲ್ಲಿ ತಮ್ಮ ಪೀಠಕ್ಕೆ ಕಿಮ್ಮತ್ತು ಕಡಿಮೆಯಾಗುತ್ತಿದೆ ಎಂಬ ಹೆದರಿಕೆಯೂ ಅದಕ್ಕೆ ಕಾರಣವಾಗಿರಬೇಕು. ''ಪ್ರಧಾನಿಯವರ ೨೦ ಅಂಶದ ಕಾರ್ಯಕ್ರಮಗಳು ಮಠದ ಕಾರ್ಯಕ್ರಮಗಳೇ ಆಗಿವೆ,'' ಎಂದು ಇತ್ತೀಚೆಗೆ ಹುಬ್ಬಳ್ಳಿಯ ವಿಭೂತಿಗಳೊಬ್ಬರು ಇತ್ತ ಹಾಸ್ಯಾಸ್ಪದ ಹೇಳಿಕೆ ನನ್ನ ಮಾತನ್ನು ಸಮರ್ಥಿಸುವಂತಿದೆ. ಬೂದಿ ಕೊಟ್ಟು ಬುದ್ಧಿಗೆಡಿಸುವ ಬಾಬಾಗಳಿಗಿಂತ ಇಂಥ 'ಪ್ರಗತಿಪರ' ಶ್ರೀಶ್ರೀಶ್ರೀ ಗಳು ಸಮಾಜಕ್ಕೆ ಹೆಚ್ಚು ಗಂಡಾಂತರಕಾರಿ.

ಧಾರವಾಡ -ಚಂದ್ರಶೇಖರ ಪಾಟೀಲ

ಅಭಿನಂದನೆಗಳು

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ 'ವಾರಾಣಸಿಯ ಮಾಯಾವಿ' ಮತ್ತು 'ಬಿತ್ತಿದಂತೆ ಬೆಳೆ' ಎಂಬ ಎರಡು ಅಮೂಲ್ಯವಾದ ಲೇಖನಗಳಿಗಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇಂದು ಪವಾಡದ ಬಗ್ಗೆ ಬಹಳ ಚರ್ಚೆ ವಾದ ವಿವಾದಗಳು ನಡೆದಿವೆ. ಈ ಕಾಲದಲ್ಲಿ ಈ ಎರಡೂ ಲೇಖನಗಳ ಪ್ರಕಟನೆಯು ತುಂಬ ಔಚಿತ್ಯಪೂರ್ಣ. ಅತೀಂದ್ರಿಯ ಶಕ್ತಿ, ಪುನರ್ಜನ್ಮ ಎಂಬವು ಬರೀ ಮೂಢ ನಂಬುಗೆಗಳೆನ್ನುವವರು ಈ ಲೇಖನಗಳ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿ. ವಿಜ್ಞಾನದ ಹೆಸರಿನಿಂದ ಪರಲೋಕ, ಪುನರ್ಜನ್ಮ ಹಾಗೂ ಅತೀಂದ್ರಿಯಶಕ್ತಿಗಳನ್ನು ಅಲ್ಲಗಳೆಯುವದೂ ಒಂದು ವೈಜ್ಞಾನಿಕ ಮೂಢ ನಂಬಿಗೆ ಆಗುತ್ತದೆ ಕೆಲವು ಜನರು ತಮಗೆ ದೊರೆತ ಸಿದ್ಧಿಗಳನ್ನೂ ಅತೀಂದ್ರಿಯ ಶಕ್ತಿಗಳನ್ನೂ ದುರುಪಯೋಗಪಡಿಸಿಕೊಳ್ಳಬಹುದು. ಆದರೆ ಇದರಿಂದ ಅವುಗಳ ಅಸ್ತಿತ್ವವೇ ಇಲ್ಲ ಎನ್ನುವದು ಮಾತ್ರ ಮೂಢತನ.

ಧಾರವಾಡ -ಚಿದಂಬರಾನಂದ

ಪುಸ್ತಕ ವಿಭಾಗದಲ್ಲಿ ಪ್ರಕಟವಾದ 'ಬಿತ್ತಿದಂತೆ ಬೆಳೆ'ಯಲ್ಲಿ, 'ಪರಕಾಯ ಪ್ರವೇಶ' ಎಂಬ ತಲೆಬರಹದ ಅಡಿಯಲ್ಲಿ ಕೇಸಿಯ ಅತೀಂದ್ರಿಯ ದೃಷ್ಟಿ ಪರರ ದೇಹವನ್ನು ವೀಕ್ಷಿಸುವ ವಿಚಾರವನ್ನು ತಿಳಿಸಿದ್ದಾರೆ. ಇದನ್ನು 'ಪರಕಾಯ ಪ್ರವೇಶ' ಎನ್ನುವುದಕ್ಕಿಂತ 'ಅತೀಂದ್ರಿಯ ಮನಃಸಂಪರ್ಕ' ಅಥವಾ 'ಪರಮಾನಸ ಪ್ರತೀಕರಣ'' ಎಂದರೆ ಚೆನ್ನಾಗಿತ್ತು. ಭಾರತೀಯ ಅಂಜನ ಜ್ಯೋತಿಷಿಗಳೂ ಇದೇ ಕ್ರಮವನ್ನನುಸರಿಸುತ್ತಾರೆ ಆ ಕಾಲದಲ್ಲಿ ಸುಪ್ತ ನಿದ್ರಾವಸ್ಥೆಯಲ್ಲಿರುವ ವ್ಯಕ್ತಿಯ ಮನಸ್ಸು ಟೆಲಿಫೋನ್ ಎಕ್ಸ್‌ಚೇಂಜ್ ಸೆಂಟರಿನಂತೆ ವರ್ತಿಸಿ ಇಚ್ಛಿತ ವ್ಯಕ್ತಿಯೊಡನೆ ಮಾನಸಿಕ ಸಂಪರ್ಕ ಬೆಳೆಸಿ ಆತನ ದೇಹದ ಆಗುಹೋಗುಗಳನ್ನು ತಿಳಿದುಕೊಳ್ಳುತ್ತದೆ.

ಅಶ್ವತ್ಥಪುರ ಎನ್. ನಿತ್ಯಾನಂದ ರಾವ್

ಅಗಾಥಾ ಫುಲ್ಲರ್

ನವೆಂಬರ್ 'ಕಸ್ತೂರಿ'ಯಲ್ಲಿ ಶ್ರೀ ಗುರುಪುತ್ರ ಪ್ರಸಾದರ ಹೆಸರಿನಲ್ಲಿ ಪ್ರಕಟವಾಗಿರುವ 'ಅಗಾಥಾ ಫುಲ್ಲರ್' ಲೇಖನ. ಅದು ಬ್ಯಾರಿಸ್ಟರ್ ಕೆ. ಎಲ್. ಗೌಬಾ ಇವರ ಮನೋಜ್ಞಕೃತಿ Famous Trials for Love and Murder ೧೯೬೬ ರಲ್ಲಿ ಬೆಳಕು ಕಾಣದೆ ಇರುತ್ತಿದ್ದರೆ ಬಹಳ ಮೆಚ್ಚ ತಕ್ಕದ್ದು. ಮೇಲಿನ ಲೇಖನ ಆ ಪುಸ್ತಕದಲ್ಲಿರುವ Fullam-Clark Romance ಎಂಬುದರ ಕದ್ವತ್ ಅನುವಾದ. ಮೂಲವನ್ನು ಸೂಚಿಸಲು ಲೇಖಕರು ಮರೆತಿರುವುದನ್ನು ಅಪರಾಧವೆನ್ನದಿದ್ದರೂ ವಿಷಾದಕರವೆನ್ನಬೇಕು

ಮುಂಬಯಿ —ಸುಕುಮಾರ

(ಲೇಖಕರನ್ನು ಈ ಬಗ್ಗೆ ವಿಚಾರಿಸಲಾಗಿ ೧೯೧೩ ನೇ ವರ್ಷದ ಇಂಡಿಯನ್ ಲಾ ರಿಪೋರ್ಟರಿನಲ್ಲಿ ಪ್ರಕಟವಾದ ಈ ಪ್ರಕರಣವನ್ನು ಆಧರಿಸಿ ಬರೆದದ್ದಾಗಿ ತಿಳಿಸಿದ್ದಾರೆ.
-ಸಂ)

ಆದಿತ್ಯನೆಂದರೆ ಸೂರ್ಯ

ಶ್ರೀ ಶಂ. ಬಾ. ಜೋಶಿಯವರು ಆದಿತ್ಯನ ಬಗ್ಗೆ ಬರೆಯುತ್ತ 'ಆದಿತ್ಯಾದಿ ನವಗ್ರಹ' ಎಂದು ನಂಬಿಸಲಾಗಿದೆ; ಆದರೆ (ಒಂಭತ್ತು) ಗ್ರಹಗಳಲ್ಲಿ ಆದಿತ್ಯನ ಹೆಸರೇ ಇಲ್ಲ ಎಂದು ಆಕ್ಷೇಪಿಸಿದ್ದಾರೆ. ಇದು ತಪ್ಪಾಗಿದೆ. ಯಾಕೆಂದರೆ ಆದಿತ್ಯ ಎನ್ನುವದು ಸೂರ್ಯನ ಹೆಸರು. ನವಗ್ರಹಗಳಲ್ಲಿ ಸೂರ್ಯನೇ ಪ್ರಥಮ ಗ್ರಹ. ಸೂರ್ಯನಿಗೆ ಆದಿತ್ಯ ಎಂಬ ಹೆಸರು ಬರಲು ಕಾರಣವಿದೆ. ಋಗ್ವೇದದಲ್ಲಿ ಅದಿತಿಗೆ ಆಕಾಶ ಮತ್ತು ಅಂತರಿಕ್ಷ ಎಂದು ಅರ್ಥವಿದೆ. ಸೂರ್ಯನು ಎಲ್ಲ ಗ್ರಹಗಳಲ್ಲಿಯೂ ಆಕಾಶದಲ್ಲಿ ಅಥವಾ ಅಂತರಿಕ್ಷದಲ್ಲಿ ಅತ್ಯಂತ ತೇಜಸ್ವಿಯಾಗಿ ಬೆಳಗುತ್ತಿರುವುದರಿಂದ ಅವನಿಗೆ ಆದಿತ್ಯ ಎಂಬ ವಿಶೇಷವಾದ ಹೆಸರು ಬಂದಿದೆ. ಒಂದು ದೃಷ್ಟಿಯಿಂದ ಎಲ್ಲ ಗ್ರಹಗಳನ್ನೂ 'ಆದಿತ್ಯ'ರೆಂದು ಕರೆಯಬಹುದು. ಅಂದ ಮೇಲೆ ನವಗ್ರಹಗಳಲ್ಲಿ ಆದಿತ್ಯನ ಹೆಸರೇ ಇಲ್ಲ ಎನ್ನುವುದು ಸಂಶೋಧನೆಯ ಹೆಸರಿನಲ್ಲಿ ಮಾಡುತ್ತಿರುವ ಕಣ್ಣುಕಟ್ಟು.

'ಆದಿತ್ಯಾನಾಂ ಅಹಂ ವಿಷ್ಣು' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದು ಬಹಳ ಔಚಿತ್ಯಪೂರ್ಣವಾಗಿದೆ. ಒಂದು ವರ್ಷದಲ್ಲಿ ಹನ್ನೆರಡು ತಿಂಗಳುಗಳು. ಪ್ರತಿಯೊಂದು ತಿಂಗಳಿನಲ್ಲಿಯೂ ಕಾಣುವ ಸೂರ್ಯನಿಗೆ ನಮ್ಮ ವೈದಿಕ ಸಾಹಿತ್ಯದಲ್ಲಿ ಒಂದೊಂದು ಹೆಸರಿದೆ. ಹೀಗೆ ಆದಿತ್ಯರು ಎಂದರೆ ಹನ್ನೆರಡು ಜನ ಸೂರ್ಯರು. ಇವರಲ್ಲಿ ಶ್ರೀಕೃಷ್ಣನು ತಾನು 'ವಿಷ್ಣು' ಎಂದು ಹೇಳಿದ್ದಾನೆ. ವಿಷ್ಣು ಎನ್ನುವುದು ಸೂರ್ಯನ ಒಂದು ವಿಶೇಷವಾದ ಹೆಸರು. ಸೂರ್ಯನು ತನ್ನ ಕಿರಣಗಳಿಂದ ಈ ಜಗತ್ತನ್ನು ವ್ಯಾಪಿಸುವುದರಿಂದ ಅವನಿಗೆ ವಿಷ್ಣು (ವ್ಯಾಪನಾತ್ ವಿಷ್ಣುಃ) ಎಂಬ ಸಾರ್ಥಕನಾಮ ಬಂದಿದೆ. ಶ್ರೀಕೃಷ್ಣನೂ ಅಂತರ್ಯಾಮಿಯಾಗಿ ಆತ್ಮಸ್ವರೂಪನಾಗಿ ಈ ಜಗತ್ತನ್ನು ವ್ಯಾಪಿಸಿರುವದರಿಂದ ಆದಿತ್ಯರಲ್ಲಿಯ ವಿಷ್ಣು ಎಂಬ ರೂಪವು ತನಗೆ ವಿಶೇಷವಾಗಿ ಹೊಂದುತ್ತದೆ ಎಂದು ನುಡಿದಿದ್ದಾನೆ. ಇದು ತಾತ್ತ್ವಿಕ ದೃಷ್ಟಿಯಿಂದ ಹೇಳಿದ್ದಾಗಿದೆ.

ಶಂ. ಬಾ. ಜೋಶಿಯವರು 'ಭಾಷೆಯಿಂದ ಮಾನವ; ಭಾಷೆಯಿಂದ ಸಂಸ್ಕೃತಿ' ಎಂಬ ತಪ್ಪು ಗ್ರಹಿಕೆಯನ್ನು ಆಧರಿಸಿ ತಮ್ಮ ಸಿದ್ಧಾಂತಗಳನ್ನು ಮಂಡಿಸುತ್ತಿದ್ದಾರೆ. ನಿಜವಾದ ಸೂತ್ರವು 'ಮಾನವನಿಂದ ಭಾಷೆ; ಮಾನವನಿಂದ ಸಂಸ್ಕೃತಿ' ಎಂಬುದೇ ಆಗಿದೆ. ಮಾನವನ ಹೊರತಾಗಿ ಭಾಷೆ ಹಾಗೂ ಸಂಸ್ಕೃತಿಗಳನ್ನು ಇಷ್ಟು ವಿಶಿಷ್ಟ ರೀತಿಯಲ್ಲಿ ಬೇರೆ ಯಾವ ಪ್ರಾಣಿಗಳೂ ಬೆಳೆಸಿಲ್ಲ. ಮಾನವನಲ್ಲಿ ಕೂಡ ಇಂಥ ವಿಶಿಷ್ಟ ಗುಣವು ಹೇಗೆ ಬಂದಿತೆಂದು ಮಾನವಶಾಸ್ತ್ರಜ್ಞರಿಗೂ ಇನ್ನೂ ತಿಳಿದಿಲ್ಲ. ಈಗಲಾದರೂ ಶಂ. ಬಾ. ಅವರು ಭಾಷೆ ಹಾಗೂ ಸಂಸ್ಕೃತಿಗಳ ಬಗ್ಗೆ ಮಾಡಿಕೊಂಡಿರುವ ತಪ್ಪು ಗ್ರಹಿಕೆಗಳನ್ನು ತಿದ್ದಿಕೊಳ್ಳುವರೆಂದು ಹಾರೈಸುತ್ತೇನೆ.

ಧಾರವಾಡ —ಚಿದಂಬರಾನಂದ

ಮಾನವೀಯತೆ

ನಿಮ್ಮ ನವೆಂಬರ್ ಸಂಚಿಕೆಯಲ್ಲಿನ 'ಮಾನವೀಯತೆ: ಒಂದು ಅನಿಸಿಕೆ' (ಬರಗೂರು ರಾಮಚಂದ್ರಪ್ಪ) ಒಂದು ಅನಿಸಿಕೆಯಾಗಿಯೆ ಉಳಿಯುತ್ತದೆ.

ಬಹುಶಃ 'ಮಾನವೀಯತೆ'ಯ ಅರ್ಥವು ಈಗ ನಿಜವಾಗಿಯೂ ಕಳೆದುಕೊಂಡಿದೆಯೆಂದರೆ ಅತಿಶಯವಲ್ಲ ಮಾನವೀಯತೆಯು 'ಕರುಣೆ'ಯಾಗಿ ತಿರುಗಿ, ಆರ್ಥಿಕವಾಗಿ ರಾಜಕೀಯವಾಗಿ ಮೆರೆಯಲು ಡಾಂಭಿಕ ವ್ಯಕ್ತಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಬರಗೂರು ಅವರ ಲೇಖನ ಅಪರಿಗಿಂತ ಜನಸಾಮಾನ್ಯರಿಗೆ ಅರ್ಥವಾಗಬೇಕು. ಆದರೆ ಅವರ ಲೇಖನ ಅಗ್ರವಾಗಿ, ಗ್ರಾಂಥಿಕವಾಗಿ, ದೊಡ್ಡ ಸಾಲುಗಳ, ದೊಡ್ಡ ಪದಗಳಲ್ಲಿಯೇ ಉಳಿಯುತ್ತದೆ. ಅದು ಸಾಹಿತ್ಯದಲ್ಲಿ ಲೀನವಾಗಿದೆ. ಅವರು ಉತ್ತಮ ಸಾಮಾನ್ಯ ಪದಗಳಲ್ಲಿ ಬರೆದಿದ್ದರೆ ಜನಸಾಮಾನ್ಯರಿಗೆ ಅರ್ಥವಾಗುತ್ತಿತ್ತೇನೋ? ದಿನಕ್ಕೆ ೧೬ ಗಂಟೆ ಕೂಲಿ ಮಾಡಿಸಿಕೊಂಡು ವರ್ಷಕ್ಕೊಂದು ಸಲ ಅವರಿಗೆ ಒಂದು ದಿನ ರಜ; ಒಂದು ಹೊತ್ತು ಅನ್ನದಾಸೋಹ ಮಾಡಿ ಮಾನವೀಯತೆಯ ಮೂರ್ತಿಯೆಂದು ಪತ್ರಿಕೆಗಳ ಮುಖ ಪುಟಗಳಲ್ಲಿ ಕಾಣಿಸುವ ವ್ಯಕ್ತಿಗಳ ಮುಷ್ಟಿಯಿಂದ ಇದರ ಬಿಡುಗಡೆಯಾಗಬೇಕು. ಲೇಖನ ಚೆನ್ನಾಗಿದ್ದರೂ ಓದುಗರಿಗೆ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ.

ಬೆಂಗಳೂರು —ಪಿ. ಎನ್. ಮುದ್ದುರಾಮ ಗುಪ್ತ

ಕಸ್ತೂರಿ

ಸಂಚಿಕೆ : ೪ ಕಸ್ತೂರಿ, ಡಿಸೆಂಬರ್ ೧೯೭೬ ವರ್ಷ : ೨೧

ಸುಳ್ಳು ಹೇಳಬಾರದು

ಭಗವಾನ್ ಬುದ್ಧನು ಒಂದು ಸಲ ರಾಜಗೃಹದಲ್ಲಿ ವೇಣುವನದ ಕಳಂದಕದ ನಿವಾಸದಲ್ಲಿ ತಂಗಿದ್ದನು. ಆ ಸಮಯದಲ್ಲಿ ಆಯುಷ್ಮಂತನಾದ ರಾಹುಲನು ಅಂಬಲಟ್ಠಿಕೆಯಲ್ಲಿ ತಂಗಿದ್ದನು.

ಆಗ ಭಗವಂತನು ಸಾಯಂಕಾಲದ ಸಮಯದಲ್ಲಿ ತನ್ನ ಏಕಾಂತ ಧ್ಯಾನದಿಂದ ಎದ್ದು, ಅಂಬಲಟ್ಠಿಕೆಯಲ್ಲಿದ್ದ ಆಯುಷ್ಮಂತನಾದ ರಾಹುಲನ ಬಳಿಗೆ ಹೋದನು. ಭಗವಂತನು ದೂರದಲ್ಲಿ ಬರುವದನ್ನು ರಾಹುಲನು ಕಂಡು, ಆಸನವನ್ನೂ ಕಾಲುಗಳಿಗೆ ನೀರನ್ನೂ ಸಿದ್ಧಗೊಳಿಸಿದನು. ಭಗವಂತನು ಆಸನದಲ್ಲಿ ಕುಳಿತು ಕಾಲು ತೊಳೆದುಕೊಂಡನು. ರಾಹುಲನು ಭಗವಂತನಿಗೆ ಅಭಿವಂದಿಸಿ ಒಂದೆಡೆ ಕುಳಿತನು.

ಆಗ ಭಗವಂತನು, ನೀರಿನ ಪಾತ್ರೆಯಲ್ಲಿ ಬಲು ಕೊಂಚ ನೀರು ನಿಲ್ಲಿಸಿ, "ರಾಹುಲ, ಈ ನೀರಿನ ಪಾತ್ರೆಯಲ್ಲಿ ಬಲು ಕೊಂಚ ನೀರು ಉಳಿಸಿರುವದು ಕಾಣುವದೆ?" ಎಂದನು.

"ಹೌದು, ಭನ್ತೇ."

"ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವದಕ್ಕೆ ಲಜ್ಜೆಪಡದವರ ಶ್ರಾಮಣ್ಯವೂ ಹೀಗೆಯೆ ಬಲು ಕೊಂಚ."

ಆಗ ಭಗವಂತನು, ಆ ಉಳಿಸಿದ ಬಹು ಕೊಂಚ ನೀರನ್ನು ಚೆಲ್ಲಿ, ಆಯುಷ್ಮಂತನಾದ ರಾಹುಲನನ್ನು ಕರೆದು, "ರಾಹುಲ, ಉಳಿದ ಆ ಬಲು ಕೊಂಚ ನೀರನ್ನು ಚೆಲ್ಲಿದುದು ಕಂಡೆಯಾ?" ಎಂದನು.

"ಹೌದು, ಭನ್ತೇ."

"ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವದಕ್ಕೆ ಲಜ್ಜೆಪಡದವರ ಶ್ರಾಮಣ್ಯವು ಹೀಗೆಯೆ ಚೆಲ್ಲಿಹೋಗುವದು."

ಆಗ ಭಗವಂತನು ಆ ನೀರಿನ ಪಾತ್ರೆಯನ್ನು ಬಗ್ಗಿಸಿ, ತಲೆಕೆಳಗು ಮಾಡಿ, "ರಾಹುಲ ಬಗ್ಗಿಸಿ ತಲೆಕೆಳಗಾದ ಈ ನೀರಿನ ಪಾತ್ರೆಯು ನೋಡಿದೆಯಾ?" ಎಂದನು.

"ಹೌದು, ಭನ್ತೇ"

"ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವದಕ್ಕೆ ಲಜ್ಜೆ ಪಡದವರ ಶ್ರಾಮಣ್ಯವು ಹೀಗೆಯೆ ತಲೆಕೆಳಗಾಗಿ ಹೋಗುವದು."

ಆಗ ಭಗವಂತನು, ಆ ನೀರಿನ ಪಾತ್ರೆಯನ್ನು ಸರಿಯಾಗಿ ನಿಲ್ಲಿಸಿ, "ರಾಹುಲ! ಈ ನೀರಿನ ಪಾತ್ರೆ ಶೂನ್ಯವಾಗಿ ಬರಿದಾಗಿರುವದನ್ನು ನೋಡಿದೆಯಾ?" ಎಂದನು.

"ಹೌದು, ಭನ್ತೇ."

"ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವದಕ್ಕೆ ಲಜ್ಜೆ ಪಡದವರ ಶ್ರಾಮಣ್ಯವೂ ಹೀಗೇ ಶೂನ್ಯ, ಬರಿದು."

"ರಾಹುಲ! ರಾಜನ ಆನೆಯಿದೆ. ಅದರ ಕೊಂಬು ನೇಗಲಿನಂತೆ ಉದ್ದವಾಗಿದೆ. ಅದು ಒಳ್ಳೆ ಜಾತಿ ಆನೆ; ಅನೇಕ ಯುದ್ಧಗಳಿಗೆ ಹೋಗಿ ಬಂದುದು. ಅದು ಯುದ್ಧಕ್ಕೆ ಬಂದು ತನ್ನ ಹಿಂದಿನ ಕಾಲುಗಳಿಂದ, ಮುಂದಿನ ಕಾಲುಗಳಿಂದ, ದೇಹದ ಹಿಂಭಾಗ ಮುಂಭಾಗಗಳಿಂದ, ತಲೆ ಕಿವಿ ಕೊಂಬುಗಳಿಂದ, ಬಾಲದಿಂದ ಕೂಡ ಕೆಲಸ ಮಾಡುವದು. ಸೊಂಡಿಲನ್ನು ಮಾತ್ರ ಕಾಪಾಡಿಕೊಳ್ಳುವದು. ಆಗ ಮಾವುತನಿಗೆ, 'ಈ ಆನೆ ಕಾಲು, ದೇಹ, ತಲೆ, ಕಿವಿ, ಕೊಂಬು ಬಾಲಗಳಿಂದಲೂ ಕೆಲಸಮಾಡಿ ಸೊಂಡಿಲೊಂದನ್ನು ಕಾಪಾಡಿಕೊಳ್ಳುವದು. ಈ ಆನೆಯು ಜೀವಕ್ಕೆ ಏನೂ ಭಯವಿಲ್ಲ' ಎಂದೆನಿಸುವದು. ಯಾವಾಗ ಆ ಆನೆ ಸೊಂಡಲಿನಿಂದಲೂ ಕೆಲಸಮಾಡುವದು ಆಗ, 'ಇದು ಮಾಡದೆ ಬಿಟ್ಟದ್ದು ಯಾವದೂ ಇಲ್ಲ. ಇದರ ಜೀವ ಹೋದ ಹಾಗೆಯೆ ಸರಿ!' ಎಂದು ಮಾವುತನಿಗೆ ಅನಿಸುವದು."

"ಅದರಂತೆಯೆ ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವದಕ್ಕೆ ಲಜ್ಜೆ ಪಡದವರು ಮಾಡದೆ ಬಿಟ್ಟ ಪಾಪವು ಯಾವದೂ ಇಲ್ಲವೆಂದು 'ನಾನು ಹೇಳುತ್ತೇನೆ. ಆದ್ದರಿಂದ ರಾಹುಲ, ನಾನು ಹಾಸ್ಯಕ್ಕಾಗಿಯಾದರೂ ಸುಳ್ಳು ಹೇಳುವದಿಲ್ಲ' ಎಂದು ಹೀಗೆಯೆ ನೀನು ಶಿಕ್ಷಿಸಿಕೊಳ್ಳಬೇಕು." ಎಂದು ಭಗವಂತನು ಉಪದೇಶಿಸಿದನು. ★

(ಮಜ್ಝಿಮ ನಿಕಾಯದಿಂದ ಉದ್ಧೃತ)




ಕೈ ಮುಟ್ಟುವಲ್ಲಿ, ಕಿವಿ ಕೇಳುವಲ್ಲಿ, ಬಾಯಿ ಕೊಂಬಲ್ಲಿ
ಮೂಗು ವಾಸಿಸುವಲ್ಲಿ ಕಣ್ಣು ನೋಡುವಲ್ಲಿ
ಇಂತೀ ಐದರ ಗುಣ ಎಡೆಯಾಟ ಅದಾರಿಂದ ಎಂಬುದ ತಾ ವಿಚಾರಿಸಿದಲ್ಲಿ
ಪಂಚಕ್ರೀಯಲ್ಲಿ ಸಂಚಿತ ಪ್ರಾರಬ್ಧ ಆಗಾಮಿಯೆಂಬ ಹಿಂಚು ಮುಂಚಿಗೆ ಸಿಕ್ಕದೆ
ಕುಡಿವೆಳಗಿನ ಮಿಂಚಿನ ಸಂಚದಂತಿರಬೇಕೆಂದನಂಬಿಗರ ಚೌಡಯ್ಯ

ಇವರ ಅಂತಃಕರಣ ಸುಮಕೋಮಲ

ನಾರಾಯಣಾಚಾರ್ಯ ಹೊಸಕೇರಿ

ಮಹಾತ್ಮಾ ಗಾಂಧೀ ಯುಗಾರಂಭದಿಂದ (೧೯೨೦) ಇಂದಿರಾಗಾಂಧೀ ಯುಗಾರಂಭದ (೧೯೭೦) ವರೆಗಿನ ಐವತ್ತು ವರುಷದ ಅವಧಿ ಆಧುನಿಕ ಭಾರತದ ಮತ್ತು ನವ ಕರ್ನಾಟಕದ ಇತಿಹಾಸದಲ್ಲಿ ಒಂದು ಸುವರ್ಣಯುಗವೆಂದು ಹೇಳಬಹುದು. ಇಂಥ ಒಂದು ಪರ್ವಕಾಲದಲ್ಲಿ ಬಾಳಿ ಬದುಕಿ ಅಂದಿನ ಚೈತನ್ಯಪೂರ್ಣ ವಾತಾವರಣದಲ್ಲಿ ವ್ಯಕ್ತಿತ್ವ ಅರಳಿಸಿಕೊಂಡು ಜೀವನ ಸಾಫಲ್ಯ ಪಡೆದವರು ಹಲವರು. ಅವರಲ್ಲಿ ಡಾಕ್ಟರ್ ಕಬ್ಬೂರ ನಾರಾಯಣರಾಯರಂತೆ ನಾಡಿನ ಬಗ್ಗೆ ಸಮಗ್ರ ಚಿತ್ರವನ್ನು ಕಣ್ಮುಂದಿರಿಸಿಕೊಂಡು ಅವಿಶ್ರಾಂತ ಶ್ರಮಪಟ್ಟವರು ಕೆಲವೇ ಜನರು.

ಡಾಕ್ಟರ್ ನಾರಾಯಣರಾಯರ ಸೇವೆ ಅನೇಕ ಮುಖ. ಜನರಿಗೆ ಅವರ ಪರಿಚಯ ಹೆಚ್ಚಾಗಿ ಸ್ವಾತಂತ್ರ್ಯ ಹೋರಾಟಗಾರ, ಶಿಕ್ಷಣ ತಜ್ಞ, ಹರಿಜನ ಬಂಧು, ಗಾಂಧೀ ಪ್ರಣೀತ ವಿಧಾಯಕ ಕಾರ್ಯರಂಗದ ನಿಷ್ಠಾವಂತ ಕಾರ್ಯಕರ್ತ ಎಂದು ಮುಂತಾಗಿ ಮಾತ್ರ. ವೃತ್ತಿಯಿಂದ ಅವರೊಬ್ಬ ನಿಷ್ಣಾತ ವೈದ್ಯರೆಂದೂ ಹಲವರು ಬಲ್ಲರು— ಡಾಕ್ಟರರು ಸಾರ್ವಜನಿಕರಂಗದಲ್ಲಿ ಕೆಲಸ ಮಾಡುತ್ತಿದ್ದು ಅವರ ಕಾರ್ಯತತ್ಪರತೆ, ಧ್ಯೇಯ ನಿಷ್ಠೆಗಳು ಅವರಿಗೆ ಅನೇಕ ಅನುಯಾಯಿಗಳನ್ನೂ ಸ್ನೇಹಿತರನ್ನೂ ಗಳಿಸಿಕೊಟ್ಟವು. ಆದರೆ ಅವರ ದರ್ಪ, ಕಠೋರ ಸ್ವಭಾವ, ಸಿಡಿಗುಂಡಿನಂತಹ ಮಾತುಗಳು, ಅವರ ಒಳ್ಳೆಯತನವನ್ನು ಬದಿಗಿರಿಸಿ, ಅವರೊಬ್ಬ ವಜ್ರಹೃದಯಿ ಎಂಬ ಭಾವನೆ



ಯನ್ನು ಹುಟ್ಟಿಸಿದವು. ಎಷ್ಟೋ ಸಲ ಅವರ ಸಹಕಾರಿಗಳು ಕೂಡ ಇವರ ವರ್ತನೆಗೆ ಬೆಚ್ಚಿ ಇವರೊಬ್ಬ 'ಹಿಟ್ಲರ್' ಎಂದು ಟೀಕಿಸಿದ್ದೂ ಉಂಟು. ಆದರೆ ಇವರ ವ್ಯಕ್ತಿತ್ವವನ್ನು ಗುರುತಿಸಿ, ಅವರನ್ನು ಸಹಿಸಿಕೊಂಡ ಅನೇಕ ಕಾರ್ಯಕರ್ತರು ಇವರ ಅಂತಃಕರಣ ಹೂವಿಗಿಂತ ಹಗುರು ಎಂಬುದನ್ನರಿತುಕೊಂಡು ಅವರಿಗೆ ಮಾರುಹೋದುದುಂಟು ಎಂಬುದು ಬಹಳಷ್ಟು ಜನಕ್ಕೆ ಗೊತ್ತಿಲ್ಲ. ವಿಪತ್ತಿನಲ್ಲಿರುವ ಕಾರ್ಯಕರ್ತರ ನೆರವಿಗೆ ಇವರು ಹೋಗುತ್ತಿದ್ದರಲ್ಲದೆ ಅನೇಕರ ಕಷ್ಟ ನಿವಾರಣೆಗೆ ಇವರು ತನುಮನಧನದಿಂದ ನೆರವು ನೀಡಿದ್ದುಂಟು. ಇವರಿಂದ ವೈದ್ಯಕೀಯ ಶುಶ್ರೂಷೆ ಪಡೆದ ಸಾಮಾಜಿಕ ಕಾರ್ಯಕರ್ತರು ಈ ಮಾತಿಗೆ ಸಾಕ್ಷಿ ಹೇಳಬೇಕು.

೨

ಡಾಕ್ಟರದೂ ನನ್ನದೂ– ಅವರೇ ಹೇಳಿದಂತೆ ಐವತ್ತು ವರ್ಷದ ಸಂಬಂಧ. ಅನೇಕ ವರ್ಷ ನಾವೂ ಅವರೂ ನೆರೆಹೊರೆಯವರಾಗಿದ್ದೆವು. ಅವರು ಶಿಕ್ಷಣರಂಗ ಪ್ರವೇಶಿಸಿದಾಗ ನಾನು ಇನ್ನೂ ವಿದ್ಯಾರ್ಥಿಯಾಗಿದ್ದೆ. ಅವರು ನಮಗೆ ಮಾಧ್ಯಮಿಕ ಶಾಲೆ (ಕರ್ನಾಟಕ ಹೈಸ್ಕೂಲ)ಯಲ್ಲಿ ಶರೀರ ಶಾಸ್ತ್ರದ ಬಗ್ಗೆ ಪಾಠ ಹೇಳಿದರು. ಅಲ್ಲಿಯೇ ಮೊದಲ ಸಲ ಅವರು ವ್ಯಾಯಾಮ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿದಾಗ ತತ್ತರಿಸಿದವರಲ್ಲಿ ನಾನೊಬ್ಬ. ಕಾರಣಾಂತರದಿಂದ ನಾನು ನೇರವಾಗಿ ಅವರ ಪ್ರಭಾವಕ್ಕೊಳಗಾಗಿ ಅವರ ನಿತ್ಯ ನಿಕಟವರ್ತಿಯಾಗದಿದ್ದರೂಸಾಮಾನ್ಯವಾಗಿ ಅವರ— ನಮ್ಮ ವಿಚಾರ ಸಾಮ್ಯದಿಂದ ನಾನು ಅವರ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಮೇಲಾಗಿ ನಮ್ಮ–ಅವರ ಕುಟುಂಬಗಳಲ್ಲಿ ಒಂದು ಬಗೆಯ ಆತ್ಮೀಯತೆ ಬೆಳೆದು ಬಂದು ಋಣಾನುಬಂಧವೇ ಇತ್ತು. ನಮ್ಮ ಕುಟುಂಬದಲ್ಲಿ ಅವರಿಂದ ವೈದ್ಯಕೀಯ ಶುಶ್ರೂಷೆ ಪಡೆಯದೆ ಉಪಕೃತರಾಗದಿದ್ದವರು ಇಲ್ಲವೇ ಇಲ್ಲವೆಂಬುದು ನಿಜವಾದ ಮಾತೇ. ಇಂತಹ ಸಂದರ್ಭಗಳಲ್ಲಿಯೇ ನಾನು ಅವರ ಅಂತಃಕರಣವನ್ನು ಗುರುತಿಸಿಕೊಂಡುದು.

ನಿತ್ಯ ಜೀವನದಲ್ಲಷ್ಟೇ ಅಲ್ಲ– ಸೆರೆಮನೆಯಲ್ಲಿಯೂ ಅವರ ಶುಶ್ರೂಷೆಯ ಭಾಗ್ಯ ಪಡೆದು ಕುತ್ತಿನಿಂದ ಪಾರಾದವರಲ್ಲಿಯೂ ನಾನೊಬ್ಬ. ೧೯೪೨ರಲ್ಲಿ ಹಿಂಡಲಗಿ ಸೆರೆಮನೆಯಲ್ಲಿ ಹಬ್ಬಿದ ಮಾರಿಕಾಬೇನೆಯನ್ನು ನಿರ್ಮೂಲನಗೊಳಿಸುವಲ್ಲಿ ಅವರು ವಹಿಸಿದ ಪಾತ್ರ– ೧೯೪೩ರಲ್ಲಿ ನಾನು ಹಿಂಡಲಗಿ ಸೇರಿದಾಗ ಇನ್ನೂ ನಿತ್ಯ ಚರ್ಚೆಯ ಮಾತಾಗಿತ್ತು. ನಾನು ಹಿಂಡಲಗಿ ಸೆರೆಮನೆಯಲ್ಲಿ ಕಾಲಿಡುತ್ತಿರುವಾಗಲೇ– ಅಲ್ಲಿ ವೈದ್ಯಕೀಯ ಅಧಿಕಾರಿಗಳಾಗಿದ್ದ ಡಾ. ಎಂ. ವ್ಹಿ. ಕುಲಕರ್ಣಿಯವರು (ನನ್ನ ಸ್ನೇಹಿತರು– ಈಗ ಅವರು ಡಾಕ್ಟರರ ಬೀಗರು) ನನ್ನ ಬಿಳಚಿಕೊಂಡ ಮೊಗವನ್ನು ಕಂಡು ನನ್ನನ್ನು ನೇರವಾಗಿ ಸೆರೆಮನೆಯ ಆಸ್ಪತ್ರೆಗೇ ಕಳುಹಿಸಿದರು. ಮುಂದೆ ಒಂದು ಗಂಟೆಯೊಳಗಾಗಿ ಅವರು ಸೆರೆಮನೆಯ ಇನ್ನೊಂದು ಭಾಗದಲ್ಲಿದ್ದ ಕಬ್ಬೂರ ಡಾಕ್ಟರರಿಗೆ ನಾನು ಅಲ್ಲಿಗೆ ಬಂದ ವಿಷಯವನ್ನೂ ನನ್ನ ಅನಾರೋಗ್ಯದ ವಿಷಯವನ್ನೂ ತಿಳಿಸಿದರು. ಅಂದೇ ಮಧ್ಯಾಹ್ನ ಅವರು ಸಮಯ ಸಾಧಿಸಿ (ಆಗ ಅವರು ತಮ್ಮ ವಿಭಾಗ ಬಿಟ್ಟು ಬೇರೆಡೆ ಹೋಗಕೂಡದೆಂಬ ನಿರ್ಬಂಧವಿತ್ತು) ಆಸ್ಪತ್ರೆಗೆ ಬಂದು ನನ್ನನ್ನು ಪರೀಕ್ಷಿಸಿ ತುಸು ಗಂಭೀರರಾದರು. ಮರುದಿನದಿಂದ ಡಾಕ್ಟರರ ಚಿಕಿತ್ಸೆ ಆರಂಭವಾಯಿತು. ಸೆರೆಮನೆಯಲ್ಲಿ ದೊರಕುವ ಔಷಧಿಗಳಿಂದ ಬೇನೆ ಗುಣವಾಗದೆಂದು ತಿಳಿದು–ಬೆಳಗಾವಿಯಿಂದಲೂ ಧಾರವಾಡದಿಂದಲೂ ಔಷಧಿ ತರಿಸುವುದೂ ಮೊದಲಾಯಿತು. ಒಂದು ಸಲ ನನಗೆ ಕೊಡಲಾದ ಚುಚ್ಚುಮದ್ದಿನಿಂದ ನನ್ನ ತಲೆ ತಿರುಗಿ ಬಿದ್ದು ಪೆಟ್ಟು ತಿನ್ನುತ್ತಿದ್ದೆ. ಆದರೆ ಇದನ್ನು ನೋಡಿದ ಶ್ರೀ. ಶ್ರೀಪಾದರಾವ ಕಿತ್ತೂರ ಎಂಬವರು ಧಾವಿಸಿ ಬಂದು ತಮ್ಮ ತೊಡೆಯೊಡ್ಡಿದ್ದರಿಂದ ನನ್ನ ತಲೆ ಅವರ ತೊಡೆಯ

ಮೇಲೆ ಬಿದ್ದು ನಾನು ಪಾರಾದೆ. ಔಷಧಿಯಿಂದ ಪ್ರಯೋಜನವಾಗದೆ ಹಾಲು- ಹಣ್ಣಿನ ರಸ ಕೂಡ ನನಗೆ ದಕ್ಕದಂತಾದಾಗ ನಮ್ಮ ಡಾಕ್ಟರರು ಚಿಂತೆಗೊಳಗಾಗಿ, "ನಾರಾಯಣನಿಗೆ ಇಲ್ಲಿ ಸರಿಯಾಗಿ ಉಪಚಾರವಾಗುವದಿಲ್ಲ. ಆದ್ದರಿಂದ ಬರೆದುಕೊಟ್ಟಾದರೂ ಹೊರಗೆ ಹೋಗುವಂತೆ ಹೇಳು. ಅವನು ಜೀವ ಕಳೆದುಕೊಳ್ಳಬಾರದು," ಎಂದು ನನ್ನ ಮನ ಒಲಿಸಲು ನಮ್ಮ ಸ್ನೇಹಿತರಾಗಿದ್ದ ಮತ್ತು ಸೆರೆಮನೆಯಲ್ಲಿಯೂ ನಮ್ಮೊಡನಿದ್ದ ದಿ. ಜೋಗ ಶೀನಪ್ಪನವರಿಗೆ ಸೂಚಿಸಿದರು. ನಾನು ಈ ಸೂಚನೆಗೆ ಹಾರಿಕೆ ಕೊಂಡ ಉತ್ತರ ನೀಡಿ ಹೊರ ಹೋಗಲು ಸಮ್ಮತಿಸಲಿಲ್ಲ. ಈ ಸಮಯದಲ್ಲಿ ಡಾಕ್ಟರರು ಆಗಾಗ ವಿಚಾರಪರರಾಗುತ್ತಿದ್ದುದನ್ನು ಕಂಡ ಡಾ. ಹುಯಿಲಗೋಳ ವೆಂಕಟರಾಯರು ವಿಷಯವರಿತು, "ನಾರಾಯಣನ (ನನ್ನ) ಆರೋಗ್ಯದ ಚಿಂತೆ ನಿಮಗೆ ಬೇಡ. ನಾನು ನೋಡಿಕೊಳ್ಳುವೆ," ಎಂದು ಅವರಿಗೆ ಸಮಾಧಾನ ಹೇಳಿ ಒಂದು ತಿಂಗಳವರೆಗೆ ದಿನಾಲು ಮಧ್ಯಾಹ್ನ ೨-೩ ತಾಸು ನನ್ನ ಹತ್ತಿರ ಕುಳಿತು ವಾತ್ಸಲ್ಯದಿಂದ ನನ್ನನ್ನು ನೋಡಿಕೊಂಡರು.

ಈ ಸಮಯಕ್ಕೇ- 'ಕಬ್ಬೂರ ಡಾಕ್ಟರರು ನಿತ್ಯ ಆಸ್ಪತ್ರೆಗೆ ಹೋಗಿ ರಾಜಕೀಯ ಕೈದಿಗಳಿಗೆ ಉಪಚಾರ ಮಾಡುತ್ತಾರೆ' ಎಂಬ ವಿಷಯ ಅಧಿಕಾರಿಗಳಿಗೆ ಗೊತ್ತಾಗಿ ಅವರ ಚಲನವಲನವನ್ನು ಬಿಗಿಯಾಗಿ ನಿಯಂತ್ರಿಸಲಾಯಿತು. ಹೀಗಾಗಿ ನಾನು ಸೆರೆಮನೆಯಿಂದ ಹೊರಬಂದ ಮೇಲೆಯೇ ಅವರ ಭೆಟ್ಟಿಯಾಯಿತು. ನನ್ನ ಬಿಡುಗಡೆಯಾದ ಕೆಲ ದಿನಗಳಲ್ಲಿಯೇ ಅವರೂ ಹೊರಬಂದರು. ಆಗ ನಾವು ಮೂವರು—ನಾನು, ಶ್ರೀ ಕೊಪ್ಪೀಕರ ನಾರಾಯಣರಾಯರು ಮತ್ತು ಅವರ- ಡಾಕ್ಟರರ- ಅಣ್ಣ ಮಧ್ವರಾಯರು ತೀಬ ಅನಾರೋಗ್ಯದಿಂದ ಬಳಲುತ್ತಿದ್ದೆವು. ನಾವಿಬ್ಬರು—ನಾನು ಮತ್ತು ಶ್ರೀ ಕೊಪ್ಪೀಕರ ಅವರು ಡಾಕ್ಟರರ ಚಿಕಿತ್ಸೆಯಿಂದ ಗುಣ ಹೊಂದಿದೆವು. ಆದರೆ ಮಧ್ವರಾಯರನ್ನು ಸೆರೆಮನೆಯಲ್ಲಿಯೇ ಹಣ್ಣುಮಾಡಿದ ಬೇನೆ ಯಾವ ಚಿಕಿತ್ಸೆಗೂ ಬಗ್ಗದೆ ಅವರ ಆಹುತಿಯನ್ನೇ ತೆಗೆದುಕೊಂಡಿತು. ಶುಶ್ರೂಷಾ ಪದ್ಧತಿ ಮತ್ತು ರೋಗಿಯಲ್ಲಿ ವಿಶ್ವಾಸ ಕುದುರಿಸುವ ಆತ್ಮೀಯ ಭಾವನೆಗಳ ಮೂಲಕ ಡಾಕ್ಟರರು ಅನೇಕ ಸ್ನೇಹಿತರನ್ನು ಗಳಿಸಿಕೊಂಡರು, ಉಳಿಸಿಕೊಂಡರು ಎಂಬುದಕ್ಕೆ ಇಂತಹ ಇನ್ನೂ ಅನೇಕ ನಿದರ್ಶನಗಳನ್ನು ಕೊಡಬಹುದು.

ಡಾಕ್ಟರರ ಮಾನವೀಯತೆಗೆ ಇಲ್ಲಿ ಇನ್ನೊಂದು ನಿದರ್ಶನ ಹೇಳಬಹುದು. ಅದು ಪಶುಗಳಿಗೆ ಸಂಬಂಧಿಸಿದ್ದು. ಸ್ವಾತಂತ್ರ್ಯ ನಂತರ ಡಾಕ್ಟರರು ಕೈಗೆತ್ತಿಕೊಂಡ, ವಿಧಾಯಕ ಕಾರ್ಯಕ್ರಮಗಳಲ್ಲಿ ಹಾಲಿನ 'ಡೇರಿ'ಯೂ ಒಂದು. ಈ ಡೇರಿಯಲ್ಲಿ ಪ್ರಾರಂಭದ ದಿನಗಳಲ್ಲಿ ೨೦ ಎಮ್ಮೆಗಳಿದ್ದವು. ಒಂದು ದಿನ ಆಹಾರ ದೋಷದಿಂದಲೋ ಏನೋ ಎಲ್ಲ ಎಮ್ಮೆಗಳು ಗ್ರಾಮೀಣ ಪರಿಭಾಷೆಯಲ್ಲಿ ಹೇಳಬೇಕೆಂದರೆ 'ಉಬ್ಬಿಕೊಳ್ಳಲು' ಆರಂಭಿಸಿದವು. ಸ್ಥಳೀಯ ಪಶುವೈದ್ಯರು ಕೂಡಲೇ ಉಪಚಾರ ಮಾಡಿದರೂ ಬೇನೆ ಕಡಿಮೆಯಾಗಲಿಲ್ಲ. ಒಂದೆರಡು ಎಮ್ಮೆಗಳು ತೀರ ನಿತ್ರಾಣವಾಗಿ ಕಣ್ಣು ಮುಚ್ಚಿ ಮಲಗಿದವು. ಉಳಿದವು ನೀರು-ಆಹಾರ ನಿರಾಕರಿಸಲಾರಂಭಿಸಿದವು. ಇದರಿಂದ ಚಿಂತಾಕ್ರಾಂತರಾದ ಡಾಕ್ಟರರು ಪಶುವೈದ್ಯರೊಡನೆ ವಿಚಾರ ವಿನಿಮಯ ನಡೆಸಿ, ರೋಗ-ನಿದಾನ, ಚಿಕಿತ್ಸಾ ಕ್ರಮಗಳ ಬಗ್ಗೆ ತೀಕ್ಷ್ಣವಾಗಿ ಪ್ರಶ್ನಿಸತೊಡಗಿದರು. ಡಾಕ್ಟರರೊಡನೆ ಚರ್ಚೆಗೆ ನಿಲ್ಲಲಾರದೆ ಪಶುವೈದ್ಯರು ಮುಂದೆ ಮೋರೆ ತಪ್ಪಿಸಿಬಿಟ್ಟರು. ಇತ್ತ ಎಮ್ಮೆಗಳ ಪರಿಸ್ಥಿತಿ ಹದಗೆಡಲಾರಂಭಿಸಿತು. ಆಗ ಡಾಕ್ಟರರು ಈ ರೋಗಕ್ಕೆ ತಮ್ಮದೇ ಮದ್ದು ಕೊಡಬೇಕು ಎಂದು ನಿರ್ಧರಿಸಿ– ಮನುಷ್ಯರಿಗೆ ಇಂತಹ ರೋಗ ಬಂದಾಗ ತಾವು ಅನುಸರಿಸುತ್ತಿದ್ದ ಕ್ರಮಗಳನ್ನೇ ಇಲ್ಲಿಯೂ ಯೋಜಿಸಿದರು. ಲಭ್ಯವಿದ್ದ ಪಶುವೈದ್ಯಕ-ಗ್ರಂಥಗಳನ್ನು ತಿರುವಿ ಹಾಕಿ ತಮ್ಮವೇ ಆದ

ಔಷಧಿ ಪಥ್ಯ ಪ್ರಾರಂಭಿಸಿ ೩-೪ ದಿನಗಳಲ್ಲಿ ಬೇನೆಯನ್ನು ನಿಯಂತ್ರಿಸಿ ಎಲ್ಲ ಎಮ್ಮೆ ಉಳಿಸಿಕೊಂಡರು. ಆ ಕಾಲದಲ್ಲಿ ಹಸಿವೆ-ನೀರಡಿಕೆ-ನಿದ್ರೆಯ ಪರಿವೆಯಿಲ್ಲದೆ ಅವರು ಎಮ್ಮೆಗಳ ಆರೈಕೆ ಮಾಡಿದುದನ್ನು ಕಂಡವರು ಅವರ ಬಗ್ಗೆ ಹೆಮ್ಮೆಯ ಮಾತುಗಳನ್ನಾಡಿದ್ದರೆ ಆಶ್ಚರ್ಯವೇನಲ್ಲ.

ಇದಾದ ಕೆಲ ದಿನಗಳ ನಂತರ- ನನ್ನ ಸ್ನೇಹಿತರಾದ ಡಾ. ಎಸ್. ಆರ್. ನಾಡಗೀರ ಅವರು (ಪಶುರೋಗ ತಜ್ಞರು. ಈಗ ಸೇವಾ ನಿವೃತ್ತರಾಗಿ ಪುಣೆಯಲ್ಲಿದ್ದಾರೆ.) ಧಾರವಾಡಕ್ಕೆ ಬಂದರು. ಡೇರಿಯನ್ನು ತೋರಿಸಲು ನಾನು ಅವರನ್ನು ಕರೆದೊಯ್ದಿದ್ದೆ. ನಿತ್ಯ ಕ್ರಮದಂತೆ ಅಲ್ಲಿ ದನಗಳ ಮಧ್ಯದಲ್ಲಿದ್ದ ಡಾಕ್ಟರರನ್ನು ಕಂಡು ಡಾ. ನಾಡಗೀರ ಅವರಿಗೆ ಮೊದಲು ಸೋಜಿಗವಾಯಿತು. ನಾನು ಎಮ್ಮೆಗಳ ಬೇನೆಯ ಪ್ರಸ್ತಾಪ ಮಾಡಿದೆ. ಇಬ್ಬರೂ ಆ ವಿಷಯವನ್ನು ಡೇರಿಗೆ ಸಂಬಂಧಿಸಿದ ಇನ್ನೂ ಕೆಲ ವಿಷಯಗಳನ್ನೂ ಚರ್ಚಿಸಿದರು. ಡೇರಿ ಬಿಟ್ಟು ಹೊರ ಬಂದಾಗ ನನ್ನ ಸ್ನೇಹಿತರು, "ನಿಮ್ಮ ಡಾಕ್ಟರರು ನಮ್ಮ ವೈದ್ಯಕದಲ್ಲೂ ಸಾಕಷ್ಟು ಪರಿಣತಿ ಪಡೆದಿದ್ದಾರೆ. ಅವರು ಮಾಡಿದ ಉಪಚಾರ ಕ್ರಮ ಸರಿಯಾದದ್ದೇ," ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

೧೯೫೮ ರಲ್ಲಿ ಧಾರವಾಡದಲ್ಲಿ ಡಾಕ್ಟರರಿಗೆ ಅವರ ಷಷ್ಟ್ಯಬ್ದಿ ಪೂರ್ತಿ ಮುನ್ನ ಸರ್ವೋದಯ ಶಿಕ್ಷಣ ಟ್ರಸ್ಟಿನವರು ಏರ್ಪಡಿಸಿದ ಸತ್ಕಾರ ಸಮಾರಂಭದಲ್ಲಿ ನಾನು ಈ ಘಟನೆಯನ್ನು ಡಾಕ್ಟರರ ಸಮ್ಮುಖದಲ್ಲಿಯೇ ವಿವರಿಸಿದೆ. ಡಾಕ್ಟರರು ನಕ್ಕುಬಿಟ್ಟರು.

ವಿಷಯ ಯಾವುದೇ ಇರಲಿ, ಅದನ್ನು ಆಮೂಲಾಗ್ರವಾಗಿ ಅಭ್ಯಸಿಸಿ, ಮನವರಿಕೆ ಮಾಡಿಕೊಂಡು ಅಭಿಪ್ರಾಯ ನೀಡುತ್ತಿದ್ದರು; ಕಾರ್ಯಪ್ರವೃತ್ತರಾಗುತ್ತಿದ್ದರು ಡಾಕ್ಟರರು. ತಮ್ಮ ಆಲೋಚನಾ ಶಕ್ತಿಯಲ್ಲಿ ದೃಢ ವಿಶ್ವಾಸ ತಳೆದಿದ್ದ ಡಾಕ್ಟರರು ಅನೇಕ ಸಲ ಭಿನ್ನಾಭಿಪ್ರಾಯವನ್ನು ಲೆಕ್ಕಿಸುತ್ತಿದ್ದಿಲ್ಲ. ಹೀಗಾಗಿ ಅವರ ಬಗ್ಗೆ ತಪ್ಪು ತಿಳುವಳಿಕೆ ಉಂಟಾಗುತ್ತಿದ್ದರೂ ಅದರಿಂದ ಅಪಾರ್ಥವಾಗುತ್ತಿರಲಿಲ್ಲ.

ಹೊರ ನೋಟಕ್ಕೆ ವಜ್ರಹೃದಯಿಯಾದರೂ ಗಡುಸಾದ ಧ್ವನಿ, ಬಿರುಸಾದ ಮಾತುಗಳಿಂದ ಅವರು ಒಮ್ಮೊಮ್ಮೆ ಒಡೆಯಲಾಗದ ಒಗಟಿನಂತೆ ಕಂಡರೂ, ಅವರ ಧ್ಯೇಯ ನಿಷ್ಠೆ, ಚಾರಿತ್ರ್ಯಶುದ್ಧಿ, ನಿಷ್ಕಪಟ ಜೀವನ ಅವರನ್ನು ಅನೇಕ ದುರ್ಧರ ಪ್ರಸಂಗಗಳಲ್ಲಿ ಕಾಪಾಡಿತು. ಇದರ ಜೊತೆಯಲ್ಲಿ ಹೂವಿಗಿಂತಲೂ ಹಗುರಾದ ಅವರ ಅಂತಃಕರಣದ ಅನುಭವ ಪಡೆದ ಅವರ ಅಭಿಮಾನಿಗಳ ಸದಾಶಯವೂ ಡಾಕ್ಟರರಿಗೆ ಅವರು ಕೈಕೊಂಡ ಎಲ್ಲ ರಂಗಗಳಲ್ಲಿಯೂ ತಕ್ಕ ಸಾಧನೆ ಪಡೆಯಲು ಬೆಂಬಲವಾಗಿ ನಿಂತಿತು.

ಸಾರ್ವಜನಿಕ ಜೀವನದ ಸುವರ್ಣ ಮಹೋತ್ಸವದ ಸಂಧಿಕಾಲದಲ್ಲಿ ಅವರು ಪರಲೋಕವನ್ನೈದಿ ಇಹದಲ್ಲಿಯ ತಮ್ಮ ಕಾರ್ಯಕ್ಕೆ ವಿರಾಮವಿತ್ತು, ಮುಂದಿನ ಪೀಳಿಗೆಗೆ ದಾರಿದೀಪವಾಗಿದ್ದಾರೆ. ✡

ಹನಿಗವನಗಳು

ಕೆಸೆಟ್

ನೀನು ಕವರಿನಲ್ಲಿ
ಗುಣಗುಣಿಸುವ
ಮಾತುಗಳೆಲ್ಲವೂ
ಇಲ್ಲಿ
ನನ್ನ ಕೆಸೆಟ್ಟಿನಲ್ಲಿ
ಪ್ರಕಟಗೊಳ್ಳುತ್ತಿವೆ

ಊಟ

ಜಿಟ ಜಿಟ ಮಳೆ
ಹನಿಯುವಾಗ
ಕೆಸರಿನಲಿ
ಹರಿಗೋಲಿನಿಂದ
ನಡೆದ ಅನುಭವ.

– ಮಲ್ಲಿಕಾರ್ಜುನ ಹೆಗ್ಗಳಗಿ

ಹಿಂದಿ ಮೂಲ: ಶ್ರೀ ಕನ್ಹಯ್ಯಾಲಾಲ್ ಮಿಶ್ರ 'ಪ್ರಭಾಕರ'
ಅನುವಾದ: ಬಿ. ಸುಬ್ಬರಾಯ ಅಡಿಗ

ನಾವು ದೇಶಭಕ್ತರೇ?

ರವೀಂದ್ರನಾಥ ಠಾಕೂರ 'ಜಲಿಯಾನ್‌ವಾಲಾ ಬಾಗ್' ಹತ್ಯಾಕಾಂಡದ ವಿರೋಧದಲ್ಲಿ ಬ್ರಿಟಿಷ್ ಸಮ್ರಾಟರು ನೀಡಿದ್ದ 'ಸರ್' ಪದವಿಯನ್ನು ಹಿಂದಿರುಗಿಸಿದರು.

ಸುಭಾಷಚಂದ್ರ ಬೋಸ್ ಐ. ಸಿ. ಎಸ್. ಪರೀಕ್ಷೆಯಲ್ಲಿ ಪ್ರಥಮ ಬಂದರೂ ಕಲೆಕ್ಟರ್ ಆಗಲೊಪ್ಪಲಿಲ್ಲ. ಅವರು ದೇಶದ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಸೆರೆಮನೆ ಸೇರಿದರು.

ಚಿತ್ತರಂಜನದಾಸ ಹಾಗೂ ಮೋತೀಲಾಲ ನೆಹರೂ ಲಕ್ಷಾಂತರ ರೂಪಾಯಿ ತರುವ ವಕೀಲಿ ವೃತ್ತಿ ತ್ಯಜಿಸಿ ಸ್ವೇಚ್ಛೆಯಿಂದ ಬಡತನ ಹಾಗೂ ಸರಳತನದ ಜೀವನವನ್ನು ಅಂಗೀಕರಿಸಿದರು.

ಪುರುಷೋತ್ತಮದಾಸ ಟಂಡನ್ ಪಂಜಾಬ್ ನ್ಯಾಶನಲ್ ಬ್ಯಾಂಕಿನ ಉನ್ನತ ಮ್ಯಾನೇಜರ್ ಹುದ್ದೆಯನ್ನು ಬಿಟ್ಟುಕೊಟ್ಟು ಸಂನ್ಯಾಸ ವಹಿಸಿದರು.

ಸುಂದರ ಹಾಗೂ ಸುಕುಮಾರ ದೇಹದ ಖುದೀರಾಮ್ ಬೋಸ ಒಬ್ಬ ಆಂಗ್ಲನನ್ನು ಗುಂಡಿಕ್ಕಿ ಕೊಂದು ಗಲ್ಲಿಗೇರಿದ.

ಲಾಲಾ ಮುನ್ಶೀರಾಮ್ ತಮ್ಮ ಬಂಗಲೆಯನ್ನೇ ದಾನ ಮಾಡಿ ಸ್ವಾಮಿ ಶ್ರದ್ಧಾನಂದ ಎಂಬ ಹೆಸರಿನಿಂದ ತಮ್ಮ ಜೀವನವನ್ನು ದೇಶಕ್ಕೆ ಅರ್ಪಿಸಿದರು.

೧೯೩೭–೧೯೩೯ ರಲ್ಲಿ ಜನಪ್ರಿಯ ಮಂತ್ರಿಗಳು ತಿಂಗಳಿಗೆ ೬ ಸಾವಿರ ರೂಪಾಯಿ ವೇತನದ ಬದಲು ೫೦೦ ರೂಪಾಯಿ ಮಾತ್ರ ತೆಗೆದುಕೊಳ್ಳಲು ನಿರ್ಧರಿಸಿದರು; ಮತ್ತು ಪಿ. ಸಾಂಬಮೂರ್ತಿಯವರು ಎರಡು ಅಂಗವಸ್ತ್ರಗಳ ಗಾಂಧೀ ವೇಷದಲ್ಲೇ ಮದ್ರಾಸ್ ವಿಧಾನಸಭೆಯ ಅಧ್ಯಕ್ಷತೆ ನಡೆಸುವುದಾಗಿ ಹಟ ಹಿಡಿದರು.

ಇಂತಹ ಸುದ್ದಿಗಳನ್ನು ಕೇಳುತ್ತ ಕೇಳುತ್ತ ನನ್ನ ತಲೆಮಾರು ಕಳೆಯಿತು. ಈ ಸುದ್ದಿಗಳು ಬೇರೆ ಬೇರೆ; ಇವುಗಳ ಕಾರ್ಯಕ್ಷೇತ್ರವೂ ಬೇರೆ ಬೇರೆ. ಆದರೆ ಇವೆಲ್ಲಕ್ಕೂ ಭಾವನಾತ್ಮಕವಾದ ಉದ್ದೇಶವೊಂದೇ— ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡುವುದು... ದಾಸ್ಯದ ವಿರುದ್ಧ ಹೋರಾಡುತ್ತ ಜೀವ ತೆರಲೂ ತಯಾರಾಗುವುದು...ಅಂದರೆ ದೇಶಕ್ಕಾಗಿ ತ್ಯಾಗ ಮಾಡುವುದು, ಬಲಿದಾನ ನೀಡುವುದು ನಮ್ಮ ಧರ್ಮ. ಅಂದರೆ ಈ ಧರ್ಮವನ್ನೇ ದೇಶಭಕ್ತಿಯೆಂದು ಕರೆಯಲಾಯಿತು.

ಈ ಭಾವನಾ ರಾಜ್ಯದಲ್ಲೇ ಲೋಕಮಾನ್ಯ ಟಿಳಕರಿಂದಾರಂಭಿಸಿ ಹುತಾತ್ಮ ಭಗತಸಿಂಗನ ವರೆಗೆ ಬಲಿದಾನ ಸಂಘರ್ಷದ ಒಂದು ಅಧ್ಯಾಯ ಬರೆಯಲಾದರೆ, ಸುರೇಂದ್ರನಾಥ

ಬ್ಯಾನರ್ಜಿ ಹಾಗೂ ಬಿಪಿನಚಂದ್ರ ಪಾಲ-
ರಿಂದಾರಂಭಿಸಿ ಶ್ರೀಮತಿ ಆ್ಯನಿಬೆಸೆಂಟ್ ಮುಖಾಂತರ ಸಾಗಿ ಗಾಂಧೀಜಿಯ ವರೆಗೆ ಬಂಗಾಳ ವಿಭಜನೆ, ಹೋಮ್‌ರೂಲ್ ಅಸಹಕಾರ ಸತ್ಯಾಗ್ರಹಗಳ ಎರಡನೇ ಅಧ್ಯಾಯ ಬರೆಯಲಾಯಿತು. ೧೯೪೨ ರಲ್ಲಿ ಗಾಂಧೀಜಿಯ ಜನಕ್ರಾಂತಿ ಹಾಗೂ ಸುಭಾಷ ಬಾಬುಗಳ ರಾಜ್ಯಕ್ರಾಂತಿಯ ರೂಪದಲ್ಲಿ ಈ ಎರಡೂ ಅಧ್ಯಾಯಗಳು ಒಂದಾಗಿ ಪೂರ್ಣಗೊಂಡವು.

ಮತ್ತೆ ೧೫-೮-೧೯೪೭ ರ ದಿನ ಬಂತು. ದೇಶಭಕ್ತಿಯ ಜೀವನವಲ್ಲರಿಯ ಹೂ ದವು ಗವಿಕಸಿತು. ಶತಮಾನಗಳ ದಾಸ್ಯ ತೊಲಗಿ ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯ ಉದಿಸಿದ. ಕೆಂಪು ಕೋಟೆ, ಸಂಸತ್ ಭವನ ಹಾಗೂ ವೈಸರೀಗಲ್ ಲಾಜ್ ಮೇಲೆ ತ್ರಿವರ್ಣ ಧ್ವಜ ಹಾರಾಡತೊಡಗಿತು. 'ಝಂಡಾ ಊಂಚಾ ರಹೇ ಹಮಾರಾ...!' ಎಂಬ ದನಿ ಮೊಳಗಿತು.

ಮುಂದೇನು? ಪ್ರಶ್ನೆಯೇನೋ ಸಣ್ಣದಾದರೂ ತುಂಬ ಅರ್ಥವತ್ತಾದುದು. ಮುಸುಕಿದ ಗಾಢಾಂಧಕಾರದಲ್ಲಿ ಪುಟ್ಟ ಟಾರ್ಚಿನ ಬೆಳಕಿನ ಕಿರುರೇಖೆಯಂತೆ ಆ ಪ್ರಶ್ನೆ ಒಮ್ಮೆಲೇ ಹೊಮ್ಮಿತು. ಗುಲಾಮಗಿರಿಯನ್ನು ತೊಡೆದು ಹಾಕಿ ಸ್ವಾತಂತ್ರ್ಯವನ್ನು ತಂದು ಕೊಡುವುದೇ ನಮ್ಮ ದೇಶಭಕ್ತಿಯ ಲಕ್ಷ್ಯವಾಗಿತ್ತು. ಈಗ ಅದು ಪೂರ್ಣಗೊಂಡಿದೆ. ಮುಂದೆ ನಮ್ಮ ದೇಶಭಕ್ತಿಯ ಸ್ವರೂಪ ಎಂತಹದು? ನಮ್ಮ ಗುರಿ ಏನು? ಪ್ರೇರಣಾ ಸ್ರೋತ ಯಾವುದು? ಅದನ್ನು ನಿರ್ಣಯಿಸುವ ಒರೆಗಲ್ಲು ಯಾವುದು?

ನಮ್ಮ ದೇಶದ ಸಂವಿಧಾನ ಈ ಪ್ರಶ್ನೆಯ ಬಗ್ಗೆ ಮೌನ ತಳೆದಿದೆ. ಇದಕ್ಕೆ ತಕ್ಕ ಉತ್ತರವನ್ನದು ಕೊಡುತ್ತಿಲ್ಲ. ದೇಶಭಕ್ತಿಗೆ ಯಾವುದೇ ಪರಿಭಾಷೆಯನ್ನದು ನೀಡುವುದಿಲ್ಲ. ನಮ್ಮ ದೇಶದ ದಂಡವಿಧಾನ ರಾಜದ್ರೋಹದತ್ತ ಲಕ್ಷ್ಯ ಕೊಡುತ್ತಿದೆ. ಆದರೆ ಅದರ ನೀತಿಯಲ್ಲಿ ದೇಶದ್ರೋಹವೆಂಬುದು ಅಪರಾಧವಲ್ಲ. ಸೈನಿಕ ರಹಸ್ಯಗಳನ್ನು ಶತ್ರು ದೇಶದ ಕೈಗೆ ಮಾರುವುದೂ ಶ್ರೀಮಂತನ ತಿಜೋರಿಯಿಂದ ಬಂಗಾರದ ಆಭರಣ ಕದಿಯುವುದೂ ಅದರ ದೃಷ್ಟಿಯಲ್ಲಿ ಸಮಾನ ಅಪರಾಧ. ಇಬ್ಬರೂ ಕಳ್ಳರು...!

ದೇಶದ ನಾಗರಿಕರು ದೇಶಭಕ್ತರಾಗದೆ ಹೋದರೆ ಗುಲಾಮ ದೇಶ ಎಂದೂ ಸ್ವತಂತ್ರವೆನಿಸುವಂತಿಲ್ಲ; ಮತ್ತು ಸ್ವತಂತ್ರದೇಶ ಹೆಚ್ಚು ಕಾಲ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವಂತಿಲ್ಲ. ಆದ್ದರಿಂದ ದೇಶದ ಹೊಸ ಪೀಳಿಗೆಯೆದುರು ದೇಶಭಕ್ತಿಯ ಪರಿಭಾಷೆ ಸ್ಪಷ್ಟವಾಗಬೇಕು. ೧೯೫೨ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಯಾದಾಗ ಪ್ರತಿಯೊಂದು ಪಕ್ಷದವರೂ ತಾವು ದೇಶಭಕ್ತರೆಂಬುದನ್ನು ಮತದಾರರೆದುರು ಸ್ಪಷ್ಟಪಡಿಸಲೆಂದು ನನ್ನ ಇಚ್ಛೆಯಿತ್ತು. ಆಗ ಜನತೆಗೆ ಸಹಜವಾಗಿಯೇ ದೇಶಭಕ್ತಿಯ ಪರಿಚಯ ದೊರೆಯುವುದಷ್ಟೆ! ಈ ವಿಚಾರದ ಹಿನ್ನೆಲೆಯಲ್ಲಿ ನಾನು ದೇಶದ ಹಲವಾರು ರಾಜನೀತಿಜ್ಞರನ್ನೂ ಪತ್ರಕರ್ತರನ್ನು ಕಂಡು ದೇಶಭಕ್ತಿಯ ಹೊಸ ಪರಿಭಾಷೆಯ ಬಗ್ಗೆ ಅವರ ಅಭಿಪ್ರಾಯ ಕೇಳಿದೆ.

ರಾಜನೀತಿಜ್ಞರಲ್ಲಿ ಹೆಚ್ಚಿನವರು ನಮ್ಮ ಮಾತಿಗೆ ಅಷ್ಟೇನೂ ಮಹತ್ವ ಕೊಡಲಿಲ್ಲ. ಹೆರವರ ಮಾತಂತಿರಲಿ— ಪ್ರಧಾನಿ ನೆಹರೂರವರೇ ತಮ್ಮ ವಿಶಿಷ್ಟ ಶೈಲಿಯಲ್ಲಿ— ಜೀವನವಿಡೀ ದೇಶದ ಕೆಲಸ ಮಾಡುತ್ತ ಕಳೆದೆ. ಈಗ ದೇಶಭಕ್ತಿಯೇನೆಂದು ತಿಳಿಯಲು ತೊಡಗಬೇಕೆ? ಎಂದರು. ಹಲವಾರು ವರ್ಷಗಳ ಅನುಭವದಿಂದ ಅವರ ಸ್ವಭಾವ ಹಾಗೂ ಮಾತಿನ ರೀತಿಯನ್ನು ಅರಿತಿದ್ದೆ. ಎಂತಲೇ ಮಾತಿನ ಓಘಕ್ಕೆ ಎಳೆಯಲೆಂದು, "ಪಂಡಿತಜೀ, ದೇವರ ರಾಜ್ಯದಲ್ಲಿ ವಿಳಂಬ ಇದ್ದರೂ ಅನ್ಯಾಯವಿಲ್ಲ. ಈ ಗಾದೆಯ ಪ್ರಕಾರ ನಾನೇನೂ ಅನ್ಯಾಯ ಮಾಡುತ್ತಿಲ್ಲ. ವಿಳಂಬವಾಗಿಯೇ ಆದರೂ ಒಂದು ಅಗತ್ಯದ ಪ್ರಶ್ನೆ ಎತ್ತಿದ್ದೇನೆ," ಎಂದೆ.

ಈಗ ಅವರು ತುಸು ಗಂಭೀರರಾದರು.... "ದೇಶದ ಸಮೃದ್ಧಿ ಹೆಚ್ಚಿಸುವುದರಲ್ಲಿ ಭಾಗವಹಿಸುವುದೇ ದೇಶಭಕ್ತಿ" ಎಂದರು. ಪಂಡಿತರ ಮನಸ್ಸಿನಲ್ಲಿ ದೇಶದ ಆರ್ಥಿಕ

ಪ್ರಶ್ನೆಯೇ ಕಾಡುತ್ತಿದೆ. ಈ ಉತ್ತರದಲ್ಲಿ ಅದರ ಪ್ರತಿಧ್ವನಿಯಿಂದೆ. ನಮ್ಮ ಪ್ರಶ್ನೆಗೆ ದೊರೆತ ಪೂರ್ಣ ಉತ್ತರ ಇದಲ್ಲ— ಎಂದು ಯೋಚಿಸಿದೆ.

ರಾಜನೀತಿಜ್ಞರಲ್ಲಿ ಡಾ. ರಾಧಾಕೃಷ್ಣನ್ (ಆಗ ಉಪರಾಷ್ಟ್ರಪತಿ)ರ ಉತ್ತರ ಉಪಯೋಗಿಯಾಗಿತ್ತು. ''ಸಂಕಟದ ವೇಳೆ ದೇಶದ ನಾಗರಿಕರು ಒಟ್ಟಾಗಿ ಸಂಕಟವನ್ನೆದುರಿಸುವುದೇ ರಾಷ್ಟ್ರೀಯತೆಯ ಮುಖ್ಯ ಒರೆಗಲ್ಲು. ಇದರಲ್ಲೇ ದೇಶಭಕ್ತಿಯ ಭಾವನೆಯ ಬೀಜಾಂಕುರವಿದೆ" ಎಂದರವರು. ಶಾಂತಿ ಕಾಲದಲ್ಲಿ ರಾಷ್ಟ್ರದ ಶಕ್ತಿ ಸಂಚಯದಲ್ಲಿ ನೆರವಾಗಿ, ಗಂಡಾಂತರದ ವೇಳೆ ಶಕ್ತಿ ಸಂಘರ್ಷದಲ್ಲಿ ತೊಡಗುವುದೇ ದೇಶಭಕ್ತಿ ಎಂದು ಈ ದಾರ್ಶನಿಕನ ಅಭಿಪ್ರಾಯ— ನಾನು ಯೋಚಿಸಿದೆ.

ಡಾ. ರಾಧಾಕೃಷ್ಣನ್ನರ ಮಾತನ್ನು ಪತ್ರಕರ್ತ ಶ್ರೀ ಇಂದ್ರ ವಿದ್ಯಾವಾಚಸ್ಪತಿಗೆ ಹೇಳಿ ದೇಶಭಕ್ತಿಯ ಸೂಕ್ತ ಪರಿಭಾಷೆ ನೀಡಲು ಅವರನ್ನು ಒತ್ತಾಯಿಸಿದೆ. ಆ ವೇಳೆ ಅವರು 'ಜನಸತ್ತಾ' ಎಂಬ ದಿನಪತ್ರಿಕೆಯ ಸಂಪಾದಕರಾಗಿದ್ದರು. ಕೆಲ ದಿನಗಳ ಬಳಿಕ ಅವರು ತಮ್ಮ ಒಂದು ಸಂಪಾದಕೀಯದಲ್ಲಿ ಹೀಗೆ ಬರೆದರು:

"ಜನಸಾಮಾನ್ಯರೆದುರು ದೇಶಭಕ್ತಿಯ ಸರಿಯಾದ ಪರಿಭಾಷೆ ಇರದುದರಿಂದಾಗಿ ಸ್ವಾರ್ಥಿಗಳು ದೇಶದ್ರೋಹವನ್ನೂ ದೇಶಭಕ್ತಿಯೆಂದು ಕರೆದು ದಾರಿ ತಪ್ಪಿಸುವರು. ದೇಶದಲ್ಲಿದ್ದ ಹಲವಾರು ಆಂದೋಲನಗಳನ್ನು ಪರಿಶೀಲಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ನಮ್ಮ ದೇಶದ ಜನತೆಯು ಬಳಿ ದೇಶಭಕ್ತಿಯನ್ನು ಪರೀಕ್ಷಿಸುವ ಯಾವುದಾದರೂ ಒರೆಗಲ್ಲು ಇರುತ್ತಿದ್ದರೆ ಜನತೆ ಅವಕ್ಕೆ ಸಹಕಾರ ನೀಡುವ ಬದಲು ಖಂಡಿತ ವಿರೋಧಿಸುತ್ತಿತ್ತು. ಒಂದು ವೇಳೆ, ವಿರೋಧಿಸದೆ ಹೋದರೂ ಜನತೆಯ ತಾಟಸ್ಥ್ಯವೇ ಈ ಆಂದೋಲನಗಳನ್ನು ನಿರರ್ಥಕಗೊಳಿಸುತ್ತಿತ್ತು."

ದೇಶಭಕ್ತಿಯಲ್ಲಿ ಜನತೆಗೆ ತರಬೇತಿ ಸಿಗಬೇಕೆಂದು ಒತ್ತಾಯಿಸುತ್ತಾ ಅವರು ಅದರ ಪರಿಭಾಷೆ ಹೀಗೆ ಬರೆದರು— "ದೇಶವು ಸ್ವತಂತ್ರವಾದ ಬಳಿಕ ಅದರೆದುರು ನಿಂತ ದೊಡ್ಡ ಪ್ರಶ್ನೆಯೆಂದರೆ ದೇಶದ ಸಮೃದ್ಧಿ ಹಾಗೂ ಅಭಿವೃದ್ಧಿ. ಆದ್ದರಿಂದ ದೇಶದ ಸಮೃದ್ಧಿ ಅಭಿವೃದ್ಧಿಗಳಿಗೆ ಅಡ್ಡಿ ಬರುವ ಎಲ್ಲ ಕೆಲಸಗಳನ್ನೂ ದೇಶದ್ರೋಹವೆಂದೇ ಭಾವಿಸಬೇಕು. ಅದೇ ರೀತಿ ದೇಶದ ಸಮೃದ್ಧಿಗಳಿಗೆ ಸಹಾಯಕವಾಗುವ ಎಲ್ಲ ಕಾರ್ಯಗಳನ್ನು ದೇಶಭಕ್ತಿಯೆಂದೇ ಬಗೆಯಬೇಕು"

ಪಂಡಿತ ನೆಹರೂ, ಡಾ. ರಾಧಾಕೃಷ್ಣನ್ ಹಾಗೂ ಇಂದ್ರವಿದ್ಯಾವಾಚಸ್ಪತಿ ಈ ಮೂವರ ಮಾತುಗಳನ್ನೂ ಸೇರಿಸಿದರೆ ದೇಶಭಕ್ತಿಯ ಪರಿಭಾಷೆ ಈ ರೀತಿ ರೂಪುಗೊಳ್ಳುತ್ತದೆ— ದೇಶದ ಸಮೃದ್ಧಿ, ಸುರಕ್ಷಿತತೆ ಹಾಗೂ ಉನ್ನತಿಗೆ ಸಹಾಯ ಮಾಡುವ ನಾಗರಿಕ ದೇಶಭಕ್ತ; ಅಡ್ಡಿಯೊಡ್ಡುವವನೇ ದೇಶದ್ರೋಹಿ!

ಪರಿಭಾಷೆಯೇನೋ ಸರಿದೋರುವುದಾದರೂ ಇನ್ನೂ ಸ್ಪಷ್ಟವಾಗಬೇಕಾಗಿದೆ. ಏಕೆಂದರೆ ಪ್ರತಿಯೊಬ್ಬ ನಾಗರಿಕನೂ ತಾನು ದೇಶಭಕ್ತ ಹೌದೇ ಅಲ್ಲವೇ- ಎಂದು ಅರಿಯುವುದು ಸುಲಭವಲ್ಲ. ಇಂಥ ಸಮಸ್ಯೆಯ ಸಮಾಧಾನಕ್ಕೆ ಓದು ಸಹಾಯಕವಲ್ಲ; ಚಿಂತನ ಹಾಗೂ ಅನುಭವವೇ ನೆರವಾಗಬಲ್ಲವು...ನಾನು ಯೋಚಿಸುತ್ತಲೇ ಇದ್ದೆ...ಸಹಜವಾಗಿ ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡುತ್ತಿದ್ದೆ. ಆಗ ಅನಾಯಾಸವಾಗಿಯೇ ದೊರೆತ ದೇಶಭಕ್ತಿಯ ಪರಿಭಾಷೆ ಇಂತಿದೆ:—

ದೇಶದಲ್ಲಿ ವ್ಯಕ್ತಿ, ಪರಿವಾರ, ಜಾತಿ, ವರ್ಗ. ಧರ್ಮ, ಸಂಪ್ರದಾಯ, ವರ್ಣ—ಎಲ್ಲವೂ ಇವೆ. ಅದೇ ರೀತಿ ವ್ಯಕ್ತಿಯ ಹಿತ, ಪರಿವಾರದ ಹಿತ, ಜಾತಿಯ ಹಿತ, ವರ್ಗದ ಹಿತ, ಧರ್ಮ ಸಂಪ್ರದಾಯಗಳ ಹಿತ-ಇವೂ ಇವೆ. ಜೊತೆಗೆ ದೇಶದ ಹಿತವೂ ಇದೆಯಷ್ಟೇ.

ಯಾವ ನಾಗರಿಕನು ತನ್ನ, ಪರಿವಾರದ, ಜಾತಿಯ, ವರ್ಗದ ಹಾಗೂ ಸಂಪ್ರದಾಯದ ಹಿತಕ್ಕಿಂತ ದೇಶದ ಹಿತಕ್ಕೇ ಹೆಚ್ಚು ಮಹತ್ವ

ಕೊಡುವನೋ, ಎರಡೂ ಹಿತಗಳಲ್ಲಿ ವಿರೋಧ ತಲೆದೋರಿದಾಗ ಉಳಿದೆಲ್ಲ ಹಿತಗಳನ್ನು ಬದಿಗೊತ್ತಿ ದೇಶದ ಹಿತಸಾಧನೆ ಮಾಡುವನೋ ಅವನೇ ದೇಶಭಕ್ತ.

ಯಾವ ನಾಗರಿಕನು ದೇಶದ ಹಿತವನ್ನು ಕಡೆಗಣಿಸಿ ಉಳಿದೆಲ್ಲ ಹಿತಗಳಿಗೆ ಹೆಚ್ಚು ಮಹತ್ವ ನೀಡುವನೋ ಅವನೇ ದೇಶದ್ರೋಹಿ.

ಈ ಪರಿಭಾಷೆಯು ಸ್ವರೂಪ ಹೀಗೂ ಇದೆ :—ಗುಲಾಮ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ಕಷ್ಟಸಹಿಸುವುದು, ಜೈಲಿಗೆ ಹೋಗುವುದು, ಗಲ್ಲಿಗೇರುವುದು, ಆಸ್ತಿ ಮನೆ ಕಳೆದುಕೊಳ್ಳುವುದು—ದೇಶಭಕ್ತಿಯ ಒರೆಗಲ್ಲಾಗಿತ್ತು. ಸ್ವತಂತ್ರಭಾರತದಲ್ಲಿ ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಪೂರ್ಣಯೋಗ್ಯತೆ ಹಾಗೂ ಪರಿಶ್ರಮದಿಂದ ನಡೆಸುವುದು ದೇಶಭಕ್ತಿ ಎನಿಸುತ್ತದೆ.

ಹೀಗೆ ಪ್ರತಿಯೊಬ್ಬ ಕರ್ಮನಿಷ್ಠ ಮನುಷ್ಯನೂ ದೇಶಭಕ್ತ. ಅವನು ಯಾವ ಉದ್ಯೋಗವನ್ನೇ ಮಾಡುತ್ತಿರಲಿ—ಅದರಲ್ಲಿ ಪೂರ್ಣ ನಿಷ್ಠೆ ತೋರಿಸಬೇಕು. ಪ್ರತಿಯೊಬ್ಬ ಆಲಸಿ, ಅಪ್ರಾಮಾಣಿಕ ಹಾಗೂ ಕೆಲಸಗಳ್ಳ ದೇಶದ್ರೋಹಿ.

ದೇಶದ ಪ್ರತಿಯೊಬ್ಬ ನಾಗರಿಕನೂ ತನ್ನನ್ನು ಈ ಒರೆಗಲ್ಲಿಗೆ ಗುರಿಪಡಿಸಿ ತಾನು ದೇಶಭಕ್ತನೋ ದೇಶ ದ್ರೋಹಿಯೋ ಎಂಬುದನ್ನು ನಿರ್ಧರಿಸಿಕೊಳ್ಳಲಿ. ತಾನು ಪ್ರಾಮಾಣಿಕನೆ, ಅಪ್ರಾಮಾಣಿಕನೆ? ಪವಿತ್ರನೆ, ಪತಿತನೆ!—ಎಂದು ಪರೀಕ್ಷಿಸಿಕೊಳ್ಳಲಿ.

ಮೊದಲ ಸಾಲಿಗೆ ಸೇರುವುದು ದೇಶದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಆತ ಎರಡನೇ ಸಾಲಿಗೆ ಸೇರಿದ್ದರೆ ದೃಢನಿರ್ಧಾರದಿಂದ ತನ್ನನ್ನು ಸುಧಾರಿಸಿಕೊಳ್ಳಲಿ. ಏಕೆಂದರೆ ದೇಶದ್ರೋಹಿಯಾಗಿ ಬದುಕುವುದಕ್ಕಿಂತ ಕುಷ್ಠರೋಗಿಯಾಗಿ ಬಾಳುವುದೇ ಎಷ್ಟೋ ಮೇಲು. ✡

ನಂಬಬೇಕಾದುದು

ರಷ್ಯದ ಭೌತ ಶಾಸ್ತ್ರದ ವಿಜ್ಞಾನಿ ಲೆವ್ ಡಾವಿಡೋವಿಚ್ ಲಾಂಡೋ ೧೯೬೨ ರ ಜನವರಿ ೭ ರಂದು ಮಾಸ್ಕೊದ ಹಿಮ ಮುಸುಕಿದ ರಸ್ತೆಯಲ್ಲಿ ಮಿತಿಮೀರಿದ ವೇಗದಿಂದ ಕಾರು ನಡೆಸುತ್ತಿದ್ದಾಗ ಅಪಘಾತಕ್ಕೊಳಗಾಗಿ, ಮುಂದಲೆ ಚಪ್ಪು ಬಿರುಕ ಬಿಟ್ಟಿತು ಎದೆಗೂಡು ಜಜ್ಜಿ ಹೋಗಿ ದೇಹ ಸಡಿಲವಾಗಿ ಜೋತುಬಿದ್ದಿತು. ಎದೆ ಬಡಿತ, ಉಸಿರಾಟ ನಿಂತುಹೋದವು. ವೈದ್ಯರು ಪರಿಶ್ರಮದಿಂದ ರಕ್ತಕ್ಕೆ ಅಮ್ಲಜನಕವನ್ನು ಒದಗಿಸಿ ಮತ್ತೆ ಹೃದಯ ಬಡಿಯುವಂತೆ ಮಾಡಿದರು ಮೆದುಳಿಗೆ ರಕ್ತ ಹರಿದು ಉಸಿರಾಟ ಮೊದಲಾಯಿತು. ಆತ ಬದುಕಿದ.

ಇದಾಗಿ ಇನ್ನೂ ಹಾಳ್ಕೆಯ ದಿನ ಕಳೆದಿಲ್ಲ, ಆಗಲೇ ಲಾಂಡೋ ಮತ್ತೆ ಅಪಘಾತಕ್ಕೊಳಗಾಗಿ ಪ್ರಜ್ಞೆ ಕಳೆದುಕೊಂಡ. ಈ ಬಾರಿ ಮೆದುಳಿನ ಶಸ್ತ್ರಕ್ರಿಯೆಯ ಹೊರತು ಬೇರೆ ಮಾರ್ಗವಿಲ್ಲವೆಂದು ಅರಿತ ವೈದ್ಯರು ವ್ಯಕ್ತಿಯ ಬದುಕುವ ಆಸೆಯನ್ನೇ ಬಿಟ್ಟರು. ಕೊನೆಗೆ ಇದ್ದಕ್ಕಿದ್ದಂತೆ ಪ್ರಜ್ಞೆ ಬಂದಿತು. ಲಾಂಡೋ ಮತ್ತೆ ಬದುಕಿಕೊಂಡ.

ಹೀಗೆ ಲೆವ್ ಡಾವಿಡೋವಿಚ್ ಲಾಂಡೋ ಸಾವು ಬದುಕಿನೊಡನೆ ಹೋರಾಟ ನಡೆಸಿರುವಾಗಲೇ ಆತನಿಗೆ ಅತಿ ಶೈತ್ಯ ಭೌತ ವಿಜ್ಞಾನ ಕ್ಷೇತ್ರದಲ್ಲಿ ನಡೆಸಿದ ಸಂಶೋಧನೆಗಾಗಿ ೧೯೬೨ರ ನೊಬೆಲ್ ಬಹುಮಾನ ದೊರೆತಿತ್ತು.

ಸಂಗ್ರಹ— ಸಿ. ಎಸ್. ಅಭಿನಂದನ

ಇದುವೆ ಜೀವ ಇದು ಜೀವನ

ಶಿಕ್ಷಣದ ಪ್ರಾರಂಭ

ಕಳೆದ ತಿಂಗಳು ನಾನು ಅಮೇರಿಕಾ ಪ್ರವಾಸ ಕೈಕೊಂಡಿದ್ದಾಗ ಅಲ್ಲಿನ ವಿಶ್ವವಿದ್ಯಾನಿಲಯವೊಂದಕ್ಕೆ ಭೇಟಿ ಕೊಡುವ ಅವಕಾಶ ನನಗೆ ದೊರೆತಿತ್ತು. ನನಗೆ ಪರಿಚಯವಿದ್ದ ಪ್ರೊಫೆಸರ್ ಒಬ್ಬರು ನನ್ನನ್ನು ವಿಶ್ವವಿದ್ಯಾನಿಲಯಕ್ಕೆ ೩ ಗಂಟೆಗೆ ಬರಬೇಕೆಂದೂ ಅವರು ಅಲ್ಲಿನ ವಿವಿಧ ಭಾಗಗಳಿಗೆ ಕರೆದೊಯ್ಯುವುದಾಗಿಯೂ ತಿಳಿಸಿದ್ದರು. ಆ ನಗರದ ರಸ್ತೆಗಳು ನನಗೆ ಚೆನ್ನಾಗಿ ಪರಿಚಯವಿಲ್ಲದ ದರಿಂದ ಅಲ್ಲಿಗೆ ಹೊತ್ತು ಮೀರಿ ಹೋಗಿ ಸೇರುವ ಶಂಕೆ ನನ್ನಲ್ಲಿ ಮೂಡಿತ್ತು. ಹಾಗಾಗಬಾರದೆಂದು ನಾನು ತುಂಬಾ ಶ್ರಮಪಟ್ಟು ಅಲ್ಲಿಗೆ ಅರ್ಧ ತಾಸು ಮುಂಚಿತವಾಗಿಯೇ ಹೋಗಿ ಸೇರಿದೆ. ಅಷ್ಟು ಹೊತ್ತಿಗೆ ಅಚ್ಚುಕಟ್ಟಾಗಿ ಉಡುಪನ್ನು ಧರಿಸಿದ್ದ ಯುವಕ ಯುವತಿಯರು ಒಬ್ಬೊಬ್ಬರಾಗಿ ಬರಲಾರಂಭಿಸಿದ್ದರು. ಅಲ್ಲಿ ದೊಡ್ಡದಾಗಿ ಬರೆಯಲಾಗಿದ್ದ 'ಕಮೆನ್ಸ್‌ಮೆಂಟ್' ಎಂಬ ಫಲಕವೊಂದು ಕಂಗೊಳಿಸುತ್ತಿತ್ತು. ಆ ಫಲಕ ಮತ್ತು ನೆರೆದಿದ್ದವರ ಸಡಗರವನ್ನು ನೋಡಿದರೆ ಅಲ್ಲಿ ಯಾವುದೋ ಒಂದು ಸಮಾರಂಭವು ನಡೆಯಲೇಬೇಕಾಗಿದ್ದಂತೆ ಕಂಡುಬಂದಿತು. ವಿಚಾರಿಸಿದ್ದರಲ್ಲಿ ಆ ದಿನ ಘಟಿಕೋತ್ಸವವು ನಡೆಯುವುದಾಗಿ ತಿಳಿಯಿತು. ಆದರ 'ಕಮೆನ್ಸ್‌ಮೆಂಟ್' ಎಂಬ ಫಲಕದ ಉದ್ದೇಶ ಮಾತ್ರ ನನ್ನ ಊಹೆಗೆ ನಿಲುಕಲಿಲ್ಲ. ಅಷ್ಟರಲ್ಲಿ ನಮ್ಮ ಪ್ರೊಫೆಸರ್ ಸಾಹೇಬರು ಬಂದು ನನ್ನನ್ನು ಕರೆದೊಯ್ದರು. ನಾನು ಕುತೂಹಲವನ್ನು ತಡೆಯಲಾರದೆ ಘಟಿಕೋತ್ಸವಕ್ಕೂ ಕಮೆನ್ಸ್‌ಮೆಂಟಿಗೂ ಏನು ಸಂಬಂಧವೆಂದು ಕೇಳಿದೆ. ಅವರ ಮಾತಿನಲ್ಲಿಯೇ ಹೇಳುವುದಾದರೆ "ಒಬ್ಬ ವಿದ್ಯಾರ್ಥಿಯ ನಿಜವಾದ ವಿದ್ಯಾಭ್ಯಾಸವು ಪದವಿ ಪಡೆದ ನಂತರವೇ ಆರಂಭವಾಗುತ್ತದೆ. ಪದವಿ ಪಡೆದೊಡನೆ ಅದು ಮುಕ್ತಾಯವಾಗುವುದಿಲ್ಲ. ಪದವಿ ವಿದ್ಯಾಭ್ಯಾಸಕ್ಕೆ ಒಂದು ಸಾಧನೆ ಮಾತ್ರ; ಆದೇ ಗುರಿಯಲ್ಲ. ಇದು ನಮ್ಮ ಜನರ ನಂಬುಗೆ. ಅದುದರಿಂದ ನಮ್ಮ ದೇಶದಲ್ಲಿ ಘಟಿಕೋತ್ಸವಕ್ಕೆ 'ಕಾನ್ವೊಕೇಷನ್' ಅನ್ನುವುದಿಲ್ಲ 'ಕಮೆನ್ಸ್‌ಮೆಂಟ್' ಅನ್ನುತ್ತೇವೆ." ಅವರ ಅರ್ಥವಿವರಣೆ ನನ್ನಲ್ಲಿ ತುಂಬಾ ಪರಿಣಾಮವನ್ನುಂಟುಮಾಡಿತು. ನಮ್ಮ ದೇಶದಲ್ಲಿ ಅನೇಕ ಜನ ವಿದ್ಯಾರ್ಥಿಗಳು ಪದವಿಯನ್ನು ಪಡೆದರೆ ಅದರಲ್ಲಿಯೂ ಸ್ನಾತಕೋತ್ತರ ಪದವಿಯನ್ನು ಪಡೆದರಂತೂ ಅವರು ಪರಿಪೂರ್ಣ ವಿದ್ಯಾಪಾರಂಗತರೆಂದೂ ಇನ್ನು ಮುಂದೆ ಕಲಿಯುವುದು ಏನೂ ಉಳಿದಿಲ್ಲವೆಂದೂ ಭಾವಿಸುತ್ತಾರೆ. ಎಂತಹ ವಿಪರ್ಯಾಸ! —ಕೆ. ರಾಮಸ್ವಾಮಿ

ರೋಚಕ ಅನುಭವ

ಧಾರವಾಡದಲ್ಲಿ M Sc. ಕೋರ್ಸಿನಲ್ಲಿದ್ದೆ. ಒಂದು ರವಿವಾರ ಹುಬ್ಬಳ್ಳಿಗೆ ಹೊರಟಿದ್ದೆ. ಸಿಟಿ ಬಸ್‌ನಲ್ಲಿ ಎಲ್ಲಾ ಸೀಟುಗಳೂ ಭರ್ತಿಯಾಗಿದ್ದವು. ಆದರೆ ಒಂದು ಜೊತೆ ಹೆಂಗಸರ ಸೀಟಿನಲ್ಲಿ ಕಿಟಕಿಯ ಹತ್ತಿರ ಒಬ್ಬಳೇ ಹುಡುಗಿ ಕುಳಿತಿದ್ದಳು. ನೋಡಲಾಗಿ ಅವಳೂ ಓರ್ವ M.A ವಿದ್ಯಾರ್ಥಿನಿ. ಸ್ವಲ್ಪ ಪರಿಚಯವಿತ್ತು. ಸರಿ, ನಾನು ಅವಳ ಪಕ್ಕದಲ್ಲೇ ಕುಳಿತೆ. ಅದೂ ಇದೂ, ಯೂನಿವರ್ಸಿಟಿಯ ವಿಷಯವಾಗಿ ಅಲ್ಪ ಸ್ವಲ್ಪ ಮಾತುಕತೆಗಳಾದವು. ಪಕ್ಕದಲ್ಲಿ ನಿಂತಿದ್ದ ನಡುವಯಸ್ಸಿನವರೊಬ್ಬರು ಕೈಯಲ್ಲಿ ಮಗುವನ್ನು ಹಿಡಿದುಕೊಂಡು ಪಡುತ್ತಿರುವ ಕಷ್ಟ ನೋಡಿ ಅವರ ಮಗುವನ್ನು ನನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡೆ. ನಾವೆ ಯಾಕೆ ಸಂಗಡ ಇರದೇ, ಆ ಮಗುವಿನಿಂದ ಸಾಕಷ್ಟು ಕಷ್ಟಪಡುತ್ತಿದ್ದ ಅವರಿಗೂ ಈಗ

ನೆಮ್ಮದಿ ಉಂಟಾಗಿದ್ದಿರಬೇಕು. "ಮುಂದೆ ಹೋಗಿ, ಮುಂದೆ ಹೋಗಿ" ಎಂಬ ಕಂಡಕ್ಟರನ ಕೂಗಾಟಕ್ಕೆ ಜನ ನಿಂತಲ್ಲೇ ಮುಂದೆ ಸರಿಯತೊಡಗಿದರು. ನನ್ನ ಕೈಗೆ ಮಗುವನ್ನಿತ್ತ ಮಹಾನುಭಾವರೂ ಮುಂದೆ ಸಾಗಿದರು. ಇತ್ತ ಮಗು, ನನ್ನ ಸಂಗಡ ಚೇಷ್ಟೆಗೆ ಸುರುಮಾಡಿತು. ಕಣ್ಣಿದಾಟ, ನಗೆತಗಳಾದವು. ನಡುವೆ ಅಳುವೂ ಇತ್ತು. "ಅದೋ ಗುಡ್ಡ, ಮರ" ಎಂದು ತೋರಿಸುತ್ತಾ ಅದರ ಅಳುವನ್ನು ಶಮನ ಮಾಡುತ್ತಿದ್ದೆ. ನನ್ನ ಪಕ್ಕದ ಹುಡುಗಿಗೂ ಆ ಸುಂದರ ಮಗುವಿನಲ್ಲಿ ಆಕರ್ಷಣೆ ಉಂಟಾಗಿತ್ತು. ಸರಿ, ಅವಳೂ ಎತ್ತಿಕೊಂಡಳು. ಆ ವೇಳೆಗೆ ಪಕ್ಕದಲ್ಲಿ ಬಂದುನಿಂತಿದ್ದ ಹಳ್ಳಿಯ ವಯಸ್ಕರೊಬ್ಬರು ತದೇಕ ಚಿತ್ತದಿಂದ, ಬಹಳ ಹೊತ್ತಿನಿಂದ ಮಗುವಿನ ಬಾಲ ಲೀಲೆಗಳನ್ನು ನೋಡುತ್ತಾ ನಿಂತಿದ್ದರು. ಅವರಿಗೂ ಮಗುವಿನಲ್ಲಿ ಆಕರ್ಷಣೆ ಉಂಟಾಗಿದ್ದಿರಬೇಕು. ಆ ನಡುವೆ ಮಗು ನಮ್ಮಿಬ್ಬರ ಮೇಲೂ ಮೂತ್ರಾಭಿಷೇಕ ಮಾಡಿತು. ಅಲ್ಲಿಂದ ರಂಪಾಟ ಪ್ರಾರಂಭವಾಯಿತು. ಬಟ್ಟೆಗಳೆಲ್ಲಾ ಒದ್ದೆಯಾದವು. ನಮ್ಮ ಕಷ್ಟ ನೋಡಿ ಪಕ್ಕದ ವಯಸ್ಕರು ನಗುತ್ತಾ ನುಡಿದರು, "ಮಕ್ಕಳೆಂದ ಮೇಲೆ ಹಾಗೇನೇ, ಮೊದಲನೇ ಮಗೂನಾ?"

ಮಗುವನ್ನು ಅದರ ಮಾಲೀಕರಿಗೆ ಮುಟ್ಟಿಸಲಾಯಿತು. ಪಕ್ಕದ ಹುಡುಗಿ ಕಿಟಕಿಯ ಹೊರಗೆ ಮುಖ ಮಾಡಿದವಳು ಹುಬ್ಬಳ್ಳಿಯವರೆಗೂ ನನ್ನ ಕಡೆ ದೃಷ್ಟಿ ಹಾಯಿಸಿದರೆ ಕೇಳಿ.

— ವಸಂತಕುಮಾರ್ ಇಡಗುಂಜಿ

ವಿಭೂತಿಯ ರಹಸ್ಯ

ಇದು ಇಪ್ಪತ್ತು ವರ್ಷದ ಹಿಂದಿನ ಮಾತು. ಆಗ ನಾವೆಲ್ಲ ಚಿತ್ತೂರ ಹೈಸ್ಕೂಲಿನಲ್ಲಿ ಓದುತ್ತಿದ್ದೆವು. ಬಡ ವಿದ್ಯಾರ್ಥಿಗಳಿಗೆಂದು ಚೌಕೀಮಠದ ಬೋರ್ಡಿಂಗ್‌ನಲ್ಲಿ ಊಟದ ವ್ಯವಸ್ಥೆಯಾಗಿತ್ತು. ಬೋರ್ಡಿಂಗಿನ ಅಧಿಕಾರಿ ಶಿವಾಪೂರಮಠ ಕಟ್ಟಾ ಧರ್ಮನಿಷ್ಠರು. ನಮಗೆಲ್ಲ ಅವರನ್ನು ಕಂಡರೆ ಬಹಳ ಹೆದರಿಕೆಯಾಗುತ್ತಿತ್ತು. ತಲೆ ತಿಂಪತಿ ಮಾಡಿಸುವದು; ವಿಭೂತಿ ಹಚ್ಚುವದು; ಊಟಕ್ಕೆ ಮುಂಚೆ ಸಾಮೂಹಿಕವಾಗಿ ಪಂಚಾಕ್ಷರಿಮಂತ್ರ ಅನ್ನುವದು—ಇವೆಲ್ಲ ಅಲ್ಲಿಯ ನಿಯಮಗಳಾಗಿದ್ದವು. ಇವನ್ನು ಯಾರಾದರೂ ತಪ್ಪಿಸಿದರೆ ಅಂದು ಅವರಿಗೆ ಊಟವೇ ಸಿಗುತ್ತಿರಲಿಲ್ಲ.

ಒಂದು ದಿನ ಊಟಕ್ಕೆ ಹೋದಾಗ ಶಿವಾಪೂರಮಠ ಊರಲ್ಲಿ ಇಲ್ಲದ್ದು ತಿಳಿಯಿತು. ನಮಗೆಲ್ಲ ಬಹಳ ಆನಂದವಾಯಿತು. ನಾಲ್ಕು ಜನ ಸೇರಿ ಬಾವಿಯ ಕಡೆಗೆ ನಡೆದೆವು. ಮನಸಾರೆ ಈಜಾಡಿ ಬರುವದರೊಳಗೆ ಪ್ರಾರ್ಥನೆ ಮುಗಿದು ಹೋಗಿತ್ತು. ನಾವು ನಾಲ್ಕು ಹುಡುಗರಲ್ಲಿ ಗುರುಲಿಂಗನೇ ಪುಢಾರಿ. ಊಟ ಬಡಿಸುವ ಸದೆಪ್ಪ ಎಷ್ಟು ಹಾರಾಡಿದರೂ ಕೇಳದೆ ಅನೇಕ ಸುಳ್ಳಿನ ಕಂತೆಯನ್ನು ಬಿಚ್ಚಿ, ಊಟಕ್ಕೆ ಕುಳಿತುಕೊಳ್ಳುವಂತೆ ಮಾಡಿದ. ಆಗ ಒಮ್ಮೆಲೇ ಹೊರಗಿನಿಂದ ಶಿವಾಪೂರಮಠ ಒಳಗೆ ಕಾಲಿಟ್ಟರು. ಅವರನ್ನು ನೋಡುತ್ತಲೇ ನಮಗೆ ವಿಭೂತಿಯ ನೆನಪಾಯಿತು. ನಾಲ್ಕು ಜನ ವಿಭೂತಿ ಹಚ್ಚಿದ್ದಿಲ್ಲ! ಶಿವಾಪೂರಮಠ ನೇರವಾಗಿ ನಮ್ಮನ್ನೇ ನೋಡಿ ಮೂವರನ್ನು ಎದ್ದು ನಿಲ್ಲಲಿಕ್ಕೆ ಹೇಳಿದರು. ಕೊನೆಯಲ್ಲಿ ಕುಳಿತ ಗುರುಲಿಂಗ ಸಭ್ಯನಂತೆ ಊಟ ಪ್ರಾರಂಭಿಸಿದ. ನೋಡುತ್ತೇವೆ—ಅವನ ಹಣೆಯಲ್ಲಿ ವಿಭೂತಿ! ಇದೀಗ ಖಾಲಿ ಇದ್ದ ಹಣೆ ಹೇಗೆ ಭರ್ತಿಯಾಯಿತು? ಮೂವರಿಗೂ ಆಶ್ಚರ್ಯವಾಯಿತು.

ಆ ದಿನ ನಾವು ಮೂವರೂ ಏಕಾದಶಿ ಮಾಡಿದೆವು. ದ್ವಾದಶಿ ಮಾಡಿದ ಗುರುಲಿಂಗನಿಗೆ ವಿಭೂತಿಯ ರಹಸ್ಯ ಕೇಳಿದಾಗ, "ಗೋಡೆಗೆ ಹಚ್ಚಿದ ಸುಣ್ಣ" ಎಂದ. ಅವನ ಚುರುಕು ಬುದ್ಧಿಯನ್ನು ಕಂಡು ನಾವೆಲ್ಲ ಭಲೆ ಎಂದೆವು.

— ಮೋಹನ ಕಳಸದ

ಸೌರವ್ಯೂಹದ ಪೌರರು ಯಾರು?

ಜಿ. ಟಿ. ನಾರಾಯಣರಾವ್

ಸೌರವ್ಯೂಹ

"ಭೂನಿವಾಸಿಗಳಾದ ನಮಗೆ ಬೆಳಕು ಹಾಗೂ ಶಾಖ ನೀಡಲು ಸೂರ್ಯ ನಮ್ಮ ಸುತ್ತ ಪ್ರತಿದಿನವೂ ಪೂರ್ವದಿಂದ ಪಶ್ಚಿಮಕ್ಕೆ ಬಲು ಶಿಸ್ತಿನಿಂದ ಸಂಚರಿಸುತ್ತಾನೆ; ಮತ್ತು ನಮಗೆ ಆಹಾರ ವಿಹಾರಗಳನ್ನು ಸಕಾಲದಲ್ಲಿ ಒದಗಿಸಲು ಋತುಗಳ ಪುನರಾವರ್ತನೆಯನ್ನು ಉಂಟು ಮಾಡುತ್ತಾನೆ" ಎಂಬುದಾಗಿ ಆದಿಮಾನವನಿಗೆ ಅನ್ನಿಸಿದ್ದರೆ ಅಚ್ಚರಿ ಏನೂ ಇಲ್ಲ. ಇಂದಿಗಾದರೂ ಮೇಲುನೋಟಕ್ಕೆ ಹೊಳೆಯುವುದು ಹೀಗೆಯೇ. ಆದರೆ ನಿಜಸ್ಥಿತಿ ಬೇರೆ. ಭೂಮಿಯ ಆವರ್ತನ ಚಲನೆಯಿಂದ (ಅಂದರೆ ಬುಗುರಿ ತನ್ನ ಸುತ್ತ ಗಿರಕಿಸುವಂಥ ಚಲನೆ) ಸಮಸ್ತ ಆಕಾಶಕಾಯಗಳ ಮೂಡು-ಮುಳುಗು ಚಲನೆ ಉಂಟಾಗುತ್ತದೆ; ಪರಿಭ್ರಮಣ ಚಲನೆಯಿಂದ (ಅಂದರೆ ದೇಗುಲದ ಸುತ್ತ ಭಕ್ತನ ಪ್ರದಕ್ಷಿಣೆಯಂಥ ಚಲನೆ) ಋತುಗಳ ಪುನರಾವರ್ತನೆ ಸಂಭವಿಸುವುದು. ಅರ್ಥಾತ್ ಭೂಮಿ ಎಂಬ ಭಕ್ತ ಸೂರ್ಯ ಎಂಬ ದೇವನ ಸುತ್ತ ಮಂಡೆಹೊರಳುತ್ತಿದೆ. ದೇವನೊಬ್ಬ, ಭಕ್ತರೂ, ಅಂತೆಯೇ ಅವರ ಪ್ರದಕ್ಷಿಣ ಕಕ್ಷೆಗಳೂ, ಹಲವು ಇರುವುದು ಸಾಧ್ಯವಷ್ಟೆ. ಸೂರ್ಯದೇವನ ವಿಚಾರದಲ್ಲಿಯೂ ಇದು ನಿಜ. ಈತನ ಪ್ರಮುಖ ಭಕ್ತರಿಗೆ ಗ್ರಹಗಳೆಂದು ಹೆಸರು. ಸೂರ್ಯನಿಂದ ಆರೋಹೀ ದೂರಾನುಸಾರ ಇವು ಅನುಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್, ನೆಪ್ಚೂನ್ ಮತ್ತು ಪ್ಲೂಟೋ. ಇತರ ಭಕ್ತರೆಂದರೆ ಮಂಗಳ ಮತ್ತು ಗುರು ಕಕ್ಷೆಗಳ ನಡುವೆ ಹರಿಯುತ್ತಿರುವ ಕ್ಷುದ್ರಗ್ರಹಗಳ ಹೊನಲು, ಧೂಮಕೇತುಗಳು, ಉಲ್ಕೆಗಳು ಮತ್ತು ವಿವಿಧ ಗ್ರಹಗಳ ಉಪಗ್ರಹಗಳು. ಭಕ್ತಪರಿವಾರಸಮೇತನಾದ ಸೂರ್ಯನ ಸಾಮ್ರಾಜ್ಯವನ್ನು ಸೌರವ್ಯೂಹ ಎಂದು ಕರೆಯುತ್ತೇವೆ.

ದೇವವಿಗ್ರಹ–ಭಕ್ತ–ಪ್ರದಕ್ಷಿಣ ಕಕ್ಷೆ ಸಾಮ್ಯ ಒಂದಕ್ಕಿಂತ ಹೆಚ್ಚು ವಿಧಗಳಲ್ಲಿ ಸಮಂಜಸವಾಗಿದೆ. ವಿಗ್ರಹಸ್ಥಾನ ಸ್ಥಿರವಾಗಿದೆ; ಸೂರ್ಯನು ಕೂಡ. ಭಕ್ತರು ವಿಗ್ರಹದ ಸುತ್ತ ಸದಾ ಪ್ರದಕ್ಷಿಣ ದಿಶೆಯಲ್ಲಿಯೇ ಸಂಚರಿಸುತ್ತಾರೆ. ಅಂದರೆ ಅವರ ಪರಿಭ್ರಮಣ ದಿಶೆ ಒಂದೇ. ಗ್ರಹಗಳು ಸೂರ್ಯನ ಸುತ್ತ ಚಲಿಸುವುದಾದರೂ ಹೀಗೆಯೇ, ಏಕದಿಶಾಗಾಮಿಗಳಾಗಿಯೇ. ಇಷ್ಟೇ ಅಲ್ಲ. ಶುಕ್ರ ಮತ್ತು ಯುರೇನಸ್ ಗ್ರಹಗಳ ವಿನಾ ಮಿಕ್ಕ ಎಲ್ಲವುಗಳ ಆವರ್ತನ ದಿಶೆಯೂ ಪರಿಭ್ರಮಣ ದಿಶೆಯೂ ಒಂದೇ ಆಗಿವೆ. ಹೆಚ್ಚಿನ ಉಪಗ್ರಹಗಳು ತಮ್ಮ ಮಾತೃಗ್ರಹಗಳ ಸುತ್ತ ಸಂಚರಿಸುವಾಗ ಸಹ ಇದೇ ಲಕ್ಷಣವನ್ನು ಪ್ರದರ್ಶಿಸುವುವು. ಭಕ್ತರ ಪ್ರದಕ್ಷಿಣಕಕ್ಷೆಗಳು ಬೇರೆ ಬೇರೆ ಗಾತ್ರದ ವೃತ್ತಗಳು, ಅವೆಲ್ಲವುಗಳ ಕೇಂದ್ರ ಸ್ಥಾನದಲ್ಲಿ ವಿಗ್ರಹ ಉಂಟು ಮತ್ತು ಈ ಎಲ್ಲ ಕಕ್ಷೆಗಳೂ ಮಟ್ಟಸ ನೆಲದ ಮೇಲಿವೆ.

ಇದರ ಅರ್ಥ ಭಕ್ತರು ಏಕಕೇಂದ್ರೀಯ ಹಾಗೂ ಏಕ ಸಮತಲೀಯ ವೃತ್ತಕಕ್ಷೆಗಳ ಮೇಲೆ ಕೇಂದ್ರ ವಿಗ್ರಹದ ಸುತ್ತ ಪ್ರದಕ್ಷಿಣೆ ಮಾಡುತ್ತಿದ್ದಾರೆ ಎಂದು. ಗ್ರಹಕಕ್ಷೆ–ಸೂರ್ಯ ಸಂಬಂಧವಾದರೂ ಸರಿಸುಮಾರಾಗಿ ಹೀಗೆಯೇ ಉಂಟು. ಬುಧ ಹಾಗೂ ಪ್ಲೂಟೋ ಕಕ್ಷೆಗಳನ್ನು ಬಿಟ್ಟರೆ ಉಳಿದೆಲ್ಲವೂ ಹೆಚ್ಚು ಕಡಿಮೆ ಏಕಕೇಂದ್ರೀಯ ಮತ್ತು ಏಕಸಮತಲೀಯ ವೃತ್ತಕಕ್ಷೆಗಳೇ. ಕ್ಷುದ್ರಗ್ರಹಗಳು, ಧೂಮಕೇತುಗಳು ಹಾಗೂ ಉಲ್ಕೆಗಳು ಸೌರವ್ಯೂಹದ ಸದಸ್ಯಕಾಯಗಳಾದರೂ (ಸೂರ್ಯನಿಂದ ಭೌತಿಕವಾಗಿ ಪ್ರಭಾವಿಸಲ್ಪಡುವ ಕಾಯಗಳು ಎಂಬ ಅರ್ಥದಲ್ಲಿ) ಮೇಲಿನ ನಿಯಮಗಳಿಗೆ ಬದ್ಧವಾಗಿಲ್ಲ.


ಮುಂದಿನ ವಿವರಣೆಗೆ ನೆರವಾಗಲೆಂಬ ಉದ್ದೇಶದಿಂದ ಗ್ರಹಗಳ ಕೆಲವು ಪ್ರಮುಖ ಸಾಂಖ್ಯಿಕ ಮೌಲ್ಯಗಳನ್ನು ಇಲ್ಲಿ ಬರೆದಿದೆ.

ಈ ಯಾದಿಯಲ್ಲಿ ಸೂರ್ಯ–ಭೂಮಿ ಸರಾಸರಿ ದೂರವನ್ನು (=೧೪ ಕೋಟಿ ೯೬ ಲಕ್ಷ ಕಿ ಮೀ) ಏಕಮಾನವಾಗಿ ಆಯ್ದಿದೆ; ಇದಕ್ಕೆ ಖಗೋಳಮಾನ (ಖ. ಮಾ) ಎಂದು ಹೆಸರು.

ಹದಿನೆಂಟನೆಯ ಶತಮಾನದ ವಿಜ್ಞಾನಿಗಳಿಗೆ ಸೂರ್ಯನಿಂದ ಬುಧ, ಶುಕ್ರ, ಭೂಮಿ, ಮಂಗಳ, ಗುರು ಮತ್ತು ಶನಿಗ್ರಹಗಳ ಸರಾಸರಿ ದೂರಗಳು ಮಾತ್ರ (ಅದೂ ನಿಖರವಾಗಿ ಅಲ್ಲ) ತಿಳಿದಿದ್ದುವು. ಇವನ್ನು ಬಂಧಿಸುವಂಥ ಯಾವುದಾದರೂ ಗಣಿತಸೂತ್ರ ಇದೆಯೇ ಎಂಬ ದಿಶೆಯಲ್ಲಿ ನಡೆಸಿದ ಪ್ರಯತ್ನಗಳಿಂದ, ಈಗ ಬೋಡ್‌ನ ನಿಯಮ ಎಂದು ಪ್ರಚಲಿತವಾಗಿರುವ, ಸ್ಥೂಲ ವಿವರಣೆಯೊಂದು ದೊರೆಯಿತು (ಪ್ರಕಟಣೆ ೧೭೭೨). ಈ ಸೂತ್ರದ ಪ್ರಕಾರ ಗ್ರಹದೂರಗಳನ್ನು ಹೊಂದಿಸಿದಾಗ ಮಂಗಳ ಮತ್ತು ಗುರು

ಗ್ರಹ	ಸೂರ್ಯನಿಂದ ಸರಾಸರಿ ದೂರ (ಸೂರ್ಯ-ಭೂಮಿ ದೂರ= ೧)	ರಾಶಿ (ಭೂಮಿ= ೧)	ಘನಗಾತ್ರ (ಭೂಮಿ= ೧)	ಸರಾಸರಿ ಸಾಂದ್ರತೆ (ಭೂಮಿ= ೧)	ಆವರ್ತನಾವಧಿ (ಭೂಮಿ= ೧)
ಬುಧ	೦.೩೮೭	೦.೦೫೫	೦.೦೬	೦.೯೮೨	೫೯
ಶುಕ್ರ	೦ ೭೨೩	೦.೮೧೫	೦.೮೮	೦.೯೪೬	೨೪೩*
ಭೂಮಿ	೧	೧	೧	೧	೧
ಮಂಗಳ	೧ ೫೨೪	೦.೧೦೮	೦.೧೫	೦.೭೧೯	೧.೦೨೯
ಕ್ಷುದ್ರಗ್ರಹಗಳು	೨.೩–೩.೩	೦.೦೦೦೬೨೫	—	—	—
ಗುರು	೫.೨೦೩	೩೧೭.೯	೧೩೧೬	೦.೨೩೬	೦.೪೧೧
ಶನಿ	೯.೫೩೯	೯೫.೨	೭೫೫	೦.೧೨೭	೦.೪೨೮
ಯುರೇನಸ್	೧೯.೧೮	೧೪.೬	೬೭	೦ ೨೧೮	೦.೪೬*
ನೆಪ್ಚ್ಯೂನ್	೩೦.೦೬	೧೭.೨	೫೭	೦ ೩೦೯	೦.೬೬೮
ಪ್ಲೂಟೋ	೩೯.೪೪	?	?	?	?


* ಇವೆರಡು ಗ್ರಹಗಳ ಆವರ್ತನದಿಶೆ ಪರಿಭ್ರಮಣ ದಿಶೆಗೆ ವಿರುದ್ಧವಾಗಿದೆ ಇವುಗಳಲ್ಲಿ ನಿಂತು ಗಗನವನ್ನು ಗಮನಿಸುವಾತನಿಗೆ ಸೂರ್ಯ ಪಶ್ಚಿಮದಲ್ಲಿ ಮೂಡಿ ಪೂರ್ವದಲ್ಲಿ ಮುಳುಗಿದಂತೆ ಕಾಣುವುದು. ಅಂದರೆ ಪಾರ್ಶ್ವಿಕವಾಗಿ ಸೂರ್ಯ, ನಮಗೆ ತೋರುವ ಹಾಗೆಯೇ ಸ್ಥಿರನಕ್ಷತ್ರ ಚಿತ್ರಗಳ ಹಿನ್ನೆಲೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸಂಚರಿಸಿದಂತೆ ಭಾಸವಾಗುತ್ತದೆ



1,2,3,4 ಸರಿ ಸುಮಾರಾಗಿ ಏಕ ತಲೀಯವಾಗಿವೆ. 5 ಈ ತಲಕ್ಕೆ ತುಂಬ ಬಾಗಿ ಬಾಗಿಕೊಂಡಿದೆ. ಬಾಣಗಳು ಗ್ರಹಗಳ ಸಂಚಾರ ದಿಶೆಯನ್ನು ಸೂಚಿಸುವುವು.

ಕಕ್ಷೆಗಳ ನಡುವೆ, ೨.೮ ಖ. ಮೀ. ದೂರಕ್ಕೆ ಹೊಂದುವಂಥ ಕಾಯವೊಂದಿರಬೇಕೆಂದು ತಿಳಿಯಿತು. ಮುಂದೆ ೧೮೦೧ರಲ್ಲಿ ಕ್ಷುದ್ರ ಗ್ರಹಗಳ ಪ್ರಥಮ ಸದಸ್ಯ ಸಿರಿಸ್ ಮತ್ತು ಅದರ ಬೆನ್ನಿಗೆ ಅಸಂಖ್ಯಾತ ಕಿರಿ ಮರಿ "ಮೀನುಗಳು" ಅದೇ ನೆಲೆಯಲ್ಲಿ "ಬಲೆಗೆ" ಬಿದ್ದಾಗ ಬೋಡ್‌ನ ನಿಯಮದ್ದು ತೆರವು ಭರ್ತಿ ಆಯಿತು. ಇದರೊಂದಿಗೆ, ಆಗ ತಿಳಿದಿದ್ದ ಸೌರವ್ಯೂಹಕ್ಕೆ ಹೆಚ್ಚಿನ ಒಂದು ಗಣಿತ ವಿವರಣೆಯೂ ದೊರೆಯಿತು.

ಕ್ಷುದ್ರಗ್ರಹಗಳ ಹೊನಲನ್ನು ಗಡಿರೇಖೆ ಎಂದು ಭಾವಿಸಿದರೆ ಆಗ ಸೌರವ್ಯೂಹದ ಗ್ರಹಗಳು ಎರಡು ಪ್ರತ್ಯೇಕ ವರ್ಗಗಳಾಗಿ ಒಳಪಡುವುವೆಂದು ಮೇಲಿನ ಯಾದಿಯಿಂದ ಸುಲಭವಾಗಿ ನಿಗಮಿಸಬಹುದು. ಹೊನಲಿನಿಂದ ಹೊರಗಿನವು (ಅಂದರೆ ಸೂರ್ಯವಿಮುಖ ಪಾರ್ಶ್ವದವು ಅಥವಾ ಯಾದಿಯಲ್ಲಿ ಕ್ಷುದ್ರಗ್ರಹಗಳಿಗಿಂತ ಕೆಳಗಿನವು) ರಾಶಿ



ಹಾಗೂ ಘನಗಾತ್ರಗಳಲ್ಲಿ ಹಿರಿಯವು. ಆದ್ದರಿಂದ ಇವು ದೈತ್ಯ ಗ್ರಹಗಳು. ಇವು ಆವರ್ತನೆಯನ್ನು ಕ್ಷಿಪ್ರಾವಧಿಯಲ್ಲಿ ಮುಗಿಸುತ್ತವೆ. ಅರ್ಥಾತ್ ಇವುಗಳ ಆವರ್ತನ ವೇಗ ಅಧಿಕ. ಹೀಗೆ, ಗ್ರಹೋಪಗ್ರಹಗಳ ಒಟ್ಟು ರಾಶಿಯ ಶೇಕಡಾ ೯೯.೫ ಅಂಶವನ್ನೂ ಒಳಗೊಂಡಿರುವ ದೈತ್ಯಗ್ರಹಗಳು ಅತಿ ವೇಗದಿಂದ ಆವರ್ತಿಸುತ್ತಲೂ ಇವೆ: ಇದರ ಅರ್ಥ, ಗಣಿತೀಯವಾಗಿ, ಅವುಗಳ ಸಂವೇಗ (ಅಂದರೆ ಕಾರ್ಯ ಮಾಡಬಲ್ಲ ಸಾಮರ್ಥ್ಯ) ಅತ್ಯಧಿಕವಾಗಿದೆ ಎಂದು. ಹೋಲಿಕೆಯಿಂದ ಸಾಧಾರಣ ಗ್ರಹಗಳ ಸಂವೇಗ ಬಲು ಕಡಿಮೆ. ಸಾಂದ್ರತೆಯನ್ನು ಗಮನಿಸುವಾಗ ದೈತ್ಯ ಗ್ರಹಗಳೆಲ್ಲವೂ ಸಾಧಾರಣ ಗ್ರಹಗಳಿಗೆ ಸೋಲುತ್ತವೆ. ಇದರ ಅರ್ಥ, ಭೌತವಾಗಿ, ಸಾಧಾರಣ ಗ್ರಹಗಳಲ್ಲಿ ದ್ರವ್ಯ ಹೆಚ್ಚು ಘನವಾಗಿದೆ, ದ್ರವ್ಯದ ಪೇರಿಕೆ ಹೆಚ್ಚು ನಿಬಿಡವಾಗಿದೆ ಎಂದು.

ಹೀಗೆ ಸೌರವ್ಯೂಹದಲ್ಲಿ ನಾವು ಗುರುತಿಸಬಹುದಾದ ಒಂದು ವಿಶಿಷ್ಟ ಕ್ರಮ ಉಂಟು. ಯಾದೃಚ್ಛಿಕತೆಯೇ (ಕ್ರಮರಾಹಿತ್ಯ) ವಿಶ್ವದ ಸಾರ್ವತ್ರಿಕ ನಿಯಮ. ನೈಸರ್ಗಿಕವಾಗಿ ಕವಿದಿರುವ ಕಾಡು, ಹಬ್ಬಿರುವ ಹುಲ್ಲುಗಾವಲು, ಹರಿಯುತ್ತಿರುವ ಹೊಳೆ ಒಂದೊಂದರಲ್ಲೂ ಇದನ್ನು ಕಾಣಬಹುದು. ಇನ್ನು ನಕ್ಷತ್ರ ಪ್ರಪಂಚಕ್ಕೆ ನೆಗೆದು ನೋಡಿ. ಅಲ್ಲಿನ ದೈವಿಕ ಗೊಂದಲ ಹುಚ್ಚು ಹಿಡಿಸುವಂತಿದೆ. ಈ ನಿಲುವಿನಿಂದ ನೋಡಿದಾಗ ಸೌರವ್ಯೂಹ ಇದಕ್ಕೆ ಅಪವಾದವಾಗಿದೆ. ಯಾದೃಚ್ಛಿಕತೆ ಇದರ ನಿಯಮ ಅಲ್ಲ ಎಂದು ಒಡನೆ ಹೊಳೆಯುವುದು. ಆದ್ದರಿಂದ ಸೌರ ವ್ಯೂಹದ ರಚನೆಯಲ್ಲಿ ಕೆಲವು ವಿಶೇಷ ಬಲಗಳು ಸುಸಂಘಟಿತವಾಗಿ ವರ್ತಿಸಿರಬೇಕು ಎಂದು ಊಹಿಸುವುದು ಸಾಧುವಾಗಿದೆ. ಇವು ಯಾವುವು ಎಂಬುದನ್ನು ಕರಾರುವಾಕ್ಕಾಗಿ ತಿಳಿಯುವುದು ಸಮೀಪ ಭವಿಷ್ಯದಲ್ಲಂತೂ ನಮಗೆ ಸಾಧ್ಯವಾಗದು. ಅತಿದೂರದ, ಅಭಿವರ್ಧನೆಯ ವಿವಿಧ ಮಜಲುಗಳಲ್ಲಿ ಇರುವ, ಹಲವಾರು ವರ್ಗಗಳ ಅಸಂಖ್ಯಾತ ನಕ್ಷತ್ರಗಳು ವೀಕ್ಷಣೆಗೆ ಸುಲಭವಾಗಿ ಲಭಿಸುವುದರಿಂದ ಅವುಗಳ ವಿಚಾರ ನಮಗೆ ತಿಳಿದಿರುವಷ್ಟು ಜ್ಞಾನ ಖಾಸಾ ನಮ್ಮ ಮನೆಯೇ ಆದ ಈ ಸೌರವ್ಯೂಹದ ವಿಚಾರ ತಿಳಿದಿಲ್ಲ. ವಿಶ್ವದಲ್ಲಿ ಬೇರೆ ಒಂದು ಇಂಥ ವ್ಯೂಹವನ್ನು ಈ ತನಕ ಗುರುತಿಸಲು ಸಾಧ್ಯವಾಗದಿರುವುದು ಒಂದು ಮುಖ್ಯ ಕಾರಣ. ಇನ್ನು ಸೌರವ್ಯೂಹದಲ್ಲಿ ತೀರ ಅಲ್ಪ ಗಾತ್ರದ ಭೂಮಿಯ ಮೇಲೆ ಕಾಲದಲ್ಲೂ ಆಕಾಶದಲ್ಲೂ ಬಹುತೇಕ ಅಸ್ತಿತ್ವರಹಿತ ಸೂಕ್ಷ್ಮ ಜೀವಿಗಳಂತಿರುವ ನಾವು ಭೂತಕಾಲವನ್ನು ನಿಷ್ಕೃಷ್ಟವಾಗಿ ಕಂಡು ವರ್ಣಿಸುವುದು ಹೇಗೆ? ಭೂರಾಶಿ ಸೂರ್ಯರಾಶಿಯ ಶೇಕಡಾ ೦.೦೦೦೩೦೪ ಅಂಶ ಮಾತ್ರ. (ಸಮಸ್ತ ಗ್ರಹೋಪಗ್ರಹಗಳ ರಾಶಿಯಾದರೂ ಸೂರ್ಯ ರಾಶಿಯ ಶೇಕಡಾ ೦.೧೩೪೨೫೮ ಅಂಶ ಇರಬಹುದು ಅಷ್ಟೆ.) ಸೌರವ್ಯೂಹ ೪೬೦ಕೋಟಿ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂತೆಂದು ಅಂದಾಜು. ಆಧುನಿಕ ವಿಜ್ಞಾನವಾದರೋ ಕೇವಲ ೪೦೦ ವರ್ಷಗಳ ಕೂಸು. ಭೂಮಿಯ ೪೬೦ಕೋಟಿ ವರ್ಷಗಳ ದೀರ್ಘ ಇತಿಹಾಸವನ್ನು ಒಂಟಿ ವರ್ಷಕ್ಕೆ ಸಂಕೋಚಿಸಿದ್ದೇ ಆದರೆ ಆಕಾಶಾನ್ವೇಷಣೆಯ ಸಮಸ್ತ ವೈಭವವೂ ಆರಂಭವಾದದ್ದು ಸೆಕೆಂಡಿನ ಹತ್ತನೇ ಒಂದು ಭಾಗಕ್ಕಿಂತಲೂ ಈಚೆಗೆ! ಆದ್ದರಿಂದ ಈಗ ಏನಿದ್ದರೂ ಲಭ್ಯ ಮಾಹಿತಿಗಳ ಆಧಾರದಿಂದ ಸೌರವ್ಯೂಹದ ಉಗಮವನ್ನು ಕುರಿತು ಕೆಲವು ಊಹೆಗಳನ್ನು ಮಂಡಿಸುವುದು ಮಾತ್ರ ಸಾಧ್ಯ. ರೋಗ ಲಕ್ಷಣಗಳ ಅಧ್ಯಯನದಿಂದ ವೈದ್ಯ ರೋಗ ನಿದಾನ ಮಾಡುವಂಥ ಒಂದು ಶಾಸ್ತ್ರೀಯ ಕ್ರಿಯೆ ಇದು. ಲಕ್ಷಣಗಳು ಅಧಿಕ ಸಂಖ್ಯೆಯಲ್ಲಿ ದೊರೆತಷ್ಟೂ ನಿದಾನ ಅಷ್ಟರಮಟ್ಟಿಗೆ ಪರಿಪೂರ್ಣವಾಗುವುದೆಂಬುದು ಸ್ಪಷ್ಟ.

ಸೌರವ್ಯೂಹದ ಉಗಮ—ಮೊದಲ ಊಹೆಗಳು


ರೆನೆ ಡೇಕಾರ್ಟೇ (೧೫೯೬—೧೬೫೦) ಮೊತ್ತ

ಮೊದಲಿಗೆ ನೀಹಾರಿಕಾ ಊಹೆಯನ್ನು ಮಂಡಿಸಿದ (೧೭೫೫) ವಿಶ್ವದಲ್ಲಿ ಬೇಕಾಬಿಟ್ಟಿ ಹರಡಿ ಹೋಗಿರುವ ದ್ರವ್ಯದ ಸಂಚಯನಗಳಿಗೆ ನೀಹಾರಿಕೆಗಳೆಂದು ಹೆಸರು. ಇವು ವಿಶ್ವ ಮೇಘಗಳು. ನಕ್ಷತ್ರಗಳು ಹುಟ್ಟುವುದು ಇವುಗಳಲ್ಲಿ. ಇಂಥ ನೀಹಾರಿಕೆಯ ತುಣುಕೊಂದು ವಿಶ್ವದ ಮಹಾ ವಿಸ್ತಾರದಲ್ಲಿ ಪ್ರತ್ಯೇಕಗೊಂಡು ಅತಿವೇಗದಿಂದ ಘೂರ್ಣಿಸತೊಡಗಿತು. ಇದರ ಕೇಂದ್ರಭಾಗದಲ್ಲಿ ದ್ರವ್ಯ ದಟ್ಟವಾಗಿ ಸಂಚಯಿಸಿ ಸ್ವಂತ ಭಾರ ಹಾಗೂ ಸಂಮರ್ದಗಳ ಪರಿಣಾಮವಾಗಿ ತೀವ್ರ ಶಾಖ ಸಂಜನಿಸಿ ಅದರ ಗರ್ಭದಲ್ಲಿ ಪರಮಾಣು ಅಗ್ನಿಷ್ಟಿಕೆ ಪ್ರಜ್ವಲಿಸಿತು. ಇದೇ ಸೂರ್ಯ. ಇದರ ಸುತ್ತ ಬಹುದೂರದ ವರೆಗೆ ವಿರಳವಾಗಿ ಹರಡಿಹೋಗಿದ್ದ ಧೂಳಿನ ಕಣಗಳು ಅಲ್ಲಲ್ಲೇ ಹಿರಿಕಿರಿಯ ಮುದ್ದೆಗಳಾಗಿ ಒಗ್ಗೂಡಿ ಗ್ರಹೋಪಗ್ರಹಗಳೇ ಮುಂತಾದವು ಮೈದಳೆದುವು. ಇದಿಷ್ಟು ನೀಹಾರಿಕಾ ಊಹೆಯ ಸಾರಾಂಶ. ಇದನ್ನು ಅದ್ವೈತವಾದ ಎಂಬುದಾಗಿಯೂ ಕರೆಯುವುದುಂಟು.

ಕಾಮ್ಟ ಡ ಬಫನ್ (೧೭೦೭–೧೭೮೮) ಎಂಬಾತ ಬೇರೆಯೇ ಒಂದು ನಭೋನಾಟಕವನ್ನು ವರ್ಣಿಸಿದ (೧೭೪೫): ಸೂರ್ಯಸದೃಶ ರಾಶಿಯ ಆಗಂತುಕ ಕಾಯವೊಂದು (ಬಫನ್ ಸೂಚಿಸಿದ್ದು ಧೂಮಕೇತುವನ್ನು; ಆದ್ದರಿಂದ ಅಂದು ಧೂಮಕೇತುವಿನ ವಿಚಾರ ವಿಜ್ಞಾನಿಗಳಿಗೆ ಯಾವ ಕಲ್ಪನೆ ಇತ್ತು ಎಂಬುದು ಗೊತ್ತಾಗುವುದು) ಸೂರ್ಯನನ್ನು ಒರಸುತ್ತ ಎಂಬಂತೆ ಸವರಿ ಧಾವಿಸಿ ಹೋಯಿತು. ಆ ವೇಳೆ ಸೂರ್ಯನಿಂದ ಹೊರ ಸೆಳೆಯಲ್ಪಟ್ಟ ಅನಿಲರಾಶಿ ಕ್ರಮೇಣ ಘನೀಭವಿಸಿ ಗ್ರಹೋಪಗ್ರಹಗಳು ಮುಂತಾದವು ಜನಿಸಿದುವು. ಇದನ್ನು ದ್ವೈತವಾದ ಎಂದು ಹೇಳುವುದಿದೆ.

ಕಾಲಾನುಕ್ರಮದಲ್ಲಿ ಹೆಚ್ಚಿನ ಪುರಾವೆಗಳು ಒದಗಿ ಬಂದಂತೆ ಒಂದೊಂದು ವಾದದಲ್ಲಿಯೂ ಹಲವಾರು ಮಾರ್ಪಾಡುಗಳನ್ನು ಮಾಡಿ ಅದಕ್ಕೆ ಮುಖಮಾರ್ಜನವನ್ನು ನೀಡಿ ಮಂಡಿಸುವುದು ವಾಡಿಕೆ ಆಯಿತು. ಉದಾಹರಣೆಗೆ ಕೇವಲ ಎರಡು ದಶಕಗಳ ಹಿಂದೆ. ಅಂದರೆ ಆಕಾಶಯುಗ ಆರಂಭವಾಗುವ ಮೊದಲು, ದ್ವೈತವಾದವೇ ಹೆಚ್ಚು ಮೆಚ್ಚುಗೆ ಗಳಿಸಿತ್ತು: ಮೊದಲಿಗೆ ಫಾರೆಸ್ಟ್ ರೇ ಮೌಲ್ಟನ್ (೧೮೭೨–೧೯೫೨) ಎಂಬಾತ ಮಂಡಿಸಿದ, ಮುಂದೆ ಜೇಮ್ಸ್ ಜೀನ್ಸ್ (೧೮೭೭–೧೯೪೬) ಎಂಬಾತ ಅಭಿವರ್ಧಿಸಿದ, ನಕ್ಷತ್ರ–ಸೂರ್ಯ ಸಂಘಟ್ಟನವಾದ ಸೌರವ್ಯೂಹದ ಉಗಮ ಹಾಗೂ ಅಭಿವರ್ಧನೆಯನ್ನು ಸಮರ್ಪಕವಾಗಿ ವಿವರಿಸುವುದೆಂದು ವಿಜ್ಞಾನಿಗಳು ನಂಬಿದ್ದರು. ಬಫನ್‌ನ ಧೂಮಕೇತುಸ್ಥಾನವನ್ನು ಇಲ್ಲಿ ಸೂರ್ಯ ಸದೃಶರಾಶಿಯ ಒಂದು ನಕ್ಷತ್ರ ಪಡೆಯುತ್ತದೆ. ಇಂಥ ತಾರೆಗಳು ವಿಶ್ವದಲ್ಲಿ ವಿಪುಲವಾಗಿವೆ. ಇವು ವಿಶ್ವದ ಮಹಾ ಶೂನ್ಯ ವ್ಯಾಪ್ತಿಯಲ್ಲಿ ಸದಾ ಪರಿವ್ರಾಜಕಗಳು. ಪ್ರತಿಯೊಂದರ ಸುತ್ತಲೂ ಅದರ ರಾಶಿಗೆ ಅನುಗುಣವಾದ ಗುರುತ್ವಾಕರ್ಷಣ ವಲಯ ಹಬ್ಬಿರುವುದು. ಈ ವಲಯದ ಸರಹದ್ದನ್ನು ಅನ್ಯಕಾಯವೊಂದು ಅತಿಕ್ರಮ ಪ್ರವೇಶ ಮಾಡಿದ್ದೇ ಆದರೆ ಇವೆರಡರ ನಡುವೆ ಭೀಕರ ಆಕಾಶಯುದ್ಧ ನಡೆಯುವುದು ಖರೆ: ಒಂದು ಇನ್ನೊಂದನ್ನು ಗಿರಗಿರನೆ ತಿರುಗಿಸಿ ಉಚ್ಚಾಟಿಸಬಹುದು ಇಲ್ಲವೇ ತನ್ನೆಡೆಗೆ ಭರದಿಂದ ಸೆಳೆಯಬಹುದು. ಗುರುತ್ವಾಕರ್ಷಣ ನಿಯಮ, ವಿರೋಧಿಗಳ ಸಂಚಾರವೇಗ, ಅಂತರ ಮುಂತಾದ ಗತ್ಯಾತ್ಮಕ ಬಲಗಳು ಇಲ್ಲಿ ಪ್ರಮುಖ ಪಾತ್ರ ವಹಿಸುವುವು. ಅಸಮ ಬಲರ ನಡುವೆ ಇಂಥ ಕಾಳಗ ನಡೆದರೆ ದುರ್ಬಲಿ ಸಬಲಿಯ ಮೇಲೆ ಬಿದ್ದು ಹರಾಕಿರಿ ಸಂಭವಿಸಬಹುದು. (ಭೂವಲಯಕ್ಕೆ ನುಗ್ಗುವ ಉಲ್ಕೆಗಳಿಗೆ ಒದಗುವ ಸಾವು ಈ ಮಾದರಿಯದು.) ಇಲ್ಲವೇ ದುರ್ಬಲಿ ಬಾನಿನ ಹಿರಿ ಆಳಕ್ಕೆ ಕವಣೆ ಬೀರಲ್ಪಡಬಹುದು. ಜೀನ್ಸ್ ವಾದದ ಪ್ರಕಾರ ಸೂರ್ಯನಿಗೆ ಎದುರಾದದ್ದು ವಾಲಿಯನ್ನು ಮಾರಾಂತು ನಿಂತ ಸುಗ್ರೀವಸದೃಶ ನಕ್ಷತ್ರ (ರಾಮಸಹಾಯ ಪೂರ್ವದ ಸುಗ್ರೀವ). ಸೂರ್ಯ ಮತ್ತು ಆಗಂತುಕ ತಾರೆ ಎರಡೂ ಪರಸ್ಪರ ಉಚ್ಚಾಟನೆ

ಗೊಂಡವು. ಆ ವೇಳೆ ಪ್ರತಿಯೊಂದರ ಮೈಯಿಂದಲೂ ಲಕ್ಷಾಂತರ ಕಿಲೋಮೀಟರ್ ಎತ್ತರದ ಮತ್ತು ಸಮವ್ಯಾಪ್ತಿಯ ಭಾರೀ ಜ್ವಾಲಾಜಿಹ್ವೆಗಳು ಪರಸ್ಪರರ ದಿಶೆಗಳಲ್ಲಿ ಚಾಚಿದವು. ಆಗಂತುಕ ನಕ್ಷತ್ರ ಸಾಗಿಹೋಗದಂತೆ ಸೂರ್ಯನ ಮೇಲ್ಮೈಯಿಂದ ಒಂದಿಷ್ಟು ಅನಿಲಾಂಶ ಕಿತ್ತು ಸೆಳೆದು ಬೇರ್ಪಡಿಸಲ್ಪಟ್ಟಿತು. ಬೆಂಕಿಯ ಈ ನಾಲಗೆ ಮುಂದೆ ಸೂರ್ಯನ (ಮಾತೃ ನಕ್ಷತ್ರ) ಮೇಲೆ ಬೀಳಲೂ ಆರದೆ ಆಗಂತುಕ ನಕ್ಷತ್ರದ ಹಿಂದೆ ಹೋಗಲೂ ಆರದೆ (ಅಂಬೆಯ ಪಾಡನ್ನು ಅನುಭವಿಸುತ್ತ), ಗತಿ ವಿಜ್ಞಾನ ನಿಯಮಾನುಸಾರ,



ಮೌಲ್ಟನ್. ಜೀನ್ಸ್‌ವಾದದ ಸಾಂಕೇತಿಕ ಚಿತ್ರಣ

ಸೂರ್ಯನ ಸುತ್ತ ಪರಿಭ್ರಮಿಸತೊಡಗಿತು. ಕಾಲಕ್ರಮೇಣ ಈ ನೀಳ ನಾಲಗೆ, ತಾನು ಪಡೆದುಕೊಂಡ ಕಾವನ್ನು ಕಳೆದುಕೊಂಡಂತೆ ಅದರ ಅನಿಲ ಅಲ್ಲಲ್ಲಿ ಕರಗಿ ದ್ರವ್ಯದ ಹನಿಗಳಾಗಿ ಸಾಂದ್ರೀಕರಿಸಿ ಮುಂದೆ ಹೆಪ್ಪುಗಟ್ಟಿ ಗ್ರಹಗಳು ಹುಟ್ಟಿದುವು. ಆದ್ದರಿಂದಲೇ ಎಲ್ಲ ಗ್ರಹಗಳೂ ಒಂದೇ ದಿಶೆಯಲ್ಲಿ ಮತ್ತು ಒಂದೇ ಸಮತಲದ ಮೇಲೆ ಸೂರ್ಯನ ಸುತ್ತ ಪರಿಭ್ರಮಿಸುತ್ತಿವೆ. ಅಧಿಕ ಸಾಂದ್ರತೆಯ ಗ್ರಹಗಳು ಏಕೆ ಸೂರ್ಯನ ಸಮೀಪದಲ್ಲಿವೆ ಮತ್ತು ದೈತ್ಯ ಗ್ರಹಗಳು ಏಕೆ ಸೂರ್ಯನಿಂದ ದೂರದಲ್ಲಿವೆ ಎಂಬುದನ್ನು ಈ ವಾದ ಸಮರ್ಪಕವಾಗಿ ವಿವರಿಸುವುದು.

೧೯೫೭ ಆಕಾಶಯುಗವನ್ನು ಆವಾಹಿಸಿತು. ಅಲ್ಲಿಂದ ಈಚೆಗೆ ಮನುಷ್ಯ ಕೇವಲ ಭೂಮಿಯ ಮೇಲ್ಮೈಗೆ ಬಂಧಿತನಾಗಿ, ತನ್ನ ಮೇಲೆ ದಟ್ಟವಾಗಿ ಕವಿದಿರುವ ವಾಯುಮಂಡಲ ಸೋಸಿ ಒಳ ಬಿಡುವ ವಿಶ್ವಮಾಹಿತಿಗಳನ್ನು ಮಾತ್ರ ಗ್ರಹಿಸಿ ಖಗೋಳದ ಇತಿಹಾಸವನ್ನು ಅರ್ಥವಿಸುವ ಸೆರೆಯಾಳಾಗಿ ಉಳಿಯಲಿಲ್ಲ. ನಿಜಕ್ಕೂ ಆಕಾಶಯುಗ ಖಗೋಳ ವಿಜ್ಞಾನಕ್ಕೆ ಹೊಸ ತಿರುವನ್ನು ನೀಡಿದೆ.

ಸೌರವ್ಯೂಹದ ಉಗಮ–ಆಧುನಿಕ ಚಿಂತನೆ

ಸೌರವ್ಯೂಹ ಜನಿಸಿದುದರ ಫಲವಾಗಿ ಭೂಮಿ, ಚಂದ್ರ ಮುಂತಾದ ಗ್ರಹೋಪಗ್ರಹಗಳು ಅಸ್ತಿತ್ವಕ್ಕೆ ಬಂದದ್ದು ಸರಿಯಷ್ಟೆ. ಅಲ್ಲಿಂದ ಈಚೆಗೆ ಸುಮಾರು ೪೬೦ ಕೋಟಿ ವರ್ಷಗಳೇ ಸಾದು ಹೋಗಿವೆ. ಈ ಸುದೀರ್ಘಾವಧಿಯಲ್ಲಿ ಭೂಮಿಯ ಮೇಲೆ ನೈಸರ್ಗಿಕ ಬಲಗಳಾದ ಬಿಸಿಲುಗಾಳಿ ಮಳೆ ಭೂಕಂಪನಗಳಿಂದಲೂ ಜೈವಿಕ ಚಟುವಟಿಕೆಗಳಿಂದಲೂ ಸಾಕಷ್ಟು ಬದಲಾವಣೆಗಳು ಆಗಿರುವುದರಿಂದ ಮೊದಲ ದಿನಗಳ ಕಚ್ಚಾ ಕುರುಹಾಗಿ ಇಂದು ಪ್ರಾಯಶಃ ಏನೂ ದೊರೆಯುವುದಿಲ್ಲ. ಇಂಥ ಕುರುಹುಗಳನ್ನು ನಾವು ಕಾಣಬಹುದಾದದ್ದು ಈ ವಿಧದ ಕ್ರಿಯೆಗಳಿಗೆ ಒಳಗಾಗದ ಅನ್ಯ

ಸದಸ್ಯಗಳಲ್ಲಿ. ಚಂದ್ರ. ಮಂಗಳಗಳ ಮೇಲೆ ನಮ್ಮ ಯಂತ್ರೋಪಕರಣಗಳು ಇಳಿದು ಪ್ರಯೋಗ ನಡೆಸಿ ವರದಿಗಳನ್ನು ರವಾನಿಸಿವೆ; ಎಡೆಬಿಡದೆ ಭೂವಾಯುಮಂಡಲವನ್ನು ಅತಿಕ್ರಮಿಸಿ ಆ ಹೋರಾಟದ ವೇಳೆ ಹುಟ್ಟುವ ಕಾವಿನಿಂದ ಸುಟ್ಟು ನಾಶವಾಗಿ ಹೋಗುವ ಉಲ್ಕೆಗಳು ಹಾಗೂ ಅಪರೂಪವಾಗಿ ಪೂರ್ತಿ ಉರಿದು ಹೋಗದೆ ಧರಾತಳದ ಮೇಲೆ ಕೆಡೆವ ಉಲ್ಕಾಪಿಂಡಗಳು ಅರುಹುವ ಕತೆ ಬೇರೆಯೇ ಉಂಟು; ಇನ್ನು ಮೇಲುನೋಟಕ್ಕೆ ಯಾವ ನಿಯಂತ್ರಿಗೂ ಒಳಪಡದ ಬಾನ ಬೈರಾಗಿಗಳಾದ ಧೂಮಕೇತುಗಳು ಅದೃಶ್ಯಲೋಕದ ರಾಯಭಾರಿಗಳಾಗಿ ಹೊತ್ತು ತರುವ ಸಮಾಚಾರಗಳು ಸಾಕಷ್ಟು ಇವೆ.

ಯಹೂದಿಗಳ ದೀಪಾವಳಿ

ಭಾರತೀಯರಂತೆ ಯಹೂದಿಗಳೂ ದೀಪಾವಳಿ ಹಬ್ಬ ಆಚರಿಸುತ್ತಾರೆ. ಕೃಷ್ಣನು ನರಕಾಸುರ ವಧೆಗೈದ ಸಂತೋಷಕ್ಕಾಗಿ ಭಾರತದಲ್ಲಿ ದೀಪಾವಳಿ ಪ್ರಾರಂಭವಾದರೆ ಇಸ್ರಾಯಿಲ್‌ನಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಯಹೂದಿಗಳ ಪೂಜಾಸ್ವಾತಂತ್ರ್ಯವನ್ನು ಅಪಹರಿಸಿದ್ದ ಅಂಟಿಯೋಕಸ್‌ನನ್ನು ಜುಡಾ ಮ್ಯಾಕಾಬಿಯು ಸೋಲಿಸಿದುದರ ಸ್ಮರಣಾರ್ಥ ದೀಪಾವಳಿಯನ್ನು ಎಂಟು ದಿನ ಆಚರಿಸುತ್ತಾರೆ. ಮೊದಲನೇ ದಿನ ಒಂದು, ಎರಡನೇ ದಿನ ಎರಡು ಹೀಗೆ ಕೊನೆಯ ದಿನ ಎಂಟು ಮೋಂಬತ್ತಿಗಳನ್ನು ಬೆಳಗಿಸುವದು ಇವರ ದೀಪಾವಳಿಯಲ್ಲಿಯ ಸಂಪ್ರದಾಯ. ಈ ಸಲ ಇವರ ದೀಪಾವಳಿ ಡಿ. ೧೭ ರಿಂದ ೨೪ ರವರೆಗೆ ಇದೆ.

ಸೂರ್ಯನ ಜನನಕ್ಕೆ ಕಾರಣವಾದ ನೀಹಾರಿಕೆಯ ಘಟಕಗಳ ಪೈಕಿ ಒಂದಿನಿತಾದರೂ ಉಲ್ಕೆಗಳಲ್ಲಿ ಸೆರೆ ಸಿಕ್ಕಿಕೊಂಡಿರುವುದು. ಉಲ್ಕಾಪಿಂಡದ ರಸಾಯನ ವೃತ್ತಾಂತ ಇವು ಏನೆಂಬುದನ್ನು ವಿಶದೀಕರಿಸುತ್ತದೆ. ಉದಾಹರಣೆಗೆ ಸೌರನೀಹಾರಿಕೆಯ ಪ್ರಮುಖ ಘಟಕ ಧಾತುಗಳೇನು, ಅಂದು ಪ್ರಚಲಿತವಾಗಿದ್ದ ಸಂಮರ್ದ ಉಷ್ಣತೆಗಳೇನು, ಅಂದು ಪರಸ್ಪರ ತಾಡನೆಗಳಿಗೆ ಈಡಾದ ಕಣಗಳ ಸ್ವಭಾವ ಏನು, ಇತ್ಯಾದಿ. ವಿಕಿರಣಪಟು ಧಾತುಕ್ಷಯದ (ಉದಾಹರಣೆಗೆ ವಿಕಿರಣಪಟು ಧಾತುವಾದ ಯುರೇನಿಯುಮ್‌ನ ಕ್ಷಯದರ ತಿಳಿದಿದೆ ಮತ್ತು ಕ್ಷಯದ ಉತ್ಪನ್ನ ಅಥವಾ ಶೇಷ ವಸ್ತು ಅಳತೆಗೆ ದೊರೆಯುವುದು. ಆದ್ದರಿಂದ ಕೆಲವು ಸರಳ ಗಣಿತ ಗಣನೆಗಳಿಂದ ಯುರೇನಿಯುಮ್ ಮೊದಲು ಮೈದಳಿದದ್ದು ಯಾವಾಗ ಎಂದು ನಿರ್ಧರಿಸುವುದು ಸಾಧ್ಯ) ಪರಿಣಾಮವಾಗಿ ದೊರೆಯುವ ಉಳಿಕೆಗಳ ವಿಶ್ಲೇಷಣೆಯಿಂದ ಇವುಗಳಿಗೆ ಕಾರಣವಾದ ಮೂಲ ವಿಕಿರಣಪಟು ಧಾತುಗಳು ಎಂದು ಜೋಡಣೆಗೊಂಡಿರಬೇಕು, ಅವುಗಳ ಸ್ವಭಾವ ಏನು ಎಂಬುದನ್ನು ಲೆಕ್ಕ ಹಾಕಬಹುದು. ಗ್ರಹೋಪಗ್ರಹಗಳ ಮೇಲ್ಮೈಗಳು ಹೆಪ್ಪುಗಟ್ಟುತ್ತಿದ್ದ ದಿನಗಳಂದು, ಆಗ ಸೌರವ್ಯೂಹ ಇನ್ನೂ ಎಳೆಯ ಪ್ರಾಯದ್ದಾಗಿದ್ದುದರಿಂದ ಉಲ್ಕೆಗಳ ನಿಬಿಡ ಹಾಗೂ ನಿರಂತರ ಸಂಘಟ್ಟನೆ ಅವನ್ನು ಗಾಸಿಗೊಳಿಸಿರಬೇಕು. ಇವುಗಳಿಂದಾದ ಕೂಪಗಳೂ ಗುಳಿಗಳೂ ಹೆಚ್ಚು ಕಡಿಮೆ ಮೊದಲ ಹೊಸತನದಿಂದಲೆ (ಹಸಿತನದಿಂದ ಕೂಡ) ಇಂದಿಗೂ ಉಳಿದುಕೊಂಡಿವೆ. ಈ "ಪ್ರಥಮ ಚುಂಬನಮುದ್ರೆ"ಗಳ ಕೂಲಂಕಷಾಧ್ಯಯನದಿಂದ ಮೇಲ್ಮೈಗಳ ಸ್ಥಿತಿಗತಿಗಳಲ್ಲಿ ಯಾವ ವ್ಯತ್ಯಾಸಗಳು ಉಂಟಾಗಿವೆ ಎಂಬುದು ತಿಳಿಯುವುದು. ಇದರೊಂದಿಗೆ ಸೌರವ್ಯೂಹದಲ್ಲಿ ಅಂದು "ದರೋಡೆಕಾರರ" (ಉಲ್ಕೆಗಳ) ನಿಬಿಡತೆ ಹೇಗಿತ್ತು ಎನ್ನುವ ಸಂಗತಿ ಸಹ ಗೊತ್ತಾಗುತ್ತದೆ.

ಇವನ್ನೆಲ್ಲ ಆಧರಿಸಿ, ಹಾರ್ವರ್ಡ್ ವಿಶ್ವ

ವಿದ್ಯಾಲಯದಲ್ಲಿ ಖಗೋಳವಿಜ್ಞಾನದ ಪ್ರಾಧ್ಯಾಪಕರಾಗಿರುವ ಡಾ. ಎ. ಜಿ. ಡಬ್ಲ್ಯು. ಕೆಮರಾನ್ ಎನ್ನುವವರು, ಸೌರ-ವ್ಯೂಹದ ಉಗಮವನ್ನು ಕುರಿತ ಆಧುನಿಕ ವಿವರಣೆಯನ್ನು ನೀಡಿದ್ದಾರೆ. ಅವರ ವಾದದ ಸಾರಾಂಶವನ್ನು ಈಗ ನೋಡೋಣ.

ನಕ್ಷತ್ರಗಳ ಭಾರೀ ಸಮುದಾಯಕ್ಕೆ ಬ್ರಹ್ಮಾಂಡ ಎಂದು ಹೆಸರು. ನಮ್ಮ ಸೂರ್ಯ ಸದಸ್ಯನಾಗಿರುವ ಬ್ರಹ್ಮಾಂಡವನ್ನು ಆಕಾಶ ಗಂಗೆ ಎಂಬ ವಿಶೇಷ ಅಭಿದಾನದಿಂದ ಕರೆಯುತ್ತೇವೆ. ವಿಶ್ವದ ಮೂಲ ದ್ರವ್ಯವಾದ ಹೈಡ್ರೊಜನ್ ಅನಿಲ ಅಲ್ಲಿ ಇಲ್ಲಿ ಕುಸಿದು ಕುಪ್ಪೆಗಳಾಗಿ ಸಂಘಟಿಸಿದಾಗ ಬ್ರಹ್ಮಾಂಡಗಳ ಜನನಕ್ಕೆ ಕಾರಣವಾದ ಮಹಾದೈತ್ಯ ನೀಹಾರಿಕೆಗಳು ರೂಪುಗೊಳ್ಳುವುವು. ಇಂಥ ಒಂದು ನೀಹಾರಿಕೆ ಕ್ರಮೇಣ ಕುಗ್ಗಿ ಮುದುರಿದಂತೆ ಇದರ ಕೇಂದ್ರ ವಲಯದಲ್ಲಿ ಮೊದಲ ತಲೆಮಾರಿನ ನಕ್ಷತ್ರಗಳು ಹುಟ್ಟುತ್ತವೆ. ಆಗ ಶೇಷಾನಿಲ ಸೆರಗಿನಲ್ಲಿ ಹರಡಿ ಹಂಚಿ ಹೋಗುವುದು. ಇದರಿಂದ ಇಡೀ ಬ್ರಹ್ಮಾಂಡಕ್ಕೆ ಕರಗಳಿರುವ ಮಸೂರದ (ಅಥವಾ ಇಡ್ಲಿಯ) ಆಕಾರ ಒದಗುವುದು: ಕೇಂದ್ರದಲ್ಲಿ ದಪ್ಪವಾಗಿದ್ದು ಅಲ್ಲಿಂದ ಹೊರಗೆ ಹೋದಂತೆ ತೆಳುವಾಗುತ್ತ ಮತ್ತೆ ಕವಲೊಡೆದು ಹೊರಕ್ಕೆ ಚಾಚಿಕೊಂಡಿರುವ ಸಾವಿರಾರು ಕೈಗಳ ಸಹಿತವಾದ ವಿಚಿತ್ರ ರೂಪ. ಇಡೀ ವ್ಯವಸ್ಥೆ ಅದರ ಕೇಂದ್ರದ ಉಬ್ಬು ಪ್ರದೇಶದ ಸುತ್ತ ಆವರ್ತಿಸುವುದು. ಬ್ರಹ್ಮಾಂಡದ ಹೊರ ತೆಳು ಅಂಚಿನ ವಲಯದಲ್ಲಿಯೂ ಸುರುಳಿ ಕೈಗಳಲ್ಲಿಯೂ ಕ್ರಮೇಣ ಅನಿಲ ಅಲ್ಲಲ್ಲಿ ದಟ್ಟೈಸಿ ಎರಡನೆಯ ಮತ್ತು ತದನಂತರದ ಪೀಳಿಗೆಯ ನಕ್ಷತ್ರಗಳು ಜನಿಸುತ್ತವೆ.

ಆಕಾಶಗಂಗೆಯ ಕೇಂದ್ರದಿಂದ ಅದರ ತ್ರಿಜ್ಯದ ಸುಮಾರು ಮೂರನೆಯ ಎರಡು ಭಾಗಗಳಷ್ಟು ಹೊರಕ್ಕೆ ಸುರುಳಿ ಕೈ ಒಂದರಲ್ಲಿ ಸೂರ್ಯ ಎಂಬ ಹೆಸರಿನ ನಮ್ಮ ನಕ್ಷತ್ರದ ನೆಲೆ ಉಂಟು. ಆದಿಮ ಸೂರ್ಯನ ಜನನವಾದಾಗ ಸೌರನೀಹಾರಿಕೆಯ ಶೇಷಾಂಶ ಸೂರ್ಯನ ಸುತ್ತ ಬಹು ದೂರಕ್ಕೆ ವ್ಯಾಪಿಸಿಕೊಂಡಿತ್ತು. ಇದರ ರಾಶಿಯ ಕನಿಷ್ಠ ಪರಿಮಿತಿ ಸೂರ್ಯರಾಶಿಯ ಶೇಕಡಾ ೩ ಎಂದು ಸಂಶೋಧನೆಯಿಂದ ನಿರ್ಧರಿಸಲಾಗಿದೆ. ಕೇಂದ್ರದ ಪ್ರಬಲ ಕಾಯವಾದ ಮತ್ತು ಆಗತಾನೇ ಕಾವೇರಿ ನಕ್ಷತ್ರವಾಗಿ ವಿಕಸಿಸುತ್ತಿದ್ದ ಸೂರ್ಯನ ಗುರುತ್ವಾಕರ್ಷಣೆಯ ವಲಯದಲ್ಲಿ ಈ ಶೇಷಾಂಶ ಬಂಧಿತವಾಗಿ ಉಳಿಯಿತು. ಸೂರ್ಯನ ಸುತ್ತ, ಹೆಚ್ಚು ಕಡಿಮೆ ಸಮಭಾಜಕೀಯ ವಲಯದಲ್ಲಿ, ಪರಿಭ್ರಮಿಸುತ್ತ ಕ್ರಮೇಣ ಭಾರೀ ವಿಸ್ತಾರದ ತಟ್ಟೆಯ ಆಕಾರ ಇದಕ್ಕೆ ಬಂತು. ಇದರ ದಪ್ಪ ಸುಮಾರು ೧ ಖ. ಮಾ. ಇದ್ದಿರಬಹುದು. ತಟ್ಟೆ

ಟೊಮ್ಯಾಟೊ ತಳಿಸುಧಾರಣೆ

ಇಸ್ರಾಯಿಲಿನ ಡಾ. ಯುಂಷೆಕ್ ಮಿರುರಾಹಿ ಮತ್ತು ಪ್ರೊ. ನಹುಂ ಕೋರ್ಷುರ್ ಅವರು ಹೆಚ್ಚು ಕಾಲ ಬಾಳುವ ಟೊಮ್ಯಾಟೊ ಹಣ್ಣುಗಳನ್ನು ಕಂಡು ಹಿಡಿದಿದ್ದಾರೆ. ಇವು ಗಿಡದಿಂದ ಹರಿದ ನಂತರ ಒಂದು ತಿಂಗಳ ವರೆಗೆ ಕೆಡದೆ ತಿನ್ನಲು ಯೋಗ್ಯವಾಗಿ ಉಳಿಯುವವು. ಸದ್ಯದ ಟೊಮ್ಯಾಟೊಗಳು ಎರಡು ವಾರಗಳಲ್ಲಿಯೆ ಕೊಳೆಯ ಹತ್ತುವದರಿಂದ ಅವನ್ನು ವಿಮಾನ ಮೂಲಕ ಯುರೋಪಕ್ಕೆ ನಿರ್ಯಾತ ಮಾಡಬೇಕಾಗುತ್ತದೆ. ಈ ಹೊಸ ತಳಿ ಟೊಮ್ಯಾಟೊ ವಿಪುಲ ಪ್ರಮಾಣದಲ್ಲಿ ಬೆಳೆಸಲು ಸಾಧ್ಯವಾದರೆ ಅವನ್ನು ಹಡಗಗಳಲ್ಲಿ ರಫ್ತು ಮಾಡಬಹುದು. ಹೊಸ ತಳಿ ಟೊಮ್ಯಾಟೊಗಳನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯಲು ಇನ್ನು ೩ ವರ್ಷಗಳಲ್ಲಿ ಸಾಧ್ಯವಂತೆ.

ಹೀಗೆ ಆವರ್ತಿಸುತ್ತಿರುವಾಗ ಅನಿಲಾಣುಗಳು ಅಲ್ಲಿ ಇಲ್ಲಿ ಮತ್ತೆ ಸಂಚಯಿಸಿ ಗುಂಪುಗಳೋ ಹಿರಿಕಿರಿ ಮುದ್ದೆಗಳೋ ಕಾಣಿಸಿಕೊಳ್ಳುವುದು ಅಪರೂಪವೇನಲ್ಲ. ಇಂಥ ಅಭಿವರ್ಧನೆಗಳನ್ನು ನಿಯಂತ್ರಿಸುವುದು ಕೇಂದ್ರ ನಕ್ಷತ್ರದ ಗಾತ್ರ ಹಾಗೂ ಅದರಿಂದ ಹೊರಸುರಿಯುವ ವಿಕಿರಣ, ಸಮಗ್ರ ವ್ಯವಸ್ಥೆಯ ಆವರ್ತನ ವೇಗ, ಅಪರೂಪವಾಗಿ ಆಸುಪಾಸಿನ ಇತರ ನಕ್ಷತ್ರಗಳ ಪ್ರಭಾವ. ಒಮ್ಮೆ ಕಣಸಮೂಹಗಳು ಅಥವಾ ಗ್ರಹಗಳು ಅಸ್ತಿತ್ವಕ್ಕೆ ಬಂದ ಬಳಿಕ ಮತ್ತೆ ಅವು ತಮ್ಮ ಗುರುತ್ವಾಕರ್ಷಣೆಯಿಂದ ಸನಿಹದ ಅನಿಲಶೇಷವನ್ನು ಯಥಾಶಕ್ತಿ ತಮ್ಮೆಡೆಗೆ ಸೆಳೆದು ಸ್ವಂತ ದಾಸ್ತಾನವನ್ನು ಬೆಳೆಸಿಕೊಳ್ಳುವುದು ಸಹಜ ವ್ಯಾಪಾರ. (ಅಲ್ಲಿಯೂ ಇಲ್ಲಿನಂತೆಯೇ—ಬಾಚಲು ಹೆಚ್ಚು ತಾಕತ್ತು ಇರುವಾತನೇ ದೊಡ್ಡವ!) ಗ್ರಹಗಳು ಮೈದಳೆದ ರೀತಿಯಲ್ಲಿಯೇ ಅವುಗಳ ಉಪಗ್ರಹಗಳೂ ರೂಪುಗೊಂಡಿರಬಹುದು. ಇಂಥ ನಿರಂತರ ಸಂಚಯನ ಕ್ರಿಯೆ ಸೌರವ್ಯೂಹದ ಆರಂಭದಂದು ಬಲು ತೀವ್ರವಾಗಿ ನಡೆದಿರುವುದು ಸಾಧ್ಯ. ಏಕೆಂದರೆ ಅಂದಿನ ಪರಿಸ್ಥಿತಿ "ಬಾಚುವವರು ಕಡಿಮೆ, ಬಾಚಲು ದೊರೆವ ಸಾಮಗ್ರಿ ಜಾಸ್ತಿ" ಎಂಬಂತಿತ್ತು. ಈಗಲಾದರೋ ಸೌರವ್ಯೂಹದ ಕೊಳೆ, ಕಸ, ಧೂಳು ಹೆಚ್ಚಿನ ಮಟ್ಟಿಗೆ ಸೌರಮಾರುತದಿಂದ ಹಾಗೂ ವಿಕಿರಣದಿಂದ ಗುಡಿಸಲ್ಪಟ್ಟು ನಿವಾರಣೆಯಾಗಿವೆ. ಸೌರವ್ಯೂಹದ ಆದಿಯನ್ನು ಕುರಿತು ಇದೇ ಭರತವಾಕ್ಯವೆಂದೇನೂ ಭಾವಿಸಬೇಕಾಗಿಲ್ಲ. ಸದ್ಯದಲ್ಲಿ ಲಭಿಸಿರುವ ಮಾಹಿತಿಗಳಿಗೆ ಹೆಚ್ಚು ಕಡಿಮೆ ಸಮರ್ಪಕವಾದ ವಿವರಣೆಯನ್ನು ನೀಡಬಲ್ಲ ಊಹೆ ಇದು. ಭವಿಷ್ಯದಲ್ಲಿ ಹೆಚ್ಚಿನ ಮಾಹಿತಿಗಳು ದೊರೆತಾಗ ಈ ವಾದಕ್ಕೆ ಅಧಿಕ ಬೆಂಬಲ ಲಭಿಸಬಹುದು ಅಥವಾ ಇದು ಕೂಡ ಹಿಂದಿನ ಹಲವಾರು ಊಹೆಗಳಂತೆ, ನೇಪಥ್ಯಕ್ಕೆ ನಿರ್ಗಮಿಸಿ ಇದರ ಸ್ಥಾನದಲ್ಲಿ ಬೇರೊಂದೇ ಆದ ಊಹೆಗಳು ಬರಬಹುದು. ಕಾಲದಲ್ಲಿಯೂ ಆಕಾಶದಲ್ಲಿಯೂ ಸೌರವ್ಯೂಹ ಎಷ್ಟು ದೊಡ್ಡದೋ ಅಷ್ಟೇ ಜಟಿಲವೂ ಸಂಕೀರ್ಣವೂ ಇದರ ಉಗಮವನ್ನು ಕುರಿತ ವಾದಗಳೂ ಆಗುವುದು ನಿರೀಕ್ಷಿತವೇ.

ಕ್ಷುದ್ರಕಾಯಗಳು

ಮಂಗಳ ಮತ್ತು ಗುರು ಕಕ್ಷೆಗಳ ನಡುವೆ ಪ್ರಾಯಶಃ ಸ್ವಲ್ಪ ತಡವಾಗಿ ಸಂಚಯನ ಕ್ರಿಯೆ ಆರಂಭವಾಗಿರಬಹುದು. ಆ ವೇಳೆಗೆ ಪ್ರಬಲ ಬಲಿಷ್ಠ ಗುರು ಗ್ರಹ ಅಸ್ತಿತ್ವಕ್ಕೆ ಬಂದಿರಬೇಕು. ಒಂದು ಕಡೆ ಸಾಕ್ಷಾತ್ ಸೂರ್ಯ, ಇನ್ನೊಂದು ಕಡೆ ಗುರುವಿನಿಂದ ತೊಡಗುವ ದೈತ್ಯಗ್ರಹಗಳು — ಇವೆರಡರ ಗುರುತ್ವಾಕರ್ಷಣೆಯ ಜಗ್ಗಾಟದ ಫಲವಾಗಿ ಕ್ಷುದ್ರಗ್ರಹಗಳ ವಲಯದಲ್ಲಿ ಕಣಸಂಚಯನದಿಂದ ಸ್ಥಿರಗ್ರಹವೊಂದರ ಉಗಮ ಸಾಧ್ಯವೇ ಆಗಲಿಲ್ಲ. ಈ ಕಾರಣದಿಂದ ಕೋಟ್ಯಂತರ ಹಿರಿಮರಿ ಕಿರಿ ತುಣುಕುಗಳ ಸತತ ಪ್ರವಾಹವನ್ನು ಅಲ್ಲಿ ಕಾಣುತ್ತೇವೆ.

ಧೂಮಕೇತುಗಳ ಬಗ್ಗೆ ಲೀಡನ್ ವಿಶ್ವವಿದ್ಯಾಲಯದ ಯಾನ್ ಊರ್ಟ್ ಎಂಬವರು ಒಂದು ಊಹೆಯನ್ನು ಮಂಡಿಸಿದ್ದಾರೆ: ಸೂರ್ಯನಿಂದ ಸುಮಾರು ೧ ಲಕ್ಷ ಖ. ಮಾ. ದೂರದಲ್ಲಿ ಸೌರವ್ಯೂಹವನ್ನು ಸುತ್ತಲೂ ಆವರಿಸಿರುವ ಅನಿಲದ ದಟ್ಟ ಮೋಡವೊಂದು ಇದೆ. ಇದಕ್ಕೆ ಊರ್ಟ್ ಮೇಘವೆಂದೇ ಹೆಸರು. ಇದರ ರಾಶಿ ೧ ಭೂರಾಶಿಯಿಂದ ೧೦೦೦ ಭೂರಾಶಿಗಳ ತನಕವೂ ಇರಬಹುದು. ಈ ವಲಯದಲ್ಲಿ $೧೦^{೧೨}$ ರಿಂದ $೧೦^{೧೫}$ ರಷ್ಟು ಧೂಮಕೇತುಗಳು ಚಿರನಿದ್ರೆಯಲ್ಲಿ ಶಾಂತವಾಗಿರಬಹುದೆಂದು ಅಂದಾಜು. ಸೌರವ್ಯೂಹ ಉಗಮವಾದಂದು ಗ್ರಹವಲಯಕ್ಕೆ ಲಭಿಸಿದ ಶೇಕಡಾ ೩ ಸೂರ್ಯರಾಶಿಯಲ್ಲಿ ಇಂದು ಅದೇ ವಲಯದಲ್ಲಿ ಲೆಕ್ಕಕ್ಕೆ ದೊರೆಯುವುದು ಕೇವಲ ಶೇಕಡಾ ೦.೧೩೪೨೫೮ ಸೂರ್ಯರಾಶಿ ಮಾತ್ರ. ಈ ಖೋತಾ ರಾಶಿ ಧೂಮಕೇತು ನಿವಾಸದಲ್ಲಿ ಹುದುಗಿರುವುದು ಸಾಧ್ಯ ಉಂಟು. ಊರ್ಟ್ ಮೇಘದ ಹಿಮನಿದ್ರೆಗೆ "ಜೀವ ಸ್ಪಂದನ" ಆಗುವುದು ಅತಿ ದೂರದಲ್ಲಿ

ಸ್ವಚ್ಛಂದವಾಗಿ ಸಂಚರಿಸುವ ನಕ್ಷತ್ರವೊಂದರಿಂದ. ಇದು ಈ ವಲಯದ ಸಮೀಪ ಬಂದಾಗ ಮೋಡದಲ್ಲಿ ಗುರುತ್ವಾಕರ್ಷಣ ಕ್ಷೋಭೆ ತಲೆದೋರಿ ತತ್ಪರಿಣಾಮವಾಗಿ ಕೆಲವು ಕಾಯಗಳು ಸಂಚಾರ ಹೊರಡುತ್ತವೆ. ಒಮ್ಮೆ ಈ ಮಂದಗಮನ ತೊಡಗಿತೋ ಮುಂದೆ ಸೌರವ್ಯೂಹದ ಗಡಿಗ್ರಹಗಳ, ಅಂದರೆ ಯುರೇನಸ್, ನೆಪ್ಚ್ಯೂನ್, ಪ್ಲೂಟೋ ಗ್ರಹಗಳ, ಪ್ರಭಾವದಿಂದ ಇವು ಒಳಮೊಗವಾಗಿ ಪಯಣಿಸಬೇಕಾಗುತ್ತದೆ. ಸೂರ್ಯನ ಪ್ರಭಾವವೂ ಕಡಿಮೆ ಏನಲ್ಲ. ಹೀಗೆ ಹೊರಟ ಧೂಮಕೇತುಗಳು ಮುಂದಕ್ಕೆ ಏರುವ ವೇಗದಿಂದ (ಇದು ಸೌರವ್ಯೂಹದ ಗತ್ಯಾತ್ಮಕ ನಿಯಮ; ಶುಕ್ರ ಭೂಮಿ ಮೊದಲಾದ ಸಮೀಪ ಗ್ರಹಗಳು ಗುರು ಶನಿ ಮೊದಲಾದ ದೂರಗ್ರಹಗಳಿಗಿಂತ ಕ್ಷಿಪ್ರ ಕಕ್ಷಾಸಂಚಾರಿಗಳಾಗಿರುವುದು ಈ ಕಾರಣದಿಂದ) ಸೂರ್ಯನ ಬಳಿಸಾರಿ ಅದನ್ನು ಸುತ್ತಿ ಮತ್ತೆ ಸ್ವಸ್ಥಾನವಾದ ಊರ್ಟ್ ಮೇಘದೆಡೆಗೆ ಮರಳುತ್ತವೆ.

ಉಲ್ಕೆಗಳನ್ನು ಆಕಾಶದ ತಿರುಕುಳಿಗಳು ಅಲೆಮಾರಿಗಳು ಎಂದು ಮುಂತಾಗಿ ಹೇಳುವುದುಂಟು. ಇವು ಅಳಿದ ಧೂಮಕೇತುಗಳ ಅವಶೇಷಗಳಾಗಿರಬಹುದು. ಕ್ಷುದ್ರಗ್ರಹಗಳ ಹೊನಲಿನಿಂದ ತಪ್ಪಿಸಿಕೊಂಡು ವಿಶ್ವಸಂಚಾರಿಗಳಾದ ಹೆಪ್ಪುಗಳಾಗಿರಬಹುದು. ಸೌರವ್ಯೂಹದ ಮೂಲ ಅವಶೇಷಗಳಾಗಿರಬಹುದು. ತಮ್ಮ ಗೊತ್ತು ಗುರಿ ಇಲ್ಲದ ಅಲೆತದ ವೇಳೆ ಇವು ಅನ್ಯಕಾಯಗಳ ಗುರುತ್ವ ವಲಯವನ್ನು ಹಾದಿ ತಪ್ಪಿ ಪ್ರವೇಶಿಸುವುದುಂಟು. ಇಂಥ ಒಂದು ಬಾನ ಬಂಡೆ ಭೂವಲಯವನ್ನು ನುಗ್ಗಿದೊಡನೆ ಭೂಮಿ ಇದನ್ನು ತನ್ನ ತಳದೆಡೆಗೆ ಚೂಷಿಸಿಬಿಡುವುದು— ಸುರಸೆ ಹನುಮಂತನ ನೆರಳನ್ನು ತನ್ನ ಬಾಯೆಡೆಗೆ ಸೆಳೆದಂತೆ. ಆ ಮಹಾವೇಗದ ಪತನದ ವೇಳೆ ವಾಯುಮಂಡಲಕ್ಕೂ ಉಲ್ಕೆಗೂ ತೀವ್ರ ಘರ್ಷಣೆ ಸಂಜನಿಸಿ ಅದರಿಂದ ಹುಟ್ಟುವ ಕಾವಿಗೆ ಉಲ್ಕೆ ಬಲಿಯಾಗಿ ಸೀದು ಸುಟ್ಟು ಬೂದಿಯಾಗಿ ಚದರಿಹೋಗುತ್ತದೆ. ಉಲ್ಕೆಯ ಕೊನೆಯ ಕೆಲವು ಕ್ಷಣಗಳಲ್ಲಿ ಅದು ಕತ್ತಲಿನ ಆಗಸದಲ್ಲಿ ಬೆಂಕಿ ಗೆರೆಯಂತೆ ಕಾಣುವುದು ದೈನಂದಿನ ದೃಶ್ಯ. ನೆಲ ತಲಪುವ ತನಕ ಉರಿಯದೇ ಉಳಿದರೆ ಅಂಥ ಉಲ್ಕೆಯ ಪಿಂಡವನ್ನು ನಾವು ಸಂಗ್ರಹಿಸಿ ವಿಶ್ಲೇಷಿಸಬಹುದು. ಹೀಗೆ ಸೌರವ್ಯೂಹದ ಮೂಲ ರಹಸ್ಯವನ್ನು ಹೊತ್ತು ನಮಗೆ ತಪಾಸಣೆಗೆ ದೊರೆಯುವ ಸುಲಭ ಗೂಢಚಾರರೆಂದರೆ ಈ ಉಲ್ಕಾಪಿಂಡಗಳೇ.

ಆದ್ದರಿಂದ ಸೌರವ್ಯೂಹದ ಪೌರರು ಯಾರು ? ಈಗ ಈ ಪ್ರಶ್ನೆಗೆ ಉತ್ತರವನ್ನು ಹೇಳಬಹುದು : ಸೂರ್ಯ ಸೌರವ್ಯೂಹದ ರಾಜ; ಇದರ ಪ್ರಮುಖ, ಅಥವಾ ಒಂದನೆಯ ಅಂತಸ್ತಿನ ಪೌರರು ಗ್ರಹಗಳು; ಮತ್ತೆ ಕ್ಷುದ್ರಗ್ರಹಗಳು, ಧೂಮಕೇತುಗಳು ಹಾಗೂ ಉಲ್ಕೆಗಳು ಬರುತ್ತವೆ; ಕೊನೆಯಲ್ಲಿ ಉಪಗ್ರಹಗಳು ಇವೆ. ಅಂತಿಂಥ ತಾರೆ ಇವನಲ್ಲ! ಕವಿ ಬೇಂದ್ರೆಯವರ ನೇತ್ರೇಂದ್ರಿಯ ಇವನನ್ನು ಕಂಡ ಬಗೆ ಹೀಗೆ :

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ಬಿಟ್ಟಿಸುವದು
ಬಾನಗಣ್ಣಿನ ಜಿಸಿಯು ಹಸಿಯಾರದಲೆ
ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವದು

ಜಗತ್ತಿನ ಬಗೆಗಿರುವ ವಿಚಾರ ಧಾರೆಯನ್ನು ಬದಲಿಸಲು ನಾನು ತಯಾರಿರುವೆನೇ ಹೊರತು ಅದರ ಕಲ್ಯಾಣದ ಬಗ್ಗೆ ಇರಿಸಿಕೊಂಡ ಆಶೆ ಆಕಾಂಕ್ಷೆಗಳನ್ನೆಲ್ಲ. ಅದೊಂದು ವಾಸ್ತವಿಕ ಸತ್ಯವಾಗುವ ಆಸೆ ಕೊನೆವರೆಗೂ ಇರುವಂಥಾದ್ದು.


— ಬರ್ಟ್ರಾಂಡ ರಸೆಲ್

ಫ್ರಾನ್ಸಿಸ್ ಗಾಲ್ಟನ್
ಮರೆತುಹೋದ ಮಹಾ ವಿಜ್ಞಾನಿ

‘ಸ್ಪೆಕ್ಟ್ರಂ’ದಿಂದ

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಇಂಗ್ಲಂಡಿನಲ್ಲಿ ಮಹಾನ್ ವಿಜ್ಞಾನಿಗಳಿಬ್ಬರು ಸಹೋದರರ ಮಕ್ಕಳಾಗಿ ಜನಿಸಿದ್ದು ಯೋಗಾಯೋಗವೆನ್ನಬೇಕು. ಅವರಲ್ಲೊಬ್ಬ ಉತ್ಕ್ರಾಂತಿವಾದವನ್ನು ಸಪ್ರಮಾಣವಾಗಿ ಸಿದ್ಧಪಡಿಸಿ ಜಗತ್ಪ್ರಸಿದ್ಧನಾದ. ಇನ್ನೊಬ್ಬ ತತ್ವಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ ಭೂ ಸಂಶೋಧನೆ, ಮಾನವಿಕಶಾಸ್ತ್ರ, ಅಪರಾಧ ಸಂಶೋಧನೆ, ಹವಾ ಮುನ್ಸೂಚನೆ ಇತ್ಯಾದಿಯಾಗಿ ಹತ್ತೆಂಟು ಬಗೆಯ ಕ್ಷೇತ್ರಗಳಲ್ಲಿ ಕೈಯಾಡಿಸಿ ತೀರಾ ಮೌಲಿಕವೆನ್ನಿಸುವಷ್ಟು ಸಂಶೋಧನೆಗಳನ್ನು ಮಾಡಿದರೂ ಅನಾಮಧೇಯನಾಗಿ ಕಾಲಗರ್ಭದಲ್ಲಿ ಕರಗಿಹೋದ. ಅವರಲ್ಲೊಬ್ಬನ ಹೆಸರು ಈಗಾಗಲೇ ನಿಮಗೆ ಗೊತ್ತಾಗಿರಬೇಕು. ಆತ ಚಾರ್ಲ್ಸ್ ಡಾರ್ವಿನ್. ಇನ್ನೊಬ್ಬನ ಹೆಸರನ್ನು ನೀವಷ್ಟೇ ಅಲ್ಲ, ಎಷ್ಟೋ ಜನ ವಿಜ್ಞಾನಿಗಳೂ ಕೇಳಿದಲಿಕ್ಕಿಲ್ಲ. ಅವನು ಸರ್ ಫ್ರಾನ್ಸಿಸ್ ಗಾಲ್ಟನ್.

ಮನಃಶಾಸ್ತ್ರ ಗಾಲ್ಟನ್ನನ ಮುಖ್ಯ ವಿಷಯವಲ್ಲವಾದರೂ ಇಂದು ಮನಃಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮುಖ್ಯ ವಿಚಾರಗಳು ಮೂಲತಃ ಗಾಲ್ಟನ್ನನಿಂದಲೇ ಬಂದವುಗಳು ಎಂದು ಎಡಿನ್‌ಬರೋ ವಿಶ್ವವಿದ್ಯಾಲಯದ ಡಾ. ಬೋರಿಸ್ ಸಿಮುನಿಯೋಫ್ ಒಂದೆಡೆ ಹೇಳಿದ್ದಾರೆ. ಇದೇ ಮಾತನ್ನು ಆತ ಉಳಿದ ಕ್ಷೇತ್ರಗಳಲ್ಲಿ ಮಾಡಿದ ಸಂಶೋಧನೆಗಳಿಗೂ ಅನ್ವಯಿಸಬಹುದು. ಹೀಗಿದ್ದೂ ಆತ ಏಕೆ ಅನಾಮಧೇಯನಾಗಿ ಉಳಿದ? ವಿಜ್ಞಾನಿಗಳು ಸಾಮಾನ್ಯವಾಗಿ ವಿಜ್ಞಾನದ ಒಂದು ಕ್ಷೇತ್ರದಲ್ಲಿ ಮಾತ್ರ ಪರಿಣತರಾಗಿ ಅದರಲ್ಲಿ ಸಂಶೋಧನೆಗಳನ್ನು ನಡೆಸುವುದರಿಂದ ಉಳಿದ ಕ್ಷೇತ್ರಗಳಲ್ಲಿ ಏನಾಗುತ್ತಿದೆಯೆನ್ನುವುದರ ಅರಿವು ಅವರಿಗಿರುವುದಿಲ್ಲ. ಗಾಲ್ಟನ್ನನ



ಹಾಗೆ ಉಳಿದೆಲ್ಲ ಕ್ಷೇತ್ರಗಳಲ್ಲಿ ಪ್ರಾವೀಣ್ಯವಿದ್ದರೆ ತಾನೆ ಅವರು ಆತನ ಜ್ಞಾನದ ಹರವನ್ನೂ ಸಂಶೋಧನೆಯ ಮಹತ್ವವನ್ನೂ ಅರ್ಥಮಾಡಿಕೊಳ್ಳುವುದು?

ಮೇಲಾಗಿ ಆತ ಅಂಥ 'ಕ್ವಾಲಿಫೈಡ್' ವಿಜ್ಞಾನಿಯೇನೂ ಅಲ್ಲ. ಆಗಿನ ಶಾಲೆ ಕಾಲೇಜುಗಳಲ್ಲಿ ಸರಿಯಾದ ಶಿಕ್ಷಣ ಸಿಗುತ್ತಿಲ್ಲವಾಗಿ ಗಾಲ್ಟನ್ನನ ತಂದೆ ತಾಯಿಗಳು ಭಾವಿಸಿದ್ದರಿಂದ ಅವನು ಶಾಲೆಯ ಕಟ್ಟೆಯನ್ನೇರದೆ ಮನೆಯಲ್ಲೆ ಅಲ್ಪ ಸ್ವಲ್ಪ ಶಿಕ್ಷಣ ಪಡೆದ. ಆಗಿನ ಕಾಲದ ಶಿಕ್ಷಣ ಕ್ರಮದಲ್ಲಿ ಪಂಡಿತರ ಭಾಷೆಯಾದ ಗ್ರೀಕ್, ಲ್ಯಾಟಿನ್ನುಗಳಿಗೇ ಹೆಚ್ಚು ಪ್ರಾಧಾನ್ಯವಿದ್ದು ಉಳಿದ ವಿಷಯಗಳಿಗೆ ಅಷ್ಟು ಮಹತ್ವವಿರದ್ದರಿಂದ ಗಾಲ್ಟನ್ ಮನೆಯಲ್ಲಿ ಓದಿದುದೇ ಒಳ್ಳೆಯದಾಯಿತು. ಅವನು ಕೈಗೆ ಸಿಕ್ಕ ಪುಸ್ತಕಗಳನ್ನೆಲ್ಲ ಓದಿ ಅರಗಿಸಿಕೊಂಡ. ವೈದ್ಯಕೀಯ, ಔಷಧ ಶಾಸ್ತ್ರಗಳಲ್ಲಿ ಪಾರಂಗತನಾದ. ಜಗತ್ತಿನ ಅನುಭವ ಪಡೆಯಲು ಸಾಕಷ್ಟು ತಿರುಗಾಡಿದ. ಉಳಿದವರ ಹಾಗೆ ತಾನೂ ವಿಶ್ವವಿದ್ಯಾಲಯದಲ್ಲಿ ಓದಬೇಕೆಂದು ಕೇಂಬ್ರಿಜ್ಜಿನ ಟ್ರಿನಿಟಿ ಕಾಲೇಜಿನಲ್ಲಿ ದಾಖಲಾಗುವ ವೇಳೆಗೆ ವಿಯೆನ್ನಾದ ಸುಪ್ರಸಿದ್ಧ ಮಾನಸಿಕ ಆಸ್ಪತ್ರೆಗಳಲ್ಲಿ ನಡೆಯುತ್ತಿದ್ದ ಸಂಶೋಧನೆಗಳನ್ನೂ ಚಿಕಿತ್ಸಾ ವಿಧಾನಗಳನ್ನೂ ತಿಳಿದುಕೊಂಡಿದ್ದ.

ಸಾಹಸ ಅವನ ರಕ್ತಗತವಾದ ಪ್ರವೃತ್ತಿಯಾಗಿತ್ತು. ಹೀಗಾಗಿ ಕಾಲೇಜಿನಲ್ಲಿಯೂ ಹೆಚ್ಚು ದಿನ ಇರಲಾಗಲಿಲ್ಲ. ಇಪ್ಪತ್ತಮೂರನೆಯ ವಯಸ್ಸಿಗೆ ಕಾಲಿಡುತ್ತಿದ್ದಂತೆಯೆ (೧೮೪೫) ಕಾಲೇಜನ್ನು ಬಿಟ್ಟು ವಿಶ್ವಸಂಚಾರಿಯಾಗಿ ಈಜಿಪ್ಟ್, ಸೂಡಾನ್, ಸಿರಿಯಾಗಳಲ್ಲಿ ಸಂಚರಿಸಿದ. ಗುಲಾಮರನ್ನು ಮಾರುತ್ತಿದ್ದ ವ್ಯಾಪಾರಿಗಳೊಡನೆ ಒಂಟೆ ಸವಾರಿ ಮಾಡುತ್ತಾ ಖಾರ್ಟೂಮ್ ತಲುಪಿದ.

ಆಗ ಆಫ್ರಿಕಾ ಖಂಡವನ್ನಿನ್ನೂ ಸಂಪೂರ್ಣವಾಗಿ ಶೋಧಿಸಲಾಗಿರಲಿಲ್ಲ. ಈ ಕೆಲಸವನ್ನು ತಾನೇ ಮಾಡಬೇಕೆಂದು ನಿಶ್ಚಯಿಸಿ ಅವನು ೧೮೫೦ರಲ್ಲಿ ಆಫ್ರಿಕದ ನೈಋತ್ಯ ಭಾಗದಲ್ಲಿ ಎರಡು ಸಾವಿರ ಮೈಲುಗಳನ್ನು ಕ್ರಮಿಸಿ ಡಮಾರಾಲ್ಯಾಂಡ್ ಹಾಗೂ ಒವಾಂಬೊಲ್ಯಾಂಡ್‌ಗಳನ್ನು ಸುತ್ತಿ ಕಪ್ಪು ಖಂಡದ ಭಾಗವನ್ನು ನಕಾಶೆಯ ಮೇಲೆ ಮೂಡಿಸಿದವರಲ್ಲಿ ಪ್ರಥಮನೆನಿಸಿದ. ಅವನ ಆಫ್ರಿಕನ್ ಪ್ರವಾಸ ತುಂಬಾ ಪ್ರಯಾಸಕರವಾಗಿತ್ತು. ಈ ಪ್ರಯಾಸಕರವಾದ ಪ್ರವಾಸದ ವೃತ್ತಾಂತಗಳಲ್ಲಿಯೂ ನಮಗೆ ಸ್ವಲ್ಪ ಮೋಜಿನದೆನಿಸಬಹುದಾದ ಸಂಗತಿಗಳನ್ನು ಬರೆಯಲು ಅವನು ಮರೆತಿಲ್ಲ. ನೀರಿಲ್ಲದ ಬರಗಾಲಪೀಡಿತ ಪ್ರದೇಶದಲ್ಲಿ ಸಂಚರಿಸುವಾಗ ಅಕಸ್ಮಾತ್ತಾಗಿ ಮಳೆ ಬಂದರೆ ಪ್ರವಾಸಿಗ ನೀರನ್ನು ಸಂಗ್ರಹಿಸಿಡುವುದು ಹೇಗೆ? ಕೊಡೆಯನ್ನು ತಿರುವು ಮುರುವಾಗಿ ಹಿಡಿದು ನೀರನ್ನು ಜತನವಾಗಿ ಹಿಡಿದಿಟ್ಟುಕೊಳ್ಳಬೇಕು— ಇದು ಗಾಲ್ಟನ್ ಕೊಡುವ ಸಲಹೆ. ಅಕಸ್ಮಾತ್ತಾಗಿ ಸಿಂಹದಂತಹ ಹಿಂಸ್ರ ಪಶುವೊಂದು ಮೈಮೇಲೆರಗಿದರೆ? ಅದಕ್ಕಾಗಿ ಅಷ್ಟು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಯಾವ ಕಾಡು ಪ್ರಾಣಿಯೂ ಹತ್ತು ಯಾರ್ಡುಗಳಿಗಿಂತ ಹೆಚ್ಚು ದೂರ ಹಾರುವುದಿಲ್ಲ. ಸಿಂಹದ ನೆಗೆತ ತೀವ್ರವಾಗಿರುವುದಿಲ್ಲ. ಅಲ್ಲದೆ ಅವು ಎತ್ತರವಾಗಿ ನೆಗೆಯುವುದರಿಂದ ಪ್ರವಾಸಿಗ ಸ್ವಲ್ಪ ಹೆಚ್ಚು ಜಾಗ್ರತೆಯಿಂದಿದ್ದು ಅವುಗಳು ಮೈಮೇಲೆ ಎರಗದಂತೆ ಸುಲಭವಾಗಿ ತಪ್ಪಿಸಿಕೊಳ್ಳಬಹುದು ಇತ್ಯಾದಿ.

ಗಾಲ್ಟನ್ ಇಂಗ್ಲೆಂಡಿಗೆ ಹಿಂದಿರುಗಿದಾಗ ಆಫ್ರಿಕದಿಂದ 'ಬಳುವಳಿ'ಯಾಗಿ ತಂದ ಮಲೇರಿಯ ಕೊನೆಯವರೆಗೂ ಆತನನ್ನು ಬಾಧಿಸುತ್ತಲೇ ಇತ್ತು. ಹೀಗಾಗಿ ಪ್ರಪಂಚವನ್ನು ಪರ್ಯಟಿಸಿ ನಾಗರಿಕ ಜಗತ್ತಿಗೆ ಇನ್ನೂ ಅಜ್ಞಾತವಾಗಿಯೇ ಇದ್ದ ಭೂಪ್ರದೇಶಗಳನ್ನು ಸಂಶೋಧಿಸಬೇಕೆಂಬ ಅವನ ಆಶೆ ಕೈಗೂಡಲಿಲ್ಲ. ಆದರೆ ಇದರಿಂದಾಗಿ ಅವನ ಉದ್ದೇಶ ಸಾಧನೆಗೇನೂ ಚ್ಯುತಿಬರಲಿಲ್ಲ. ರಾಯಲ್ ಜಿಯಾಗ್ರಫಿಕಲ್ ಸೊಸಾಯಿಟಿಯ ಕಾರ್ಯದರ್ಶಿಯಾಗಿ ನೈಲ್ ನದಿಯ ಉಗಮವನ್ನು ಶೋಧಿಸಿದ ಸ್ಪೀಕ್‌ನಂತವರಿಗೆ ಎಲ್ಲ ವಿಧದ ನೆರವನ್ನೂ ಒದಗಿಸಿಕೊಟ್ಟು ಮಾನವಜನಾಂಗದ ಭೌಗೋಲಿಕ

ಜ್ಞಾನ ವಿಸ್ತರಿಸುವುದಕ್ಕೆ ಸಹಾಯವಾದ.

ಪ್ರತಿಕೂಲ ವಾತಾವರಣಕ್ಕೂ ಕಡಿಮೆ ವಾಯು ಒತ್ತಡದ ಕೇಂದ್ರಕ್ಕೂ ಏನೋ ಸಂಬಂಧವಿದೆಯೆಂದು ಲೇ ವೆರಿಯರ್ ಎಂಬ ಫ್ರೆಂಚ್ ವಿಜ್ಞಾನಿ ಹೇಳಿದ್ದು ಗಾಲ್ಟನ್ನನ ಗಮನಕ್ಕೆ ಬಂತು. ಲೇ ವೆರಿಯರ್ ಹಾಗೆ ಹೇಳಿದ್ದನಾದರೂ ತನ್ನ ಹೇಳಿಕೆಯನ್ನು ಸಮರ್ಥಿಸಲು ಅಂಕಿ ಅಂಶಗಳನ್ನು ಸಂಗ್ರಹಿಸಿರಲಿಲ್ಲ. ಈ ಕೆಲಸವನ್ನು ತಾನೇ ಮಾಡುವುದಾಗಿ ಗಾಲ್ಟನ್ ನಿರ್ಧರಿಸಿದ. ಹವೆಯ ಒತ್ತಡ, ವಾತಾವರಣದ ಉಷ್ಣತೆ, ಮಳೆ ಬೀಳುವ ಪ್ರಮಾಣಗಳ ಬಗೆಗೆ ವಿವರಗಳನ್ನು ಸಂಗ್ರಹಿಸಲು ಆ ಸೌಲಭ್ಯವಿರುವ ಹಡಗುಗಳು, ಬಂದರುಗಳು, ಮಿಲಿಟರಿ ಠಾಣ್ಯಗಳು, ವೈಜ್ಞಾನಿಕ ವೀಕ್ಷಣಾಲಯಗಳನ್ನು ನಿಯಮಿತವಾಗಿ ಸಂಪರ್ಕಿಸಿದ. ಅದರ ಫಲವಾಗಿ ೧೮೬೧ರಲ್ಲಿ ಜಗತ್ತಿನಲ್ಲೇ ಪ್ರಥಮವಾದ ಹವಾಮಾನದ ಚಾರ್ಟ್ ಹೊರಬಂತು. ದೀರ್ಘ ಕಾಲದವರೆಗೆ ಹವಾಮಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆ ಹಾಕಿದ ಫಲವಾಗಿ ೧೮೭೧ರಲ್ಲಿ ಹವಾಮಾನದ ಚಾರ್ಟುಗಳನ್ನು ಹಡಗುಗಳ ಮಾಲೀಕರಿಗೆ ಒದಗಿಸಲು ಸಾಧ್ಯವಾಯಿತು. ಇದಲ್ಲದೆ ಆತ ಹವಾಮಾನದ ಮುನ್ಸೂಚನೆಯನ್ನೂ ಕೊಡಬಲ್ಲವನಾಗಿದ್ದ. ಇದು ಸಮುದ್ರದಲ್ಲಿ ಪಯಣಿಸುತ್ತಿರುವ ಹಡಗುಗಳಿಗೆ ಬಹು ಉಪಯೋಗಕರವಾಗಬಹುದಿತ್ತು. ಆದರೆ ಬಂದರಿನಿಂದ ಹಡಗವನ್ನು ಸಂಪರ್ಕಿಸಲು ಯೋಗ್ಯ ಸಾಧನಗಳು ಆ ಕಾಲದಲ್ಲಿ ಬಳಕೆಯಲ್ಲಿಲ್ಲದ್ದರಿಂದ ಯೋಜನೆ ಕಾರ್ಯಗತವಾಗಲಿಲ್ಲ. ಹವಾಮುನ್ಸೂಚನೆಯನ್ನು ಹೇಗೆ ಕೊಡಬೇಕೆಂಬ ಬಗ್ಗೆ ಆತ 'ಮೀಟಿಯೊರೋಗ್ರಾಫಿಯಾ' ಎಂಬ ಗ್ರಂಥವನ್ನೇ ಬರೆದಿದ್ದಾನೆ.

ಅಷ್ಟರಲ್ಲಿ ಚಾರ್ಲ್ಸ್ ಡಾರ್ವಿನ್ನಿನ ಉತ್ಕ್ರಾಂತಿವಾದ ಸಾಕಷ್ಟು ಗೊಂದಲವೆಬ್ಬಿಸಿತ್ತು. ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಉತ್ಕ್ರಾಂತಿಯಾಗುತ್ತಾ ನಡೆದದ್ದರಿಂದ ಮಂಗನಿಂದ ಮಾನವ ವಿಕಾಸಗೊಂಡ ಎನ್ನುವುದು ಡಾರ್ವಿನ್ನನ ಒಂದು ಸಿದ್ಧಾಂತ. ಬದಲಾದ ಪರಿಸರಕ್ಕೆ ಒಗ್ಗಿಕೊಳ್ಳುವ ಪ್ರಾಣಿ ವರ್ಗವೇ ಬದುಕುಳಿದು ಉತ್ಕ್ರಾಂತಿ ಹೊಂದುತ್ತದೆ ಎನ್ನುವುದು ಇನ್ನೊಂದು ತತ್ವ. ಪ್ರಾಣಿಗಳಿಗೆ ಅನ್ವಯಿಸುವ ಈ ತತ್ವ ಮಾನವರಿಗೂ ಏಕೆ ಅನ್ವಯಿಸಬಾರದು? ಎನ್ನುವ ವಿಚಾರ ಗಾಲ್ಟನ್ನನಿಗೆ ಬಂದಕೂಡಲೆ ಆತ ಈ ಬಗ್ಗೆ ಸಂಶೋಧನೆ ನಡೆಸಲು ಕಾರ್ಯಪ್ರವೃತ್ತನಾದ. ಮಾನವನ ಶಕ್ತಿ ಸಾಮರ್ಥ್ಯಗಳಾಗಲಿ, ಬುದ್ಧಿವಂತಿಕೆಯಾಗಲಿ, ಕೌಶಲವಾಗಲಿ ಪ್ರತಿಕೂಲ ಪರಿಸ್ಥಿತಿಗೆ ಒಗ್ಗಿಕೊಳ್ಳಲು ಶಕ್ತನಾಗುವ ಹಾಗೆ ಮಾನವನನ್ನು ರೂಪಿಸುವ ಅಂಶಗಳು. ಆದ್ದರಿಂದ ಇವುಗಳನ್ನು ಮಾನವರಲ್ಲಿ ಅಳೆದು ತನ್ನ ಸಿದ್ಧಾಂತವನ್ನು ರೂಪಿಸಬೇಕೆಂದು ಗಾಲ್ಟನ್ ನಿರ್ಧರಿಸಿದ. ಇವುಗಳನ್ನು ಅಳೆಯಲು ಆ ಕಾಲದಲ್ಲಿ ಸರಿಯಾದ ಸಾಧನಗಳಿದ್ದಿಲ್ಲವೆನ್ನುವ ಅಂಶ ಅವನನ್ನು ಅಷ್ಟಾಗಿ ಬಾಧಿಸಲಿಲ್ಲ. ತನಗೆ ಅವಶ್ಯವಾದ ಉಪಕರಣಗಳನ್ನಾತ ತಾನೇ ತಯಾರಿಸಿಕೊಂಡ ಜನರ ಶ್ರವಣಶಕ್ತಿಯನ್ನು ಅಳೆಯಬೇಕೆಂದಾಗ ಅಂತಹ ಸಾಧನವೊಂದನ್ನು ರೂಪಿಸಿದನಲ್ಲದೆ ಶ್ರವಣಾತೀತವಾದ ಧ್ವನಿ ತರಂಗಗಳನ್ನು ಗ್ರಹಿಸಿ ಅಳೆಯಬಲ್ಲಂತಹ ಉಪಕರಣವನ್ನೂ ರೂಪಿಸಿ ಅಂತಹ ಧ್ವನಿ ತರಂಗಗಳನ್ನು ಕೆಲವು ಪ್ರಾಣಿಗಳು ಗ್ರಹಿಸಬಲ್ಲವೆಂದು ಸಿದ್ಧಪಡಿಸಿದ. ಸಾಕಷ್ಟು ಕಾಲದ ನಂತರ ತಾನು ಕಲೆ ಹಾಕಿದ ವಿವರಗಳ ಆಧಾರದಿಂದ ೧೮೬೯ರಲ್ಲಿ 'ಆನುವಂಶಿಕ ಪ್ರತಿಭೆ' ಎಂಬ ಪುಸ್ತಕವನ್ನು ಬರೆದ. ಮೇಲುನೋಟಕ್ಕೆ ಕಾಣುವ ಹಾಗೆ ಇದು ಯಾವುದೇ ಜನಾಂಗ ಉಳಿದೆಲ್ಲ ಜನಾಂಗಗಳಿಗಿಂತ ಶ್ರೇಷ್ಠ ಎಂಬ ವಿಚಾರವನ್ನು ಸಮರ್ಥಿಸುವುದಿಲ್ಲ. ಬದಲು ಅವು ಹೆಚ್ಚು ಮಟ್ಟಿಗೆ ಮಾನವೀಯ ಅಂಶಗಳಿಂದ ದೇಶಹಿತದ ದೃಷ್ಟಿಯಿಂದ ರೂಪಿಸಿದ್ದಾಗಿವೆ. ಉದಾಹರಣೆಗೆ ಹೇಳುವುದಾದರೆ ಪಟ್ಟಣಗಳು ಹಳ್ಳಿಗರನ್ನು ಆಕರ್ಷಿಸುವುದರಿಂದ ಜನರ ಮೇಲೆ ಅದರ ಒಟ್ಟು ಪರಿಣಾಮ ಒಳ್ಳೆಯದಾಗಿಲ್ಲವೆಂದು ಆತ ಬರೆದ. ಏಕೆಂದರೆ ಅವನ

ಪ್ರಕಾರ ಸರಿಯಾದ ದೇಹದಾರ್ಢ್ಯವಿದ್ದು ಸಾಕಷ್ಟು ಸಮರ್ಥರಾಗಿರುವ, ಸಾಹಸಿಕ ಪ್ರವೃತ್ತಿಯ ಯುವಕರು ತಮ್ಮ ಭವಿಷ್ಯವನ್ನು ಕಂಡುಕೊಳ್ಳಲು ಔದ್ಯೋಗಿಕ ಕೇಂದ್ರಗಳಾಗಿ ಬೆಳೆಯುತ್ತಿರುವ ಪಟ್ಟಣಗಳಿಗೆ ನುಗ್ಗುತ್ತಾರೆ. ಅಲ್ಲಿನ ಪರಿಸ್ಥಿತಿಗೆ ಒಗ್ಗಿಕೊಳ್ಳಲಾರದೆ ಅವರು ಅಕಾಲದಲ್ಲಿಯೆ ಮರಣ ಹೊಂದುತ್ತಾರೆ. ಹೀಗೆ ಶಕ್ತಿ ಸಾಮರ್ಥ್ಯಗಳಿದ್ದ ಯುವವರ್ಗದ ಒಂದು ಅಂಶ ಪ್ರತಿ ವರ್ಷ ವ್ಯರ್ಥವಾಗಿ ನಾಶ ಹೊಂದುತ್ತದೆ. ಹಳ್ಳಿಗಳಲ್ಲಿಯೆ ಅವರಿಗೆ ಸಾಕಷ್ಟು ಅನುಕೂಲಗಳನ್ನೂ ಸಂಸ್ಥೆಗಳನ್ನೂ ಒದಗಿಸಿಕೊಟ್ಟಿದ್ದರೆ ದೇಶ ಇನ್ನೂ ಹೆಚ್ಚು ಮುಂದುವರೆಯುತ್ತಿತ್ತು ಎಂದಾತ ಬರೆದಿದ್ದಾನೆ.

ಆನುವಂಶಿಕತೆಯನ್ನು ಧರಿಸಿದ ಅಂಶಗಳನ್ನು ಅವನು ಪರಿಶೀಲಿಸುತ್ತಿದ್ದಾಗ ಬೆರಳಚ್ಚು ಎಂದೂ ಬದಲಾಗುವುದಿಲ್ಲವಷ್ಟೇ ಅಲ್ಲ ಪ್ರತಿ ವ್ಯಕ್ತಿಯದೂ ಉಳಿದವರಿಗಿಂತ ಭಿನ್ನವಾಗಿರುತ್ತದೆ ಎಂಬುದು ಅವನ ಲಕ್ಷ್ಯಕ್ಕೆ ಬಂತು. ಅಪರಾಧ ಶೋಧನೆಯಲ್ಲಿ ಇದನ್ನು ಬಳಸಬಹುದೆಂದು ಗಾಲ್ಟನ್ ಹೇಳಿದ. ಆಗ ಬ್ರಿಟನ್ನಿನ ಪ್ರಸಿದ್ಧ ಪತ್ತೆದಾರಿ ಸಂಸ್ಥೆಯಾದ ಸ್ಕಾಟ್‌ಲಂಡ್‌ಯಾರ್ಡ್ ಗಾಲ್ಟನ್ನನನ್ನು ಆಹ್ವಾನಿಸಿ ಅಪರಾಧಿಗಳ ಬೆರಳಚ್ಚನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಬೇಕೆಂದು ಕೇಳಿಕೊಂಡಿತು. ಆತ ಅದನ್ನೊಪ್ಪಿ ಸ್ಕಾಟ್‌ಲಂಡ್ ಯಾರ್ಡಿನಲ್ಲಿ ಎಂಟು ವರ್ಷಗಳನ್ನು ಕಳೆದು ಸಹಸ್ರಾವಧಿ ಬೆರಳಚ್ಚುಗಳನ್ನು ಕೂಡಿ ಹಾಕಿ ಬೇಕಾದಾಗ ಕೋಶವನ್ನು ನೋಡಿದ ಹಾಗೆ ಅವುಗಳನ್ನು ಸುಲಭವಾಗಿ ನೋಡಲು ಸಾಧ್ಯವಾಗುವ ಹೊಸ ವ್ಯವಸ್ಥೆಯನ್ನು ರೂಪಿಸಿದ. ಇದರಿಂದಾಗಿ ಅಪರಾಧಿಯೊಬ್ಬನ ಬೆರಳಚ್ಚನ್ನು ಹುಡುಕಲು ಪತ್ತೆದಾರರಿಗೆ ವ್ಯಯವಾಗುತ್ತಿದ್ದ ಸಮಯದಲ್ಲಿ ಎಷ್ಟೋ ಉಳಿತಾಯವಾಯಿತಲ್ಲದೆ ಅಪರಾಧ ಶೋಧನೆ ಶೀಘ್ರವಾಗಿ ನಡೆಯಲು ಸಹಾಯವಾಯಿತು.

ಲೆಕ್ಕ ಹಾಕುವುದೊಂದು ಅವನಿಗಿದ್ದ ಗೀಳು. ಹೀಗಾಗಿ ದಾರಿಯಲ್ಲಿ ಸಾಗುತ್ತಿದ್ದಾಗ ತಾನು ಕಂಡ ಸುಂದರಿಯರನ್ನೂ ಕುರೂಪಿಗಳನ್ನೂ ಎಣಿಸುತ್ತಾ ಮನೆಗೆ ಬಂದ ಕೂಡಲೆ ಸುಂದರಿಯರ ಸಂಖ್ಯೆಗೂ ಕುರೂಪಿಗಳ ಸಂಖ್ಯೆಗೂ ಇರುವ ಅನುಪಾತವನ್ನು ಲೆಕ್ಕ ಹಾಕುತ್ತಿದ್ದ. ಇಲ್ಲವೆ ದಾರಿಯಲ್ಲಿ ತಾನು ಕಂಡ ಯುವಕರನ್ನು ಹಾಗೂ ಮುದುಕರನ್ನು ಎಣಿಸಿ ಅವರ ಪ್ರಮಾಣವನ್ನು ಕಂಡು ಹಿಡಿಯುತ್ತಿದ್ದ. ಲೆಕ್ಕಾಚಾರಗಳಿಗೆ ಹೆಚ್ಚು ಸಮಯ ತಗಲುತ್ತದೆಂದಾಗ ಗಾಲ್ಟನ್ ಅನ್ಯೋನ್ಯಾಂಗಿಕ ಕಲನ (correlational calculas) ವನ್ನು ರೂಪಿಸಿದ.

ಫ್ರಾನ್ಸಿಸ್ ಗಾಲ್ಟನ್ ಬರೀ ಸಂಶೋಧಿಸುವ ಅಥವಾ ಲೆಕ್ಕಹಾಕುವ ಯಂತ್ರವಾಗಿರಲಿಲ್ಲ. ಅವನೆಷ್ಟು ವಿನೋದಿ ಪ್ರವೃತ್ತಿಯವನಾಗಿದ್ದ ಹಾಗೂ ಅವನ ಮಾನವೀಯ ಭಾವನೆಗಳು ಎಷ್ಟು ಉತ್ಕಟವಾಗಿದ್ದವು ಎನ್ನುವುದನ್ನು ಅರಿಯಬೇಕಾದರೆ ಆತನ 'ಮಾನವನ ಸಹಜ ಸ್ವಭಾವದ ವಿಶ್ಲೇಷಣೆ' (೧೮೮೩) ಯನ್ನು ಓದಬೇಕು. ನಮ್ಮ ಮನೋವ್ಯಾಪಾರಗಳಲ್ಲಿ ಅಪ್ರಜ್ಞೆಯ ಪಾತ್ರ ಎಷ್ಟು ಮಹತ್ತರವಾಗಿದೆಯೆನ್ನುವುದನ್ನಾತ ಜಿಗ್‌ಮಂಡ್ ಫ್ರಾಯ್ಡನಿಗಿಂತ ಎಷ್ಟೋ ಮೊದಲೇ ಪ್ರತಿಪಾದಿಸಿದ್ದ.

ಗಾಲ್ಟನ್ ೧೯೧೧ ರಲ್ಲಿ ತನ್ನ ೮೯ನೆಯ ಇಳಿವಯಸ್ಸಿನಲ್ಲಿ ತೀರಿಕೊಳ್ಳುವ ವರೆಗೂ ಒಂದಿಲ್ಲೊಂದು ಬಗೆಯ ಸಂಶೋಧನೆಯಲ್ಲಿ ನಿರತನಾಗಿಯೇ ಇದ್ದ. ✡



ಪ್ರಾಚೀನ ಕಾವ್ಯಸುಧೆ

ಲವಕುಶರು

–ಬಲಕೆ

'ರಾಮಾಯಣದ ಕಥೆಗಳ ಭಾರದಲಿ ತಿಣಿಕಿದನು ಫಣಿರಾಯ' ಎಂದಿದ್ದರೂ ಉತ್ತರ ರಾಮಾಯಣದ ಕಥೆ ಕಾವ್ಯಗಳಲ್ಲಿ ಬಂದಿರುವುದು ವಿರಳ. ಹದಿನೇಳನೆ ಶತಮಾನದ ಪ್ರಾರಂಭದಲ್ಲಿ ಜೀವಿಸಿದ್ದನೆಂದು ಹೇಳಲಾಗುತ್ತಿರುವ ನಾರಾಯಣ ಕವಿಯ 'ಉತ್ತರ ರಾಮ ಕಥೆ'ಯು ಕುಮಾರವ್ಯಾಸ, ಕುಮಾರ ವಾಲ್ಮೀಕಿಗಳ ರಸವತ್ಕಾವ್ಯಗಳಿಗೆ ಸರಿದೊರೆಯಾಗಿ ರಚಿತವಾದ ಕಾವ್ಯ. ಭಾಮಿನೀ ಷಟ್ಪದಿಯ ಎರಡು ಸಾವಿರ ಪದ್ಯಗಳಿಂದ ಕೂಡಿದ ಈ ಕಾವ್ಯದಲ್ಲಿ ನವರಸಗಳೂ ಅಷ್ಟಾದಶ ವರ್ಣನೆಗಳೂ ಹಿತಮಿತವಾಗಿ ಮೂಡಿ ಬಂದು ರಸಿಕರನ್ನು ತಣಿಸುತ್ತವೆ. ಈ ಕಾವ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಜನಪ್ರಿಯವಾಗಿದೆಯಂತೆ. ಆದರೆ ಇದನ್ನು ಓದಿದಾಗ ಇಂಥ ಪರಿಸೀಮಾನ ಅದಕ್ಕೆ ಸಲ್ಲದು ಎಂಬುದು ಸ್ಪಷ್ಟವಾಗುತ್ತದೆ. ಕಥಾನಿರೂಪಣೆಯಲ್ಲಿ ಪಳಗಿದ ನಾರಾಯಣ ಕವಿಯ 'ಉತ್ತರ ರಾಮಕಥೆ'ಯಲ್ಲಿಯ ಈ ಕೆಳಗಿನ ನುಡಿಗಳು ಆತನ ಆ ಶಕ್ತಿಗೆ ಸಾಕ್ಷಿ.

ಬಂದನಾ ವಾಲ್ಮೀಕಿ ಶಿಷ್ಯರ । ಸಂದಣಿಯೊಳಡಗೂಡಿ ಕುಶಲವ
ರಿಂದ ಕೇಳುತ ಗಾನರಸಗಳನಧಿಕಸ್ನೇಹದಲಿ ।
ಸಂದನತಿ ಗೋಮತಿಯ ತೀರದ । ಲಂದು ವಾಸವನೆಸಗೆ ರಘುಪತಿ
ಯಿಂದು ಸತ್ಕಾರಗಳ ವಿಸ್ತರವೆನಲು ಮಾಡಿಸಿದ ||೧||
ಮುನಿವರನ ನೇಮದಲಿ ಕುಶಲವ । ರನು ಮಿಗಿಲು ದಿನ ದಿನಕೆ ಪಾಡಿದ
ರನುಪಮದ ರಾಮಾಯಣವನಿಪ್ಪತ್ತು ಸರ್ಗದಲಿ ।
ಇನಿತು ಜನವದ ಕೇಳ್ದು ಸಂತಸ । ಹೊನಲೊಳೋಲಾಡಿದುದು ಹರುಷದಿ
ತನತನಗೆ ಕೊಂಡಾಡಿ ಕೀರ್ತಿ ವಿಜೃಂಭಿಸಿತು ಜಗವ ||೨||
ಇರಲಿರಲು ರಘುನಾಥ ಕೇಳಿದ । ನುರುತರಾಶ್ಚರ್ಯದ ಸುಗಾನದ
ನಿರುಪಮದ ರಾಮಾಯಣವ ಪಾಡಿದ ಮಹಾರ್ಭಕರ ।
ಚರಿತವನು ಮಿಗೆ ಕೇಳಿ ಕರೆಯೆನೆ । ಲರಸುಗಳು ಕರೆತಂದು ಕಾಣಿಸ
ಲರಿದೆನಲು ಪಾಡಿದರು ಕಾರ್ಣ್ಯತದ ಸರಿಯಂತೆ ||೩||
ಅರಸನತಿ ಸಂತೋಷದಿಂದಲಿ । ಭರವಸದ ಸ್ನೇಹದಿ ಕುಮಾರರ
ಕರೆದು ಲಾಲಿಸಿ ದಿವಸಗಳನತಿಗಳೆವುತೊಂದು ದಿನ ।
ತರುಣರಿರ ಕಿವಾರ ಮಕ್ಕಳು । ಚರಿತವಾಶ್ಚರ್ಯವೆನಿಸಿದೆ
ನಿರುತವನು ಪೇಳುವುದು ನಿಮ್ಮಯ ಜನನ ಸಂಗತಿಯ ||೪||
ಎನಲು ನುಡಿದರು ಕುಶಲವರು ಮು । ನ್ನನಘನಹ ವಾಲ್ಮೀಕಿ ಮುನಿಪನು
ಮನವೊಲಿದು ಸಾಕಿದನು ನಮ್ಮನು ಬಹಳ ಸ್ನೇಹದಲಿ ।
ವನಿತೆ ಸೀತಾ ಯುವತಿ ನಮ್ಮಯ । ಜನನಿ ಯುಮಳರು ನಾವು ಮುನ
ಕಳ್ಪರಿಯೆನಲು ಕಲಿಸಿದನು ರಾಮಾಯಣವನೊಲವಿನಲಿ ||೫||

ಎನಲು ಕೇಳುತ ರಾಮಚಂದ್ರನು । ಮನದೊಳಚ್ಚರಿವಟ್ಟು ತನ್ನಯ
ವನಿತೆ ಗರ್ಭಿಣಿ ಪೋಷ ಸಮಯದಲಿವರ ಪೆತ್ತಳಲಾ
ಘನ ಮಹಿಮರಿವರಹುದು ತನ್ನಯ । ತನುಜರಕಟೆಂದೆನುತ ಪುಳಕಿಸೆ
ಮನ ನಲಿದು ವಾಲ್ಮೀಕಿ ಮುನಿಪಂಗಾಗ ನಗುತೆಂದ ||೬||
ಎಲೆ ಮುನೀಶ್ವರ ಕುವರರೀರ್ವರು । ಲಲನೆ ಸೀತಾ ಯುವತಿ ತಮ್ಮಯ
ಸತಿ ಜನನಿಯೆಂದಿವರು ನುಡಿದರು ನಿಮ್ಮ ಮತಕಾದ
ನಿಲಿಸಿತಾರ್ಥವ ಪೇಳ್ವುದೆಂದೆನೆ । ಒಲವಿನಲಿ ವಾಲ್ಮೀಕಿ ನುಡಿದನು
ಫಲಿಸಿತೆಮ್ಮ ಮನೋರಥವ ರೂಪಾಂತುದಿಂದಿನಲಿ ||೭||
ಅರಸ ಲಕ್ಷ್ಮಣ ದೇವನಂದಾ । ವರ ಯುವತಿಯನು ತಂದು ಕಾನನ
ಪರಿಸರದಲವ ಬಿಟ್ಟು ಪೋಗೆ ಯದೃಚ್ಛೆಯಿಂದಾಗ
ಭರವಸದಲಾಶ್ರಮದಿ ಕಂಡೆನು । ಪರಮ ಪಾತಿವ್ರತೆಯನಾಕ್ಷಣ
ಕರೆದುಕೊಂಡೊಯ್ದೆನು ನಿನ್ನಯ ಸೇವೆಯಹುದೆನುತ ||೮||
ಇರಲಿರಲು ಕುಶಲವರ ಪಡೆದಳು । ವರ ಯುವತಿಯೆಲೆ ದೇವ ನಿನ್ನಯ
ಸುಭರುಚಿರದ ರವಿ ವಂಶಕರಪಡೆದಿಪ್ಪ ಸತ್ಕ್ರಿಯೆಯು ।
ಪರಿಸಿ ನಾ ಮಾಡಿದೆನು ಸಾಕಿದೆ । ನರಿದೆನಲು ಕಲಿಸಿದೆನು ವೇದವ
ನುರು ಧನುರ್ವಿದ್ಯೆಯನು ರಾಮಾಯಣ ಮಹಾಕಥೆಯ ||೯||
ಕರೆದು ತಂದೆನು ಸಭೆಗೆ ನಿನ್ನಯ । ಚರಣದರ್ಶನಕೋಸುಗವೆ ನೀ
ಬರಿಸ ಹೇಳ್ವೆ ಧಾರ್ಮಿಕೆಯನನ್ನಯ ಶಿರೋಮಣಿಯು ।
ಭರದಿ ಶಿಷ್ಯರ ಕಳಿಸಿ ಸೀತೆಯ । ಬರಿಸುವೆನು ನೀ ವರಿಸು ಕಾಂತೆಯ
ವರಸುತರ ಪಾಲಿಸುವುದೆಂದೆನೆ ರಾಮನಿಂತೆಂದ ||೧೦||
ನಾಡಿನೊಳು ನಿಂದೆಯನು ಪಡೆದೆನು । ಕಾಡಿನೊಳು ನೀ ಬಿಡುವುದೆಂದೇ
ರೂಢಿವರಿಯಲು ಲಕ್ಷ್ಮಣನ ನೇಮಿಸಿದೆನದರಿಂದ ।
ಬೇಡವೆಂದರೆ ನಿಮ್ಮ ಚಿತ್ತಕೆ । ಜೋಡಿಯನು ತಾಳುವಿರಿ ಕರೆಸಿದ ।
ರಾಡಿನೋಡದರರಿಯಬಹುದಾಕೆಯ ಮನೋಗತವ ||೧೧||
ಕೋವಿದರು ಕುಟಿಲಾಳರೆಯು ಹೊಂ । ದಾವರೆಯ ಕುಟ್ಮಲದ ಕುಚಗಳ
ಭಾವವಚ್ಚರಿಯೆನಿಸಿ ಮೆರೆಯಲು ಪೀತವಸನದಲಿ ।
ಆವ ವಧುವೀ ವನಿತೆಯಂಗದ । ಭಾವನವನು ಪೇರೆ ಪಡೆದಳೆಂದೆನೆ
ರಾಮಗಾಢದೊಳಂಗವನು ಮುಸುಕಿಟ್ಟಳಾ ಕಾಂತೆ ||೧೨||
ಮೌನದೊಳಗೆ ರಾಘವನ ನೆನಪೇ । ತನಗೆ ಜೀವನವಾಗೆ ಕಣ್ಣೊಳ
ಜೋನೆಯ ನೋಟದ ಬಯಕೆ ದಶರಥರಾಯ ತಂದನ ।
ಮಿನುಗೆ ಜಿಹ್ವಾಗ್ರದಲಿ ಮುನಿಕುಲ । ವಸತಿ ಚಂದ್ರಮನಂಕಮಾಲೆಯ
ಘನತೆಯದನೇನೆಂಬೆ ಸಾಧ್ವೀಜನ ಶಿರೋಮಣಿಯ ||೧೩||
ಇಂತು ಹಂಬಲಿಸುತ್ತ ಬರುತಿಹ । ಕಂತು ಮಾತೆಯ ಲೋಕಪೂಜ್ಯಳ
ನಂತ ಸದ್ಗುಣಯುತೆಯನನುಪಮ ಚಿಂತ್ಯ ದೇವತೆಯ ।
ಅಂತರಹಿತೆಯನಾದಿ ಶೂನ್ಯಳ । ನಿಂತು ಕರೆತಹ ಮುನಿವರೇಣ್ಯರ
ಸಂತಸವನೇನೆಂಬೆ ಜಗದಾಶ್ಚರ್ಯವಾಯ್ತೆಂದ ||೧೪||

ಕಾ. ತಿ. ರಾಮಕೃಷ್ಣ

'ಜನಪದ'ರಿಂದ ಜನ್ಮತಾಳಿ 'ಜನಪದ'ದಲ್ಲಿಯೇ ಬೆಳೆಗಿ ಜನರ ಪ್ರೇಮಾಧಾರವನ್ನು ಪಡೆದುಕೊಂಡ ಪದಗಳೆಂದರೆ ಹಳ್ಳಿಯ ಪದಗಳು ಅಥವಾ ಹಳ್ಳಿಯ ಹಾಡುಗಳು. ಈ ಹಾಡುಗಳಲ್ಲಿ ಯಾವ ಶಿಷ್ಟ ಸಾಹಿತ್ಯಕ್ಕೇನೂ ಕಡಿಮೆ ಇಲ್ಲದಂತೆ ನಿರಾಡಂಬರವಲ್ಲದ ಸರಳ ಭಾಷೆಯಲ್ಲಿ ತಮ್ಮ ಅಂತಃಕರಣದ ಅನುಭವಗಳನ್ನು ಚೊಕ್ಕವಾಗಿ ಸೊಗಸಾಗಿ ಹಾಡಿ ಆನಂದಾಮೃತವನ್ನು ಸವಿದಿದ್ದಾರೆ. ಪಂಡಿತ ಸಾಹಿತ್ಯ ಕೆಲವೊಮ್ಮೆ ಕಲ್ಪನೆಯಿಂದ ಹುಟ್ಟಿ 'ಸಂಕ್ಲಿಷ್ಟ ಸರಣಿ' ಎಂಬ ಮನೋಭಾವ ಬೆಳೆಯಬಹುದು. ಆದರೆ ಹಳ್ಳಿಗರ ಹೃದಯದಾಳದಲ್ಲಿ ಉದ್ಭವಿಸಿದಂತಹ ಗ್ರಾಮೀಣ ಪದಗಳು ಕೇವಲ ಕಲ್ಪನೆಯಿಂದ ಸೊರಗದೆ ನೈಜ ಭಾವದ ನವನವ ಉನ್ಮೇಷವನ್ನು ತುಂಬಿ ಬೆರಗನ್ನು ತರುತ್ತಿವೆ. ತಮ್ಮ ಗ್ರಾಮಾಣಿಕ ಜೀವನವನ್ನು ಮುಚ್ಚುಮರೆಯಿಲ್ಲದೆ ತಮ್ಮ ಇರವಿಕೆಯನ್ನು ಇದ್ದಂತೆ ಹಾಡಿ ವರ್ಣಿಸಿದ್ದಾರೆ. ಜನಪದ ಕವಿಗಳ ದೃಷ್ಟಿಯಲ್ಲಿ ಹಾಡೇ ಒಂದು ಸೃಷ್ಟಿ. ಸಾಹಿತ್ಯ-ಜೀವನ ಬೇರೆಯಲ್ಲ; ನಿಜ ಜೀವನದ ಬದುಕು ಬೇರೆಯಲ್ಲ. ಇವೆರಡನ್ನೂ ಜೊತೆ ಜೊತೆಗೆ ಕಂಡುಂಡವರು. ಒಂದೊಂದು ಹಾಡುಗಳಲ್ಲಿ ಒಂದೊಂದು ಸುಂದರವಾದ ಸ್ವತಂತ್ರವಾದ ವ್ಯಕ್ತಿತ್ವ ಅಭಿವ್ಯಕ್ತವಾಗುತ್ತದೆ. ದಿನನಿತ್ಯ ಕಾಣುವ ಹಳ್ಳಿಯ ಬದುಕಿನ ಸರಸ-ವಿರಸ, ಆಸರಿಕೆ-ಬೇಸರಿಕೆ, ಪ್ರೇಮ-ಯೌವ್ವನ, ಆಸೆ-ನಿರಾಸೆ, ಒಲವು-ನಲಿವು, ಕನಸು-ನನಸು, ಬಂಜೆತನ-ವೈಧವ್ಯ......ಇತ್ಯಾದಿ ಸುಖ-ದುಃಖದ ಬಾಳನ್ನು ಗರತಿಯರು ಸುಮಧುರ ಕಂಠದಿಂದ ಹಾಡಿ ಕೇಳದು ಓದುಗರ ಹೃದಯಗಳನ್ನು ರಂಜಿಸಿ, ಸಂಗೀತ ಮತ್ತು ಸಾಹಿತ್ಯ ಒಟ್ಟೊಟ್ಟಿಗೆ ಮೇಳೈಸಿ ಕನ್ನಡ ಸಾಹಿತ್ಯ ಭಂಡಾರವನ್ನು ಹಾಗೂ ಮಹಿಮೆಯನ್ನು ಬೆಳಗಿಸಿದ್ದಾರೆ. ಹೆಣ್ಣಿನ ನೂರಾರು ಭಾವನೆಗಳನ್ನು ಜನಪದಗೀತೆಗಳು ಆಡುನುಡಿಯ ಜೀವಂತ ಶಬ್ದಗಳಿಂದ ಮನಸ್ಸನ್ನು ತಟ್ಟಿ, ಪರಿಣಾಮಕಾರಿಯಾಗಿ ಸಾಹಿತ್ಯಕ್ಕೆ ಲಾಭವನ್ನು ತಂದುಕೊಟ್ಟಿದೆ.

ಪತಿಯ ಮನೆಗೆ ಸೇರಿದ ಹೆಣ್ಣುಮಗಳ ಮುಖ್ಯ ಗುರಿ ತನ್ನ ರಾಯನನ್ನು ಪ್ರೇಮಿಸುವುದೇ ಅಲ್ಲದೆ, ಆ ಮನೆಯ ಸಂತಾನ ಭಾಗ್ಯ ಬೆಳಗಿಸಿ ಜೀವನದ ಸಾರ್ಥಕತೆಯನ್ನು ಕಾಣಬೇಕು. ಜನಪದ ಹಾಡುಗಳಲ್ಲಿ ವ್ಯಕ್ತವಾಗುವ ಕಂದಮ್ಮಗಳು ಜನಪದರಿಗೆ ಹೊರೆಯಲ್ಲ. ಮಕ್ಕಳ ಬಯಕೆ, ಬಸಿರಾದವಳ ಆಸೆ, ಮಕ್ಕಳ ಲಾಲಿ, ಬಂಜೆಯ ನಂಜಿನ ತೊಳಲಾಟ-ಇವೆಲ್ಲವೂ ಗಂಭೀರವಾಗಿ ಸುಂದರವಾಗಿ

ಜನಪದ ಕಾವ್ಯಗಳಲ್ಲಿ ಮೂಡಿಬಂದಿದೆ. ಮಕ್ಕಳಿಲ್ಲದಿದ್ದರೆ ಬದುಕೇ ಅವಳ ಪಾಲಿಗೆ ಬಂಧನ. ಅವಳ ಅಳುವಿನ ಗೋಳು ಶಿವನೇ ಬಲ್ಲ. ಹೆಣ್ಣಿನ ಜೀವನ ಕರುಳು ಕರಗಿಸುವಂತಹದು. ಬಂಜೆತನ, ವೈಧವ್ಯ ಹೆಣ್ಣಿನ ಕರುಳನ್ನಿರಿದು ಬಿಸಿಯುಸಿರು ಬರುವಂತೆ ಮಾಡುತ್ತವೆ. ಬಂಜೆಯು ಬಾಳಿನ ವ್ಯಥೆಯನ್ನು ಹಾಡುಗಳಲ್ಲಿ ಹಾಡಿ ಹೃದಯ ಭಾರವನ್ನು ಹಗುರ ಮಾಡಿಕೊಳ್ಳುತ್ತಾಳೆ:

'ಬಾಲಕರಿಲ್ಲದ ಬಾಳ್ವೆ ಬಾಳೆಯಿಲ್ಲದ ತೋಟ।
ಗಂಧ ಕಸ್ತೂರಿ ಪರಿಮಳ।
ಗಂಧ ಕಸ್ತೂರಿ ಪರಿಮಳ ಒಳಗಿದ್ದು।
ರಂಭೆ ಬಾಳೆ ಫಲವಿಲ್ಲ॥'

'ಬಾಲಕರಿಲ್ಲದ ಬಾಳಿದ್ಯಾತರ ಜನ್ಮ।
ಬಾಡೀಗಿ ಎತ್ತು ದುಡಿದಂಗ।
ಬಾಡೀಗಿ ಎತ್ತು ದುಡಿದಂಗ ಬಾಳೆಲೆಯು
ಹಾಸ್ಯುಂಡು ಬೀಸಿ ಒಗೆದಂಗ॥

ಇಂತಹ ಸುಂದರವಾದ ಎರಡು ಚೌಪದಿಗಳಲ್ಲಿ ಬಾಲಕರಿಲ್ಲದ ಬದುಕನ್ನು 'ಬಾಳೆಯಿಲ್ಲದ ತೋಟದಂತೆ,' 'ಬಾಡಿಗೆ ಎತ್ತು ದುಡಿದಂತೆ' 'ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಂತೆ' ಎಂಬ ಉಪಮೆಗಳ ಮೂಲಕ ಮನ ಮುಟ್ಟುವಂತೆ ವರ್ಣಿಸಿದ್ದಾರೆ. ಮಕ್ಕಳಿಲ್ಲದ ಬದುಕು ಎಷ್ಟು ಅರ್ಥಹೀನ! ಅಪ್ರಯೋಜಕ! ತೋಟದಲ್ಲಿ ಗಂಧ ಕಸ್ತೂರಿಯ ಸುವಾಸನೆ ಇರಬಹುದು; ಎಲೆ ಅಡಿಕೆಯ ರಸಿಕತೆ ಇರಬಹುದು; ಆದರೆ ತೋಟಕ್ಕೆ ಶೃಂಗಾರ ತರುವ ಬಾಳೆ ಇಲ್ಲದಿದ್ದರೆ ಏನು ಪ್ರಯೋಜನ? ಹೆಣ್ಣಿಗೆ ರೂಪ ಇರಬಹುದು; ಬೆಳಗ ಇರಬಹುದು; ಭೋಗದ ತೃಪ್ತಿ ಇರಬಹುದು. ಆದರೆ ಹೆಣ್ಣುತನಕ್ಕೆ ಶೃಂಗಾರ ತರುವ 'ಕಂದನ ಕರುಳು' ಸಿಕ್ಕದೆ ಹೋದಾಗ ಬಾಳೆ ಎಲೆಯಲ್ಲಿ ಊಟ ಮಾಡಿ ಬೀಸಿ ಒಗೆದಷ್ಟು ಜೀವನ ಬಿಸಿಯಾಗಿರುತ್ತದೆ. ಬೇನೆಯುರಿಯಿಂದ ಬಂಜೆಯ ಬದುಕು ಬರೀ ಬರಡು. ಹೆರವರ ಹೊಲದಲ್ಲಿ ಬಾಡಿಗೆ ಎತ್ತು ದುಡಿದಷ್ಟು ನಿಷ್ಪ್ರಯೋಜಕ. 'ಬಂಜೆ ಹೋದಲ್ಲಿ ಸಂಜೆ' ಎಂಬ ಗಾದೆ ಮಾತೊಂದಿದೆ. ಬಂಜೆಯಾದವಳು ಹೊಲಕ್ಕೆ ದುಡಿಯಲು ಬೆಳಗ್ಗೆ ಹೋದವಳು ಬರುವುದು ಸಂಜೆಗೆ. ಕಾರಣ ಮಕ್ಕಳಿದ್ದರೆ ತಾನೇ ಪದೇ ಪದೇ ಮನೆಗೆ



ಬಂದು ಹಾಲುಣಿಸುವುದು! ಮಕ್ಕಳಿಲ್ಲದ ಬಂಜೆಯ ಜೀವನ ಬರೀ ಕತ್ತಲು.

ಹೆಣ್ಣುಮಕ್ಕಳಿಗೆ ಕಂದನ ಬಯಕೆ ಅತ್ಯಂತ ತೀವ್ರವಾದ ವೈಯಕ್ತಿಕ ಅಪೇಕ್ಷೆ. ಮಾತೃತ್ವದ ಫಲ ಪಡೆಯದೆ ಬಂಜೆತನವನ್ನು ಹೃದಯ ವಿದ್ರಾವಕವಾಗಿ ಹಾಡಿ ನೊಂದಿದ್ದಾಳೆ:

'ಬಂಜೆ ಬಾಗಿಲ ಮುಂದ ಬಂಗಾರದೊಳ
ಕಲ್ಲ!
ಬಂದು ಕುಟ್ಟಾಕ ಸೊಸೆಯಿಲ್ಲ!
ಬಂದು ಕುಟ್ಟಾಕ ಸೊಸೆಯಿಲ್ಲ ಮಾವಾಯಿ
ಬನ್ನಿ ಮುಂಡಿಯಾಕ ಮಗಳಿಲ್ಲ!'

ಮನೆಯ ಮುಂದೆ 'ಬಂಗಾರದೊಳಕಲ್ಲಿನಂತ' ಶ್ರೀಮಂತಿಕೆ ಇದ್ದರೂ ಅದು ಕಂದ ನಿಲ್ಲದ ಮೇಲೆ ಬಂಜೆಗೆ ಬಡತನವೆ! ಸಂತೋಷ ಜೀವಂತಗೊಳ್ಳಬೇಕಾದರೆ ಕಂದನಂಥ ಐಶ್ವರ್ಯ ಬೇಕೇ ಬೇಕು. ಕಂದನು ಬನ್ನಿಯನ್ನು ತಾಯಿಗೆ ಕೊಟ್ಟು ಕಾಲಿಗೆರಗುವ ಭಾಗ್ಯ ಮತ್ತು ಕಂದನಿಂದ ದೊರೆಯುವ ಸೊಸೆ ಇಲ್ಲವಾದ ಮೇಲೆ ಜೀವನವೇ ಶಾಶ್ವತ ಮರುಳುಗಾಡಾಗುತ್ತದೆ.

ಹೆಣ್ಣಾಗಿ ಜನ್ಮವೆತ್ತ ಮೇಲೆ 'ಹೆಣ್ಣುತನ' ಸಾರ್ಥಕವಾಗಬೇಕು ಎನ್ನುವುದು ಹೆಣ್ಣಿನ ಆಕಾಂಕ್ಷೆ. ಇಂತಹ ಆಕಾಂಕ್ಷೆ ಕೈಗೂಡುವುದು ಕಂದನನ್ನು ಪಡೆದಾಗಲೆ. ಕಂದನನ್ನು ಪಡೆಯುವ ನೋವಿನ ಅಪೇಕ್ಷೆಯನ್ನು ಕರುಳು ಕಿತ್ತುಬರುವಂತೆ ಪ್ರಾರ್ಥಿಸಿಕೊಳ್ಳುತ್ತಾಳೆ. ಕಂದನ್ನ ಕೊಟ್ಟು ಹೆಣ್ಣಿನ ಭಯವನ್ನು ಕೊನೆ ಮಾಡು ಎಂದು ಬಾಯಿ ಬಾಯಿ ಬಿಡುತ್ತಾಳೆ;

'ಹೆಣ್ಣು ಜನುಮಕ ಬಂಡೆ ಮಣ್ಣ
ಮಾಡಲಿ ಬ್ಯಾಡ!
ಹೆಣ್ಣುತನ ಶಿವನೆ ಜಗದಾಗ!
ಹೆಣ್ಣುತನ ಶಿವನೆ ಜಗದಾಗ
ಕೈ ಮುಗಿವೆ
ಕಂದನ್ನ ಕೊಟ್ಟು ಕಡಿ ಮಾಡು'

'ಹೆಣ್ಣುತನಕ್ಕೆ ಮಣ್ಣು ಮಾಡಬೇಡ ಕಂದನಂತಹ ಕರುಳಿನ ಸಂಬಂಧವನ್ನು ಕೊಟ್ಟು ಈ ಜನ್ಮವನ್ನು ಪಾವನಗೊಳಿಸು ಎಂದು ಪರಿತಪಿಸುತ್ತಾಳೆ. ಹೆಣ್ಣುತನ ಪ್ರಯೋಜನಕ್ಕೆ ಬಾರದೆ ಹೋದಾಗ 'ತನ್ನತನಕ್ಕೆ' ತಾನೇ ಶಾಪ ಹಾಕಿಕೊಳ್ಳುತ್ತಾಳೆ. 'ಹೆಣ್ಣಿನ ಜೀವನದಲ್ಲಿ ತಾಯ್ತನದಂತಹ ಪವಿತ್ರತೆಯನ್ನು ಹೊಂದದೆ ಹೋದ ಮೇಲೆ, ಹೆಣ್ಣಾಗಿ ಬಾಳುವುದಕ್ಕಿಂತ ಮಣ್ಣಾಗುವುದೇ ಮೇಲು' ಎಂದು ಬಂಜೆಯು ನೋವಿನಿಂದ ಅಸಮಾಧಾನ ಪಟ್ಟುಕೊಳ್ಳುತ್ತಾಳೆ:

'ಹೆಣ್ಣು ಆಗುದಕ್ಕಿಂತ ಮಣ್ಣು
ಆಗುದು ಲೇಸ.!
ಮಣ್ಣಿನ ಮ್ಯಾಲೆ ಮರವಾಗಿ!
ಮಣ್ಣಿನ ಮ್ಯಾಲೆ ಮರವಾಗಿ ಇದ್ದರ
ಬಂದವರಿಗೆಲ್ಲಾ ನೆರಳವ್ವ!!'

ಫಲ ಕೊಡದ ಮರವನ್ನು ಯಾರು ತಾನೆ ಪ್ರೀತಿಸಿಯಾರು? ಹಾಗೆ ಬಂಜೆಯಾದವಳು ಯಾರಿಗೋಸ್ಕರ ಲಾಲಿಯನ್ನು ಹಾಡಲು ಸಾಧ್ಯ? ಎಲ್ಲರಿಗೂ ಬಂಜೆಯ ಬಗ್ಗೆ ಅಹಿತವಾದ ಭಾವನೆ ಇದೆ. ಇಂಥ ಅಹಿತಕರವಾದ ಜೀವನದ ಹೊರೆ ಹೊರೆಯುವುದಕ್ಕಿಂತ ಫಲವತ್ತಾದ ಮಣ್ಣಿನ ಮ್ಯಾಲೆ ಮರವೋ ಗಿಡವೋ ಆಗಿ ಬೆಳೆದರೆ ಬಂದು ಹೋಗುವವರಿಗೆಲ್ಲಾ ತಂಪಾದ ನೆರಳು ಕೊಟ್ಟು ಹಿತವೆನಿಸಿ ಜನ್ಮ ಸಾರ್ಥಕವನ್ನಾಗಿ ಮಾಡಿಕೊಳ್ಳಬಹುದು.

ನಿಜಕ್ಕೂ ಹೆಣ್ಣಿನ ಬಾಳು ಕಣ್ಣೀರು. 'ಹೆಣ್ಣು ಹಡೆಯಲಿ ಬ್ಯಾಡ...' ಎಂದು ಜನಪದರು ಹೇಳಿಕೊಂಡರೆ, ಮತ್ತೆ ಕೆಲವೆಡೆ 'ಹತ್ತೆಂಟು ಗಂಡು ಹಡೆದರೂ ಹೆಣ್ಣುಮಗಳೊಬ್ಬಳಿಗೆ ತಾಯಿಯಾಗಬೇಕು. ಇಲ್ಲದಿದ್ದರೆ ಬಂಜೆ ಎಂಬ ಅಪವಾದ ಇದ್ದೇ ಇರುತ್ತದೆ' ಇದರಿಂದಾಗಿ ಬಂಜೆ ಶಬ್ದ ಪೂರ್ಣ ಮಾಯವಾಗಬೇಕಾದರೆ ಗಂಡು-ಹೆಣ್ಣು ಎರಡನ್ನೂ ಪಡೆದಿರಬೇಕು. ಅಂತಹುದರಲ್ಲಿ ಯಾವ ಮಗುವನ್ನೂ ಪಡೆಯದೇ ಹೋದ ಹೆಣ್ಣಿನ ಕಷ್ಟ ಹೇಳತೀರದು. ಅವಳ ಬದುಕ

ಸತ್ತು ಬದುಕಿದಂತೆ!

'ಹತ್ತು ಗಂಡ್ಹಡೆದರೂ ಮತ್ತೆ
ಬಂಜೆಂಬೂರ!
ಪಟ್ಟವು ಉಡುವ ಧರಣೀಯ!
ಪಟ್ಟವು ಉಡುವ ಧರಣೀಯು
ಹಡೆದಾರ
ಹೆತ್ತ ತಾಯೆಂದು ಕರೆದಾಳ!!'

ಒಂದೆ ಹೆಣ್ಣಾದವಳು ಹೆತ್ತ ತಾಯಿಯ ಪಟ್ಟ ಕಟ್ಟಿಸಿಕೊಳ್ಳಲು ಗಂಡೇ ಮುಖ್ಯವಲ್ಲ. ಹೆಣ್ಣು ಮುಖ್ಯ ಎನ್ನುವ ಧ್ವನಿ ಅಡಕಗೊಂಡಿದೆ.

ಸಮಾಜದ ಎದುರಿಗೆ ಕೈಬೀಸಿ ನಡೆಯುವ ಧೈರ್ಯ, ತೊಟ್ಟಿಲ ತೂಗುವ ಕೈಯ್ಗಳ ಪುಣ್ಯ, ಮೊಲೆಯುಣಿಸುವ ತಾಯಿತನ, ಜೋಗುಳವಾಡುವ ನಾಲಿಗೆ, ಸೊಸೆಯನ್ನು ತರುವ ಆನಂದ ಎಲ್ಲವೂ ಅವಳ ಪಾಲಿಗೆ ಶೂನ್ಯ. ಅವಳಿಗೆ ಭಾರಿ ಭಾಗ್ಯವಿರಬಹುದು. ಸಂತಾನ ಭಾಗ್ಯ ಇಲ್ಲವೆಂದ ಮೇಲೆ ಆ ಸಿರಿತನವನ್ನು ಸುಡಬೇಕಾಗುತ್ತದೆ. ಹಡೆಯದ ಹೆಣ್ಣು ಗಂಡನ ಮನೆಯಲ್ಲಿ ಬದುಕುವುದು ಹಂಗಿನ ಬಾನದಿಂದ. ಮಕ್ಕಳನ್ನು ಕೊಡು ಶಿವನೆ ಎಂದು ಭಗವಂತನನ್ನು ಪ್ರಾರ್ಥಿಸುವುದೊಂದೆ ಕೆಲಸ:

'ಕಂದನ ಕುಡು ಶಿವನೆ
ಬಂಧನ ಬಿಡಲಾರೆ!
ಹಂಗೀನ ಬಾನ ಉಣಲಾರೆ!
ಹಂಗೀನ ಬಾನ ಉಣಲಾರೆ
ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ!!'

ಈ ಪ್ರಾರ್ಥನೆಯಲ್ಲಿ ಬಂಜೆಯ ಬಾಳಿನ ಗೋಳು ಎಂಥ ಉಗ್ರವಾದುದು ಎಂಬುದು ಧ್ವನಿಸುತ್ತದೆ. ಮೊದಲೇ ಹೃದಯದಲ್ಲಿ 'ಬಂಜೆ' ಎಂಬ ಹುಣ್ಣಿನ ನೋವು. ಇನ್ನು ಅತ್ತೆ, ಮಾವ, ಗಂಡ, ಅಕ್ಕಪಕ್ಕದವರು 'ಬಂಜೆ' ಎಂದು ಹಿಂದುಮುಂದು ನೋಡದೆ ಕಟ್ಟಿದೆ ಅಂದಾಗ 'ಹುಣ್ಣಿನ ಮೇಲೆ ಕಾದ ಸಲಾಕಿ ಎಳೆದಂತೆ' ಅವಳ ಹೃದಯ 'ಚೀರ್' ಎನ್ನುತ್ತದೆ. ಹೆಣ್ಣಿಗೆ 'ಬಂಜೆ' ಕೇಳಲಾಗದ ಅಪಸ್ವರ. ಸಮಾಜ ಬಂಜೆಯನ್ನು ಅನಾದರದಿಂದ ಕಾಣುವ ದೃಷ್ಟಿ ಮಾನವ ವರ್ಗಕ್ಕೆ ಅಪಚಾರ ಎಸಗಿದಂತೆ ಭಾಸವಾಗುತ್ತದೆ. ಬಂಜೆಯ ಗೋಳಿನ ಚಿತ್ರ ಕಂಡಾಗ ಸಹೃದಯರ ಹೃದಯ ಕರಗಿ ನೀರಾಗುತ್ತದೆ.

ಸಮಾಜದ ಅನಿಷ್ಟಗಳಲ್ಲಿ ಬಂಜೆಯೂ ಒಬ್ಬಳು. ಮಂಗಳಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ! ಬಂಜೆಯಾದವಳು ಇತರ ಮಕ್ಕಳನ್ನು ಮುಟ್ಟಬಾರದು. ಬಾಧು-ಬಳಗದವರು 'ಛಿ... ಛಿ... ಥೂ' ಎಂದು ಉಗುಳುತ್ತಾರೆ. ಸಮಾಜ, ನಿಸರ್ಗ ಎಲ್ಲರೂ ಅವಳನ್ನು ಅಶುಭವೆನ್ನುತ್ತಾರೆ. ಬಂಜೆಯ ಮನೆಯ ಮುಂದೆ ಬೆಳೆದ ಅಜೂರದ ಗಿಡದಲ್ಲಿ ಗಿಳಿ ಕೂತು, 'ಬಂಜಿ ನಿನ ಬದುಕು ಹೆರವರಿಗೆ' ಎಂದು ಪಕ್ಷಿಗಳು ಸಹ ಹಂಗಿಸುತ್ತವೆ. ಬೇಗೆಯನ್ನು ಏನೂ ಅರ್ಥಮಾಡಿಕೊಳ್ಳಲಾರದ ಬಂಜೆ ತಾಯ್ತನವಿಲ್ಲದೆ ಕೊರಗಿ ಸೊರಗಿ, 'ಸಂಜೆಗೆ ಕೊಟ್ಟು ನೀ ಮುಂಜಾನೆ ಕೊಳ್ಳಯ್ಯ! ಬಂಜೆಂಬ ಶಬುದ ಮರೆಸಯ್ಯ' ಎಂದು ಕರುಳು ಕಿತ್ತು ಬರುವಂತೆ ಪ್ರಾರ್ಥಿಸಿಕೊಳ್ಳುತ್ತಾಳೆ. 'ಅವಳ ಪಾಲಿಗೆ ಹಡೆದ ಮಗು ಬದುಕದಿದ್ದರೂ ವ್ಯಸನವಿಲ್ಲ. ಆಗಲೇ ಹುಟ್ಟಿ ಆಗಲೇ ಸತ್ತು ಸಮಾಧಿಯಾದರೂ ಚಿಂತೆಯಿಲ್ಲ. ಹುಟ್ಟಿದ ಮಗು ಬದುಕಿ ಕೆಟ್ಟ ಹೆಸರಾದರೂ ತರಲಿ, ಒಳ್ಳೆ ಹೆಸರಾದರೂ ತರಲಿ ಅದು ಮುಖ್ಯವಲ್ಲ. ಸಮಾಜದ 'ಬಂಜೆ' ಎಂಬ ಅಣಕ ಅಳಿಸಿದರೆ ಸಾಕು, ಅಷ್ಟೇ ಸಮಾಧಾನ' ಎಂದು ಕನವರಿಸುವ ಹೃದಯ ವಿಶಾಲವಾದುದು. ಇಂಥ ಬಂಜೆಯ ಬಂಜರು ಭೂಮಿಯಂತಹ ನಿಷ್ಪ್ರಯೋಜಕ ಜೀವನವನ್ನು ಶಿಷ್ಟಸಾಹಿತ್ಯಕ್ಕಿಂತಲೂ ಒಂದು ಕೈ ಮೇಲೆನ್ನುವಂತೆ ಜನಪದರು ತಮ್ಮ ಹಾಡುಗಳಲ್ಲಿ ವರ್ಣಿಸಿ ಧನ್ಯರಾಗಿದ್ದಾರೆ.

ಹೆಣ್ಣಿನ ಜೀವನದ ಕುತ್ತುಗಳನ್ನೂ ಕೊರತೆಗಳನ್ನೂ ನೆನಸಿಕೊಂಡರೆ ಮೈಯೆಲ್ಲಾ ಮುಳ್ಳು

ಚುಚ್ಚಿದಂತಹ ಅನುಭವವಾಗುತ್ತದೆ. ಹೆಣ್ಣಿನ ಬಾಳಿನಲ್ಲಿ ಬಂಜೆಯುದು ಒಂದು ತೆರನಾದ ನೋವಾದರೆ ವಿಧವೆಯುದು ಬೇರೆ ತರದ ನೋವಾಗಿರುತ್ತದೆ. ವೈಧವ್ಯ ಹೆಣ್ತನಕ್ಕೆ ಒಂದು ಮಹಾರೋಗ. ಹಿಂದಿನಿಂದಲೂ ಸಮಾಜದಲ್ಲಿ ವಿಧವೆಯರಿಗೆ ಸ್ಥಾನವಿಲ್ಲ; ಗೌರವವಿಲ್ಲ. ಪತಿವಿಯೋಗವಾದ ಮೇಲೆ ಸತಿಯಾದವಳು ಸಹಗಮನ ಮಾಡಿದರೆ ಅವಳಿಗೆ, 'ಸಹಧರ್ಮಿಣಿ' ಪಟ್ಟ ಸಿಗುತ್ತಿತ್ತು. ಹೆಣ್ಣು ಯಾವ ಅಪರಾಧವನ್ನೂ ಮಾಡದಿದ್ದರೂ ಗಂಡನ ಜೊತೆ ಚಿತೆಯಲ್ಲಿ ಬೀಳುವುದು ಬೇರೆಯವರಿಗೆ ಭಯಂಕರವಾಗಿ ಕಾಣುತ್ತದೆ. ಸಮಾಜದಲ್ಲಿ ಬರಬರುತ್ತಾ ರಾಜಕೀಯ ಪ್ರವೀಣರು ಕ್ರೂರ ಪದ್ಧತಿಯನ್ನು ಅಳಿಸಿ ಹಾಕಿದರು. ಎಳೆಬಾಳೆ ಸುಳಿಬಾಳೆಯಂಥಹ ಹೆಣ್ಣು ಚಿಗುರು ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡವರ ಯಾತನೆ ನೆನಸಿಕೊಳ್ಳಲು ಅಸಾಧಾರಣವಾದುದು. ಎಷ್ಟೊ ಸಂಸಾರಗಳು ಪತಿಯ ಸುಖವನ್ನು ಅಲ್ಪವೂ ಅನುಭವಿಸದೆ ವಿಧವೆತನದ ಕೂಪಕ್ಕೆ ಬಿದ್ದು ಒದ್ದಾಡಿದ್ದಾರೆ, ಒದ್ದಾಡುತ್ತಿದ್ದಾರೆ.

ಜಾನಪದ ಗರತಿಗೆ 'ಅರಸಿನಂಥ ನಲ್ಲ'ನೇ ಸರ್ವಸ್ವ. 'ಅರಸರ ದಯದಿಂದಲೇ ಅರಿಶಿಣ ಕುಂಕುಮ ಇಟ್ಟುಕೊಳ್ಳುವ ಮುತ್ತೈದೆತನ. ಕೋದ ಮೂಗಿಗೆ ಮುಂಡಿಯುವುದು ಅರಸರ ಸೌಭಾಗ್ಯದಿಂದ. ನನ್ನ ಕೊರಳಿನ ಬಂಗಾರದ ಮಾಲೆ ಎಂದರೆ ಪತಿರಾಯನೆ' ಎಂದು ನಂಬಿದ ಹೆಣ್ಣಿಗೆ ಮುತ್ತೈದೆತನ ಕಳೆದುಕೊಂಡಾಗ ಅವಳ ನೋವಿನ ಹೃದಯ ಸಿಡಿದು ನೂರಾಗುತ್ತದೆ:

ಗಂಡ ಸತ್ತರಿನ್ನ ಗಂಧ ಕುಂಕುಮವ್ಯಾಕ।
ಬಂಗಾರವ್ಯಾಕ ಬಳೆಯ್ಯಾಕ।
ಬಂಗಾರವ್ಯಾಕ ಬಳೆಯ್ಯಾಕ ಕೊರಳೀನ
ಸಿಂಗಾರ ಶಿವನೇ ಕಸಕೊಂಡ॥

ಸ್ತ್ರೀಯಾದವಳು ಜೀವನದುದ್ದಕ್ಕೂ ಬಯಸುವುದು ಶುಭ ಮುತ್ತೈದೆತನ. ತನ್ನ ಜೀವನದ ಸರ್ವಸ್ವವೆಲ್ಲವನ್ನೂ ಗಂಡನಿಗಾಗಿ ಧಾರೆಯೆರೆಯುತ್ತಾಳೆ. ಬಳ್ಳಿಗೆ ಆಸರೆಯಾದ ಮರವೇ ಬಿದ್ದುಹೋದ ಮೇಲೆ ಬಳ್ಳಿಗೆ ದೇವರೇ ಗತಿ! ಪ್ರಾಣ ದೇವನೆ ಹೊರಟು ಹೋದಮೇಲೆ ಗಂಧ, ಕುಂಕುಮ, ಬಂಗಾರ, ಬಳೆ, ಕರೀಮಣಿಸರ ಇತ್ಯಾದಿ ಶೃಂಗಾರ ವಸ್ತುಗಳನ್ನು ಹಾಕಿಕೊಂಡು ಯಾರಿಗೋಸ್ಕರ ನಲಿಯಬೇಕು? ಎನ್ನುವುದು ಅವಳ ನಶ್ವರವಾದ ಪ್ರಶ್ನೆ. ಬಂಜೆಯು ನಂಜಿನಿಂದ ಬಾಳು ನೂಕುತ್ತಿದ್ದವಳು, ತನ್ನ ಮುಂದೆಯೇ ಪತಿಯು ಸಾವಿನ ಸಿಡಿಲು ಬಡಿದಾಗ ತನ್ನೆರಡು ಕಣ್ಣುಗಳನ್ನು ಕಳೆದುಕೊಂಡು ಜೀವನವೆಲ್ಲಾ ಬರೀ ಕತ್ತಲಿನಲ್ಲಿ ತೊಳಲಾಡಬೇಕಾಗುತ್ತದೆ. ಇಂಥ ಕತ್ತಲಿನಲ್ಲಿ ಸಾಯುವುದಕ್ಕಿಂತ ಪತಿಯೊಡನೆ ಅಂತ್ಯಕಾಣುವ ನಿರ್ಧಾರ. ಅವಳ ಹೃದಯವೇದನೆ ಎಷ್ಟು ಎಂಬುದು ಸಹೃದಯನಿಗೆ ಅರ್ಥವಾಗದೆ ಇರಲಾರದು! ಅವಳು ಸದಾ ಬಯಸುವುದು ಮುತ್ತೈದೆ ಸಾವು. 'ಮಾರಾಯರ ಮುಂದ ಮರಣವ' ಎಂದು ಗಂಡನ ಪ್ರಾಣಪಕ್ಷಿ ಹಾರಿಹೋಗುವುದಕ್ಕಿಂತ ಮುಂಚೆ ತನ್ನದೇ ಹಾರಲೆಂದು ಬೇಡುವ ಧನ್ಯತೆಯನ್ನು ಪ್ರಾರ್ಥಿಸಿಕೊಳ್ಳುತ್ತಾಳೆ.

ಗಂಡ ಎನಿಸಿಕೊಂಡವನು 'ಕೂಲಿ ಮಾಡಿದರೇನು? ಕೋರಿ ಹೊತ್ತರೇನು?' ಅದು ಅವಳಿಗೆ ಬಡತನವಲ್ಲ. ದಿನಬೆಳಗಾದರೂ ಗಂಡನ ಪಾದಪೂಜೆಯೇ ಅವಳಿಗೆ ಶ್ರೀಮಂತಿಕೆ- ತನ್ನ ನಲ್ಲನ ಪ್ರೇಮ ಇಲ್ಲವಾದ ಮೇಲೆ 'ಸುಣ್ಣ ಇಲ್ಲದ ಗೋಡೆಯಂತೆ,' 'ದೇವರಿಲ್ಲದ ಗುಡಿಯಂತೆ' 'ಬಂಡಿಯ ಚಕ್ರವೊಂದನ್ನು ಬಿಚ್ಚಿಟ್ಟಂತೆ' ಅಪ್ರಯೋಜಕ ಎನ್ನುವುದನ್ನು ಜನಪದ ಗರತಿಯೊಬ್ಬಳು ಬಹು ರಮ್ಯವಾಗಿ ವರ್ಣಿಸಿದ್ದಾಳೆ:

'ಗಂಡ ಸತ್ತಮ್ಯಾಲ ರಂಡಿತನದ ಸಿರಿಯು।
ಸುಡಬೇಕ ಏನಾದರೇನ।
ಸುಡಬೇಕ ಏನಾದರೇನ ಆ ಜೀವ
ಇದ್ದಂಗ ಬಂಡಿ ಬಿಚ್ಚಿಟ್ಟ॥'

ಸುಖ ಸಂಸಾರದ ಸವಿಯನ್ನು ಸವಿಯುವ ಕಾಲದಲ್ಲಿ ಗಂಡನನ್ನು ಕಳೆದುಕೊಂಡಮೇಲೆ

ಎಂತಹ ಸಿರಿತನವಿದ್ದರೂ ಅದು ಹಗ್ಗಿಲ್ದ ಬಾವಿ ಕೊಡದ ಹಾಗೆ' 'ಮುಗಿದ ಜೋಳದಂತೆ' ಜೀವನವೆಲ್ಲವೂ ಕಟುವಾಸನೆ !

ಒಂಟಿ ಸಮಾಜದಲ್ಲಿ ಗಂಡನಿಲ್ಲದ ಮೇಲೆ ಕುಂಕುಮ ಇಟ್ಟುಕೊಂಡು, ಹೂವು ಮುಡಿದು ಕೊಂಡು ಮುತ್ತೈದೆಯೆಂದು ಕಲ್ಪಿಸಿ ಓಡಾಡಿಕೊಂಡಿರುವುದು ಕನಸಿನ ಮಾತು. ಒಂದು ವೇಳೆ ಸಾಧ್ಯವೆನಿಸಿದರೆ ಅದು ಮುಗಿಲ ಮಳೆಬಿಲ್ಲಿನಂತೆ ನಶ್ವರವೆನಿಸುತ್ತದೆ. ಪತಿ ವಿರಹವಾದ ಮೇಲೆ ಮನೆಯ ಮುಂದಣ ಅರಳಿನಿಂತ ಹೂಗಳ ಮುಡಿಯುವ ಪುಣ್ಯವಿಲ್ಲ. ಅವೆಲ್ಲವೂ ಪರರಿಗೆ. ಇಂತಹ ನಿರ್ಭಾಗ್ಯವಂತೆಯನ್ನು 'ಅಮಂಗಳೆ' ಎಂದು ಮಂಗಳ ಕಾರ್ಯದಲ್ಲಿ ಭಾಗವಹಿಸುವಂತೆ ಜನರು ಕಲ್ಪಿಸಿಕೊಡಲಾರರು.

'ಅಲ್ಲಿ ನೀ ಬಾರವ್ವ ಇಲ್ಲಿ ನೀ ಬಾರವ್ವ ।
ಎಲ್ಲಿಯು ತನಕ ಈ ಸಲ್ಲ?
ಎಲ್ಲಿಯು ತನಕ ಈ ಸಲ್ಲ ನಲ್ಲಾನ
ಇರುವತನಕ ಮುಖ ನಮ್ಮ ಮುಂಪ ॥

ಗಂಡನನ್ನು ಕಳೆದುಕೊಂಡ ಹೆಣ್ಣಿನ ಅಳಲನ್ನು ಕನ್ನಡ ಜನಪದದಲ್ಲಿ ಕರುಳು ಕರಗುವಂತೆ ವರ್ಣಿಸುತ್ತವೆ.

ಗಾಜಿನ ಕರೀಮಣಿಸರ ಹರಿದು ಹೋದ ಮೇಲೆ, ಮೋಜಿನ ಹಣೆಬೊಟ್ಟು ಅಳಿಸಿ ಹೋದ ಮೇಲೆ ಅವಳು ರಾಜ್ಯವಾಳುವುದು ಎಂತಹ ವ್ಯರ್ಥ, ಹೀನ ಎನ್ನುವುದನ್ನು ಈ ಪದ್ಯ ಸೊಗಸಾಗಿ ಹೇಳುತ್ತದೆ:

'ಗಂಡನಿಲ್ಲದ ಬಾಲಿ ದಂಡನಾಳಿದರೇನ ।
ಪುಂಡೀಯು ಹೂವು ಹೊಲ ತುಂಬ ।
ಪುಂಡೀಯು ಹೂವು ಹೊಲ ತುಂಬ
ಅರಳಿದರ
ಚೆಂಡು ಹೂವಿನ ಹೋಲಾವ ॥'

ಬಾಳಿನ ಅಳಲನ್ನು ಇಳಿಸಲು ಅಲ್ಪಮಟ್ಟಿಗಾದರೂ ಅವಕಾಶ ಮಾಡಿಕೊಟ್ಟು, ಹೃದಯಕ್ಕೆ ನೆಮ್ಮದಿ ತಂದು ಕೊಡುವಂಥ 'ಮಾಣಿಕ್ಯದಂತೆ' ಮಗನಿಲ್ಲದೆ, 'ಸಾವಿರಕ್ಕೂ ಹೆಚ್ಚು ಪತಿಪುರುಷ'ನ ಸುಖದಿಂದ ವಂಚಿತಳಾಗಿ ಜನರ ಹೊಲಸು ಬಾಯಿಯ ಎದುರಿಗೆ ಕೈ ಬೀಸಿ ನಡೆಯುವಂತಹ ಭಾಗ್ಯಹೀನೆಯಾದ ಹೆಣ್ಣಿನ ಹೃದಯವೊಂದು ಈ ಬಗೆಯಾಗಿ ಹಾಡಿಕೊಂಡಿದೆ:

'ಕಂದನೆತ್ತಲಿಲ್ಲ ಕೈಬೀಸಿ ನಡೆಲಿಲ್ಲ ।
ಗಂಡನ ಪುಣ್ಯ ಉಣಲಿಲ್ಲ ।
ಗಂಡನ ಪುಣ್ಯ ಉಣಲಿಲ್ಲ ಶಿವರಾಯ
ರಂಡೇತಕ್ಕೀಂಗ ಗುರಿಯಾಗಿ ।'

ಹೀಗೆ ಬಸಿರಾಗದವಳ ಬಾಳು, ರಂಡೆತನದ ಗೋಳನ್ನು ಜನಪದಗೀತೆಗಳು ಕರುಳು ಹಿಡಿಯುವಂತೆ ವರ್ಣಿಸುತ್ತವೆ. ಹೆಣ್ಣಿನ ದುರಂತದ ಬದುಕನ್ನು ಕರುಣಾಜನಕವಾಗಿ, ಚಿತ್ರವೇಧಕವಾಗಿ, ನೈಜಭಾಷೆಯಲ್ಲಿ ಅರ್ಥಗರ್ಭಿತವಾಗಿ ಹಳ್ಳಿಯ ಹಾಡುಗಳಲ್ಲಿ ಬಂದಿರುವುದನ್ನು ಗಮನಿಸಬಹುದು.

ಈಗೀಗ ಹೃದಯಗಳು 'ಬಂಜೆತನ' ಮತ್ತು 'ವೈಧವ್ಯತನದ ಬಗ್ಗೆ ಕರುಣೆತೋರಿಸುತ್ತವೆ. ಮಕ್ಕಳಿಲ್ಲದವರು ಮಕ್ಕಳನ್ನು ಎರವಲಾಗಿ ಪಡೆದು ಅವರಲ್ಲಿಯೇ ಆನಂದವನ್ನು ಕಂಡುಕೊಳ್ಳುತ್ತಾರೆ. ವಿಧವೆಯಾದವರು ಮರುಮದುವೆಯಾಗುವಂತೆ ಅಪ್ಪಣೆ ಕೊಟ್ಟಿವೆ. ಅವರ ಬಾಳನ್ನು ದುರಂತಮಾಡದೆ ನಲುವಿನಲ್ಲಿಡುವಂತೆ ಸಮಾಜ ಸ್ವಾಗತಿಸಬೇಕು; ಗೌರವಿಸಬೇಕು. ಇತರರಂತೆ ಬದುಕಿನಲ್ಲಿ ಒಂದು ಅರ್ಥವಂತಿಕೆಯನ್ನು ಕಂಡುಕೊಳ್ಳುವಂತೆ ಜನರು ಸಹಕರಿಸಬೇಕು. ಹಾಗೆ ಆದಾಗಲೇ ಹೆಣ್ಣಿನ ನೋವುಗಳು ಅಲ್ಪಮಟ್ಟಿಗಾದರೂ ಇಳಿಯುತ್ತವೆ; ಅವಳ ಬಗ್ಗೆ ತಲೆದೋರಿರುವ ದುರ್ಬಲ ಭಾವನೆಗಳು ತಗ್ಗಿ ಗಂಡಿನಂತೆ ನಿರಂಕುಶ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

[ಗರತಿಯರು ತ್ರಿಪದಿಗಳನ್ನೇ ಚೌಪದಿಗಳಂತೆ ಹಾಡುವ ರೂಢಿ; ಅಂತೇ ಈ ಲೇಖಕರು ಅವನ್ನು ಚೌಪದಿಗಳಂತೆಯೇ ಬರೆದಿದ್ದಾರೆ.]

[illegible]

ವಿ. ಎನ್. ಎಸ್.

ನಮ್ಮ ಮುಖ್ಯೋಪಾಧ್ಯಾಯರು ಶಾಲೆಯಲ್ಲಿ ೩ ವರ್ಷಗಳಿಂದ ಖಾಲಿಬಿದ್ದಿರುವ ಆರ್ಟ್ಸ್ ವಿಭಾಗದ ಅಧ್ಯಾಪಕರ ಜಾಗವನ್ನು ಭರ್ತಿಮಾಡಲು ಮೇಲಿನ ಅಧಿಕಾರಿಗಳಿಗೆ ಪದೇ ಪದೇ ಪತ್ರ ಮುಖೇನ ಹಾಗೂ ಪ್ರತ್ಯಕ್ಷವಾಗಿ ನಿವೇದಿಸಿಕೊಂಡರೂ ಅದು ಖಾಲಿಯಾಗಿಯೇ ಇತ್ತು. ಡಿ. ಡಿ. ಪಿ. ಐ. ಆಫೀಸಿನಿಂದ ಇದುವರೆಗೆ ಇಬ್ಬರು ಉಪಾಧ್ಯಾಯರನ್ನು ನಿಯಮಿಸಿದ್ದರೂ ಪ್ರಯೋಜನವಾಗಲಿಲ್ಲ. ಅವರಲ್ಲಿ ಒಬ್ಬರು ಮಿಡಲ್ ಸ್ಕೂಲಿನಿಂದ ಬಡ್ತಿ ಪಡೆದು ಬಂದವರು, ಅವರು ಒಂದು ರಾತ್ರಿ ಬಂದರು; ಊರನ್ನು ನೋಡಿ ಹೋದರು. ಮತ್ತೆ ಬರಲಿಲ್ಲ. ಒಂದು ವಾರದ ನಂತರ ಅವರನ್ನು ಬೇರೆ ಊರಿಗೆ ಹಾಕಿದ ಆಜ್ಞೆ ಬಂತು. ಇನ್ನೊಬ್ಬರನ್ನು ವರ್ಗ ಮಾಡಿದ್ದೇನೋ ಸರಿ. ಆದರೆ, ಒಂದು ವಾರದ ನಂತರ ಅವರ ವರ್ಗ ರದ್ದಾದ ಅಪ್ಪಣೆ ಬಂತು. ಇರುವ ಇಬ್ಬರು ಆರ್ಟ್ಸ್ ಅಧ್ಯಾಪಕರಿಗೆ ಆ ಪಿರೀಯಡ್‌ಗಳನ್ನು ಹಂಚಿ ಹೇಗೋ ತಳ್ಳಿಕೊಂಡು ಹೋಗುತ್ತಿದ್ದರು.

ಇದ್ದಕ್ಕಿದ್ದಂತೆ ಒಂದು ದಿನ ಒಬ್ಬ ಉಪಾಧ್ಯಾಯಿನಿಯನ್ನು ಈ ಶಾಲೆಗೆ ಹೊಸದಾಗಿ ನೇಮಕ ಮಾಡಿರುವ ಅಪ್ಪಣೆಯು ಮೇಲಧಿಕಾರಿಗಳಿಂದ ಬಂದಾಗ ಮುಖ್ಯೋಪಾಧ್ಯಾಯರಿಗೆ ಆಶ್ಚರ್ಯವಾಯಿತು. ಉಳಿದ ಉಪಾಧ್ಯಾಯರೂ, "ಈ ಊರ್ಗೆ? ಅದ್ರಲ್ಲೂ ಮೇಡಂ! ಖಂಡಿತ ಬರೋಲ್ಲ ಸಾರ್," ಅಂದರು. ಫಸ್ಟ್ ಅಸಿಸ್ಟೆಂಟ್ ಎಂ. 'ಎ' ಹೇಳಿದರು, "ಹಾಸನ ಎಲ್ಲಿ? ಈ ಊರೆಲ್ಲಿ? ಯಾವ ಮ್ಯಾಪ್‌ನಲ್ಲೂ ಈ ಊರ ಹೆಸರಿಲ್ಲ. ಅಲ್ಲದೆ ಹೊಸ ಅಪಾಯಿಂಟ್‌ಮೆಂಟ್! ಏನೋ ಅನುಮಾನ ನನಗೆ." ಒಬ್ಬೊಬ್ಬರು ಒಂದೊಂದು ಮಾತನಾಡುತ್ತಾ ತಮ್ಮ ತಮ್ಮ ತರಗತಿಗಳಿಗೆ ಹೋದರು. ಈ ವಿಷಯ ತರಗತಿಗಳಲ್ಲಿ ಹರಡಲು ಹೆಚ್ಚು ಸಮಯವಾಗಲಿಲ್ಲ. ನಾಲ್ಕು ದಿನಗಳು ಕಳೆದರೂ ಆ ಉಪಾಧ್ಯಾಯಿನಿ ಬರಲಿಲ್ಲವಾದ್ದರಿಂದ ಕುತೂಹಲ ಕಡಿಮೆಯಾಯಿತು. ವಿದ್ಯಾರ್ಥಿಗಳು ಉಪಾಧ್ಯಾಯರನ್ನು ಕೇಳಿ ಕೇಳಿ ಬೈಸಿಕೊಂಡು ಸುಮ್ಮನಾದರು. ವಿದ್ಯಾರ್ಥಿನಿಯರು ದಿನವೂ ಮುಖ್ಯೋಪಾಧ್ಯಾಯರ ರೂಮಿನಲ್ಲಿ ಇಣುಕಿ ಇಣುಕಿ ಕಣ್ಣುಗಳನ್ನು ನೋಯಿಸಿಕೊಂಡರು.

ಒಂದು ವಾರ ಕಳೆದು ಸೋಮವಾರ ಬಂತು. ಮೊದಲನೇ ಪೀರಿಯಡ್ ಅರ್ಧ ಆಗಿದೆ. "ನಮಸ್ತೆ ಸರ್" ಎನ್ನುವ ಮೃದು ಧ್ವನಿಯನ್ನು ಕೇಳಿ ಮುಖ್ಯೋಪಾಧ್ಯಾಯರು ಕತ್ತೆತ್ತಿ ನೋಡಿದರು. ಇನ್ನೊಮ್ಮೆ ನಮಸ್ತೆ ಮಾಡಿದ ಆ ಮಹಿಳೆ, "ಒಳಗೆ ಬರೋಣ್ವೇ ಸಾರ್?" ಅಂದಳು. "ಬನ್ನಿ, ಬನ್ನಿ ಏನ್ವೇ-



ಕಾಗಿತ್ತು?" ಮುಖೋಪಾಧ್ಯಾಯರು ಕೇಳಿದರು. "ನನ್ನ ಹೆಸರು ಸುಶೀಲಾ. ನಾನು ನಿಮ್ಮ ಶಾಲೆಗೆ ಹೊಸದಾಗಿ ಅಪಾಯಿಂಟ್ ಆಗಿದೀನಿ. ಈಗ ತಾನೇ ಬರ್ತಾ ಇದೀನಿ ಹಾಸನದಿಂದ," ಎಂದು ಆಕೆ ಹೇಳಿದಳು. ಮುಖೋಪಾಧ್ಯಾಯರ ಮುಖದಲ್ಲಿ ಮಂದಹಾಸ ಚಿಮ್ಮಿತು. "ಬನ್ನಿ, ಬನ್ನಿ ಕೂತ್ಕೊಳ್ಳಿ. ನೀವು ಬರೋದೇ ಇಲ್ಲಾಂತ ನಾವೆಲ್ಲಾ ತೀರ್ಮಾನಿಸಿದ್ವಿ. ಬಂದ್ರಲ್ಲಾ ಸದ್ಯ. ಲೋ ಸಿದ್ದಪ್ಪ, ಫಸ್ಟ್ ಅಸಿಸ್ಟೆಂಟ್ ಕರೆಯೋ" ಅಂದರು. ಫಸ್ಟ್ ಅಸಿಸ್ಟೆಂಟ್ ಎಂ. 'ಎ' ಬಂದು. ಮುಖೋಪಾಧ್ಯಾಯರು "ನೋಡಿ. ಇವ್ರೇ ಹೊಸ ಮೇಡಂ. ಈಗ ತಾನೇ ಬಂದ್ರು," ಎಂದರು. ಎಂ. 'ಎ' ಗೆ ಹೊಸ ಮೇಡಂ ಎದ್ದು ಕೈ ಮುಗಿದರು. ಅವರೂ ಕೈ ಮುಗಿದು, "ನೀವು ಹಿಂದೆ ಎಲ್ಲಾದ್ರೂ ಕೆಲಸ ಮಾಡಿದ್ದಿರೋ?" ಎಂ. 'ಎ' ಕೇಳಿದರು. "ನೋಡಿ ಸಾರ್ ನನಗೆ ಬಿ. ಎಡ್. ಆದ ಮೇಲೆ ೧-೨ ಕಡೆ ತಾತ್ಕಾಲಿಕವಾಗಿ ಕೆಲ್ಸ ಮಾಡಿದೀನಿ. ೧ ವರ್ಷ ಮಿಡಲ್ ಸ್ಕೂಲಿನಲ್ಲಿದ್ದೆ." ಈ ಮಾತನ್ನು ಕೇಳಿದ ಕೂಡಲೇ ಎಂ. 'ಎ' ರವರ ಮುಖದಲ್ಲಿ ನಿರಾಶೆ ಮೂಡಿತು. ಅವರು ಮುಖೋಪಾಧ್ಯಾಯರ ಮುಖ ನೋಡಿದರು. ಅಷ್ಟು ಹೊತ್ತಿಗೆ ಮೊದಲನೇ ಪೀರಿಯಡ್‌ನ

ಗಂಟೆಯಾಯಿತು. ಸರಿ, ಎಲ್ಲಾ ಉಪಾಧ್ಯಾಯರೂ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಮುಖ್ಯೋಪಾಧ್ಯಾಯರ ಕೋಣೆಯನ್ನು ಮುತ್ತಿಬಿಟ್ಟರು. ಬಿ. 'ಎ' ಅವರು ಎಲ್ಲಾ ಉಪಾಧ್ಯಾಯರಿಗೂ ಹೊಸ ಮೇಡಂ ಪರಿಚಯ ಮಾಡಿಕೊಟ್ಟರು. ಸುಶೀಲಾ ತನ್ನ ಕರವಸ್ತ್ರದಿಂದ ಹಣೆಯ ಮೇಲೆ ಮೂಡುತ್ತಿದ್ದ ಬೆವರುಹನಿಗಳನ್ನು ಒರೆಸಿಕೊಳ್ಳುತ್ತಾ 'ನಮಸ್ತೆ, ನಮಸ್ತೆ' ಅನ್ನುತ್ತಿದ್ದಳು. ಬಿ. 'ಎ' ವಿದ್ಯಾರ್ಥಿಗಳನ್ನು ಗದರಿಸಿ ತರಗತಿಗಳಿಗೆ ಕಳುಹಿಸಿದರು. ಮುಖ್ಯೋಪಾಧ್ಯಾಯರು ಹೇಳಿದರು, "ಇವ್ರೇ, ಮೇಡಂಗೆ ಯಾವ ತರಗತಿ ಇದೆ ನೋಡಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಹುಡುಗರಿಗೆ ಪರಿಚಯ ಮಾಡ್ಸಿ ಬನ್ನಿ." ಉಳಿದ ಉಪಾಧ್ಯಾಯರು ತಮ್ಮ ತಮ್ಮ ತರಗತಿಗಳಿಗೆ ತೆರಳಿದರು.

ಬಿ. 'ಎ' ಅವರು ಟೈಂ ಟೇಬಲ್ ಅನ್ನು ಕೈಯಲ್ಲಿ ಹಿಡಿದು ನೋಡುತ್ತಾ "ಮೇಡಂ ಈಗ ನಿಮಗೆ ೮ನೇ ತರಗತಿ ಎ ಸೆಕ್ಷನ್ ಇದೆ. ಮಾರಲ್ ಎಜುಕೇಷನ್ ಪೀರಿಯಡ್ ಹೋಗ್ತೀರಿ ತಾನೇ?" ಎಂದರು. ಸುಶೀಲಾ, "ಆಗ್ಲಿ ಸಾರ್" ಎಂದು ಹೇಳಿ ಕುರ್ಚಿಯಿಂದ ಎದ್ದಳು.

ಬಿ. 'ಎ' ಹೊಸ ಮೇಡಂನನ್ನು ೮ನೇ ತರಗತಿ ಎ ಸೆಕ್ಷನ್‌ಗೆ ಕರೆದುಕೊಂಡು ಹೋಗುತ್ತಿರುವಾಗ ಕಿಟಕಿಗಳ ಮೂಲಕ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಜೊತೆಗೆ ಉಪಾಧ್ಯಾಯರೂ ನೋಡುತ್ತಿದ್ದರು. ಉಪಾಧ್ಯಾಯರ ಕೊಠಡಿಯಲ್ಲಿ ಕುಳಿತಿದ್ದ ಇಬ್ಬರು ಉಪಾಧ್ಯಾಯರೂ, ಪಂಡಿತರೂ, ಪಿ. ಇ. ಮೇಷ್ಟ್ರೂ ಅಲ್ಲಿಂದ ಹೆಜ್ಜೆ ಎರಡು ಈಚೆ ಬಂದು ಹೊಸ ಮೇಡಂನನ್ನೇ ನೋಡುತ್ತಾ ನಿಂತರು.

ಬಿ. 'ಎ' ಅವರು ೮ ನೇ ತರಗತಿ 'ಎ' ವಿಭಾಗಕ್ಕೆ ಸುಶೀಲಳನ್ನು ಕರೆದುಕೊಂಡು ಹೋಗಿ ಅವಳ ಪರಿಚಯ ಮಾಡಿ ಎರಡು ಮಾತಾಡಿ ಹೊರಬಂದರು. ಮತ್ತು ತಮ್ಮ ತರಗತಿಗೆ ಹೋದರು.

ಉಪಾಧ್ಯಾಯರ ಕೊಠಡಿಯಲ್ಲಿ ಕುಳಿತಿದ್ದ ಪಂಡಿತರು, ಒಬ್ಬರು ಸೈನ್ಸ್ ಉಪಾಧ್ಯಾಯರು ಪಿ. ಇ. ಟೀಚರ್ ಹಾಗೂ ಅಟೆಂಡರ್ ಇವರುಗಳಿಗೆ ಹೊಸ ಮೇಡಂ ಹೇಗೆ ಆ ಸೆಕ್ಷನ್ ನಿಭಾಯಿಸ್ತಾರೆ? ಎಂಬ ಕುತೂಹಲ. ಅವರೆಲ್ಲಾ ಮೆಲ್ಲಗೆ ಹೋಗಿ ಹಿಂದುಗಡೆ ಕಿಟಕಿಯ ಕೆಳಗೆ ಬಗ್ಗಿ ನಿಂತರು. ಒಳಗೆ ಹುಡುಗರ ಗಲಾಟೆ ಪ್ರಾರಂಭವಾಯಿತು. ಮೇಡಂನನ್ನು ಒಬ್ಬೊಬ್ಬರು ಒಂದೊಂದು ಪ್ರಶ್ನೆ ಕೇಳತೊಡಗಿದರು. ಕಿಟಕಿ ಕೆಳಗೆ ನಿಂತಿರುವ ಇವರು ಕೈಚಿಟಿಕಿ ಹೊಡೆಯುತ್ತಾ ನಗುತ್ತಾ ನಿಂತಿದ್ದಾರೆ. ಸುಶೀಲಾ ಅವರ ಪ್ರಶ್ನೆಗಳಿಗೆಲ್ಲಾ ಉತ್ತರಿಸಿ, "ಈಗ ಏನಿದೆ?" ಎಂದಳು. ಎಲ್ಲರೂ "ಮಾರಲ್ ಎಜುಕೇಶನ್," ಎಂದು ಅಬ್ಬರಿಸಿದರು. ಹುಡುಗರು, "ಟೀಚರ್, ಟೀಚರ್ ಈ ಪಿರೀಯಡ್ ನಮ್ಮನ್ನ ಹೊರಗ್ಗೆ ಆಟಕ್ಕೆ ಬಿಡ್ತಿದ್ರು," ಅಂತ ಕೂಗಾಡತೊಡಗಿದರು. ಕಿಟಕಿಯ ಕೆಳಗೆ ಅವಿತುಕೊಂಡಿದ್ದವರು ಮೆಲ್ಲಗೆ, "ಆಯ್ತು ಆಯ್ತು ಯಾರಿಗೂ ಜಗ್ಗದ ಈ ಮುಂಡೇವು ಈ ಚೋಟುದ್ದ ಹುಡ್ಗೀಗೆ ಹೆದ್ರುತ್ವಾ?" ಅಂತ ಒಬ್ಬರು ಅಂದ್ರೆ ಪಂಡಿತರು, "ಪಾಪ, ಇನ್ನೂ ಅನುಭವ ಸಾಲ್ದು." ಅಂದರು. ಒಳಗೆ ಸುಶೀಲಾ ಹೇಳಿದಳು, "ನೋಡಪ್ಪ ನೀವೆಲ್ಲಾ ಗಲಾಟೆ ಮಾಡ್ದೆ ಕೂತ್ಕಂಡ್ರೆ..." ಇನ್ನೂ ಪೂರ್ಣವಾಗುವುದಕ್ಕೆ ಮುಂಚೆಯೇ ಕೆಲವು ವಿದ್ಯಾರ್ಥಿಗಳು, "ಕೂತ್ಕಂಡ್ರೇ ಕೂತ್ಕೊಂಡ್ರೇ" ಎಂದು ದೀರ್ಘವಾಗಿ ಹೇಳುತ್ತಾ ಅಣಕಿಸಿದರು. ಕಿಟಕಿ ಕೆಳಗೆ ಅಟೆಂಡರ್ ಘಕಘಕವೆ ನಕ್ಕನು. ಸುಶೀಲಾ ಒಳಗೆ, "ನೋಡಿ ನಾನೊಂದು ಫಿಲಂ ಸಾಂಗ್ ಹೇಳ್ತೀನಿ. ಬೇಕಾದೋರು ಗಲಾಟೆ ಮಾಡ್ದೆ ಕೂತ್ಕೊಳ್ಳಿ. ಬೇಡ್ದೇ ಇದ್ದೋರು ಆಚೆ ಹೋಗ್ಬಹುದು," ಎಂದಾಗ ತರಗತಿ ನಿಶ್ಶಬ್ದವಾಯಿತು. ಸುಶೀಲಾ ಜ್ಞಾಪಿಸಿಕೊಳ್ಳುವಂತೆ ಚಣಕಾಲ ನಿಂತು, 'ಇದೇನು ಸಭ್ಯತೆ? ಇದೇನು ಸಂಸ್ಕೃತಿ' ಎನ್ನುವ ಸಿನಿಮಾ ಗೀತೆಯನ್ನು ಸುಶ್ರಾವ್ಯವಾಗಿ ಹಾಡುತ್ತಿರುವಾಗ ಹುಡುಗ ಹುಡುಗಿ

ಯರು ಅವಳ ಮಧುರ ಕಂಠದ ಮೋಡಿಗೆ ವಶರಾದರು. ಕಿಟಕಿಯ ಕೆಳಗೆ ಅಡಗಿಕೊಂಡಿದ್ದವರು ಸೊಂಟವನ್ನು ಎತ್ತಿ ನಿಂತರು. ಮೈದಾನದಲ್ಲಿ ಆಡುತ್ತಿದ್ದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅಲ್ಲಿಗೆ ಓಡಿ ಬಂದು ತರಗತಿಯ ಹೊರಗೆ ಕದ್ದು ನಿಂತು ಕೇಳಿದರು. ಸ್ವತಃ ಮುಖ್ಯೋಪಾಧ್ಯಯರೇ ತಮ್ಮ ಕೊಠಡಿಯಿಂದ ಈಚೆ ಬಂದು ನಿಂತು ಕೇಳಿದರು. ಸುಶೀಲಾ ಹಾಡಿ ಮುಗಿಸಿ ನೋಡಿ ಈ "ಎಮ್. ಎಡ್. ಪೀರಿಯಡ್‌ನಲ್ಲಿ ಒಳ್ಳೊಳ್ಳೆ ಸಂಗೀತ ಹೇಳ್ತೀನಿ. ಇನ್ಮೇಲೆ ನನ್ನ ಯಾವ ಪೀರಿಯಡ್‌ನಲ್ಲೂ ನೀವು ಗಲಾಟೆ ಮಾಡ್ಬಾರ್ದು. ಗೊತ್ತಾಯ್ತೇ?" ಎಂದಳು. ಗಂಟೆ ಬಾರಿಸಲು ಮುಖ್ಯೋಪಾಧ್ಯಾಯರು ಕೊಟ್ಟಿದಾಗ ಸಂಗೀತ ಕೇಳುತ್ತಾ ನಿಂತಿದ್ದ ಜವಾನ ಓಡಿ ಬಂದು ಗಂಟೆ ಬಾರಿಸಿದ.

ಮಧ್ಯಾಹ್ನ ೧–೩೦ರ ಅವಕಾಶ ಸಮಯದಲ್ಲಿ ಮುಖ್ಯೋಪಾಧ್ಯಾಯರು ಸುಶೀಲಳನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರ ಹೆಂಡತಿಗೆ ಇವಳ ಪರಿಚಯ ಮಾಡಿಕೊಟ್ಟರು. ಅಲ್ಲಿ ಊಟವಾಯಿತು. ಅವಳ ಊರು, ತಂದೆ–ತಾಯಿ, ಜಾತಿ ಎಲ್ಲಾ ಕೇಳಿ ತಿಳಿದುಕೊಂಡರು. ಅವರ ಬೀದಿಯಲ್ಲೇ ಸ್ವಲ್ಪವೇ ದೂರದಲ್ಲಿ ಸುಶೀಲಾಗೆ ಒಂದು ಬಾಡಿಗೆ ಮನೆ ಸಿಕ್ಕಿತು. ಅವಳ ಅದೃಷ್ಟ.

ಉಪಾಧ್ಯಾಯರುಗಳು ಸುಶೀಲಾ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. "ಇಂಗ್ಲಿಷ್ ತಗೊಳ್ಳಿ ಗೊತ್ತಾಗುತ್ತೆ ಮೇಡಂಗೆ. ಸಿನಿಮಾ ಸಂಗೀತವಲ್ಲ ಅದು." ಅಂದರು. ಎಂ. 'ಬಿ' ಅವರು. "ಆದರೂ ಮೇಡಂ ತುಂಬಾ ಚುರುಕು. ಅವರಲ್ಲಿ ಮಧುರ ಕಂಠ, ಆಕರ್ಷಕ ಸೌಂದರ್ಯ ಎರಡೂ ಇದೆ," ಎಂದರು ಪಂಡಿತರು. ಎಲ್ಲರೂ ನಕ್ಕರು. ಅಷ್ಟು ಹೊತ್ತಿಗೆ ಸರಿಯಾಗಿ ಸುಶೀಲಾ, 'ನಮಸ್ತೆ ಸಾರ್' ಎಂದು ಹೇಳುತ್ತಾ ಅಲ್ಲಿಗೆ ಬಂದಳು. ಎಲ್ಲರೂ ಸುಮ್ಮನಾದರು.

ಸುಶೀಲಾ ತುಂಬಾ ಅಚ್ಚುಕಟ್ಟು. ನೀಟಾಗಿ ತಲೆ ಬಾಚಿ ಮಧ್ಯೆ ಬೈತಲೆ ತೆಗೆದು ಅದರ ತುದಿಗೆ ಕುಂಕುಮ ಹಚ್ಚಿ, ಹಣೆಗೆ ಸಣ್ಣದಾಗಿ ಕುಂಕುಮವಿಟ್ಟು ನೀಟಾಗಿ ಶಾಲೆಗೆ ಬರುವಳು. ಉದ್ದವಾದ ಎರಡು ಜಡೆ ಬೆನ್ನ ಮೇಲೆ ಓಲಾಡುವುವು. ಅರಳಿದ ಹೊಸ ಹೂವಿನಂತೆ ಹೊಸ ಸ್ಫೂರ್ತಿಯಿಂದ ಇರುವಳು. ಸೈನ್ಸ್ ಉಪಾಧ್ಯಾಯರೊಬ್ಬರು ತಲೆಯನ್ನು ಸರಿಯಾಗಿ ಬಾಚುತ್ತಿರಲಿಲ್ಲ. ಇಸ್ತ್ರಿ ಮಾಡದ ಪ್ಯಾಂಟ್–ಶರಟುಗಳನ್ನು ಹಾಕಿಕೊಂಡು ಬರುತ್ತಿದ್ದರು. ಸುಶೀಲಾಳ ಅಚ್ಚುಕಟ್ಟುತನವನ್ನು ನೋಡಿ ತಮ್ಮ ಬಟ್ಟೆಗಳಿಗೆ ಇಸ್ತ್ರಿ ಮಾಡಿಸಿದರು. ಕೂದಲುಗಳಿಗೆ ಎಣ್ಣೆ ಲೇಪನವಾಯಿತು. ಪಂಡಿತರು ೮ ದಿನಕ್ಕೊಮ್ಮೆ ಮುಖ ಕ್ಷೌರ ಮಾಡಿಸಿಕೊಳ್ಳುತ್ತಿದ್ದವರು ಈಗ ೩ ದಿನಕ್ಕೊಮ್ಮೆ ಮುಖ ಕ್ಷೌರಮಾಡಿಸಿಕೊಳ್ಳತೊಡಗಿದರು. ಇನ್ನು ಬ್ರಹ್ಮಚಾರಿ ಹಾಗೂ ಯುವಕ ಉಪಾಧ್ಯಾಯರ ವಿಷಯವನ್ನು ಹೇಳಬೇಕಾದ್ದೇ ಇಲ್ಲ. ಮೀಸೆಯಿಲ್ಲದವರು ಮೀಸೆ ಬಿಟ್ಟರು. ಮೀಸೆಯಿದ್ದವರು ತುದಿಗಳನ್ನು ಚೂಪು ಮಾಡಿಸಿಕೊಂಡರು. ತರಗತಿಗಳಲ್ಲೂ ಮೌನಪರಿವರ್ತನೆಯಾಯಿತು. ಹುಡುಗಿಯರು ತಮ್ಮ ಮೇಡಂನನ್ನು ಅನುಕರಿಸಿದರು. ಸುಶೀಲಾ ತರಗತಿಗೆ ಬಂದ ಕೂಡಲೇ ಎಲ್ಲರೂ ನೀಟಾಗಿ ನಿಂತು ಸೆಲ್ಯೂಟ್ ಹೊಡೆಯುವುದು, ಕುಳಿತುಕೊಳ್ಳಿ ಎಂದಾಗ ಒಟ್ಟಾಗಿ ಕುಳಿತುಕೊಳ್ಳುವುದು ಇವನ್ನೆಲ್ಲಾ ಅಭ್ಯಾಸ ಮಾಡಿಸಿದಳು. ತಲೆ ಬಾಚದೆ ಬಂದವರನ್ನು ಹೊರಗ್ಗೆ ಕಳುಹಿಸಿ ತಲೆ ಬಾಚಿಕೊಂಡು ಬರುವಂತೆ ಹೇಳುತ್ತಿದ್ದಳು. ಅದಕ್ಕಾಗಿ ತನ್ನ ಹಣದಿಂದಲೇ ಒಂದು ಕನ್ನಡಿ ೨–೩ ಬಾಚಣಿಗೆಗಳನ್ನು ತರಿಸಿ ಉಪಾಧ್ಯಾಯರ ರೂಮಿನಲ್ಲಿರಿಸಿದಳು. ತರುಣ ಉಪಾಧ್ಯಾಯರು ಪ್ರತಿ ಪೀರಿಯಡ್‌ನಲ್ಲೂ ತಮ್ಮ ಕ್ರಾಪ್ ತಿದ್ದಿಕೊಂಡು, ಮೀಸೆಯನ್ನು ಹುರಿ ಮಾಡಿಕೊಂಡು ತರಗತಿಗೆ ಹೋಗುತ್ತಿದ್ದುದನ್ನು ನೋಡಿ ಸುಶೀಲಾ ಮಂದಹಾಸ ಬೀರುವಳು.

ಸುಶೀಲಾ ಯಾವ ತರಗತಿಗೇ ಹೋಗಲಿ, ಪಾಠ ಮುಗಿದ ನಂತರ ಒಂದು ಗೀತೆಯನ್ನು ಮಧುರವಾಗಿ ಹಾಡಿ ವಿದ್ಯಾರ್ಥಿ

ಕಳ ಮನ ತಣಿಸುವಳು. ಆದ್ದರಿಂದ ಎಲ್ಲಾ ತರಗತಿಯ ವಿದ್ಯಾರ್ಥಿನಿಯರಿಗೂ ಅವಳೇ ಬೇಕು. ಇಂಗ್ಲಿಷ್ ಪಾಠದ ದಿನ ಅದರ ಬಗ್ಗೆ ಶಾತ್ರಿ ನೋಟ್ಸ್ ತಯಾರಿಸಿ ಅರ್ಟ್ಸ್ ಉಪಾಧ್ಯಾಯರಿಗೆ ತೋರಿಸಿ ಅವರ ಸಲಹೆ ಪಡೆಯುವಳು. "ಸಾರ್ ನಾನು ನಿಮಗಿಂತ ಚಿಕ್ಕವಳು, ಅನನುಭವಿ. ದಯವಿಟ್ಟು ಮಾರ್ಗದರ್ಶನ ಮಾಡ್ಬೇಕು," ಎಂದು ತುಟಿಗಳ ಮೇಲೆ ಮಂದಹಾಸ ಚೆಲ್ಲಿ ಕೇಳುತ್ತಿದ್ದಾಗ ಮಿ. 'ಸಿ' ಅವರಿಗೆ ಸ್ವರ್ಗವೇ ಸಿಕ್ಕದಂತಾಗುವುದು. ಅವರು, "ಮೇಡಂ ನಿಮ್ಮನ್ನ ಹುಡುಗರು ತುಂಬಾ ಇಷ್ಟಪಡ್ತಾರೆ," ಎಂದಾಗ ಸುಶೀಲಾ, "ನನ್ನ ಪಾಠಕ್ಕಲ್ಲ ಸಾರ್ ನನ್ನ ಸಂಗೀತಕ್ಕೆ," ಎಂದು ನಕ್ಕುಬಿಡುವಳು.

೪-೩೦ ಕ್ಕೆ ಶಾಲೆ ಬಿಟ್ಟಾಗ ಸುಶೀಲಾ ವಿದ್ಯಾರ್ಥಿನಿಯರನ್ನೆಲ್ಲಾ ಒಟ್ಟುಸೇರಿಸಿ ಅವರಿಗೆ ಖೋ-ಖೋ, ಥ್ರೋಬಾಲ್, ರಿಂಗ್ ಮುಂತಾದ ಆಟಗಳನ್ನು ಹೇಳಿಕೊಡುವಳು. ನಿಯಮಗಳ ಬಗ್ಗೆ ಅನುಮಾನ ಬಂದಾಗ ಅವಳು ಪಿ. ಇ. ಟೀಚರ್ ಅನ್ನು ಕೇಳಿ ನಿಯಮಗಳನ್ನು ತಿಳಿದುಕೊಳ್ಳುವಳು. "ಕಾಲಕ್ಕೆ ಸರಿಯಾಗಿ ಶಾಲೆಗೆ ಬರಬೇಕು, ನೀಟಾಗಿರಬೇಕು, ಚೆನ್ನಾಗಿ ಆಡಬೇಕು. ಒಳ್ಳೊಳ್ಳೆಯ ಹಾಡುಗಳನ್ನು ಅಭ್ಯಾಸ ಮಾಡಬೇಕು, ಚೆನ್ನಾಗಿ ಓದಬೇಕು," ಎಂದು ಹುಡುಗಿಯರಿಗೆ ಪದೇ ಪದೇ ಹೇಳುವಳು. ಕೆಲವೇ ತಿಂಗಳೊಳಗಾಗಿ ಶಾಲೆಯಲ್ಲಿ ಎಂತಹ ಪರಿವರ್ತನೆಯಾಯಿತೆಂದರೆ ಉಪಾಧ್ಯಾಯರೂ ಆಶ್ಚರ್ಯಪಟ್ಟರು.

ಅಂದು ಮೊದಲನೇ ಪೀರಿಯಡ್ ನಲ್ಲಿ ಸುಶೀಲಾಗೆ ಬಿಡುವು ಇತ್ತು. ಅವಳು ಮುಖ್ಯೋಪಾಧ್ಯಾಯರ ಕೋಣೆಗೆ ಹೋಗಿ 'ನಮಸ್ತೆ ಸಾರ್' ಅಂದಳು. ಅವರು 'ಬನ್ನಿ ಬನ್ನಿ' ಎನ್ನುತ್ತಾ ಕುರ್ಚಿ ತೋರಿಸಿದರು. "ಸಾರ್, ಒಂದ್ಮಾತು," ಎಂದು ಹೇಳಿ ಅವರ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದು, "ವಿದ್ಯಾರ್ಥಿಗಳು ರಾಷ್ಟ್ರಗೀತೆ ಸರಿಯಾಗಿ ಹಾಡೋದಿಲ್ಲ. ಅದಕ್ಕೆ ನಾಳೆಯಿಂದ ನಾವೇ ಹಾಡಿ ತೋರಿಸ್ತೀನಿ," ಎಂದಳು. ಮುಖ್ಯೋಪಾಧ್ಯಾಯರು ಬೆಲ್ ಮಾಡಿ ಜವಾನನ್ನು ಕರೆದು ಪಿ. ಇ. ಮೇಷ್ಟ್ರನ್ನು ಕರೆತರಲು ಹೇಳಿದರು. ಪಿ. ಇ. ಮೇಷ್ಟ್ರು ಬಂದಾಗ ಮುಖ್ಯೋಪಾಧ್ಯಾಯರು, "ನೋಡಿ , ಮೇಡಂ ಹೇಳ್ತಾರೆ' 'ವಿದ್ಯಾರ್ಥಿಗಳು ರಾಷ್ಟ್ರಗೀತೆ ಸರಿಯಾಗಿ ಹಾಡಲ್ವಂತೆ.' ನಾಳೆಯಿಂದ ಅವರೇ ಹಾಡಿ ತೋರಿಸ್ತಾರಂತೆ." ಪಿ. ಇ. ಉಪಾಧ್ಯಾಯರ ಕೋಪ ನೆತ್ತಿಗೇರಿತು. ಅವರು ಕೂಡಲೇ, "ನಾನು ೧೦ ವರ್ಷದಿಂದ ಸಾಯ್ತಾ ಇದೀನಿ. ನೀನು ಈಚ್ಬಂದ್ಯಮ್ಮಾ ಸಾಯಕ್ಕೆ. ನನ್ನ ಸರ್ವೀಸ್ನಲ್ಲಿ ಇಂಥೋರ್ನ ಬಾಳ ಜನನ್ನೋಡಿದೀನಿ. ಹಾಗೇ ಮಾಡ್ಲಿ ಸಾರ್," ಎನ್ನುತ್ತಾ ಬಿರುಗಾಳಿಯಂತೆ ಹೊರಟುಹೋದರು. ಸುಶೀಲಾಗೆ ಅಳು ಬಂತು. ಮುಖ್ಯೋಪಾಧ್ಯಾಯರು, "ಮೇಡಂ ನಮ್ಮ ಪಿ. ಇ. ಟೀಚರ್ ದೂರ್ವಾಸಗೋತ್ರದವರು. ಅವರ ಮಾತುಗಳೇ ಹಾಗೆ. ನೀವೇನೂ ತಿಳ್ಕೋಬೇಡಿ. ನಾಳೆಯಿಂದ ನೀವೇ ಗೈಡ್ ಮಾಡಿ," ಎಂದರು. ಆದರೂ ಸುಶೀಲಾ ನೊಂದುಕೊಂಡಳು. ಉಪಾಧ್ಯಾಯರ ಕೊಠಡಿಯಲ್ಲಿ ಪಿ. ಇ. ಉಪಾಧ್ಯಾಯರು ಕೂಗಾಡ್ತಾ ಇದ್ದ ಧ್ವನಿ ಆಫೀಸಿನ ವರೆಗೂ ಕೇಳಿಬರುತ್ತಿತ್ತು. "ಇಲ್ಲಿ ಅವರ ಮಾತನ್ನ ಯಾರೂ ಸೀರಿಯಸ್ಸಾಗಿ ತಗೋಳಲ್ಲ ಮೇಡಂ," ಅಂದರು ಮುಖ್ಯೋಪಾಧ್ಯಾಯರು.

ಮೂರನೆಯ ದಿನ ಸುಶೀಲಾ ೪೮ ಸೆಕೆಂಡುಗಳಲ್ಲೇ ರಾಷ್ಟ್ರಗೀತೆಯನ್ನು ಹಾಡಿದಳು. ಪ್ರಾರ್ಥನೆಗಾಗಿ ನಿಂತಿದ್ದ ೩೦೦-೩೫೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರಭಾವಿತರಾದರು. ೪ ತಂಡಗಳನ್ನು ಮಾಡಿ ಅವರಿಗೆಲ್ಲಾ ರಾಷ್ಟ್ರಗೀತೆ ಹಾಡುವುದನ್ನು ಕಲಿಸಿಕೊಟ್ಟಳು. ಆ ಸಾರಿ ನಡೆದ ತಾಲೂಕು ಮಟ್ಟದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಹುಡುಗಿಯರ ವಿಭಾಗದ ಎಲ್ಲಾ ಬಹುಮಾನಗಳೂ ನಮ್ಮ ಶಾಲೆಗೇ ಬಂದಾಗ ಪಿ. ಇ. ಉಪಾಧ್ಯಾಯರು ಪ್ರಸನ್ನರಾದರು. ಅವರು ಸುಶೀಲಾಳನ್ನು ಬಾಯಿ ತುಂಬಾ ಹೊಗಳಿ

ದರು.

ಸುಶೀಲಾ ೪ ದಿನ ರಜ ಹಾಕಿ ಊರಿಗೆ ಹೋದ ವಿಷಯ ಎಲ್ಲರಿಗೂ ತಿಳಿಯಿತು. 'ಮಾಮರದ ಕೋಗಿಲೆ ತಾತ್ಕಾಲಿಕವಾಗಿ ಹಾರಿಹೋಗಿದೆ' ಎಂದು ಪಂಡಿತರು ಹೇಳಿದರು. "ಏನೋ ಕಳೇನೇ ಇಲ್ಲಾರೀ," ಎಂದು ಸೈನ್ಸ್ ಉಪಾಧ್ಯಾಯ ಪ್ರಭಾಕರ್ ಹೇಳಿದರು. ಪಂಡಿತರು ಹೇಳಿದರು "ನೋಡ್ರೀ ಸ್ತ್ರೀ ತೇಜಸ್ಸು ಹೇಗಿದೇಂತ. ಸೃಷ್ಟಿ ಲಯ ಎರಡೂ ಅವಳ ಕೈಲಿದೆ." ಎಂ. 'ಸಿ' ಕೇಳಿದರು "ಏತಕ್ಕೆ ಈ ಮಾತು ಬಂತೂಂತ?" "ಏಕೇಂದ್ರೆ ಹೊಸಮೋಡು ನಮ್ಮ ಎಂ. 'ಜಿ'ಗೆ ಇಸ್ತ್ರಿಮಾಡಿದ ಪ್ಯಾಂಟ್ ಶರಟುಗಳನ್ನು ಹಾಕಿಸಿದರು. ತಲೆ ಬಾಚಿಸಿದರು," ಅಂದರು ಪಂಡಿತರು. ಆಗ ಎಂ. 'ಸಿ' ಹೇಳಿದರು, "ನಮ್ಮ ಪಂಡಿತರಿಗೆ ೩ ದಿನಕ್ಕೊಮ್ಮೆ ಮುಖಕ್ಷೌರ ಮಾಡಿಸಿದರು." ಇದನ್ನು ಕೇಳಿ ಎಲ್ಲರೂ ಪಕ-ಪಕನೆ ನಕ್ಕರು. ಪಂಡಿತರ ಕೈ ಗಲ್ಲದ ಮೇಲಕ್ಕೆ ಹೋಯಿತು, "ಅಲ್ಲ, ಕಲೆ ಹೇಗೆ ಅಸಾಧ್ಯವಾದ್ದನ್ನು ಸಾಧಿಸುತ್ತೆ ನೋಡಿ. ಗಂಡಸರಾದ ನೀವೂ ಇದೀರಿ" ಎಂದು ಹೇಳಿದರು ಪಂಡಿತರು.ತಕ್ಷಣ ಅವರೇ, "ನನ್ನ ವಿಷಯ ಬಿಡಿ. ನಾನಾಗ್ಲೇ ೫೦ ವರ್ಷದವನು," ಎಂದಾಗ ಮತ್ತೆ ಎಲ್ಲರೂ ನಕ್ಕರು.

ಎರಡನೆ ಪೀರಿಯಡ್‌ನಲ್ಲಿ ಪ್ರಭಾಕರ ಹಾಗೂ ಪಂಡಿತರು ಇಬ್ಬರೇ ಉಪಾಧ್ಯಾಯರ ಕೊಠಡಿಯಲ್ಲಿ ಉಳಿದರು. ಪಂಡಿತರು ಪ್ರಭಾಕರನನ್ನು ಚುಚ್ಚುತ್ತಾ "ಇದೇನ್ರೀ ಒಂದಿವ್ಸಕ್ಕೆ ಇಷ್ಟೊಂದು ಇಳಿದು ಹೋಗಿದೀರಿ'' ಅಂದರು. ವಿದ್ಯಾರ್ಥಿಗಳ ಪುಸ್ತಕಗಳನ್ನು ಸರಿಮಾಡುತ್ತಾ ಕುಳಿತಿದ್ದ ಪ್ರಭಾಕರ ಅದನ್ನು ಅತ್ತ ಒಗೆದು ನಿಟ್ಟುಸಿರು ಬಿಡುತ್ತಾ ಪಂಡಿತರ ತೀರಾ ಸನಿಹಕ್ಕೆ ಬಂದು, "ಸಾರ್ ನೀವು ಹಿರಿಯರು, ಏನೂ ತಿಳ್ಕೊಳ್ಳಲ್ಲಾಂದ್ರೆ ನಿಮ್ಮಿಂದ ಒಂದು ಸಹಾಯವನ್ನಪೇಕ್ಷಿಸ್ತೀನಿ," ಅಂದ. ಪಂಡಿತರು, "ಅಂಥಾದ್ದೇನಪ್ಪ, ನನ್ನಿಂದ ನಿಮಗೆ ಸಹಾಯ,'' ಎಂದು ಕೇಳಿದರು. "ಸಾರ್ ಮೋಡುಗೆ ಮುದ್ವೆ ಆಗಿದೆಯೋ ಇಲ್ಲೋ ಕಾಣೆ ಅವರು ಇಷ್ಟಪಟ್ರೆ ನಾನು ಅವರನ್ನ ಮದ್ವೆ ಆಗ್ತೀನಿ. ನೀವೇನಾದ್ರೂ ಮಾಡಿ ನನ್ನ ಮೇಲೆ ದಯೆಯಿಟ್ಟು ಸ್ವಲ್ಪ ಸಂಧಾನ ಮಾಡ್ಬೇಕು. ನಿಮ್ಮಗಾಂತ ತಿಳ್ಕೊಳ್ಳಿ ಸಾರ್ ನನ್ನನ್ನ," ಅಂದ. "ನೀವು ವರದಕ್ಷಿಣೆ ಕೇಳ್ತೀರೇನೋ' ತಮಾಷೆ ಅಂದರು ಪಂಡಿತರು. ಅಷ್ಟರಲ್ಲಿ ಎಂ. 'ಸಿ.' ಅವರು ಅಲ್ಲಿಗೆ ಬಂದರು. "ಏನ್ರಿ ವರದಕ್ಷಿಣೆ ವಿಷಯ ಮಾತಾಡ್ತಾ ಇದೀರಿ. ಏನಾದ್ರೂ ಪ್ರಭಾಕರಗೆ ಹೆಣ್ಣು ಗೊತ್ತಾಗಿದೆಯೋ?" ಎಂದರು. "ಇಲ್ಲಾರೀ. ಇವತ್ತಿನ ಪೇಪರ್‌ನಲ್ಲಿ ವರದಕ್ಷಿಣೆ ಮುಟ್ಟೊಲ್ಲಾಂತ ಉತ್ತರ ಪ್ರದೇಶದ ೫೦೦೦ ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದ ವಿಚಾರ ಬಂದಿತ್ತು. ಆ ಬಗ್ಗೆ ಮಾತಾಡ್ತಾ ಇದ್ವಿ,'' ಎಂದರು ಪಂಡಿತರು. ಅದಕ್ಕೆ 'ಸಿ' ಅವರು, ''ಆ ಪ್ರದೇಶದಲ್ಲೇನು ಈ ಪ್ರದೇಶದಲ್ಲೂ ಇದಾರೆ ಅಂಥೋರು ಒಳ್ಳೆ ನಮ್ಮ ಮೋಡುನೋರಂಥ ಹೆಣ್ಣು ಸಿಕ್ಕಿದರೆ. ಅಲ್ವೇನ್ರೀ ಪ್ರಭಾಕರ", ಎನ್ನುತ್ತಾ ಸೀಮೆ ಸುಣ್ಣ ತೆಗೆದುಕೊಂಡು ಹೊರಟು ಹೋದರು. "ಸಾರ್ ಇದನ್ನ ನೀವು ತುಂಬಾ ಸೀರಿಯಸ್ಸಾಗಿ ತಗೋಬೇಕು", ಎಂದು ಅಂಗಲಾಚಿದ ಪ್ರಭಾಕರ. "ಓಹೋ!, ನೀವೇನು ಪುಂಡರೀಕನೋ ಮಹಾಶ್ವೇತೆಗಾಗಿ ಪ್ರಾಣಬಿಡೋಕ್ಕೆ." ಅಂದರು ಪಂಡಿತರು. "ಖಂಡಿತ ಹಾಗೆ ತಿಳ್ಕೊಳ್ಳಿ ಸಾರ್." "ಅದ್ಸರಿ ಆಕೆ ಏನಾದ್ರೂ ನನ್ನ ಮುಖಕ್ಕೆ ಮಂಗಳಾರತಿ ಎತ್ತಿದರೆ?" ಪಂಡಿತರು ಸಂಶಯವ್ಯಕ್ತಪಡಿಸಿದರು. "ಇಲ್ಲ ಸಾರ್ ಖಂಡಿತ ಹಾಗೆ ಮಾಡಲಾರರು." ಅಷ್ಟು ಹೊತ್ತಿಗೆ ಗಂಟೆ ಹೊಡೆಯಿತು.

ನಮ್ಮ ಶಾಲೆಯ ಉಪಾಧ್ಯಾಯರುಗಳಲ್ಲಿ ಇಬ್ಬರೇ ಬ್ರಹ್ಮಚಾರಿಗಳು. ಒಬ್ಬರು ಸೈನ್ಸ್ ಉಪಾಧ್ಯಾಯ ಪ್ರಭಾಕರ. ಇನ್ನೊಬ್ಬರು ಆರ್ಟ್ಸ್ ಅಧ್ಯಾಪಕ ಮಂಜುನಾಥ.

ಸುಶೀಲಾ ರಜ ಮುಗಿಸಿ ಹಿಂದಿರುಗಿದಳು. ತಮ್ಮನನ್ನು ಕರೆದುಕೊಂಡು ಬಂದು ಶಾಲೆಗೆ ಸೇರಿಸಿದಳು. ಅವಳು ಶಾಲೆಗೆ ಬಂದನಂತರ ಶಾಲೆ ಕಂಗೊಳಿಸಿತು. ವಿದ್ಯಾರ್ಥಿ–ವಿದ್ಯಾರ್ಥಿನಿ-

ಯುರಲ್ಲಿ ನವಚೇತನ ಸಂಚಾರವಾಯಿತು; ತಾಲೂಕು ಮಟ್ಟದ ದಸರಾ ಕ್ರೀಡಾ ಸ್ಪರ್ಧೆಗಳು ನಡೆದವು. ಸುಶೀಲಾಳ ಪರಿಶ್ರಮದಿಂದ ನಮ್ಮ ಶಾಲೆಗೆ ಗೆಲುವು ಬಂದಿತು. ನಮ್ಮ ಹುಡುಗಿಯರು ಖೋ-ಖೋ, ಥ್ರೋ ಬಾಲ್, ರಿಂಗುಗಳಲ್ಲಿ ಜಯ ಪಡೆದರು. ಅನಂತರ ಜಿಲ್ಲಾ ಮಟ್ಟದಲ್ಲೂ ಟೀಮ್ ಪ್ರಶಸ್ತಿ ಸಿಕ್ಕಿತು. ರಾಷ್ಟ್ರಗೀತೆ ಸ್ಪರ್ಧೆಯಲ್ಲಿ ನಮ್ಮ ಶಾಲೆಯ ಹುಡುಗಿಯರೇ ಗೆದ್ದು ಬಹುಮಾನಗಳನ್ನು ಪಡೆದರು. ಪ್ರಾರ್ಥನೆ ಮಾಡುವ ಜಾಗದಲ್ಲಿ ಒಂದು ಬೆಂಚ್ ಹಾಕಿ ಅದರ ಮೇಲೆ ೧ ಶೀಲ್ಡ್, ೮-೧೦ ಕಪ್‌ಗಳನ್ನು ಸಾಲಾಗಿ ಇಟ್ಟು ಪ್ರದರ್ಶಿಸಲಾಯಿತು. ಸುಶೀಲಾಳ ಮುಖದ ಮೇಲೆ ಹೆಮ್ಮೆಯ ಭಾವವೇಯಿತ್ತು.

ನಮ್ಮ ಶಾಲೆಯ ಹುಡುಗ ಹುಡುಗಿಯರಿಗೆ ಸಮವಸ್ತ್ರ ಹಾಕಿಕೊಳ್ಳಲು ಮುಖ್ಯೋಪಾಧ್ಯಾಯರಿಂದ ಆಜ್ಞೆ ಬರಲು ಸುಶೀಲಾ ಕಾರಣ. ಬಡವರಿಗೆ ವಿದ್ಯಾರ್ಥಿ ಸಂಘದಿಂದ ಸಮವಸ್ತ್ರ ಹೊಲಿಸಿ ಕೊಡಲು ಮೀಟಿಂಗ್‌ನಲ್ಲಿ ಬಲವಾಗಿ ವಾದಿಸಿ ಗೆದ್ದಳು.

ಮಂಜುನಾಥ ನಮ್ಮ ಶಾಲೆಯ ಹಳೆಯ ಶಿಷ್ಯ. ಅವರ ಗುರುಗಳ ಪೈಕಿ ಪಿ. ಇ. ಟೀಚರ್ ಒಬ್ಬರು. ಮಂಜುನಾಥ ಪಿ. ಇ. ಟೀಚರ್ ಮನೆಗೆ ಹೋದಾಗ ಅವರು "ಬಾಪ್ಪ; ಇದೇನು ಚೋರ ದರ್ಶನ" ಎಂದರು. ಮಂಜುನಾಥ ಕುಳಿತು, "ಸಾರ್ ನೀವು ನನ್ನ ಗುರುಗಳು, ಹಿತ ಚಿಂತಕರು," ಎಂದು ಪೀಠಿಕೆ ಹಾಕಿದ. "ನಿಮ್ಮಿಂದ ನನಗೊಂದು ಮಹೋಪಕಾರವಾಗ್ಬೇಕಾಗಿದೆ. ಅಲ್ದೆ ನಿಮ್ಮ ಹತ್ರ ಅಲ್ದೆ ಇನ್ನು ಯಾರ ಹತ್ರ ನನ್ನ ಕಷ್ಟ ತೋಡ್ಕೊಳ್ಳಿ ಸಾರ್," ಅಂದ. "ನಿನ್ನ ಪಿಂಡ ನಿನ್ಗೇನೋ ಬಂದಿದೆ ಕಷ್ಟ. ಒಳ್ಳೇ ಕೊಬ್ಬಿದ ಗೂಳಿ ಹಾಗಿದೀಯ." ಪಿ. ಇ. ಟಿ. ಉವಾಚ. "ಅದೇ ಬಂದಿರೋ ತಾಪತ್ರಯ," ಅಂದ ಮಂಜನಾಥ. "ಅದೇನು ಬೊಗಳು" ಪಿ. ಇ. ಟಿ. ಕೇಳಿದರು. "ನೋಡಿ ಸಾರ್ ನಮ್ಮ ಮೇಡಂ ಯಾವ ಜಾತಿಯವರೇ ಆಗಿರ್ಲಿ, ನಾನು ಅವರನ್ನ ಮದ್ವೇ ಆಗ್ತೀನಿ. ಅವರು ಇದಕ್ಕೆ ಒಪ್ಪುವಂತೆ ಮಾಡುವುದೇ ನಿಮ್ಮ ಸಹಾಯ." "ಹಾಗೋ, ಪರವಾಗಿಲ್ಲ. ಒಳ್ಳೇದಕ್ಕೆ ಏಟು ಹಾಕಿದೀಯಾ. ಆದ್ರೂ ಮೊದ್ಲೇ ನಂಗೂ ಮೇಡಂಗೂ ಅಷ್ಟಕ್ಕಷ್ಟೇ ಅನ್ನೋದು ನಿಂಗೂ ಗೊತ್ತಿದೆ. ಈಗ ನಾನು ಆಕೆ ಹತ್ತಿರ ಈ ವಿಚಾರ ಎತ್ತಿ ಮುಖಕ್ಕೆ ಮಂಗಳಾರತಿ ಮಾಡ್ಸಿಕೊಳ್ಳಲೇ." "ಸಾರ್, ಸಾರ್, ದಯವಿಟ್ಟು ಹಾಗನ್ಬೇಡಿ. ಬೇರೆ ರೀತಿ ಪ್ರಸ್ತಾಪ ಮಾಡಿ ಅವರ ಅಭಿಪ್ರಾಯ ತಿಳ್ಕೊಳ್ಳಿ." "ನೋಡೋಣ ಕಣೋ ಚಂಡಾಲಶಿಷ್ಯ." ಎಂದು ಆಶೀರ್ವದಿಸಿದರು.

ಪಂಡಿತರು ಮೇಡಂ ಮನೆ ಹತ್ರ ಹೋದಾಗ ರಾತ್ರಿ ೭ ಗಂಟೆ. ಒಳಗಿನಿಂದ ತಂಬೂರಿ ನಾದದ ಜೊತೆಗೆ ದೇವರ ನಾಮದ ಮಧುರ ಗಾಯನ ಕೇಳಿಬರುತ್ತಿತ್ತು. ಪಂಡಿತರು ಆ ಗಾಯನ ಮುಗಿಯುವ ವರೆಗೂ ಹೊರಗಡೆ ನಿಂತಿದ್ದು ಅದು ಮುಗಿದ ನಂತರ ಕದ ತಟ್ಟಿದರು. ಅವಳ ತಮ್ಮ ಕದ ತೆರೆದು, "ಅಕ್ಕ, ಎಸ್. ಎಸ್. ಬಂದಿದಾರೆ," ಎಂದ. ತಕ್ಷಣ ಒಳಗಡೆಯಿಂದ ಜಿಂಕೆಯಂತೆ ಬಂದ ಸುಶೀಲಾ, "ಬನ್ನಿ ಸಾರ್ ಬನ್ನಿ. ಅಪರೂಪವಾಗಿ ಬಂದ್ಬಿಟ್ರಿ," ಎಂದು ಸ್ವಾಗತಿಸಿದಳು. ಪಂಡಿತರು, "ಇಲ್ಲೇ H. M. ಮನೆಗೆ ಬಂದಿದ್ದೆ. ನಿಮ್ಮ ಮನೇನೂ ಇಲ್ಲೇ ಇದೇಂತ ಅಂದ್ರು. ಹಾಗೇ ನೋಡ್ಕೊಂಡು ಹೋಗೋಣ ಅಂತ ಬಂದೆ. ನಿಮಗೇನೂ ತೊಂದ್ರೆ ಆಗ್ಲಿಲ್ಲ ತಾನೇ?" ಎಂದು ಒಂದು ಬುರುಡೆ ಬಿಟ್ಟರು. ಸುಶೀಲಾ ಹೇಳಿದಳು, "ಏನೂ ಇಲ್ಲಾ, ಸಾರ್" ಎಂದು ಹೇಳಿ ತಮ್ಮನನ್ನು ಬಾಳೇಹಣ್ಣು ತರಲು ಕಳುಹಿಸಿದಳು. ಪಂಡಿತರು ಹೇಳಿದರು, "ಮೇಡಂ, ನಿಮ್ಮ ಹತ್ರ ಒಂದು ವಿಚಾರ ಹೇಳ್ಬೇಕಾಗಿತ್ತು." "ಸಂಕೋಚವಿಲ್ಲದೆ ಹೇಳಿ ಸಾರ್. ತಂದೆಗೆ ಮಗಳ ಹತ್ರ ಮಾತಾಡಕ್ಕೆ ಸಂಕೋಚವೇಕೆ?" ಪಂಡಿತರು ಮೊದಲು ಸುಶೀಲಾಗೆ ಮದುವೆಯಾಗಿಲ್ಲವೆಂಬುದನ್ನು ಖಚಿತ ಮಾಡಿಕೊಂಡು ಅನಂತರ ಪ್ರಭಾಕರನ ವಿಚಾರವನ್ನು ಸೂಕ್ಷ್ಮವಾಗಿ ಹೇಳಿದರು. ಅನಂತರ ಸುಶೀಲಾ ಹೇಳಿದಳು, "ಎಲ್ಲದಕ್ಕೂ

ನಮ್ಮ ತಂದೆ-ತಾಯಿಗಳ ಒಪ್ಪಿಗೆ ಮುಖ್ಯ. ಅವರಿಗೆ ಪತ್ರ ಬರೆದು ತಿಳಿದುಕೊಂಡು ಆ ಮೇಲೆ ಮಾತನಾಡೋಣ," ಎಂದಳು.

ರಾತ್ರಿ ೯ ಗಂಟೆಗೆ ಪಿ. ಇ. ಉಪಾಧ್ಯಾಯರು ಸುಶೀಲಾಳ ಮನೆಗೆ ಬಂದರು. ಆಗ ತಾನೇ ಊಟ ಮುಗಿಸಿ ಹಾಸಿಗೆ ಹಾಸಲು ಸಿದ್ಧಳಾಗುತ್ತಿದ್ದಳು. ಉಪಾಧ್ಯಾಯರನ್ನು ನೋಡುತ್ತಲೇ ಒಳಕ್ಕೆ ಆಹ್ವಾನಿಸಿದಳು. ಅವರು ಅವಳನ್ನು ಬಾಯಿತುಂಬಾ ಹೊಗಳಿದರು. ಅವಳು ಈ ಊರಿಗೆ ಬಂದ ಮೇಲೆ ಶಾಲೆಗೆ ತುಂಬಾ ಕೀರ್ತಿ ಬಂದಿದೆ ಎಂದರು. ಸುಶೀಲಾ ಮುಗುಳ್ನಗುತ್ತಾ ಆಲೈಸುತ್ತಿದ್ದಳು. ಕೊನೆಗೆ ಅವರು, "ಮೇಡಂ, ಒಂದು ವಿಷಯ," ಎಂದು ಪ್ರಾರಂಭಿಸಿ ಮಂಜುನಾಥನ ವಿಷಯವನ್ನು ತಿಳಿಸಿದರು. ಅವಳಿಗೆ ತುಂಬಾ ನಗು ಬಂತು. ಆದರೆ ಪಂಡಿತರಿಗೆ ಮಾತು ಕೊಟ್ಟಿದ್ದರಿಂದ ಪ್ರಭಾಕರನ ವಿಷಯ ಇವರಿಗೆ ಹೇಳಲಿಲ್ಲ. ಪಿ. ಇ. ಟೀಚರ್ ಏಳುತ್ತಾ "ನೋಡಿ ಮೇಡಂ, ಈ ವಿಷಯ ಯಾರಿಗೂ ಹೇಳ್ಬೇಡಿ ದಯವಿಟ್ಟು," ಎಂದು ಹೇಳಿ ಹೊರಬಿದ್ದರು.

ಮೂರನೇ ದಿನ ಶಾಲೆಗೆ ಬಂದಾಗ ಪ್ರಭಾಕರ ಮತ್ತು ಮಂಜುನಾಥರ ಮುಖ ನೋಡುತ್ತಲೇ ಸುಶೀಲಾಗೆ ನಗು ಬುಗ್ಗೆ-ಬುಗ್ಗೆಯಾಗಿ ಬರುತ್ತಿತ್ತು. ಅವರಿಬ್ಬರೂ ಸಹ ಕದ್ದು-ಕದ್ದು ಅವಳ ಮುಖ ನೋಡುವರು. ಸುಶೀಲಾ ಪ್ರಭಾಕರನೊಂದಿಗೆ ಮಾತನಾಡುತ್ತಿರುವಾಗ ಮಂಜುನಾಥನಿಗೆ ಹೊಟ್ಟೆ ತೊಳಸುತ್ತಿತ್ತು. ಮಂಜುನಾಥನ ಜೊತೆ ನಗುತ್ತಾ ಪಾಠದ ಬಗ್ಗೆ ಚರ್ಚೆ ಮಾಡುವಾಗ ಪ್ರಭಾಕರನ ಹೊಟ್ಟೆ ಚುರುಗುಟ್ಟುತ್ತಿತ್ತು.

ಈ ಮಧ್ಯೆ ನಮ್ಮೂರಿನಲ್ಲಿ ಜೆ. ಸಿ. ಆಶ್ರಯದಲ್ಲಿ ಸಾರ್ವಜನಿಕವಾಗಿ ಒಂದು ಸಮಾರಂಭ ನಡೆಯಿತು. ಶಾಲೆಯ ಹುಡುಗಿಯರನ್ನು ಚರ್ಚಾಸ್ಪರ್ಧೆಗೆ ತಯಾರು ಮಾಡಿದಳು ಸುಶೀಲಾ. ಕೊನೆಯ ದಿನ ಸಾರ್ವಜನಿಕ ಸಂಗೀತ ಸ್ಪರ್ಧೆಯಲ್ಲಿ ಸ್ವತಃ ತಾನೇ ಭಾಗವಹಿಸಿದಳು. ಹೀಗೆ ಭಾಗವಹಿಸಲು ಪ್ರಭಾಕರ, ಮಂಜುನಾಥರೇ ಕಾರಣ. ಅವಳು ಮೈಕ್ ಮುಂದೆ ನಿಂತಾಗ ನಮ್ಮ ಶಾಲೆಯ ಹುಡುಗ ಹುಡುಗಿಯರು ಚಪ್ಪಾಳೆ ತಟ್ಟಿದರು. ಅವಳು ಹೇಳಿದ ಭಾವಗೀತೆಗಳು ಎಲ್ಲರ ಹೃದಯಗಳನ್ನು ತಣಿಸಿದವು. ಅವಳು ಹಿಂದಕ್ಕೆ ಹೊರಟಾಗ 'ಒನ್ಸ್‌ಮೋರ್' ಕೂಗುಗಳು ಬರತೊಡಗಿದವು. ಆಗ ಸುಶೀಲಾ, 'ನೀಲಾಗಸದಿ ಮೂಡಿ ಬಾ ಚಂದಿರ' ಎಂಬ ಬಿ. ಎಸ್. ಸ್ವಾಮಿಯವರ ಕವನವನ್ನೂ, 'ಬನದಲಿ ದಿನ ದಿನ ಬಣ್ಣದ ಹೂಗಳು ನಿನ್ನಯ ಚಲುವನು ಸಾರುತಿದೆ' ಎಂಬ ಕುವೆಂಪುರವರ ಕವನವನ್ನೂ ತನ್ಮಯತೆಯಿಂದ ಹೇಳಿ ಆನಂದಗೊಳಿಸಿದಳು.

ಪಂಡಿತರಿಗೆ ಕಾಣದಂತೆ ಪಿ. ಇ. ಉಪಾಧ್ಯಾಯರು, ಅವರಿಗೆ ಗೊತ್ತಾಗದಂತೆ ಪಂಡಿತರೂ ಸುಶೀಲಾಳನ್ನು ಮದುವೆಯ ವಿಚಾರವಾಗಿ ಪದೇ ಪದೇ ಕೇಳುತ್ತಿದ್ದರು. ಸುಶೀಲಾ ಹೇಳಿದಳು, "ಊರಿಂದ ಪತ್ರ ಬಂದಿದೆ. ನಾಳಿದ್ದು ನಮ್ಮ ತಂದೆ ಬರ್ತಾರೆ," ಎಂದಳು. ಇದನ್ನು ಕೇಳಿ ಪ್ರಭಾಕರನಿಗೂ ಮಂಜುನಾಥನಿಗೂ ಹಿಡಿಸಲಾರದಷ್ಟು ಆನಂದವಾಯಿತು. ಸುಶೀಲಾ ತನಗೇ ಮಾಲೆ ಹಾಕುತ್ತಿರುವಂತೆ ಕನಸು ಕಂಡರು.


ಒಂದು ವಾರದ ನಂತರ ಸುಶೀಲಾಳ ತಂದೆ ಬಂದರು. ಸುಶೀಲಾ ಅವರನ್ನು ಶಾಲೆಗೆ ಕರೆತಂದು ಮುಖ್ಯೋಪಾಧ್ಯಾಯರಿಗೆ ಪರಿಚಯ ಮಾಡಿಸಿದಳು. ಗಂಟೆ ಆಯಿತು. ಪ್ರಾರ್ಥನೆ ಮುಗಿಯಿತು. ಎಲ್ಲರೂ ತಮ್ಮ ತಮ್ಮ ತರಗತಿಗಳಿಗೆ ಹೋದರು. ಪ್ರಭಾಕರ ಮುಖ್ಯೋಪಾಧ್ಯಾಯರ ಕೋಣೆಗೆ ಬಂದಾಗ ಅವರು ಸುಶೀಲಾಳ ತಂದೆಗೆ ಪ್ರಭಾಕರನ ಪರಿಚಯ ಮಾಡಿಕೊಟ್ಟರು. ಸುಶೀಲಾಳ ತಂದೆ ಪ್ರಭಾಕರನ ಕೈ ಕುಲುಕುತ್ತಾ, "ಓಹೋ ಇವರೇನೋ ಪ್ರಭಾಕರ. ನಮ್ಮ ಸುಶೀಲಾ ಇವರ ವಿಷಯ ಹೇಳಿದ್ದಳು," ಅಂದರು. ಪ್ರಭಾಕರನಿಗೆ ಸ್ವರ್ಗವೇ ಸಿಕ್ಕಿದಂತಾಯ್ತು. ಅವನು ಅಲ್ಲಿಂದ ಹೊರಕ್ಕೆ ಬಂದಾಗ ನಂದನವನದಲ್ಲಿ ಓಲಾಡುತ್ತಿರುವ

ಅನುಭವವಾಯಿತು. ಪ್ರಭಾಕರ ಮುಖ್ಯೋಪಾಧ್ಯಾಯರ ಕೋಣೆಗೆ ಹೋದದ್ದು, ಅಲ್ಲಿಂದ ಆನಂದದಿಂದ ಹಿಂತಿರುಗುತ್ತಿದ್ದುದನ್ನು ಮಂಜನಾಥ ತರಗತಿಯೊಳಗಿಂದಲೇ ನೋಡಿದ. ಏನೋ ಸಣ್ಣ ತೆಗೆದುಕೊಳ್ಳುವ ನೆಪದಲ್ಲಿ ತಾನೂ ಮುಖ್ಯೋಪಾಧ್ಯಾಯರ ಕೋಣೆಗ್ಗೆ ಹೋದ. ಮುಖ್ಯೋಪಾಧ್ಯಾಯರು, "ನೋಡಿ ಇವರು ಮಂಜುನಾಥ. ಅಸಿಸ್ಟೆಂಟ್ ಮಾಸ್ಟರ್," ಎಂದು ಸುಶೀಲಾಳ ತಂದೆಗೆ ಪರಿಚಯ ಮಾಡಿಕೊಟ್ಟರು. ಸುಶೀಲಾಳ ತಂದೆಯವರು ಅವನಿಗೆ ಕೈ ಮುಗಿದು, "ನನ್ನ ಮಗಳು ನಿಮ್ಮ ವಿಚಾರ ಆಗಾಗ್ಗೆ ಹೇಳ್ತಾ ಇದ್ದಳು," ಎಂದರು. ಮಂಜುನಾಥನಿಗೆ ಪನ್ನೀರಿನ ನದಿಯಲ್ಲಿ ನಿಧಾನವಾಗಿ ತೇಲುತ್ತಿರುವಂತೆ ಭಾಸವಾಯಿತು.

ಮುಖ್ಯೋಪಾಧ್ಯಾಯರು ರಿಂಗ್ ಮಾಡಿ ಫಸ್ಟ್ ಅಸಿಸ್ಟೆಂಟ್ ಕರೆಸಿಕೊಂಡರು. ಅವರು ಬಂದಾಗ, "ನೋಡಿ ಇವ್ರೇ, ನಮ್ಮ ಮೇಡಂ ತಂದೆ ಇವರು," ಅಂದಾಗ ಇಬ್ಬರೂ ಪರಸ್ಪರ ಕೈ ಕುಲಕಿದರು. "ನಮ್ಮ ಮೇಡಂ ಕೆಲಸಕ್ಕೆ ರಾಜಿನಾಮೆ ಕೊಟ್ಟಿದಾರೆ. ನಾಳೆ ತಂದೆ ಜೊತೇಲಿ ಊರಿಗೆ ಹೋಗ್ತಾರಂತೆ. ನೀವು 'ಸೆಂಡ್ ಆಫ್' ಏರ್ಪಾಟು ಮಾಡಿ," ಎಂದರು. ಎ॥ 'ಎ'ಗೆ ಷಾಕ್ ಆದಂತಾಯಿತು. ಅವರು, "ಏಕೆ ಸಾರ್," ಎಂದರು ಗಾಬರಿಯಿಂದ. ಸುಶೀಲಾಳ ತಂದೆ ಹೇಳಿದರು "ಏನೂ ಗಾಬರಿಯಿಲ್ಲ. ಅವಳಿಗೆ ಮದುವೆ ಗೊತ್ತಾಗಿದೆ. ನನ್ನ ಭಾವೀ ಅಳಿಯ ಅಮೇರಿಕಾದಿಂದ ಬಂದಿದಾನೆ. ಲಗ್ನ ಮಾಡಿಕೊಂಡು ಅವಳು ಅವನ ಜೊತೆಯಲ್ಲೇ ಹೋಗ್ತಾಳೆ ಅಷ್ಟೆ. ಅದಕ್ಕಾಗಿ ಅವಳು ಕೆಲಸ ಬಿಡ್ತಾಳೆ."

ತಕ್ಷಣ ಮೆಮೋ ಹೋಯಿತು. ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಭೆಸೇರಿದರು. ಹುಡುಗಿಯರು ಅತ್ತು ಅತ್ತು ಕಣ್ಣು ಊದಿಸಿಕೊಂಡರು. ಹುಡುಗರ ಮುಖದ ಮೇಲೆ ದುಃಖದ ಛಾಯೆ ಆವರಿಸಿತು. ಮಂಜುನಾಥ, ಪ್ರಭಾಕರರ ಪಾಡಂತೂ ಹೇಳತೀರದು. "ಸುಮ್ನೆ ಇರಪ್ಪ. ನಾನೇ ಖುದ್ದು ಹಾಸನಕ್ಕೆ ಹೋಗಿ ಸೆಟ್ಲ್ ಮಾಡ್ಕೊಂಡು ಬರ್ತೀನಿ. ಯಾಕೆ ಒದ್ದಾಡ್ತೀಯಾ?" ಎಂದು ಪಂಡಿತರು ಪ್ರಭಾಕರನಿಗೆ ಹೇಳುತ್ತಿದ್ದರು. ಆದರೆ ಮುಖ್ಯೋಪಾಧ್ಯಾಯರು ಅವಳ ಮದುವೆ ಗೊತ್ತಾಗಿದೆ ಎಂದು ಹೇಳಿದಾಗ ಒಂದು ಹೆಬ್ಬಂಡೆ ಅವರಿಬ್ಬರ ತಲೆ ಮೇಲೆ ಬಿದ್ದಂತಾಯಿತು.

ಬೀಳ್ಕೊಡುವ ಸಮಾರಂಭ ಸುರುವಾಯಿತು. ಹುಡುಗಿಯರ ಕಡೆ ಪ್ರಾರ್ಥನೆ ಮಾಡುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಎ. 'ಎ' ಸ್ವಾಗತ ಮಾಡಿದರು. ಪಂಡಿತರು, ಮಾತನಾಡಿದರು. "ನಮ್ಮ ಮಾಮರದ ಕೋಗಿಲೆ ಇನ್ನು ಮುಂದೆ ಇಲ್ಲಿರೋಲ್ಲ. ದೂರ ಬಹು ದೂರ ಹಾರಿಹೋಗುತ್ತೆ. ಅದರ ಮಧುರ ಕಂಠ ಮಾತ್ರ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತದೆ," ಎಂದು ಹೇಳಿ ಸ್ವಲ್ಪ ತಡೆದು ಒಂದು ಆಶು ಕವಿತೆಯನ್ನು ಹೇಳಿಬಿಟ್ಟರು. 'ಮಲ್ಲಿಗೆಯ ಬನದ ಮೇಲಿಂದ, ಬೀಸಿತೊಂದು ಮಾರುತ ಮಂದ, ಅದಿಲ್ಲದಿದ್ದರೆ ಬಹು ಚಂದ,



"ಅವನು ಶುದ್ಧ ಅಯೋಗ್ಯ ಕಣಯ್ಯ; ಕಳ್ಳಕೇಡಿಮ. ಮೊನ್ನೆ ಒಂದು ಕೊಲೇನೂ... ಹಜಾಮ."

ಹೋಯಿತೀಗ ನಮ್ಮಾನಂದ,' ಎಂದು ಹೇಳಿ ಆಶೀರ್ವಾದ ಮಾಡಿ ಮುಗಿಸಿದರು. ಹುಡುಗ-ಹುಡುಗಿಯರಲ್ಲಿ ಕೆಲವರು ಮಾತನಾಡಿದರು. ಕೆಲವರು ಮಾತನಾಡಲು ಬಂದು ಕಂಠ-ಕಣ್ಣುಗಳು ತುಂಬಿಬಂದು ಹಿಂದಕ್ಕೆ ಹೋದರು. ಮುಖ್ಯೋಪಾಧ್ಯಾಯರು ಮಾತನಾಡಿದರು. "ನಮ್ಮ ಮೇಡಂ ಇತರರು ೬ ವರ್ಷಗಳಲ್ಲಿ ಮಾಡಲಾಗದಿದ್ದ ಕಾರ್ಯವನ್ನು ೬ ತಿಂಗಳಲ್ಲಿ ಮಾಡಿ ತೋರಿಸಿದರು; ಪಾಠ ಹೇಳುವುದಷ್ಟೇ ಉಪಾಧ್ಯಾಯರ ಕೆಲಸವಲ್ಲ. ವಿದ್ಯಾರ್ಥಿಗಳಲ್ಲಿ ಶಿಸ್ತು, ಅಚ್ಚುಕಟ್ಟುತನ, ಕ್ರೀಡಾಸಕ್ತಿ, ಸಮಯನಿಷ್ಠೆ ಇವುಗಳೂ ಬರುವಂತೆ ಮಾಡುವುದೇ ಮುಖ್ಯ. ನಮ್ಮ ಮೇಡಂ ಇದನ್ನೆಲ್ಲಾ ಕಲಿಸಿ ಆದರ್ಶ ಉಪಾಧ್ಯಾಯಿನಿಯಾದರು. ಅವರು ಕೆಲಸ ಬಿಡುತ್ತಿರುವುದು ನಮ್ಮ ಇಲಾಖೆಗೆ ಅವರಲ್ಲೂ ನಮ್ಮ ಶಾಲೆಗೆ ದೊಡ್ಡ ನಷ್ಟ. ಅವರು ವಿವಾಹಿತರಾಗಿ ಪತಿಯೊಡನೆ ಅಮೇರಿಕಾಕ್ಕೆ ಹೋಗುವರೆಂದು ಅವರ ತೀರ್ಥರೂಪರವರು ಹೇಳಿದರು. ಅವರಿಗೆ ಭಗವಂತನು ಎಲ್ಲ ವಿಧವಾದ ಮಂಗಳಗಳನ್ನುಂಟುಮಾಡಲಿ."

ಸುಶೀಲಾ ಮಾತನಾಡಲು ಎದ್ದಾಗ ಒಂದು ನಿಮಿಷ ಮಾತೇ ಹೊರಡಲಿಲ್ಲ ಕಣ್ಣುಗಳು ತುಂಬಿಬಂದವು. ಕಂಠ ಬಿಗಿದುಕೊಂಡಿತು. ಕೊನೆಗೆ ಕಣ್ಣೊರೆಸಿಕೊಂಡು ಹೇಳಿದರು, "ಇಂಥ ಮಕ್ಕಳನ್ನು ಬಿಟ್ಟು ಹೋಗಲು ನನಗೂ ತುಂಬಾ ದುಃಖವಾಗ್ತಾ ಇದೆ. ಹೆಚ್ಚು ಹೇಳಲು ಆಗುತ್ತಿಲ್ಲ. ನೀವೆಲ್ಲಾ ಶಿಸ್ತಿನಿಂದ ನಡೆದುಕೊಳ್ಳಿ, ಚನ್ನಾಗಿ ಓದಿ ಬುದ್ಧಿವಂತರಾಗಿರಿ. ನಿಮಗೆಲ್ಲಾ ಭಗವಂತನು ಒಳ್ಳೆಯದು ಮಾಡಲಿ," ಎಂದು ಕುಳಿತಳು, ಮತ್ತೆ ಎದ್ದು ನಿಂತು, "ನಾನು ಏನಾದರೂ ತಪ್ಪು ಮಾಡಿದ್ದರೆ ಉಪಾಧ್ಯಾಯರು ಕ್ಷಮಿಸಬೇಕು. ಮುಖ್ಯವಾಗಿ ಎಂ. ಪ್ರಭಾಕರ ಹಾಗೂ ಎಂ. ಮಂಜುನಾಥ ಮತ್ತು ಅವರ ರಾಯಭಾರಿಗಳಾದ ಮಾನ್ಯ ಪಂಡಿತರನ್ನೂ ಮಾನ್ಯ ಪಿ. ಇ. ಟೀಚರರನ್ನೂ ನಿರಾಶೆಗೊಳಿಸಿದ್ದೇನೆ. ಅವರೆಲ್ಲಾ ನನ್ನನ್ನು ಕ್ಷಮಿಸುವರೆಂದು ನಂಬಿರುತ್ತೇನೆ," ಎಂದು ಮುಗಿಸಿದಳು. ಪರಸ್ಪರರ ಗುಟ್ಟು ಬಯಲಾದುದಕ್ಕೆ ಮುಖ-ಮುಖ ನೋಡಿಕೊಡರು. ಎರಡು ಪಾರ್ಟಿಯವರೂ ವಿದ್ಯಾರ್ಥಿಗಳು 'ಸಂಗೀತ-ಸಂಗೀತ' ಎಂದು ಕೂಗಿದರು. ಆಗ ಸುಶೀಲಾ, 'ನಿನ್ನೊಲುಮೆ ನಮಗಿರಲಿ ತಂದೆ' ಎಂಬ ಗೀತೆಯನ್ನು ತನ್ಮಯತೆಯಿಂದ ಹಾಡಿ ತಣಿಸಿದಳು. ಹಾರಗಳ ಸುರಿಮಳೆ ಆಯಿತು, ಶಾಲೆಯ ಕಡೆಯಿಂದ ಕಾಣಿಕೆ ಕೊಡಲಾಯಿತು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಥೋಚಿತ ನೆನಪು ಕಾಣಿಕೆಗಳನ್ನು ಕೊಟ್ಟರು,

ಬೆಳಗಿನ ೪ ಗಂಟೆ ಬಸ್ಸಿನಲ್ಲಿ ಸುಶೀಲಾ ಕುಳಿತುಕೊಂಡಾಗ ಇಡೀ ಶಾಲೆಯೇ ಅಲ್ಲಿತ್ತು. ಪ್ರಭಾಕರ ಸುಶೀಲಾ ಹತ್ತಿರ ಬಂದು,"ಮೇಡಂ ಕ್ಷಮಿಸಿ," ಎಂದು ಪೊಟ್ಟಣ ಬಿಚ್ಚಿದ. ಅದರಲ್ಲಿ ಬೆಳ್ಳಿಯ ಗಂಧದ ಬಟ್ಟಲನ್ನು ತೆಗೆದು, "ನನ್ನ ನೆನಪಿಗಾಗಿ ಇದನ್ನು ನಿಮಗೆ ಕೊಡುತ್ತಿದ್ದೇನೆ," ಎಂದು ಸುಶೀಲಾಳ ತಂದೆಯ ಕಡೆಗೆ ತಿರುಗಿ "ಸಾರ್ ಇದನ್ನು ಇವರ ಮದುವೆಯ ದಿನ ನನ್ನ ಹೆಸರಿನಲ್ಲಿ, ಓದಿಸಿಬಿಡಿ," ಎಂದು ಹೇಳಿ ಅದನ್ನು ಸುಶೀಲಾ ಕೈಗೆ ಕೊಡುತ್ತಿರುವಾಗ ಭಾವಪೂರಿತನಾದಂತೆ ಕಾಣುತ್ತಿದ್ದ. ಸುಶೀಲಾ ಅದನ್ನು ತೆಗೆದುಕೊಂಡು ಅದರೊಳಗೆ ಇರಿಸಿದ್ದ ಸಂಪಿಗೆ ಹೂವನ್ನು ಮೂಗಿಗೆ ಹಿಡಿದುಕೊಂಡಳು.

ಮಂಜುನಾಥ ಓಡೋಡಿ ಬಂದರು. ಅವರ ಕೈಲಿ ಒಂದು ಪನ್ನೀರುದಾನಿಯಿತ್ತು. ಅದನ್ನು ಸುಶೀಲಾ ಕೈಗೆ ಕೊಡುತ್ತಾ, "ಮೇಡಂ ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ. ಇದನ್ನು ನನಗಾಗಿ ಸ್ವೀಕರಿಸಿ," ಎಂದು ಹೇಳಿದ. ಅದರಲ್ಲಿ ಪನ್ನೀರು ತುಂಬಿತ್ತು. ಅದನ್ನು ಮಂಜುನಾಥನ ಮೇಲೆ ಚುಮುಕಿಸುತ್ತಾ "ಥ್ಯಾಂಕ್ಸ್" ಎಂದಳು. ಬಸ್ ಹೊರಟುಬಿಟ್ಟಿತು. ✡



ಮಕ್ಕಳ ಮಾರಕ ರೋಗಗಳು

ಡಾ. ಚಂದ್ರಶೇಖರ ಉಡುಪ

ಲಕ್ಷ್ಮಮ್ಮ ದಿನಗೂಲಿಯಿಂದಲೇ ಜೀವನ ಸಾಗಿಸುವ ಹಳ್ಳಿಗಾಡಿನ ಹೆಂಗಸು. ತನ್ನ ಹತ್ತು ವರ್ಷಗಳ ದಾಂಪತ್ಯಜೀವನದಲ್ಲಿ ಆಕೆ ಪಡೆದುದು ಹೆಣ್ಣುಗೂಸೊಂದನ್ನು ಮಾತ್ರ. ಕಂದನನ್ನು ಅತಿ ಮುದ್ದಿನಿಂದ ಸಾಕಿ ಸಲಹತೊಡಗಿದ ಆಕೆ ಮಗಳ ಶ್ರೇಯೋಭಿವೃದ್ಧಿಗಾಗಿ ಏನನ್ನು ತ್ಯಜಿಸಲೂ ಸಿದ್ಧಳಾಗಿದ್ದಳು. ಎರಡನೇ ಹುಟ್ಟುಹಬ್ಬದ ದಿನ ಸಮೀಪಿಸುತ್ತಿದೆಯೆಂದಾಗ ತನ್ನ ಕಂದನ ಕೈಕಾಲು ಮುಖವೆಲ್ಲ ಉಬ್ಬಿಕೊಳ್ಳಲಾರಂಭಿಸಿದುವು. ಲಕ್ಷ್ಮಮ್ಮನಿಗೆ ಆಶ್ಚರ್ಯ; ಜೊತೆಗೆ ಸಂತೋಷ ಬೇರೆ. ತನ್ನ ಎದೆ ಹಾಲು ಮಾತ್ರವನ್ನೇ ಇತ್ತು ಅತಿ ಮುದ್ದಿನಿಂದ ಮಗುವನ್ನು ಸಾಕಿದುದರಿಂದ ಎಷ್ಟು ಬೇಗನೇ ಉಬ್ಬಿಕೊಂಡು ಬೆಳೆಯುತ್ತಿದೆಯಲ್ಲಾ! ಹುಟ್ಟಿದ ಹಬ್ಬದ ದಿನ ಮೈತುಂಬಿ ಬೆಳೆದ ಮಗಳನ್ನು ಕಂಡು ಬಡ ನೆಂಟರಿಷ್ಟರು ಅದೆಷ್ಟು ಹಿಗ್ಗಲಿಕ್ಕಿಲ್ಲ...? ಎಂಬೀ ಸಂತಸ ಅವಳಲ್ಲಿ ಅಪಾರ! ತನ್ನ ಒಡೆಯರ ಮನೆಯ ಮಗು ಶಕ್ತಿಯುತವಾದ ಔಷಧೋಪಚಾರಗಳಿಂದ ಸಲಹಲ್ಪಟ್ಟಾಗ್ಯೂ ಇಷ್ಟೊಂದು ಉಬ್ಬಿಕೊಂಡಿಲ್ಲವಲ್ಲಾ! ಎಂಬುದು ಅವಳಲ್ಲುಂಟಾದ ಆಶ್ಚರ್ಯ ಬೇರೆ. ದಿನ ಕಳೆದಂತೆ ಅವಳ ಸಂತೋಷ ಇಳಿಯತೊಡಗಿತು. ಮಗಳು ಅನಿಯಂತ್ರಿತ ಭೇದಿಯಿಂದ ನರಳಲಾರಂಭಿಸಿದಳು. ಜೊತೆಗೆ ಎದೆಹಾಲನ್ನೂ ಸರಿಯಾಗಿ ಸವಿಯುದಾದಳು. ದೇಹ ತುಂಬಿಕೊಳ್ಳುತ್ತಲೇ ಇದ್ದುದರಿಂದ ಆಕೆ 'ಡುಮ್ಮಿ' ಎನಿಸಿಕೊಳ್ಳತೊಡಗಿದಳು. ಸಂಶಯ ಪಿಶಾಚಿ ಹಿಡಿದ ಆಕೆ ವೈದ್ಯರ ಬಳಿ ಬಂದಾಗ ತಿಳಿದ ವಿಚಾರವಿದು:- ಮಗುವಿಗೆ ಕ್ವಾಷಿಯಾರ್ಕರ್ ರೋಗ ಬಂದಿದೆ ಎಂದು.

ಕ್ವಾಷಿಯಾರ್ಕರ್

ಮಕ್ಕಳ ಆಸ್ಪತ್ರೆಗೆ ಸೇರಿಕೊಳ್ಳುವ ಶೇ. ೨೦ ರಷ್ಟು ಕ್ವಾಷಿಯಾರ್ಕರ್ ರೋಗಿಗಳಾಗಿರುತ್ತಾರೆ. ಹುಟ್ಟಿದ ನಾಲ್ಕು ತಿಂಗಳುಗಳಿಂದ ೫ ವರ್ಷಗಳೊಳಗೆ ಈ ಕಾಯಿಲೆಗೆ ಮಗು ಬಲಿಬೀಳಬಹುದು. ನಮ್ಮ ದೇಶದಲ್ಲಿ ಸರ್ವೇಸಾಮಾನ್ಯವಾಗಿ ೩ ರಿಂದ ೫ ವರ್ಷಗಳ ಒಳಗೆ ಈ ಕಾಯಿಲೆ ಕಂಡುಬರುತ್ತದೆ.

ಸಾಮಾನ್ಯರ ಅಭಿಪ್ರಾಯದಲ್ಲಿ ಕಾಯಿಲೆ ಬಿದ್ದಾಗ ದೇಹ ವಿಪರೀತ ಸೊರಗಿಕೊಂಡಿದ್ದು, ಶಕ್ತಿಹೀನತೆಯಿಂದಾಗಿ ನರಳುವ ಚಿತ್ರ ಕಣ್ಣ ಮುಂದೆ ಬರುತ್ತದಲ್ಲವೇ? ಆದರೆ ಕ್ವಾಷಿಯಾರ್ಕರ್ ಮಕ್ಕಳ ಮಾರಕ ರೋಗವಾದಾಗ್ಯೂ ಇಲ್ಲಿ ದೇಹ ಕೃಶವಾಗುತ್ತ ಹೋಗುವುದಿಲ್ಲ. ಮಗುವಿನ ಕೈಕಾಲು, ಮುಖ, ಹೊಟ್ಟೆ ಇವೆಲ್ಲಾ ಊದಿಕೊಂಡು ಪ್ರಥಮ ನೋಟಕ್ಕೆ ದಪ್ಪನಾಗಿಯೇ ಕಾಣಿಸುತ್ತದೆ. ಮನೆಯಲ್ಲಿರುವ ಅಜ್ಜಿ ಈ ಮಗು-

ವನ್ನು ನೋಡಿ. "ಅದೆಷ್ಟು ಮುದ್ದಾಗಿ, ದುಂಡಗಾಗಿ ಬೆಳೆದಿದೆ," ಎಂದು ಹರ್ಷಪಟ್ಟರೂ, ವೈದ್ಯರ ಬಳಿ ಬಂದಾಗಲೇ ಇದು ರೋಗದ ಚಿಹ್ನೆಯೆಂಬುದು ತಿಳಿದು ಬಂದು ಕಂಗಾಲಾಗಬಹುದು.

ಈ ರೋಗ ಒಂದೇಸಮನೆ ಕಂಡು ಬರುವಂಥದ್ದಲ್ಲ. ಬಹಳ ವಾರಗಳ ಅಥವಾ ತಿಂಗಳುಗಳ ನಂತರ ಕ್ರಮೇಣ ಅಂಗಾಂಗಗಳಲ್ಲಿ ನೀರು ತುಂಬಿಕೊಳ್ಳುತ್ತಾ ಹೋಗಿ ಮಗುವು ದಪ್ಪವಾಗಿ ಕಂಡುಬರುವುದು ಕ್ವಾಷಿಯಾರ್ಕರ್ ರೋಗದ ಮೂರು ಮುಖ್ಯ ಲಕ್ಷಣಗಳಾವುವೆಂದರೆ: ೧. ಈ ರೀತಿ ಮೈ ಕೈಕಾಲು ಮುಖವೆಲ್ಲಾ ಊದಿಕೊಳ್ಳುವುದು. ೨. ಮಾನಸಿಕ ಅಸ್ವಸ್ಥತೆ–ಚಟುವಟಿಕೆಹೀನವಾದ ಮಗು ಸುತ್ತಣ ಪ್ರಪಂಚದಲ್ಲಿ ಆಸಕ್ತಿ ತೋರಿಸದೆ 'ವೈರಾಗ್ಯ ಭಾವ' ಪ್ರದರ್ಶಿಸುವುದು. ೩. ದೈಹಿಕ ಬೆಳವಣಿಗೆ ಕುಂಠಿತಗೊಳ್ಳುವುದು.

ತಾಯಿಯ ದೂರು

ಮೊದ ಮೊದಲು ಹಾಲುಣಿಸಿದ ಕೂಡಲೇ ಮಗುವು ಭೇದಿ ಮಾಡಲಾರಂಭಿಸುತ್ತದೆ. ಪ್ರಥಮ ದಿನ ೨–೩ ಬಾರಿ ನೀರು ಕಕ್ಕಸು ಹೋದರೆ ಮುಂದೆ ದಿನಕ್ಕೆ ಅನೇಕ ಬಾರಿ ಪಾಯಿಖಾನೆ ನೀರು ನೀರಾಗಿ ಹೋಗಲಾರಂಭಿಸಿ ಕ್ರಮೇಣ ಮಗುವು ಸೊರಗಿ ಹೋಗುವ ಬದಲು ಕೈಕಾಲು ಮುಖ ಉಬ್ಬಿಕೊಂಡು ತುಂಬಿಬಂದಂತೆ ತೋರುವುದು ಇದು ಆರೋಗ್ಯದ ಲಕ್ಷಣವೆಂದು ಎಂಥ ತಾಯಿಯೂ ತಿಳಿದು ಮೋಸ ಹೋಗದೆ ಇಲ್ಲ. ಆದರೆ ಮೊದಲು ಆಟದ ಸಾಮಗ್ರಿಗಳನ್ನು ಕಂಡಾಕ್ಷಣ ನೆಗೆದು ಓಡಿ ಬರುವ ಮಗುವಿನೆದುರು ಈಗ ಏನನ್ನೇ ಇಟ್ಟರೂ ಅದರಲ್ಲಾಸಕ್ತಿ ಈ ಮಗುವಿಗೆ ಇಲ್ಲವಾಗಿದೆ. ಕಾಯಿಲೆ ತೀವ್ರವಾದಂತೆ ಬಾಹ್ಯಪರಿಸರದ ಗೋಜಿಗೇ ಈ ಮಗುವು ಹೋಗದು. ಜೊತೆಗೆ ಆಹಾರ ಸೇವನೆಯನ್ನೂ ನಿಲ್ಲಿಸತೊಡಗುವುದು.

ರೋಗದ ಇತರ ಲಕ್ಷಣಗಳು

ಸಸಾರಜನಕ (ಪ್ರೋಟೀನ್) ದೇಹದ ಸ್ನಾಯುಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅದರ ಕೊರತೆಯಿಂದಾಗಿಯೇ ಕ್ವಾಷಿಯಾರ್ಕರ್ ರೋಗ ಕಂಡುಬರುವುದು. ಆದುದರಿಂದ ಮಾಂಸಖಂಡಗಳೆಲ್ಲಾ ಎಂದಿನಬಲವನ್ನು ಕಳೆದುಕೊಂಡು ಮಗುವಿನ ದೇಹದಾರ್ಢ್ಯತೆ ಕುಗ್ಗಿ ಹೋಗಿರುವುದು.

ಶೇ. ೪೦ ರಷ್ಟು ಕ್ವಾಷಿಯಾರ್ಕರ್ ಮಕ್ಕಳ ಚರ್ಮದಲ್ಲಿ ವಿಧವಿಧದ ಬದಲಾವಣೆ ಕಂಡು ಬರುತ್ತದೆ. ಪೈಂಟ್ ಬಳಿದ ಜಾಗದಲ್ಲಿ ಪೈಂಟ್ ಒಣಗಿದಮೇಲೆ ಅದು ಚೂರು ಚೂರಾಗಿ ಎದ್ದು ಬರುವಂತಿದ್ದರೆ ಹೇಗೆ ತೋರುತ್ತದೋ ಅದೇ ರೀತಿಯಲ್ಲಿ ಮೊಣಕೈ, ಮೊಣಕಾಲುಗಳ ಗಂಟುಪ್ರದೇಶದಲ್ಲಿ, ಭುಜದ ಎಲುಬಿನ ಜಾಗದಲ್ಲಿ ಚರ್ಮ ಬಿರುಕು ಬಿಟ್ಟು ಪದರು ಪದರಾಗಿ ಎದ್ದು ಬರುವಂತಿರುತ್ತದೆ. ಕೆಲವೊಮ್ಮೆ ಕೈಕಾಲುಗಳ ಚರ್ಮ ಒಣಗಿಕೊಂಡು, ಕಾಂತಿಹೀನವಾಗಿದ್ದು ಸಂಪೂರ್ಣ ಬಿರುಕು ಬಿರುಕಾಗಿ ಒಡೆದಿರುತ್ತದೆ. ಕಿವಿಯ ಹಿಂಭಾಗದಲ್ಲಿ, ಮೊಣಕೈ, ಮೊಣಕಾಲು ಹಾಗೂ ಸೊಂಟದಲ್ಲಿ ತೀವ್ರ ಆಳಕ್ಕೆ ಹೋದ ನೆರಿಗೆಯೂ ಇರಬಹುದು. ರೋಮಕೂಪದ ಸುತ್ತ ಸೂಕ್ಷ್ಮ ರೀತಿಯಲ್ಲಿ ರಕ್ತಸ್ರಾವವಾಗುವುದರಿಂದಾಗಿ ಅಲ್ಲಲ್ಲಿ ಚಿಕ್ಕ ಚಿಕ್ಕ ಕೆಂಪು ಚುಕ್ಕೆಗಳೂ ಚರ್ಮದಲ್ಲಿ ಕಂಡು ಬರಬಹುದು. 'ಬಿ' ಅನ್ನಾಂಗದ ಕೊರತೆಯಿಂದಾಗಿ ಬಾಯಿಯ ಸುತ್ತಲೂ ಹುಣ್ಣು ಉಂಟಾಗಿರಬಹುದು. 'ಎ' ಅನ್ನಾಂಗದ ಕೊರತೆಯಿಂದ ಕಣ್ಣಿನ ಕಪ್ಪುಗುಡ್ಡೆ ಮಸುಕು ಮಸುಕಾಗಿ ಮಾರ್ಪಡುವುದೇ ಈ ದಿಶೆಯಲ್ಲಿ ಹೆಚ್ಚು. ಇರುಳುಗಣ್ಣು ಹಾಗಾಗಿ ಹೆಚ್ಚಿನಂಶ ಕಂಡುಬಾರದೆ ಇಲ್ಲ. ಅಂದರೆ ರಾತ್ರಿ ಹೊತ್ತು ಮಗುವಿಗೆ ದೃಷ್ಟಿ ಚೆನ್ನಾಗಿರದೆ ತುಂಬಾ ತಡಕಾಡುತ್ತಿರುವುದು. ಮೂಳೆಗಳ ಬೆಳವಣಿಗೆ ಹೇಗೂ ಕುಂಠಿತವಾಗಿರುವುದರಿಂದಾಗಿ 'ಸಿ' ಮತ್ತು 'ಡಿ' ಅನ್ನಾಂಗಗಳ ಕೊರತೆ ಮಾತ್ರ

ಎಂದೆಂದಿಗೂ ಕಂಡು ಬರುವುದಿಲ್ಲ.

ದೇಹದ ಪ್ರತಿರೋಧಕ ಶಕ್ತಿ ಸ್ವಾಭಾವಿಕ ವಾಗಿಯೇ ಕಡಿಮೆಯಾಗಿರುವುದರಿಂದಾಗಿ ಪದೇ ಪದೇ ಕೆಮ್ಮು, ಜ್ವರ, ವಾಂತಿ- ಭೇದಿ ಮುಂತಾದುವೂ ಈ ಮಕ್ಕಳಲ್ಲಿ ಸ್ವಾಭಾವಿಕವೇ. ನ್ಯೂಮೋನಿಯಾ, ಕ್ಷಯರೋಗವೇ ಮೊದಲಾದ ಕಾಯಿಲೆಗಳೂ ಕಂಡುಬರ ಬಹುದು. ಕ್ವಾಷಿಯಾರ್ಕರ್ ಮಕ್ಕಳಲ್ಲಿ ತೀವ್ರ ತರದ ರಕ್ತಹೀನತೆಯಂತೂ ಬಹಳ ಅಪರೂಪ.

ಕ್ವಾಷಿಯಾರ್ಕರ್ ಎಂಬ ಶಬ್ದಕ್ಕೆ 'ಕೆಂಪು ಕೂದಲಿನ ಮಗು' ಎಂಬ ಅರ್ಥವಿದೆ. ತಲೆ ಕೂದಲಿನ ಕಪ್ಪು ಬಣ್ಣದ ಬದಲು ಕೆಂಪು ಅಥವಾ ಬೂದು ಬಣ್ಣ ಕಂಡು ಬರುತ್ತದೆ. ಕೂದಲಿನ ಆರೋಗ್ಯಕ್ಕೆ ಅವಶ್ಯವಾದ ಸಸಾರಜನಕದ ಕೊರತೆಯೇ ಈ ವ್ಯತ್ಯಾಸಕ್ಕೆ ಕಾರಣ. ತಲೆಯಲ್ಲಿ ಮುಂಚೆ ಸೊಂಪಾಗಿ ಕೂದಲು ಬೆಳೆದಿದ್ದರೆ ಕ್ವಾಷಿಯಾರ್ಕರ್‌ನಿಂದಾಗಿ ಅವೆಲ್ಲಾ ಬಿದ್ದುಹೋಗಿ ಅಳಿದುಳಿದ ಕೆಲವೇ ಕೆಲವು ಕೂದಲುಗಳೂ ಸುಲಭದಿಂದ, ಮಗುವಿಗೆ ಎಳ್ಳಷ್ಟೂ ನೋವಾಗದಂತೆ ಕೀಳಲ್ಪಡಬಲ್ಲು ವಾದುದರಿಂದ ಸಾಮಾನ್ಯವಾಗಿ ಈ ರೋಗಿಗಳ ತಲೆ ಬೋಳಾಗಿಯೇ ಕಂಡು ಬರುತ್ತದೆ. (ಚಿತ್ರ ೧.)

ಈ ಮಕ್ಕಳ ದೇಹ ಉಬ್ಬಿಕೊಂಡಿದ್ದರೂ ಇರಬೇಕಾದುದಕ್ಕಿಂತ ಅರ್ಧದಷ್ಟೇ ಅವುಗಳ ತೂಕವಿರುತ್ತದೆ. ದೇಹದ ಎತ್ತರವೂ ಸಾಮಾನ್ಯವಾಗಿರಬೇಕಾದಷ್ಟಿರದೆ ಗಿಡ್ಡವಾಗಿರುತ್ತದೆ. ಹೊಟ್ಟೆಯ ಪರೀಕ್ಷೆ ಮಾಡಿದಾಗ ಪಿತ್ತಕೋಶ ದೊಡ್ಡದಾಗಿರುವುದು ಕಂಡುಬರುತ್ತದೆ. ಕೊಬ್ಬಿನ ಕಣಗಳು ಶೇಖರಗೊಂಡು ದೊಡ್ಡದಾದ ಪಿತ್ತಕೋಶದ ಚಟುವಟಿಕೆಯಲ್ಲಿ ಬದಲಾವಣೆಯುಂಟಾಗಿಯೇ ಈ ಮಕ್ಕಳಲ್ಲಿ ಭೇದಿ ಪ್ರಾರಂಭವಾಗುವುದು.

ಕ್ವಾಷಿಯಾರ್ಕರ್ ಮಗುವಿನ ದೇಹದ ಊತಕ್ಕೆ ಜೀವಕಣಗಳ ನಡುವೆ ನೀರು ಸೇರಿರುವುದೇ ಕಾರಣ. ಈ ರೀತಿ ನೀರು ಸಂಗ್ರಹವಾಗಲು ಸ್ಪಷ್ಟಕಾರಣವೇನೆಂದು ತಿಳಿದು ಬಂದಿಲ್ಲವಾದರೂ ಪಿತ್ತಕೋಶದ ಚಟುವಟಿಕೆ ಅಸ್ತವ್ಯಸ್ತವಾಗುವುದರಿಂದ, ಸಾಮಾನ್ಯವಾಗಿ ಪಿತ್ತಕೋಶದಲ್ಲಿ ನಾಶ ಮಾಡಲ್ಪಡಬೇಕಾದ ವಿಸರ್ಜನೆಯ ಮೂತ್ರದ ಪ್ರಮಾಣದಲ್ಲಿ ಕಡಿತ ಉಂಟುಮಾಡಬಲ್ಲ ಹಾರ್ಮೋನ್ (Anti Diuretic Hormone—ADH) ನಾಶಗೊಳ್ಳದೆ ಅದರಂಶ ರಕ್ತದಲ್ಲಿ ಅತಿಯಾಗಿರುವುದೂ ಒಂದು ಕಾರಣ.

ಕ್ವಾಷಿಯಾರ್ಕರ್ ಮಗುವನ್ನು ಕಾಳಿದಾಸನಂತಹ ಕವಿಗಳು ಒಂದೆ ಕಂಡಿದ್ದರೆ ಅದೆಷ್ಟು ಸುಂದರವಾಗಿ ವರ್ಣಿಸುತ್ತಿದ್ದರೋ! ಉಬ್ಬಿದ ಕೆನ್ನೆಗಳುಳ್ಳ, ಎವೆಗಳು ಮುಚ್ಚಲ್ಪಟ್ಟ



ಚಿತ್ರ. ೧

ಕಣ್ಣುಗಳುಳ್ಳ ಈ ಕಂದ 'ಚಂದ್ರವದನ'ನಾಗಿ ಕಂಡುಬರುವುದಂತೂ ನಿಜವಲ್ಲವೇ?

ಕ್ವಾಷಿಯಾರ್ಕರ್ ಎಂಬ ಪದಕ್ಕೆ 'ಮೊಲೆ ತೊರೆಸಿದ ಮಗು' ಎಂಬ ಅರ್ಥವೂ ಇದೆ. ಹೊಸ ಮಗು ಹುಟ್ಟಿದ ಮೇಲೆ ಮೊದಲ ಮಗುವಿನ ಆರೈಕೆ ಸ್ವಲ್ಪ ಕಡಿಮೆಯಾಗಿ ಸಾಕಷ್ಟು ಆಹಾರ ಅದಕ್ಕೆ ದೊರಕದೆ ಅದು ಕ್ವಾಷಿಯಾರ್ಕರ್‌ಗೆ ಬಲಿಬೀಳಬಹುದು. ಇಲ್ಲವೇ, ಕೊಳಚೆ ಪ್ರದೇಶ ವಾಸಿಗಳ, ದಿನಗೂಲಿಯಿಂದಲೇ ಜೀವಿಸುವವರ, ಭಿಕ್ಷುಕರ ಮಕ್ಕಳಲ್ಲಿ ಆರ್ಥಿಕ ಸಮಸ್ಯೆಯೇ ದೊಡ್ಡದಾಗಿ ತನ್ಮೂಲಕ ದೈನಂದಿನ ಸಸಾರಜನಕದ ಪೂರೈಕೆಯಲ್ಲಿ ತೊಡಕುಂಟಾಗಬಹುದು.

ಮೊಲೆಯೂಣಿಸುವಷ್ಟು ಕಾಲ ನಮ್ಮಲ್ಲಿ ಅನೇಕ ತಾಯಂದಿರು ಬೇರೇನನ್ನೂ ಮಗುವಿಗೆ ಕೊಡುವುದಿಲ್ಲ. ಈ ರೀತಿ ಅಜ್ಞಾನ ಮತ್ತು ಮೂಢನಂಬಿಕೆಗಳಿಗೆ ತುತ್ತಾದ ತಾಯಂದಿರು ಮಕ್ಕಳಿಗೆ ಪೌಷ್ಟಿಕ ಆಹಾರಾಂಶಗಳ ಪೂರೈಕೆ ಮಾಡುವಲ್ಲಿ ವಿಫಲರಾಗುವುದರಿಂದಲೂ ಕ್ವಾಷಿಯಾರ್ಕರ್ ಬರಲು ಸಾಧ್ಯ.

ಮೂರು ವರ್ಷ ಮೀರಿದ ಕ್ವಾಷಿಯಾರ್ಕರ್ ಮಕ್ಕಳಲ್ಲಿ ಶ್ವಾಸಕೋಶದ ಕ್ಷಯವೂ ಕಂಡುಬಂದಿದೆ. ಮೊದಲೇ ಜೀರ್ಣಗೊಂಡ ದೇಹ, ಮೇಲಾಗಿ ರೋಗಕ್ಕೂ ಒಳಗಾದಾಗ ಪರಿಣಾಮ ಭೀಕರವಾಗದೆ ಮತ್ತೇನು? ಆಮಶಂಕೆ, ದಢಾರ ಮುಂತಾದ ಕಾಯಿಲೆಗಳೂ ಕ್ವಾಷಿಯಾರ್ಕರ್ ಜೊತೆಗೆ ಕಂಡು ಬರಬಹುದು.

ಚಿಕಿತ್ಸೆ

ಪೌಷ್ಟಿಕ ಆಹಾರ ಸೇವನೆಯೇ ಮುಖ್ಯವಾದುದು. ಒಂದು ಕೆ. ಜಿ. ತೂಕಕ್ಕೆ ಸುಮಾರು ೫ ಗ್ರಾಂ ಸಸಾರಜನಕ ಪ್ರತಿದಿನ ಈ ಮಕ್ಕಳಿಗೆ ಬೇಕಾಗುತ್ತದೆ. ಅಂದರೆ ಒಟ್ಟಿಗೆ ೫೦-೬೦ ಗ್ರಾಂಗಳಷ್ಟಾದರೂ ಸಸಾರಜನಕದ ದೈನಂದಿನ ಪೂರೈಕೆಯಾಗಲೇ ಬೇಕು. ತೊಗರಿ, ಕಡಲೆಕಾಯಿ ಬೀಜ ಮುಂತಾದ ದ್ವಿದಳಧಾನ್ಯಗಳು, ಕಾಯಿಸಿ ಕೆನೆತೆಗೆದ ಹಾಲು, ಸೊಪ್ಪು ತರಕಾರಿಗಳು, ಮಾಂಸ, ಮೊಟ್ಟೆ ಇವು ಸಸಾರಜನಕಯುಕ್ತ ಆಹಾರಾಂಶಗಳು.

ಈ ಮಗುವಿನ ದೈನಂದಿನ ಚಟುವಟಿಕೆಗೆ ಕಡಿಮೆಯೆಂದರೆ ಒಂದು ಕೆ. ಜಿ. ಗೆ ೧೨೦ ಕೆಲೊರಿಗಳಂತೆ ಪ್ರತಿದಿನ ಒದಗಿಸಬೇಕಾಗುತ್ತದೆ. ಬ್ರೆಡ್, ಅನ್ನ, ಮೊಸರು, ಬೆಣ್ಣೆ, ವನಸ್ಪತಿ ಎಣ್ಣೆ ಇವುಗಳ ಉಪಯೋಗದಿಂದ ಅವಶ್ಯಕವಾದ ಬೇಡಿಕೆಯನ್ನು ಸುಲಭದಲ್ಲಿ ಪೂರೈಸಬಹುದು.

ಪ್ರಾರಂಭದಲ್ಲಿ ಕೆನೆತೆಗೆದ ಹಾಲಿನೊಂದಿಗೆ ಸಕ್ಕರೆ ಬೆರೆಸಿ ಕುಡಿಯಲು ಕೊಟ್ಟು ಮಗುವಿಗೆ ಆಹಾರ ಸೇವನೆಯ ಕಡೆ ಆಸಕ್ತಿ ಹುಟ್ಟುವಂತೆ ಮಾಡಬೇಕಾಗುತ್ತದೆ. ದಿನಕ್ಕೆ ೮-೧೦ ಔನ್ಸು ಹಾಲು ಹೆಚ್ಚೆಂದರೆ ಬೇಕಾದೀತು. ಈಗ ಸರ್ವತ್ರವೂ ದೊರಕುವ ಹಾಲಿನ ಪುಡಿಗಳಲ್ಲಿ Farex, Amul, Neutrodex... ಇವನ್ನೂ ಜೊತೆಗೆ ಉಪಯೋಗಿಸಬಹುದು.

ಉತ್ತಮ ಆಹಾರ ಸೇವನೆಯಾಗುತ್ತಿದ್ದಾಗ್ಯೂ ಭೇದಿ ನಿಲ್ಲದಿದ್ದಲ್ಲಿ ಅದರ ನಿಯಂತ್ರಣಕ್ಕೆ ಸೂಕ್ತ ಔಷಧಿಯಂತೂ ಬೇಕೇ ಬೇಕು. ಒಂದು ವಾರದ ಈ ತೆರನ ಆರೈಕೆಯಿಂದಲೇ ಮೈಕೈಮುಖದ ಊತ ಕಣ್ಮರೆಯಾಗುತ್ತದೆ.

ಮಲದ ಪರೀಕ್ಷೆಯಿಂದ ಭೇದಿಯುಂಟಾಗುವಲ್ಲಿ ಆಮಶಂಕೆಯೇನಾದರೂ ಕಾರಣವಾಗಿದೆಯೇ ಎಂಬುದೂ ಜಂತುಹುಳಗಳ ದೋಷವೇನಾದರೂ ಇದೆಯೇ ಎಂಬುದೂ ತಿಳಿದುಬಂದು ಆ ದಿಸೆಯಲ್ಲಿ ಚಿಕಿತ್ಸೆ ನಡೆಸುವುದೂ ಸುಲಭವಾಗುತ್ತದೆ. ಕಣ್ಣುಗಳ ಪರೀಕ್ಷೆಯಿಂದ 'ಎ' ಅನ್ನಾಂಗದ ಕೊರತೆಯೇನಾದರೂ ಇದ್ದಲ್ಲಿ ತಿಳಿದುಬಂದು ಅದರ ನಿವಾರಣೆಗೂ ಚಿಕಿತ್ಸೆ ಪ್ರಾರಂಭಿಸಬಹುದು. ರಕ್ತಹೀನತೆ ತೀವ್ರವಾಗಿದ್ದರೆ ದೇಹಕ್ಕೊಪ್ಪುವ ರಕ್ತವನ್ನೇ ಸೂಕ್ತ ಪ್ರಮಾಣದಲ್ಲಿ ಒದಗಿಸಬೇಕಾಗುತ್ತದೆ.

ಮಾರಕರೋಗವಾದ ಕ್ವಾಷಿಯಾರ್ಕರ್ ನಿವಾರಣೆಯಲ್ಲಿ ನಮ್ಮ ಜನತೆ ಈ ವಿಚಾರ ತಿಳಿದುಕೊಂಡು ಸಹಕರಿಸಬೇಕು :-

೧. ಕಡಿಮೆ ಪಕ್ಷ ೬ ತಿಂಗಳುಗಳ ಕಾಲವಾದರೂ ತಾಯಂದಿರು ಮಕ್ಕಳಿಗೆ ಮೊಲೆಯೂಣಿಸಬೇಕು.

೨. ಎದೆಹಾಲು ಕಡಿಮೆಯಾಗುತ್ತ ಬಂದಾಗ ಹಣ್ಣಿನ ರಸ, ಸೊಪ್ಪು ತರಕಾರಿಗಳ ಉಪಯೋಗವನ್ನು ಮಾಡಲಾರಂಭಿಸಬೇಕು. ಮಗುವಿಗೆ ಒಂದು ಒಂದೂವರೆ ವರ್ಷವಾಗುವಾಗ ಅದು ಎಲ್ಲಾ ವಿಧದ ಆಹಾರವನ್ನೂ ಸ್ವೀಕರಿಸಬಲ್ಲುದಾಗಿರಬೇಕು.

೩. ಎದೆಹಾಲು ಕಡಿಮೆಯಾದಂತೆ ಹಾಲು ಹುಡಿಯ ಉಪಯೋಗವೂ ಹೆಚ್ಚಬೇಕು.

೪. ಮಾಂಸಾಹಾರ ಸ್ವೀಕೃತವೆಂದಾದರೆ ಮೀನು, ಮೊಟ್ಟೆಯ ಉಪಯೋಗ; ಇಲ್ಲವಾದಲ್ಲಿ ದ್ವಿದಳಧಾನ್ಯಗಳ ಅತಿಯಾದ ಉಪಯೋಗದಿಂದ ದೇಹದ ಸಸಾರಜನಕಾಂಶದ ಪೂರೈಕೆ ಮಾಡಬೇಕು.

೫. ಸುಲಭದಲ್ಲಿ ಸಸಾರಜನಕ ಒದಗಿಸುವ ಬಹುವಿಧದ ಸತ್ವಯುಕ್ತ ಆಹಾರ (Multi Purpose Food- M. P. F.)ದ ಉಪಯೋಗ ಹೆಚ್ಚಿಸಬೇಕು. ಇದರ ದೈನಂದಿನ ಉಪಯೋಗ ಕಡಿಮೆಯೆಂದರೆ ೫೦ ಗ್ರಾಂ ಆದರೂ ಇರಬೇಕು.

೬. ಭೇದಿಯುಂಟಾದಾಗ ಹಾಲು-ಅನ್ನ ಕೊಡದೆ ಕೇವಲ ಆರಾರೂಟು ಗಂಜಿಯ ಸೇವನೆಯನ್ನು ಮಾತ್ರ ತಾಯಂದಿರು ತಮ್ಮ ಮಕ್ಕಳಿಗೆ ಮಾಡಿಸಬಾರದು. ಭೇದಿಗೆ ನಿಜವಾದ ಕಾರಣ ತಿಳಿದುಕೊಂಡು ಸೂಕ್ತ ಚಿಕಿತ್ಸೆ ಕೊಡಿಸುವಲ್ಲಿ ಪಾಲಕರು ವೈದ್ಯರ ಮೊರೆ ಹೋಗಲು ಸರ್ವಥಾ ಹಿಂಜರಿಯಬಾರದು.

ಮೆರಾಸ್ಮಸ್

ಸರಸಿಯು ಕತೆ ಸ್ವಲ್ಪ ವ್ಯತಿರಿಕ್ತವಾದುದು. ಆಕೆಯ ಬಾಳಿಗೆ ಆಸರೆಯಾಗಿರುವುದೂ ಒಬ್ಬಳೇ ಒಬ್ಬ ಮಗಳು. ಭಿಕ್ಷಾಟನೆ ಮಾಡುವ ಆಕೆ ತನ್ನ ಹೊಟ್ಟೆ ಹಸಿದುಕೊಂಡಿದ್ದಾಗ್ಯೂ ಮೂರು ವರ್ಷದ ಬಾಲೆಯ ಹೊಟ್ಟೆಗೆ ಕಡಿಮೆ ಮಾಡಿದ್ದಿಲ್ಲ. ಮಗು ಬಾಚಿಗೆ ತಿನ್ನುವ ಚಪಲ ಅಷ್ಟಿಷ್ಟಲ್ಲ. ಆಕೆಗೆ ಬೇಕಾದಷ್ಟು ಆಹಾರ ಪೂರೈಕೆ ಮಾಡುವ ಸೌಭಾಗ್ಯ ಈ ತಾಯಿಗಿರಲಿಲ್ಲ. ಎದೆಯ ಹಾಲು ಕೂಡ ಬತ್ತಿ ಹೋಗಿತ್ತು. ಹೀಗಾಗಿ, ಮಗುವು ದಿನೇ ದಿನೇ ಕೃಶವಾಗುತ್ತಾ ಹೋಗಿ ಅಸ್ಥಿಪಂಜರದ ಮೇಲೆ ತೊಗಲಿನ ಹೊದಿಕೆ ಮಾತ್ರವೇ ಉಳಿಯುವಂಥ ದುಃಸ್ಥಿತಿ ಪ್ರಾಪ್ತವಾಯಿತು. ಆಗ ವಿಧಿಯಿಲ್ಲದೆ ಸರಸಿ ವೈದ್ಯರ ಮೊರೆ ಹೋಗಲೇಬೇಕಾಯಿತು. ಬಾಚಿ ನರಳುತ್ತಿದ್ದುದು ಮಕ್ಕಳ ಇನ್ನೊಂದು ಮಾರಕರೋಗವಾದ ಮೆರಾಸ್ಮಸ್‌ನಿಂದ.

ಸಾಮಾನ್ಯವಾಗಿರಬೇಕಾದ ಸರಾಸರಿ ತೂಕಕ್ಕಿಂತ ಶೇ. ೪೦ ರಷ್ಟು ಕಡಿಮೆ ತೂಗುತ್ತಿದ್ದು, ಹೆಚ್ಚಾಗಿ ಎಲುಬು-ಚರ್ಮದಿಂದಲೇ ಕೂಡಿರುವ ಯಾವುದೇ ಮಗು ಮೆರಾಸ್ಮಸ್‌ನಿಂದ ನರಳುವುದು ಖಾತ್ರಿಯಾದಂತೆಯೇ. ಮಗುವಿಗೆ ಬೇಕಾದಷ್ಟು ಎದೆಹಾಲು ಅಥವಾ ಹಸುವಿನ ಹಾಲು ಅಥವಾ ಆಹಾರದ ಪೂರೈಕೆ ಆಗದಿರುವುದೇ ಈ ರೋಗಕ್ಕೆ ಕಾರಣ.

ಆಹಾರದ ಪೂರೈಕೆ ಸಮರ್ಪಕವಾಗಿದ್ದರೂ, ಅದು ಜೀರ್ಣಗೊಳ್ಳದಿದ್ದಾಗ ಶರೀರದ ಬೆಳವಣಿಗೆಗೆ ಅದು ಉಪಯೋಗಿಸಲ್ಪಡದು- ಪದೇ ಪದೇ ವಾಂತಿಯಾಗುತ್ತಿದ್ದಾಗ್ಯೂ ಈ ರೀತಿ ಉಂಟಾಗಲು ಸಾಧ್ಯ.

ಕ್ಷಯರೋಗವೇ ಮುಂತಾದ ಮಾರಕ ರೋಗದಿಂದಲೂ ಬಾಯಿರುಚಿ ಕೆಟ್ಟು ಹೋಗಿ ಆಹಾರ ಸೇವನೆ ಕಡಿಮೆಯಾಗಿ ದೇಹವು ಸೊರಗಿ ಹೋಗಲು ಸಾಧ್ಯ.

ಭೇದಿ ಪ್ರಾರಂಭವಾಗಿ, ಅನಿಯಂತ್ರಿತವಾದರಂತೂ ಸೇವಿಸಿದ ಆಹಾರವೆಲ್ಲ ರಕ್ತಗತವಾಗಲಾರದೆ ಸಂಪೂರ್ಣ ವಿಸರ್ಜಿಸಲ್ಪಟ್ಟು ಆಹಾರ ಪೂರೈಕೆಯಲ್ಲಿ ಕೊರತೆಯುಂಟಾಗುವುದು.

ಕ್ವಾಷಿಯಾರ್ಕರ್‌ನಲ್ಲಿ ದೇಹಕ್ಕೆ ಬೇಕಾದ ಸಸಾರಜನಕದ ಪೂರೈಕೆಯಾಗದೆ ದೈನಂದಿನ ಕೆಲೊರಿಯಂಶ ದೊರಕಿರುತ್ತದೆ. ಆದರೆ ಮೆರಾಸ್ಮಸ್‌ನಲ್ಲಿ ಸಸಾರಜನಕವೂ, ಕೆಲೊರಿಯಂಶವೂ ಬೇಕಾದಷ್ಟು ಪ್ರಮಾಣದಲ್ಲಿ ದೊರಕುವುದಿಲ್ಲ.

ಸುಕ್ಕುಗಟ್ಟಿದ ಚರ್ಮಹೊಂದಿ, ತನ್ನ ಬೆರ-



ಚಿತ್ರ. ೨

ಕೆನ್ನೇ ಬಾಯಲ್ಲಿಟ್ಟುಕೊಂಡು ಚೀಪುತ್ತಾ, ಎಲುಬಿನ ಗೂಡನ್ನು ಪ್ರದರ್ಶಿಸುವ 'ಬಾಲ-ವೃದ್ಧ'ಯಂತಿರುವ ಈ ಮಗುವಿಗೆ (ಚಿತ್ರ ೨) ವೈದ್ಯರು ಪರೀಕ್ಷೆ ಮಾಡುವ ಸಮಯದಲ್ಲಿ ಅಳಲಿಕ್ಕೂ ಶಕ್ತಿ ಇರದು; ಒಂದೊಮ್ಮೆ ಅತ್ತರೂ ಬಹಳಷ್ಟು ಮೆತ್ತಗಿನ ದನಿಯಲ್ಲೇ! ತಲೆಗೂದಲಿನಲ್ಲಿ ಏನೊಂದೂ ಬದಲಾವಣೆ ಮೆರಾಸ್ಮಸ್‌ನಲ್ಲಿ ಕಂಡುಬಾರದು. ಕ್ವಾಷಿಯಾರ್ಕರ್ ಮಗು ಉಬ್ಬಿಕೊಂಡಿದ್ದರೆ ಈ ಮಗು ಸೊರಗಿಕೊಂಡಿರುತ್ತದೆ.

ಕ್ವಾಷಿಯಾರ್ಕರ್‌ನೊಂದಿಗೆ ಮೆರಾಸ್ಮಸ್ ಜೊತೆಗೂಡಿರುವುದಿದೆ. ಆಗ ತಲೆಗೂದಲು ಬೂದುಬಣ್ಣಕ್ಕೆ ತಿರುಗಿ, ಚರ್ಮ ಬಿರುಕುಗೊಂಡು, ಮಾಂಸಖಂಡಗಳೆಲ್ಲ ಸೊರಗಿ ಹೋಗಿ ಮುಖ ಕೈಕಾಲುಗಳು ಸ್ವಲ್ಪ ಊದಿಕೊಂಡಿರುವುದು ಕಂಡುಬರುತ್ತದೆ.

ಚಿಕಿತ್ಸೆ ಸುಲಭ

ಕ್ಷಯರೋಗವೇ ಮುಂತಾದ ಕಾಯಿಲೆಗಳಿರುವ ಬಗ್ಗೆ ಅನೇಕ ವಿಧದ ಪರೀಕ್ಷೆ ನಡೆಸುವುದು ಮೊದಲ ಹೆಜ್ಜೆ. ಮೆರಾಸ್ಮಸ್ ರೋಗಕ್ಕೆ ದೈನಂದಿನ ಅಗತ್ಯಕ್ಕೆ ಬೇಕಾದ ಶಕ್ತಿ ಪೂರೈಕೆಯಾಗದುದೇ ಮುಖ್ಯ ಕಾರಣವೆಂದಾದಾಗ ಒಂದು ಕೆ ಜಿ. ತೂಕಕ್ಕೆ ೨೦೦ ಕೆಲೊರಿಗಳಂತೆ ಒದಗಿಸುವ ಆಹಾರದ ಪೂರೈಕೆ ಮಾಡಿದಲ್ಲಿ ಅದ್ಭುತ ಪ್ರಗತಿ ಅತಿ ಶೀಘ್ರದಲ್ಲಿ ಕಂಡುಬರುತ್ತದೆ.

ಇಲ್ಲಿಯೂ ಹಾಲಿನ ಅತಿಯಾದ ಉಪಯೋಗವೇ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಹಾಲಿನೊಂದಿಗೆ ರಾಗಿ ಅಥವಾ ಅನ್ನದ ಗಂಜಿಯನ್ನು ಬೆರೆಸಿ ಕೊಟ್ಟರಂತೂ ಹೆಚ್ಚಿನ ಕೆಲೊರಿಯು ಪೂರೈಕೆ ಆದಂತೆಯೇ. ದಿನಕ್ಕೆ ಆರೇಳು ಬಾರಿ ಹೊಟ್ಟೆಗೆ ಈ ರೀತಿ ಆಹಾರ ಒದಗಿಸಿದಲ್ಲಿ ಎಲುಬು-ತೊಗಲಿನ ಮಗು ಕ್ರಮೇಣ ಕೊಬ್ಬುಯುಕ್ತವಾಗಿ ಅಂದ_ಆಯ ಪಡೆದ ಶರೀರಧಾರಿಯಾಗುವ ಮಾತಂತೂ ಸುಳ್ಳಾಗದು. ✡

(ಈ ಲೇಖನದೊಂದಿಗೆ ಪ್ರಕಟವಾದ ಎರಡೂ ಚಿತ್ರಗಳು ಡಾ. ನಾಗೇಂದ್ರ ಪ್ರಸಾದರವು)

ರಂಗನಾಥ ದಿವಾಕರ

ಮರಣ ಸ್ವಾತಂತ್ರ್ಯ

ಇದೊಂದು ನನ್ನ ಪ್ರೀತಿಯ ವಿಷಯ. ಹಿಂದಕ್ಕೆ ನಾನು ಘಟಪ್ರಭಾ ಕರ್ನಾಟಕ ಆರೋಗ್ಯಧಾಮದಲ್ಲಿ ಶುಶ್ರೂಷೆ ಪಡೆಯುತ್ತಿರುವಾಗ ಆಗ ಅಸ್ತಿತ್ವದಲ್ಲಿದ್ದ "ಜಯಕರ್ನಾಟಕ" ಮಾಸಪತ್ರಿಕೆಯಲ್ಲಿ ಮರಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ್ದು ನನ್ನ ನೆನಪಿನಲ್ಲಿದೆ. ಈಗ ಅಮೇರಿಕೆಯ ಕ್ಯಾಲಿಫೋರ್ನಿಯಾ ಪ್ರಾಂತದ ವಿಧಾನಸಭೆ ಕಾನೂನಿನ ಮುಖಾಂತರ ಈ ಸ್ವಾತಂತ್ರ್ಯವನ್ನು ವಿಶಿಷ್ಟ ಸಂದರ್ಭಗಳಲ್ಲಿ ದಯಪಾಲಿಸಿದೆ. ಇಂಥ ಕಾನೂನು ತಮ್ಮಲ್ಲಿ ಇರಬೇಕೆಂದು ಪ್ರಸಿದ್ಧ ಬ್ರಿಟಿಶ್ ಲೇಖಕ ಬರ್ನಾರ್ಡ್ ಶಾ ಪ್ರಯತ್ನಿಸುತ್ತಿದ್ದುದು ಎಲ್ಲರಿಗೂ ಗೊತ್ತಿರಲಿಕ್ಕಿಲ್ಲ ಬ್ರಿಟನ್ನಿನಲ್ಲಿ ಈ ಪ್ರಯತ್ನ ಮಾಡುವವರ ಒಂದು ಸಂಘವೇ ಇತ್ತು. ಬರ್ನಾರ್ಡ್ ಶಾ ಅದರ ಅಧ್ಯಕ್ಷನಾಗಿದ್ದ !

ನಾನು ಇಲ್ಲಿ ಬರೆಯುತ್ತಿರುವದು, ಜೈನರಲ್ಲಿ ರೂಢವಿದ್ದ ಪ್ರಾಯೋಪವೇಶನ, ಸಲ್ಲೇಖನ ಅಥವಾ ಸತ್ಯಾಗ್ರಹಕ್ಕೆ ಸಂಬಂಧಿಸಿದ ಉಪವಾಸಮರಣ. ಅಥವಾ ಕಾರಣಾಂತರಗಳ ಮೂಲಕ ಜನರು ಮಾಡಿಕೊಳ್ಳುವ ಆತ್ಮಹತ್ಯೆಗೆ ಸಂಬಂಧಿಸಿದುದು ಅಲ್ಲ. ಅಥವಾ ಇದು ಜಪಾನಿನಲ್ಲಿ ರೂಢವಿದ್ದ 'ಹಾರಾಕಿರಿ'ಯನ್ನು (ಯಾವದೊಂದು ಅಪಮಾನ-ಅವಮಾನಗಳಿಗಾಗಿ ಪ್ರಾಣತ್ಯಾಗ) ಸಂಬಂಧಿಸಿಲ್ಲ. ನಾನು ಬರೆಯುತ್ತಿರುವ ಮರಣ ಸ್ವಾತಂತ್ರ್ಯದ ವ್ಯಾಪ್ತಿ ಸೀಮಿತವಾಗಿರುವದು ಹಾಗೂ ಅಂಥ ಸ್ವಾತಂತ್ರ್ಯ ಇರುವದು ಅವಶ್ಯ ಎಂದು ಹೇಳುವದೇ ನನ್ನ ಉದ್ದೇಶ. ಜೀವನ ಸ್ವಾತಂತ್ರ್ಯ ಎಷ್ಟು ಅವಶ್ಯವೊ ಅಷ್ಟೇ ಹಲವು ಸಂದರ್ಭಗಳಲ್ಲಿ ಮರಣ ಸ್ವಾತಂತ್ರ್ಯವೂ ಅವಶ್ಯ ಹಾಗೂ ಪ್ರತಿಪಾದನೀಯ ಎಂದು ಹೇಳಬಲ್ಲೆ.

ಮೊಟ್ಟ ಮೊದಲನೇ ಮಾತೆಂದರೆ ಮರಣದ ಭಯ ಎಂಬುದು ಮಾನವನನ್ನು ಒಂದು ಹೇಡಿಯನ್ನಾಗಿಸುವ ಭಾವನೆ ಇದೆ. ಅದನ್ನು ಹೋಗಲಾಡಿಸಲು ಮಾನವನು ತರತರದ ಪ್ರಯತ್ನಗಳನ್ನು ಮಾಡುವನು. ಆದರೆ ಪ್ರಾಣಕ್ಕೆ-ಜೀವನಕ್ಕೆ ಮರಣ ಎಂಬುದು ಅತ್ಯಂತ ಸಹಜಾವಸ್ಥೆ ಎಂಬುದನ್ನು ನಾವು ತಿಳಿದುಕೊಳ್ಳುವದು ಅವಶ್ಯ. ಕೆಲವು ಸಂದರ್ಭಗಳಲ್ಲಿ ಪರವೂರಿಗೆ ಹೋಗುವವರನ್ನು ನಾವು ಯಾವ ರೀತಿ ಬೀಳ್ಕೊಡುವೆವೊ ಅದೇ ರೀತಿ ತಾನಾಗಿ ಮರಣವನ್ನಪ್ಪಿಕೊಳ್ಳಲು ಸಿದ್ಧರಾದವರನ್ನು ಬೀಳ್ಕೊಡುವದು ಸಹಜವಾಗ

ಬೇಕು. ಇನ್ನು ಅಂಥ ಸಂದರ್ಭಗಳ ಮಾದರಿ ಯಾವವು?

ಒಬ್ಬ ಪುರುಷ ಅಥವಾ ಸ್ತ್ರೀ ವೃದ್ಧಾಪ್ಯದ ಮೂಲಕ ಅತ್ಯಂತ ಕ್ಷೀಣವಾಗಿ, ಪರಸ್ವಾಧೀನವಾಗಿ, ಏನನ್ನೂ ಮಾಡಲಾಗದ ಸ್ಥಿತಿ ಪ್ರಾಪ್ತವಾದಾಗ ಮರಣವನ್ನು ಅಪೇಕ್ಷಿಸಿದರೆ ಆ ಸ್ತ್ರೀಗೆ ಅಥವಾ ಪುರುಷನಿಗೆ ಮರಣದ ಸ್ವಾತಂತ್ರ್ಯವಿರಬೇಕು. ಸ್ವಾತಂತ್ರ್ಯ ಇದರ ಅರ್ಥ ತನ್ನ ಸ್ವ ಇಚ್ಛೆಯಿಂದ, ಇನ್ನು ತಾನು ಸಾಯುವದು ಲೇಸು ಎಂಬ ನಿರ್ಣಯಕ್ಕೆ ಬಂದು, ಆ ನಿರ್ಣಯವನ್ನು ನಾಲ್ಕು ಜನರೆದುರಿಗೆ ಜಾಹೀರ ಮಾಡಲು ಸಿದ್ಧವಿರಬೇಕು. ಇನ್ನೊಂದು ಸಂದರ್ಭವೆಂದರೆ ಒಂದು ಅಸಾಧ್ಯರೋಗದಿಂದ ಬಳಲುವವರಿಗೆ ಈ ಸ್ವಾತಂತ್ರ್ಯ ಇರಬೇಕು. ಅದೇ ರೀತಿ ಯಾವದೊಂದು ತಾಳಲಾರದ ನೋವಿನಿಂದ ಬಳಲುವವರಿಗಾಗಲಿ ಅಥವಾ ತನ್ನ ಹಲವು ಇಂದ್ರಿಯಗಳನ್ನೋ ಅಂಗಾಂಗಗಳನ್ನೋ ಕಾರಣಾಂತರಗಳ ಮೂಲಕ ಕಳಕೊಂಡು ಜೀವನದಲ್ಲಿ ತನಗೇನೂ ಇನ್ನು ರಸವು ಉಳಿದಿಲ್ಲ. ಮೃತಪ್ರಾಯವಾಗಿ ಬದುಕುವದಕ್ಕಿಂತ ಸಾಯುವದೇ ಲೇಸು ಎಂಬ ನಿರ್ಣಯಕ್ಕೆ ಬುದ್ಧಿಪೂರ್ವಕವಾಗಿ ಬಂದವರಿಗೆ ಈ ಸ್ವಾತಂತ್ರ್ಯ ಇರಬೇಕು.

ಇನ್ನು ಇಂಥವರಿಗೆ ಯಾವ ಬಗೆಯ ಮರಣ ಇಷ್ಟವೊ ಆ ಬಗೆಯ ಮರಣವನ್ನು ವೈದ್ಯರು, ಮಿತ್ರರು, ಆಪ್ತೇಷ್ಟರು ಆನಂದದಿಂದ ಒದಗಿಸಿಕೊಡಬೇಕು. ಆ ಬಗ್ಗೆ ಯಾರೂ ದುಃಖಪಡಕೂಡದು. ಯಾಕೆಂದರೆ ಭೂಮಿಗೆ ಭಾರವಾಗಿ, ಕೂಳಿಗೆ ಕಾಳವಾಗಿ ಇರಲು ಇಚ್ಛಿಸದೇ ಇರುವವರನ್ನು ಹಠಾತ್ತಾಗಿ ಬದುಕಿಸಿಡುವದು ಅವರಿಗೆ ಮಾಡುವ ಉಪಕಾರವಲ್ಲ; ಅದೊಂದು ಅಪಕಾರವೇ ಸೈ.


ಇನ್ನು ಈ ಬಗೆಯ ಇಚ್ಛಾಮರಣಗಳಲ್ಲಿ ಯಾವುದು ಉತ್ತಮ ಎಂಬುದನ್ನು ಆಯಾ ವ್ಯಕ್ತಿಗೆ ಬಿಡುವುದೇ ಯೋಗ್ಯ. ಉದಾಹರಣೆಗಾಗಿ: ಒಬ್ಬನು ವಿಷಪ್ರಾಶನ ಯೋಗ್ಯ, ಇನ್ನೊಬ್ಬನು ಒಂದು ಚುಚ್ಚುಮದ್ದಿನಿಂದ ಸಾಯುವದು ಸರಿ, ಮತ್ತೊಬ್ಬನು ಜೋಗ ಜಲಪಾತದ ಬಂಡೆಗಲ್ಲಿನಿಂದ ಹಾರಿಕೊಳ್ಳುವದು ಉತ್ತಮ ಎನ್ನಬಹುದು. ಏನೇ ಇರಲಿ, ಒಂದು ಜೀವಂತ ಹೆಣವನ್ನು ಆಯಾ ವ್ಯಕ್ತಿಯ ಇಚ್ಛೆಯ ವಿರುದ್ಧ ಕೇವಲ ತಾಂತ್ರಿಕ ಇಲ್ಲವೆ ಕೃತ್ರಿಮ ಉಪಾಯಗಳಿಂದ ಉಸಿರಾಡಿಸುತಿರುವ ಒಂದು ಯಂತ್ರದಂತೆ ಬದುಕಿಸಿಡುವದು ಈಗಿನ ಕಾಲದಲ್ಲಿ ನಿಜವಾದ ಮಾನವೀಯತೆ ಎನಿಸಲಾರದು. ✻



ಯಾವದೊಂದು ರಾಷ್ಟ್ರ ಸಂಪತ್ತನ್ನು ಗಳಿಸಲು ಮೂರು ದಾರಿಗಳಿವೆ. ಮೊದಲನೆಯದು ನೆರೆಹೊರೆಯುವವರ ಮೇಲೆ ಯುದ್ಧಮಾಡಿ ಕೊಳ್ಳೆಹೊಡೆಯುವದು, ಎರಡನೆಯದು ವ್ಯಾಪಾರ; ಇದು ಗಂಡಾಂತರಕಾರಿ ಮಾರ್ಗ. ಮೂರನೆಯದು ಕೃಷಿ; ಇದು ರಾಜಮಾರ್ಗ. ಭೂಮಿಯಲ್ಲಿ ದುಡಿದು ಬಿತ್ತಿದ ಒಂದು ಕಾಳಿಗೆ ಹತ್ತು ಕಾಳು ಪಡೆಯುವದು

—ಬೆಂಜಾಮಿನ್ ಫ್ರಾಂಕ್ಲಿನ್

◆ ಚಂದ್ರಶೇಖರ ಪಾಂಡೇಯ



ಕಂಠವೂ ಮಧುರ ವ್ಯಕ್ತಿತ್ವವೂ ಮಧುರ

ನನ್ನ ಪರಮಮಿತ್ರ ಗಾಯನ ಕಲಾನಿಧಿ ಮಧುರ ಕಂಠದ ಮುಕೇಶನ ಬಗೆಗೆ ಈ ಲೇಖನಾನು ಬರೆಯಬೇಕಾದೀತೆಂದು ನನ್ನ ಕನಸು ಮನಸಿನಲ್ಲಿಯೂ ಇರಲಿಲ್ಲ. ಅಮೇರಿಕೆಯ ಡೆಟ್ರಾಯಿಟ್‌ನಲ್ಲಿ ಮುಕೇಶ ಸ್ವರ್ಗಸ್ಥರಾದರು ಎಂಬ ವಾರ್ತೆಯನ್ನು ಭಾರತಕ್ಕೆ ಹೊತ್ತು ತಂದ ಅಗಸ್ಟ ೨೮ ಶನಿವಾರ ಕರಾಳ ದಿನವೆಂದೇ ಹೇಳಬೇಕು. ಈ ದುಃಖದ ವಾರ್ತೆಯನ್ನು ನಾನೇಕೆ ನನ್ನಂತೆ ಇನ್ನೂ ಅನೇಕರು ನಂಬಲಾರದವರಾಗಿದ್ದರು. ಆದರೆ ಸತ್ಯವನ್ನು ಎಷ್ಟು ಕಾಲ ತಾನೇ ಬಚ್ಚಿಡಲಾದೀತು! ಈ ಶೋಕ ವರ್ತಮಾನ ಪಸರಿಸುತ್ತ ನಡೆದಂತೆ ಅವರ ನಿವಾಸದತ್ತ ಆಪ್ತೇಷ್ಟವರ್ಗವು ಧಾವಿಸಹತ್ತಿತು.

ಟೆಲಿವಿಜನ್‌ದವರು ತತ್ಪರತೆಯಿಂದ ಅಂದೇ ರಾತ್ರಿ ಎಂಟೂ ಕಾಲು ಗಂಟೆಗೆ ದಿವಂಗತ ಮುಕೇಶರ ಬಗ್ಗೆ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಿದರು. ಸಂಗೀತ ನಿರ್ದೇಶಕರಾದ ನೌಶಾದ, ಶಂಕರ, ರವೀಂದ್ರ ಜೈನ, ಗಾಯಿಕೆ ಆಶಾ ಭೋಸಲೆ, ಗೀತಕಾರರಾದ ಹಸರತ್, ಇಂದೀವರ ಇವರೆಲ್ಲ ಟೆಲಿವಿಜನ್ನಿನಲ್ಲಿ ದಿ. ಮುಕೇಶರ ಕುರಿತು ತಮ್ಮ ಕಳಕಳಿಯ ಭಾವನೆಗಳನ್ನೆಲ್ಲ ತೋಡಿಕೊಂಡರು. ರಾಜಕಪೂರರ ಹೇಳಿಕೆಯಂತೆ ಮುಕೇಶರ ನಿವಾಸದಲ್ಲಿಯ ಟಿ. ವಿ. ಯನ್ನು ಪ್ರಾರಂಭಿಸಲಾಗಿ ಆದರಲ್ಲಿ ಮುಕೇಶರೇ ಈ ಕೆಳಗಿನ ನುಡಿಯನ್ನು ಹಾಡುತ್ತಿದ್ದದ್ದು ಕಂಡುಬಂದಿತು.

ಆಂಸು ಭರೀ ಹೈ ಯೇ ಜೀವನ ಕಿ ರಾಹೆ
ಕೋಯಿ ಉನಸೆ ಕಹದೇ ಹಮೇ
ಭೂಲಜಾಯೆ

ನೆರೆದವರೆಲ್ಲ ಬಿಕ್ಕಿಬಿಕ್ಕಿ ದುಃಖಿಸತೊಡಗಿದರು. ಇಂಥ ಸಂದರ್ಭಗಳಲ್ಲಿ ಒಳ್ಳೆಯ ಎದೆಗಾರನೆಂದು ಹೇಳಿಕೊಳ್ಳುವ ನಾನೂ ಬಾಲಕನಂತೆ ಅಳತೊಡಗಿದೆ.

ಮರುದಿನ ಅಂದರೆ ರವಿವಾರ ರಾತ್ರಿ ೨–೨॥ ಗಂಟೆಗೆ ಮುಕೇಶ ಅವರ ಪಾರ್ಥಿವ ದೇಹ ಮುಂಬಯಿಗೆ ತಲುಪಿತು. ಸೋಮವಾರ ಮಧ್ಯಾಹ್ನ ೨ ಗಂಟೆಗೆ ಅವರ ಆ ಶರೀರಕ್ಕೆ ಅಂತ್ಯಕ್ರಿಯೆ ನಡೆಯಿತು. ಇಡೀ ಚಲಚ್ಚಿತ್ರರಂಗವೇ ಆ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿತ್ತು. ಅಲ್ಲದೆ ಹೊರಗಿನವರೂ

ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದರು. ದಿ. ಮುಕೇಶರ ಆತ್ಮಕ್ಕೆ ಶಾಂತಿ ಲಭಿಸಲೆಂದು ಪಂಡಿತರು ವೇದಮಂತ್ರ ಪಠಿಸುತ್ತಿದ್ದರು; ಒಬ್ಬ ಮೌಲ್ವಿ ಕುರಾನ ಪಠಣ ನಡೆಸಿದ್ದರು. ಶೀಖ ಜ್ಞಾನಿಗಳು ಗುರು ಗ್ರಂಥ ಸಾಹೇಬದಿಂದ ಪಠಣ ನಡೆಸಿದ್ದರು. ಇವರೆಲ್ಲ ತಾವಾಗಿಯೇ ಬಂದು ಸ್ವೇಚ್ಛೆಯಿಂದ ಈ ಸೇವೆ ಸಲ್ಲಿಸುತ್ತಿದ್ದರು ಎಂಬುದು ಗಮನಿಸಬೇಕಾದ ಸಂಗತಿ ಮುಕೇಶ ಎಷ್ಟೊಂದು ಜನಪ್ರಿಯತೆ ಗಳಿಸಿದ್ದರು ಎಂಬುದಕ್ಕೆ ಇದೊಂದೇ ದೃಷ್ಟಾಂತ ಸಾಕು.

ಚಲಚ್ಚಿತ್ರರಂಗದಲ್ಲಿ ಮುಕೇಶ ಪಾರ್ಶ್ವ ಗಾಯಕರಾಗಿದ್ದುದು ಸುಮಾರು ಮೂರೂವರೆ ದಶಕಗಳ ಕಾಲ. ಈ ಅವಧಿಯಲ್ಲಿ ಅವರು ಹಾಡಿರುವ ಸುಮಾರು ಐದುಸಾವಿರದಷ್ಟು ಹಾಡುಗಳಲ್ಲಿ ನೂರಾರು ಹಾಡುಗಳು ಚಿರಸ್ಮರಣೀಯವಾಗಿವೆ. ಅವರ ಲೋಕಪ್ರಿಯತೆಗೆ ಇದೊಂದೇ ಕಾರಣವಲ್ಲ. ಅವರು ಗಾಯಕರಾಗಿದ್ದರಲ್ಲದೆ ಇನ್ನೂ ಅಧಿಕ ವ್ಯಕ್ತಿತ್ವಪೂರ್ಣ ವ್ಯಕ್ತಿಗಳಾಗಿದ್ದರು. ಅವರ ಮಧುರಕಂಠ ದೇವರ ವರದಾನವಾಗಿದ್ದರೆ ಎಲ್ಲರಿಗೂ ಪ್ರಿಯವಾಗಿದ್ದ ಅವರ ವ್ಯಕ್ತಿತ್ವವನ್ನು ಅವರು ತ್ಯಾಗ-ಪರಿಶ್ರಮಪೂರ್ವಕವಾಗಿ ಅವರೇ ಗಳಿಸಿದುದಾಗಿತ್ತು. ನನಗೆ ತಿಳಿದ ಮಟ್ಟಿಗೆ ಅವರು ಔದಾರ್ಯ, ವಿನಯ, ಸರಳತೆ, ಪರದುಃಖ ಕಾತರತೆ ಈ ಗುಣಗಳಿಂದ ಜನರ ಹೃದಯಗಳನ್ನು ಗೆದ್ದಿದ್ದರು. ಅವರಲ್ಲಿ ವಿನಯದೊಡನೆ ಮೃದುಭಾಷಿತವೂ ಸೇರಿಕೊಂಡಿತ್ತು. ಜೀವನದಲ್ಲಿ ಯಶಸ್ವಿಯಾಗುವ ವರೆಗೆ ಸಫಲತೆ, ಪಡೆಯುವ ವರೆಗೆ ಯಾರಾದರೂ ವಿನಯ- ಮೃದುಭಾಷಿತ್ವಗಳನ್ನು ಮೆರೆಯುತ್ತಾರೆ. ಆದರೆ ಜೀವನದಲ್ಲಿ ಸಫಲತೆಯ ಪರಮೋಚ್ಚ ಶಿಖರ ತಲುಪಿದರೂ ವಿನಯಿಗಳಾಗಿರುವವರು ವಿರಳ. ಅಂಥವರಲ್ಲಿ ಒಬ್ಬರಾಗಿದ್ದರು ಮುಕೇಶ್!

ಸಂತ ತುಳಸಿದಾಸರ 'ರಾಮಚರಿತ ಮಾನಸ'ವನ್ನು ಏಳು ಎಲ್ ಪಿ ರಿಕಾರ್ಡುಗಳಲ್ಲಿ ಧ್ವನಿಮುದ್ರಿಸಬೇಕು ಎಂದು 'ಹಿಜ್ ಮಾಸ್ಟರ್ಸ್ ವ್ಹಾಯಿಸ್' ಕಂಪನಿಯವರು ನಿರ್ಧರಿಸಿ ಮುಕೇಶರನ್ನು ಮುಖ್ಯ ಗಾಯಕರನ್ನಾಗಿ ಆಯ್ಕೆ ಮಾಡಿದರು. ಈ ರಿಕಾರ್ಡುಗಳಿಗೆ ಬೇಕಾಗುವಷ್ಟೇ ಸಾಹಿತ್ಯ ಸಂಕಲನಕ್ಕಾಗಿ ಕವಿವರ ನರೇಂದ್ರ ಶರ್ಮಾ ಅವರನ್ನು ಸಂಪಾದಕರನ್ನಾಗಿ ಆ ಕಂಪನಿ ನೇಮಿಸಿತು. ರಾಮಚರಿತ ಮಾನಸದ ದೋಹಾ-ಚೌಪಾಯಿ (ದ್ವಿಪದಿ, ಚೌಪದಿ)ಗಳನ್ನು ಶುದ್ಧವಾಗಿ ಹೇಗೆ ಉಚ್ಚರಿಸಬೇಕು ಎಂಬುದನ್ನು ಮುಕೇಶ ಅವರಿಗೆ ವಿವರಿಸುವದಕ್ಕಾಗಿ ಎಚ್ ಎಮ್ ವಿ ಕಂಪನಿಯವರು ನನ್ನ ಆಯ್ಕೆ ಮಾಡಿ, ತಾವು ಮುಕೇಶರೊಡನೆ ಈ ವಿಷಯ ಮಾತಾಡಿದ್ದಾಗಿಯೂ ನಾನು ಮುಕೇಶ ಅವರನ್ನು ಕಾಣಬೇಕು ಎಂದೂ ಕಂಪನಿಯವರು ನನಗೆ ತಿಳಿಸಿದರು. ಮುಕೇಶ ಅವರ ಬಿಡುವಿನ ಸಮಯ ತಿಳಿದುಕೊಳ್ಳಬೇಕೆಂದು ನಾನು ಮುಕೇಶ ಅವರ ಮನೆಗೆ ಫೋನ ಮಾಡಲಾಗಿ, ಅವರೇ ಅದನ್ನೆತ್ತಿಕೊಂಡು, "ಪಾಂಡೇಜಿ, ನೀವು ನಿಮ್ಮ ಮನೆಯ ಸರಿಯಾದ ವಿಳಾಸ ಕೊಡಿರಿ; ನಾನೇ ಬಂದು ನಿಮ್ಮನ್ನು ಕಾಣುತ್ತೇನೆ," ಎಂದು ವಿನಯಪೂರ್ವಕ ತಿಳಿಸಿದರು. ಯಾರು ಯಾರಲ್ಲಿಗೆ ಹೋಗಬೇಕು ಎಂಬ ಬಗ್ಗೆ ನಮ್ಮಲ್ಲಿ ಐದು ನಿಮಿಷ ಪ್ರೇಮಕಲಹವೇ ನಡೆಯಿತು. ಕೊನೆಗೂ ಗೆದ್ದವರು ಅವರೇ!

ನಿಶ್ಚಿತ ಸಮಯಕ್ಕೆ ಮುಕೇಶರವರು ಪೇಢೆಗಳ ಡಬ್ಬಿ ಹಿಡಿದುಕೊಂಡು ನಮ್ಮ ಮನೆಗೆ ಆಗಮಿಸಿದುದನ್ನು ಕಂಡಾಗ ಶಿಷ್ಯನೊಬ್ಬ ತನ್ನ ಗುರುವಿನ ಸಂದರ್ಶನಕ್ಕೆ ಬಂದಂತೆ ಅನಿಸಿತು ನನಗೆ. ಅವರನ್ನು ನಾವು ದೇವರ ಪಠದ ಹತ್ತಿರ ಕುಳ್ಳಿರಿಸಿ ಅವರಿಂದ ಎರಡು ಚೌಪದಿಗಳನ್ನು ಹಾಡಿಸಿ, ಅವರಿಗೆ ಪ್ರಸಾದ ಇತ್ತು ಆಶೀರ್ವದಿಸಿದೆ. ಒಮ್ಮೊಮ್ಮೆ ನನ್ನ ಮನಸಿನಲ್ಲಿ ವಿಚಾರ ಸುಳಿಯುತ್ತದೆ: ನನ್ನ ದೌರ್ಭಾಗ್ಯದ ನೆರಳು ಅವರ ಮೇಲೆ ಬಿದ್ದು ಹೀಗಾಯಿತೇನೊ ಎಂದು.

ತಮಗಿಂತ ದೊಡ್ಡವರೊಡನೆ ಅಷ್ಟೆ ಅಲ್ಲ,

ಚಿಕ್ಕವರೊಡನೆಯೂ ಅವರು ವಿನಯದಿಂದಲೇ ನಡೆದುಕೊಳ್ಳುತ್ತಿದ್ದರು. ಧ್ವನಿಮುದ್ರಣದ ಸಮಯದಲ್ಲಿ ಬಹಳಷ್ಟು ಜನ ಅವರನ್ನು ಕಾಣಲು ಬರುತ್ತಿದ್ದರು. ಅವರು ಯಾರನ್ನೂ ನಿರಾಶಗೊಳಿಸುತ್ತಿದ್ದಿಲ್ಲ ತಮ್ಮನ್ನು ಕಾಣಲು ಬಂದ ಸರ್ವೇಸಾಮಾನ್ಯನನ್ನೂ ಅವರು ಎದ್ದು ಸ್ವಾಗತಿಸಿ ಹಸನ್ಮುಖದಿಂದ ಮಾತಾಡಿಸಿ ಮತ್ತೆ ತಮ್ಮ ಕೆಲಸದಲ್ಲಿ ತೊಡಗುತ್ತಿದ್ದರು. ತಾವೊಬ್ಬ ಗಣ್ಯವ್ಯಕ್ತಿಗಳು ಎಂಬ ವಿಚಾರವೇ ಅವರನ್ನು ಬಾಧಿಸುತ್ತಿದ್ದಂತೆ ಕಾಣಲಿಲ್ಲ. ವಾದ್ಯವೃಂದದ ಎಲ್ಲರನ್ನೂ ಕಂಡು ಮಾತಾಡಿಸಿ ವಿನೋದಮಾಡಿ ಸಂತೋಷಿಸುತ್ತಿದ್ದರು. ಸ್ಟುಡಿಯೋದಲ್ಲಿ ಅವರು ಬರುವದಕ್ಕೆ ಮುಂಚೆ ಆವರಿಸಿದ್ದ ಮೌನಛಾಯೆ, ಅವರು ಬಂದ ಕೂಡಲೆ ಕರಗಿ, ಉಲ್ಲಾಸದ ವಾತಾವರಣ ಪಸರಿಸುತ್ತಿದ್ದಿತು. ಮನೆಯಿಂದ ಬರುವಾಗ ಅವರು ಸ್ಯಾಂಡ್‌ವಿಚ್ ಪಾಕೇಟುಗಳನ್ನು ತರುತ್ತಿದ್ದರು. ಆದರೆ ಅವರು ತಿನ್ನುತ್ತಿದ್ದುದು ಎರಡು ಮೂರು ಸ್ಯಾಂಡ್‌ವಿಚ್‌ಗಳನ್ನು ಮಾತ್ರ, ಉಳಿದವೆಲ್ಲ ಅಲ್ಲಿದ್ದವರಿಗೆ ಸಪಿಯೂಟ ನೀಡುವದಕ್ಕಾಗಿ ಮೀಸಲು. ಇತರರಿಗೆ ತಿನ್ನಿಸುವದರಲ್ಲಿಯೂ ಅವರಿಗೆ ಆನಂದ!

ಒಂದಿನ ನಾವಿಬ್ಬರೂ ರೆಕಾರ್ಡಿಂಗ್ ಮುಗಿಸಿಕೊಂಡು ಅವರ ಕಾರಿನಲ್ಲಿ ಮರೀನ್ ಡ್ರಾಯಿವ್ಹ್ ರಸ್ತೆಯಿಂದ ಹಿಂತಿರುಗುತ್ತಿದ್ದೆವು. ದಾರಿಯಲ್ಲಿ ರಸ್ತೆಯ ಪಕ್ಕಕ್ಕೆ ಒಬ್ಬ ಹುಡುಗ ಗೋವಿನಜೋಳ ತೆನೆಗಳನ್ನು ಸುಡುತ್ತಾ ಮಾರುತ್ತ ಕುಳಿತಿದ್ದ. ಆತನನ್ನು ಕಂಡಕೂಡಲೆ ಮುಕೇಶ ಕಾರನ್ನು ನಿಲ್ಲಿಸಿ ಸುಟ್ಟ ತೆನೆಗಳನ್ನು ಖರೀದಿಸಿದರು. ನಾವಿಬ್ಬರೂ ರಸ್ತೆ ಅಂಚಿಗೆ ಸಮುದ್ರಕ್ಕೆ ಕಟ್ಟಿದ್ದ ಅಡ್ಡಗೋಡೆಯ ಮೇಲೆ ಆ ತೆನೆಗಳನ್ನು ತಿನ್ನುತ್ತಾ ಕುಳಿತೆವು. ಮುಂಜ್ಜಂಜೆಯ ಸಮಯ. ತುಂಬ ಜನ ವಾಯುವಿಹಾರಕ್ಕಾಗಿ ಆ ದಾರಿಯಲ್ಲಿ ಅಡ್ಡಾಡುತ್ತಿದ್ದರು. ಕೆಲವರು ಅವರನ್ನು ದೂರದಿಂದ ನೋಡಿ ಹಾಗೇ ಹೋಗುತ್ತಿದ್ದರೆ ಇನ್ನು ಕೆಲವರು ಅವರತ್ತ ನಗು ಬೀರುತ್ತಿದ್ದರು. ಆದರೆ ಒಬ್ಬ ಮಾತ್ರ ಇವರೆದುರಿಗೇ ನಿಂತು, "ನೀವು ಮುಕೇಶ ಅಲ್ಲವೇ?" ಎಂದು ಕೇಳಿದ. ಮುಕೇಶ ಕೂಡ ಮುಗುಳ್ನಕ್ಕು, "ಹೌದು, ನಾನು ಮುಕೇಶ. ಬನ್ನಿ, ಕುಳಿತುಕೊಳ್ಳಿ. ಹಿಡಿಯಿರಿ, ಈ ತೆನೆ ತಿನ್ನಿ." ಎಂದು ತೆನೆ ಮಾರುವ ಆ ಹುಡುಗನನ್ನು ಕರೆದರು. ಆ ವ್ಯಕ್ತಿ ಬಹಳ ಸಂಕೋಚದಿಂದ ಕೈಜೋಡಿಸಿ, "ಧನ್ಯವಾದಗಳು, ನಿಮ್ಮ ದರ್ಶನವಾದದ್ದೇ ಭಾಗ್ಯ." ಎಂದು ನುಡಿದು ಹೊರಟುಹೋದ. ಅಪರಿಚಿತರೊಂದಿಗೆ ಇಷ್ಟೊಂದು ಅಂತಃಕರಣದಿಂದ ವರ್ತಿಸುವ ಮುಕೇಶ ಇನ್ನು ಪರಿಚಯಸ್ಥರೊಡನೆ ಅದೆಷ್ಟು ಕಕ್ಕುಲತೆಯಿಂದ ವರ್ತಿಸುತ್ತಿರಬಹುದೆಂಬುದನ್ನು ಊಹಿಸುವದೇ ಒಳ್ಳೆಯದು.

ವಾದ್ಯವೃಂದದಲ್ಲಿಯ ಅಲ್ಪ ಗಳಿಕೆಯ ಕಿರಿ ಕಲಾಕಾರರಿಗೆ ಆರ್ಥಿಕ ನೆರವು ನೀಡುವಲ್ಲಿ ಮುಕೇಶ ಸದಾ ಸಿದ್ಧರು. ನಿತ್ಯ ಧ್ವನಿಮುದ್ರಣ ಕಾರ್ಯಕ್ರಮ ಮುಗಿದ ಕೂಡಲೇ ನಾನು ಕಾಣುತ್ತಿದ್ದ ದೃಶ್ಯ ಇದು. ಇನ್ನೇನು, ಸ್ಟುಡಿಯೋದಿಂದ ಹೊರಬೀಳಬೇಕು ಅನ್ನುವಷ್ಟರಲ್ಲಿ ಯಾರೋ ಒಬ್ಬರು, "ಸ್ವಲ್ಪ ಬನ್ನಿ ರಾಯರೇ," ಎಂದು ಅವರನ್ನು ನನ್ನಿಂದ ನಾಲ್ಕು ಹೆಜ್ಜೆ ದೂರ ಕರೆದೊಯ್ಯಬೇಕು. ಅವರನ್ನೇ ನಿರೀಕ್ಷಿಸುತ್ತಿದ್ದ ನನಗೆ, ಮುಂದೆ ಒಂದೆರಡು ನಿಮಿಷಗಳಲ್ಲಿ ಮುಕೇಶರ ಕೈ ಪ್ಯಾಂಟಿನೊಳಗಿಂದ ಪರ್ಸ್ ಹೊರತೆಗೆಯುತ್ತಿರುವದು ಕಾಣಬೇಕು. ಯಾರ ದುಃಖ ಸಂಕಟ ಕಂಡರೂ ಅವರ ಮೃದು ಹೃದಯ ಕರಗುತ್ತಿತ್ತು. ಅದು ಅವರ ಸ್ವಭಾವ.


ಅವರ ಇನ್ನೊಂದು ಗುಣವಿಶೇಷವನ್ನೂ ನಾನು ಕಂಡಿದ್ದೆ. ಹೊಚ್ಚ ಹೊಸ ಅಥವಾ ಸಾಧಾರಣ ಸಂಗೀತ ನಿರ್ದೇಶಕರ ಹಾಡುಗಳ ಧ್ವನಿಮುದ್ರಣ ಕಾರ್ಯವನ್ನು ತಕ್ಷಣ ತತ್ಪರತೆಯಿಂದ ಮುಗಿಸಿಕೊಡುತ್ತಿದ್ದರು, ಖ್ಯಾತ ಸಂಗೀತ ನಿರ್ದೇಶಕರ ಹಾಡುಗಳ ಧ್ವನಿಮುದ್ರಣಕ್ಕಾಗಿ ಒಂದೆರಡು ದಿನಗಳ ಅವಧಿ ಅವರು ಕೇಳುತ್ತಿದ್ದರು. ನನಗೆ ಇದೊಂದು

ಒಗಟಾಗಿ ಪರಿಣಮಿಸಿತು. ಒಂದಿನ ಅವರನ್ನೇ ಈ ಬಗ್ಗೆ ವಿಚಾರಿಸಲಾಗಿ ಅವರು ಕೊಟ್ಟ ಉತ್ತರ ಗಮನಾರ್ಹವಾಗಿದೆ-

"ಕೇಳಿ ಪಾಂಡೇಜಿ, ಎಷ್ಟೊಂದು ಆತಂಕಗಳನ್ನು ಎದುರಿಸಿ ಅವರು ಸಂಗೀತ ನಿರ್ದೇಶಕನ ಹುದ್ದೆ ದೊರಕಿಸಿಕೊಂಡಿದ್ದಾರೋ ಏನೋ! ನಾನು ಇವರ ಹಾಡುಗಳ ಧ್ವನಿ ಮುದ್ರಣ ಕಾರ್ಯದಲ್ಲಿ ವಿಳಂಬ ಮಾಡಿದರೆ ನಿರ್ಮಾಪಕ ಮುನಿದು ಇವರಿಗೆ ನೀಡಿದ ಅವಕಾಶವನ್ನೇ ಕಿತ್ತುಕೊಂಡುಬಿಟ್ಟರೆ? ಮತ್ತೆ, ಇವರ ಹಾಡುಗಳ ಧ್ವನಿಮುದ್ರಣ ಮುಗಿದನಂತರ ಇವರ ಕೈಗೆ ದುಡ್ಡು ಬರುವುದು. ನಾನು ಮುಂದೂಡಿದರೆ ಅವರಿಗೂ ಕಷ್ಟ, ಅವರ ಆರ್ಥಿಕ ಸ್ಥಿತಿ ಏನೋ ಎಂತೋ? ಆದ್ದರಿಂದ ಇವರ ಹಾಡುಗಳನ್ನು ತಕ್ಷಣ ಹಾಡಿ ಧ್ವನಿಮುದ್ರಣಕ್ಕೆ ಅನುಕೂಲ ಮಾಡಿಕೊಡುತ್ತೇನೆ. ಇನ್ನು ಖ್ಯಾತ ಸಂಗೀತ ನಿರ್ದೇಶಕರಿಗೆ ಇಂಥ ಯಾವ ಭಯ ಇರುವದಿಲ್ಲ. ಅವರು ಒಂದೆರಡು ದಿನ ವಿಳಂಬ ಸಹಿಸಬಲ್ಲರು."

ಮುಕೇಶರ ಮಾತಾಪಿತೃ ಭಕ್ತಿ ಕೂಡ ಶ್ರೇಷ್ಠವಾದುದಾಗಿತ್ತು. ಆರಂಭದ ದಿನಗಳಲ್ಲಿ ಮುಕೇಶರ ಆದಾಯವೂ ಹಾಗೆ ಹೇಳಿಕೊಳ್ಳುವಂತಿರಲಿಲ್ಲ. ಆಗಿನ ಅವರ ಮನೆ ಅಂದರೆ ಒಂದು ಕೋಣೆ. ಅದಕ್ಕೆ ಹೊಂದಿಕೊಂಡು ಒಂದು ಚಿಕ್ಕ ಅಡುಗೆಮನೆ. ಆಗ ತಾಯ್ತಂದೆಗಳೂ ಇವರ ಜೊತೆಯಲ್ಲಿಯೆ ಇದ್ದರು. ಇವರ ವಿವಾಹವೂ ಆಗಿತ್ತು. ತಾಯಿ-ತಂದೆ ಕೋಣೆಯಲ್ಲಿ ಮಲಗುತ್ತಿದ್ದರು. ರಾತ್ರಿ ಅಡಿಗೆ ಮನೆಯಲ್ಲಿ ಎಂಜಲ ಮುಸುರೆ ಎತ್ತಿ ಹಾಕಿ ಸ್ವಚ್ಛ ಮಾಡಿದ ನಂತರ ಗಂಡ ಹೆಂಡತಿ ಆ ಚಿಕ್ಕ ಅಡುಗೆಮನೆಯಲ್ಲಿ ಪವಡಿಸುತ್ತಿದ್ದರು. ಇವರ ತಂದೆಗೆ ಕೊನೆ ಕೊನೆಗೆ, ವೃದ್ಧಾಪ್ಯ ಮೂಲಕ ಕಣ್ಣಿನ ದೃಷ್ಟಿ ಹೋಗಿಬಿಟ್ಟಿತು. ಆ ತಂದೆಗೆ ನಿತ್ಯ ಸಾಯಂಕಾಲ ವಾಯುಸೇವನಗೆಂದು ಅಡ್ಡಾಡಲು ಹೋಗುವ ಚಟವಿತ್ತು. ಮುಕೇಶ ಮಾಡಿದ್ದೇನು ಗೊತ್ತೆ? ಆರಾಮ ಕುರ್ಚಿಗೆ ನಾಲ್ಕು ಪುಟ್ಟಗಾಲಿಗಳನ್ನು ಜೋಡಿಸಿ, ಆ ಕುರ್ಚಿಯಲ್ಲಿ ತಂದೆಯನ್ನು ಕೂಡ್ರಿಸಿ, ರಾಜಮಾರ್ಗದಲ್ಲಿ ಅದನ್ನು ತಳ್ಳಿಕೊಂಡು ಹೋಗುತ್ತಿದ್ದ. ಪಿತೃಸೇವೆಯಲ್ಲಿ ತೊಡಗಿದ ಮುಕೇಶನಿಗೆ ಆ ಗಾಡಿಯನ್ನು ರಾಜಮಾರ್ಗದಲ್ಲಿ ತಳ್ಳಿಕೊಂಡು ಹೋಗಲು ಯಾವ ಸಂಕೋಚವೂ ಆಗುತ್ತಿರಲಿಲ್ಲ. ಬದಲು ಸಂತೋಷವೇ ಆಗುತ್ತಿತ್ತು. ತಂದೆ ಕಾಲವಶರಾಗುವ ವರೆಗೂ ಮುಕೇಶ ತಮ್ಮ ಈ ಸೇವೆ ನಡೆಸಿಕೊಂಡು ಬಂದರು.

ಕಳೆದ ನಾಲ್ಕು ವರ್ಷಗಳಲ್ಲಿ ನನ್ನ ಬಿಡುವಿನ ಸಮಯವೆಲ್ಲ ಮುಕೇಶ ಅವರ ಸಾನ್ನಿಧ್ಯದಲ್ಲಿಯೇ ಕಳೆದು ಹೋಗುತ್ತಿತ್ತು. ನಾನಾದರೂ ಅವರಲ್ಲಿಗೆ ಹೋಗುತ್ತಿದ್ದೆ ಇಲ್ಲವೆ ಅವರಾದರೂ ನಮ್ಮಲ್ಲಿಗೆ ಬರುತ್ತಿದ್ದರು. ರಾಮಾಯಣದ ಧ್ವನಿಮುದ್ರಣ ಇದ್ದ ದಿನವಂತೂ ನಾವಿಬ್ಬರೂ ಎಂಟೆಂಟು ಗಂಟೆ ಕೂಡಿಯೆ ಇರುತ್ತಿದ್ದೆವು. ತುಳಸಿದಾಸರ ದ್ವಿಪದಿ ಚೌಪದಿಗಳನ್ನು ಹಾಡುವ ಪೂರ್ವದಲ್ಲಿ ಅವುಗಳ ಅರ್ಥವನ್ನು ಚೆನ್ನಾಗಿ ಬಿಂಬಿಸಿಕೊಳ್ಳುತ್ತಿ-



"ನಮ್ಮ ಸುದೀರ್ಘವಾದ ಚಿತ್ರ ಸೆನ್ಸಾರ್ ಮಂಡಳಿಯಿಂದ ಕ್ರಾಸ್ ರೀಲಿಗಾಗುವಷ್ಟಾದರೂ ಉಳಿದಿದೆಯಲ್ಲಾ, ಅಷ್ಟೇ ಸಂತೋಷ..."

ದ್ದರು. ರಾಮಾಯಣವನ್ನು ಕೆಲದಿನ ಹಾಡಿದ ಬಳಿಕ ಅವರಿಗೆ ರಾಮಾಯಣದ ಬಗ್ಗೆ ಅತಿ ಪ್ರೀತಿಯುಂಟಾಯಿತು. ತಮ್ಮ ಬ್ಯಾಗಿನಲ್ಲಿ ರಾಮಾಯಣದ ಪ್ರತಿಯೊಂದನ್ನು ಸದಾ ಇಟ್ಟುಕೊಂಡಿದ್ದರು. ಸಮಯ ಸಿಕ್ಕಾಗಲೆಲ್ಲ ೨-೩ ಪುಟ ಓದುತ್ತಿದ್ದರು. ಹಗಲು ಅವಕಾಶ ದೊರೆಯದಿದ್ದರೆ, ರಾತ್ರಿ ರಾಮಾಯಣ ಓದಿಯೆ ಮಲಗುವ ಪರಿಪಾಠ ಇಟ್ಟು-ಕೊಂಡಿದ್ದರು.

'ರಾಮಚರಿತಮಾನಸ'ದ ಕೊನೆಗೆ ಒಂದು ಸಂಸ್ಕೃತ ಶ್ಲೋಕ ಇದೆ. ಅದನ್ನೂ ಮುಕೇಶ ಅವರೇ ಹಾಡಬೇಕು ಎಂದು ನಿರ್ಣಯವಾಯಿತು. ಅಲ್ಲಿಯವರೆಗೂ ಅವರು ಸಂಸ್ಕೃತ ಶ್ಲೋಕಗಳನ್ನು ಅಪ್ಪಿ ತಪ್ಪಿ ಕೂಡ ಹಾಡಿರ-ಲಿಲ್ಲ. ತುಳಸೀದಾಸರ ಅವಧೀ ಭಾಷೆಯನ್ನು ಸರಿಯಾಗಿ ಉಚ್ಚರಿಸುವದೇ ಮುಕೇಶರಿಗೆ ಕಠಿಣವೆನಿಸಿದಾಗ ಇನ್ನು ಸಮಾಸಪದಯುಕ್ತ ಸಂಸ್ಕೃತ ಶ್ಲೋಕಗಳನ್ನು ಅವರು ಹೇಗೆ ತಾನೆ ಹಾಡಬೇಕು ? ಆದರೆ ಮುಕೇಶ ಆ ಸಾಹಸ ಮಾಡಿ ತೋರಿಸಿದರು. ಅವರು ನನ್ನಿಂದ ಆ ಶ್ಲೋಕ ಹೇಳಿಸಿ, ಅದನ್ನು ಟೇಪರೆಕಾರ್ಡ್ ಮಾಡಿಕೊಂಡರು. ನಿತ್ಯ ಬೆಳಗ್ಗೆ ಎದ್ದು, ಅದನ್ನು ನುಡಿಸಿ, ತಾವೂ ಅದರೊಂದಿಗೆ ಹಾಡುವ ಅಭ್ಯಾಸ ನಡೆಸಿದರು. ಎರಡು ವಾರ ಕಾಲ ಹೀಗೆ ಅವರ ಅಭ್ಯಾಸ ನಡೆಯಿತು. ಧ್ವನಿಮುದ್ರಣದ ದಿನ ಮುಕೇಶ ಆ ಶ್ಲೋಕವನ್ನು ಹಾಡಿದ್ದನ್ನು ಕೇಳಿದವರು ಮುಕೇಶರಿಗೆ ಸಂಸ್ಕೃತ ಜ್ಞಾನ ಇಲ್ಲ ಎಂದು ಹೇಳಲಾರದಂತಿದ್ದರು.

ನಂತರ ಎಚ್ ಎಂ ವಿ ಅವರು ರಾಮಾ-ಯಣದ ಏಳರ ಬದಲು ಎಂಟು ಎಲ್ ಪಿ ರಿಕಾರ್ಡುಗಳನ್ನು ಮಾಡಬೇಕೆಂದು ನಿರ್ಧರಿಸಿದರು. ಎಂಟನೇ ರಿಕಾರ್ಡಿನ ಧ್ವನಿ ಮುದ್ರ-ಣದ ಕಾಲಕ್ಕೆ ಮುಕೇಶ ಅವರಿಗೆ ಅಮೇರಿಕೆಗೆ ಪ್ರಯಾಣ ಕೈಕೊಳ್ಳುವ ಗಡಿಬಿಡಿ. ತಮ್ಮ ಎಡೆಬಿಡದ ಕಾರ್ಯಕ್ರಮಗಳಲ್ಲೂ ಅವರು ಬಿಡುವು ಮಾಡಿಕೊಂಡು ರಾಮಾಯಣದ ಧ್ವನಿಮುದ್ರಣ ಕಾರ್ಯವನ್ನು ಪೂರೈಸಿ ಕೊಟ್ಟರು. ಧ್ವನಿಮುದ್ರಣ ಕಾರ್ಯ ಮುಗಿದ ದಿನ, "ನನ್ನ ಜೀವನದ ಮಹಾ ಕಾರ್ಯವೊಂದು ಪೂರೈಸಿದಂತಾಯಿತು," ಎಂದು ಉದ್ಗಾರ ಹೊರಡಿಸಿದರು. ಈ ಮಹಾಕಾರ್ಯ ಪೂರೈಸಿದೊಡನೆ ಪರಮಾತ್ಮನು ಅವರನ್ನು ಬರಮಾಡಿ ಕೊಳ್ಳುವನೆಂದು ಯಾರು ತಾನೇ ಅರಿತಿ-ದ್ದರು !

ತಾವು ಚಲಚ್ಚಿತ್ರದಲ್ಲಿ ದುಡಿಯುವವರು ಎಂಬ ಹೆಮ್ಮೆ ಅದರಲ್ಲಿಯ ಕಲಾವಿದರಿಗೆ ಇದ್ದೀತು. ಆದರೆ ಮುಕೇಶರಂಥವರು ತನ್ನ ಕ್ಷೇತ್ರದಲ್ಲಿ ಪರಿಶ್ರಮಿಸಿದರು ಎಂಬ ಹೆಮ್ಮೆ ಚಲಚ್ಚಿತ್ರರಂಗಕ್ಕೆ ಖಂಡಿತ ಇದೆ ಎಂದು ಹೇಳದಿರಲಾರೆ. ✡

ದಕ್ಷಿಣ ಆಫ್ರಿಕದ ಝುಲು ಜನಾಂಗದವರಷ್ಟು ಕ್ಷಾತ್ರಪ್ರವೃತ್ತಿಯ ಜನ ಇನ್ನೆಲ್ಲೂ ದೊರೆಯಲಿಕ್ಕಿಲ್ಲ. ಅಲ್ಲಿಯ ಹಿರಿಯರ ದೃಷ್ಟಿಯಲ್ಲಿ ಯುವಕನೊಬ್ಬ ನಾಲ್ವತ್ತು ತಲಪುವ ವರೆಗೆ ಆತ ಮದುವೆಯ ಬಗ್ಗೆ ಯೋಚಿಸುವುದೂ ಅಪರಾಧ. ಅಲ್ಲಿಯ ವರೆಗೆ ಆತ ಕ್ಷಾತ್ರಧರ್ಮಕ್ಕೊಪ್ಪುವಂತೆ ಯೋಧನಾಗಿ ಕಠಿಣ ಜೀವನ ನಡೆಸಬೇಕು. ನಾಲ್ವತ್ತು ವರ್ಷಗಳಾದ ನಂತರ ಹೋರಾಡುವ ಶಕ್ತಿ ಅವನಲ್ಲಿರುವುದಿಲ್ಲವಾದ್ದರಿಂದ ಅನಂತರ ಮದುವೆಯಾಗಿ ಗಾರ್ಹಸ್ಥ್ಯಕ ಜೀವನವನ್ನು ನಡೆಸಲು ಅಲ್ಲಿಯ ಹಿರಿಯರಿಂದ ಅವನಿಗೆ ದೊರೆಯುತ್ತದೆ.



ಐಟೆಕ್ಸ್
ಸೌಂದರ್ಯ ಸಾಧನಗಳು
EYETEX
BINDI
EYETEX
BINDI®
DELUXE
MATT FINISH
EYETEX
BINDI
DELUXE
EYETEX
REGD.
EYETEX
DELUXE
KUMKUM
EYETEX
KUMKUM
PASTE
ARAVIND LABORATORIES MADRAS-600 033

ವೈದ್ಯಕೀಯ ವರದಿಗಳು

ಲ್ಯುಕೇಮಿಯಾ ಹಾಗೂ ಮೇದೋಜೀರಕ

ಲ್ಯುಕೇಮಿಯ (ರಕ್ತದ ಕ್ಯಾನ್ಸರ್)ಕ್ಕೂ ಮೇದೋಜೀರಕ ಗ್ರಂಥಿಗಳಿಗೂ ಸಂಬಂಧವಿದೆಯೆ? ಹಾಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಇತ್ತೀಚಿನ ತಮ್ಮ ಪ್ರಯೋಗಗಳು ಆ ಸಾಧ್ಯತೆಯನ್ನು ನಿಶ್ಚಿತವಾಗಿಯೂ ಸೂಚಿಸುತ್ತವೆ ಎಂದು ನೋಬೆಲ್ ಬಹುಮಾನಿತ ವಿಜ್ಞಾನಿ ಡಾ. ಚಾರ್ಲ್ಸ್ ಹಗನ್ಸ್ ಹೇಳುತ್ತಾರೆ. ಅವರು ಕೆಲವು ಇಲಿಗಳಲ್ಲಿ ಲ್ಯುಕೇಮಿಯವನ್ನು ಕೃತಕವಾಗಿ ಉಂಟುಮಾಡಿ ಅವುಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿದರು; ಒಂದು ಗುಂಪಿನ ಇಲಿಗಳ ಮೇದೋಜೀರಕವನ್ನು ತೆಗೆದುಹಾಕಿದಾಗ ಕೇವಲ ನಾಲ್ಕೈದು ದಿನಗಳಲ್ಲಿ ಶೇಕಡಾ ನಾಲ್ವತ್ತರಷ್ಟು ಇಲಿಗಳು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಲ್ಯುಕೇಮಿಯದಿಂದ ಮುಕ್ತವಾದವು. ಇನ್ನುಳಿದವು. ಆಗಲಿಲ್ಲ. ಅವುಗಳಿಗೆ ಹಗನ್ಸ್‌ರು ಸಾಮಾನ್ಯವಾಗಿ ನೀಡಲಾಗುವ ಚಿಕಿತ್ಸೆಯನ್ನೇ ನೀಡಿದಾಗ ಲ್ಯುಕೇಮಿಯಾದಿಂದ ಪೀಡಿತವಾದ ಆ ಇಲಿಗಳು ಡಾಕ್ಟರರ ನಿರೀಕ್ಷೆಯನ್ನೂ ಮೀರಿ ಸುಮಾರು ನೂರು ದಿನ ಬದುಕುಳಿದವು. ಆದರೆ ಈ ಸೌಲಭ್ಯ ನೀಡದ ಇನ್ನೊಂದು ಗುಂಪಿನ ಇಲಿಗಳು ರೋಗ ತಗುಲಿದ ಹದಿನೆಂಟು ದಿನಗಳಲ್ಲಿ ಸತ್ತುಹೋದವು. ಮೇದೋಜೀರಕದ ಯಾವ ಅಂತಃಸ್ರಾವಿಯು ಲ್ಯುಕೇಮಿಯಕ್ಕೆ ಕಾರಣವಾಗಬಹುದೆಂಬುದು ಸ್ವತಃ ಚಾರ್ಲ್ಸ್ ಹಗನ್ಸರಿಗೇ ಗೊತ್ತಿಲ್ಲ. ಆದರೆ ಲ್ಯುಕೇಮಿಯದ ಬಗೆಗೆ ನಡೆಯುತ್ತಿರುವ ಬಹುತರವಾದ ಸಂಶೋಧನೆಗಳಿಗೆ ತಮ್ಮ ಈ ಪ್ರಯೋಗ ಹೊಸ ತಿರುವನ್ನು ನೀಡುತ್ತದೆಂದು ಅವರು ಹೇಳುತ್ತಾರೆ. ಲ್ಯುಕೇಮಿಯದ ಬಗೆಗಿನ ಪ್ರಯೋಗಗಳು ಮೇದೋಜೀರಕವನ್ನು ಒಳಗೊಳ್ಳುತ್ತಿರುವುದು ಇದೇ ಮೊದಲು.

ವಾರ್ಫಾರಿನ್ನಿನ ಬಗೆಗೆ ಎಚ್ಚರವಿರಲಿ

ರಕ್ತದಲ್ಲಿನ ಕರಣೆಗಳನ್ನು ಕರಗಿಸುವುದಕ್ಕೆ ಸಾಮಾನ್ಯವಾಗಿ ಬಳಸಲಾಗುತ್ತಿರುವ ಔಷಧಗಳ ಪೈಕಿ ವಾರ್ಫಾರಿನ್ ಒಂದು. ವಾರ್ಫಾರಿನ್ನನ್ನು ಸೇವಿಸಿದ ಇಲಿಗಳಿಗೆ ಸ್ವಲ್ಪ ಗಾಯವಾದರೂ ವಿಪರೀತವಾಗಿ ರಕ್ತಸ್ರಾವವಾಗಿ ಸಾಯುವುದರಿಂದ ಅದನ್ನು ಮೂಷಕವಿಷವಾಗಿಯೂ ಉಪಯೋಗಿಸುವುದಿದೆ.

ಆದರೆ ಈ ಔಷಧಿ ಗರ್ಭಸ್ಥ ಶಿಶುಗಳ ಮೇಲೆ ವಿಪರೀತವಾದ ಪರಿಣಾಮವನ್ನು ಬೀರುವುದರಿಂದ ಇನ್ನು ಮುಂದೆ ಡಾಕ್ಟರರು ವಾರ್ಫಾರಿನ್ನನ್ನು ರೋಗಿಗಳಿಗೆ ವಿಧಿಸುವಾಗ ಸ್ವಲ್ಪ ಹೆಚ್ಚು ಜಾಗ್ರತರಾಗಿರಬೇಕಾಗಿದೆ.

ಗರ್ಭಸ್ಥ ಶಿಶುಗಳ ಮೇಲೆ ವಾರ್ಫಾರಿನ್ ಬೀರುವ ದುಷ್ಪರಿಣಾಮವನ್ನು ಕುರಿತು ಇತ್ತೀಚೆ ಬ್ರಿಟಿಶ್ ವೈದ್ಯಕೀಯ ಪತ್ರಿಕೆಯಾದ 'ಲ್ಯಾನ್ಸೆಟ್'ನಲ್ಲಿ ಸಾಕಷ್ಟು ಪತ್ರಗಳು ಪ್ರಕಟವಾಗಿವೆ.

ಆ ಪ್ರಕಾರ ಇದು ಗರ್ಭಸ್ಥ ಶಿಶುವಿನ

ಬೆರಳುಗಳನ್ನು ಮೊಟಕುಗೊಳಿಸುವುದಲ್ಲದೆ ತಲೆಯು ಸಾಮಾನ್ಯ ಆಕಾರದ್ದಾಗಿ ಬೆಳೆಯಲು ಬಿಡುವುದಿಲ್ಲ. ಅಲ್ಲದೆ ಮೃದ್ವಸ್ಥಿಯೂ ಸಿಕ್ಕಾಪಟ್ಟೆಯಾಗಿ ಬೆಳೆಯುವುದು. ಚಿಕ್ಕ ತಲೆಯ ಮಕ್ಕಳು ಸಾಮಾನ್ಯವಾಗಿ ಮಂದ ಬುದ್ಧಿಯವರಾಗಿರುವುದು ಕಂಡುಬಂದಿದೆ. ಪ್ರಯೋಗ ಪಶುಗಳಿಗೆ ವಾರ್ಫಾರಿನನ್ನು ಕೊಟ್ಟಾಗ ಬಹುತೇಕ ಪ್ರಾಣಿಗಳಲ್ಲಿ ಗರ್ಭಪಾತವಾಯಿತು. ಆದ್ದರಿಂದ ವಾರ್ಫಾರಿನನ್ನು ಡಾಕ್ಟರರು ವಿಧಿಸುವಾಗ ಹೆಚ್ಚು ಎಚ್ಚರಿಕೆ ವಹಿಸುವುದು.

ಪೆನ್ಸಿಲಿನ್ನಿಗೆ ಇನ್ನು ನೀವು ಹೆದರಬೇಕಾಗಿಲ್ಲ


ಪೆನ್‌ಸಿಲಿನ್ ಪ್ರತಿಜೈವಿಕಗಳಲ್ಲಿ ಒಂದು ಪ್ರಭಾವಶಾಲಿಯಾದ ಔಷಧ. ಸಾಮಾನ್ಯ ಔಷಧಗಳಿಗೆ ಜಗ್ಗದ ಕೆಲವು ಬಗೆಯ ರೋಗಾಣುಗಳನ್ನು ಇದರಿಂದ ತಹಬಂದಿಗೆ ತರಬಹುದಾದರೂ ಶೇಕಡಾ ಹತ್ತರಷ್ಟು ಜನರು ಪೆನ್ಸಿಲಿನ್ನಿಗೆ ಅಲರ್ಜಿಕರಾಗಿರುವುದರಿಂದ ಅವರಿಗೆ ಇದು ಒಗ್ಗುವುದಿಲ್ಲ.

ಆದರೆ ಒಗ್ಗುವಂತಾದರೆ ಎಷ್ಟು ಚೆನ್ನ! ಸದ್ಯದ ಲಕ್ಷಣಗಳ ಮೇಲೆ ಹೇಳುವುದಾದರೆ ಆ ದಿನ ಇನ್ನು ದೂರವಿಲ್ಲ.

ಅದು ಸಾಧ್ಯವಾಗಬೇಕಾದರೆ ಮೊದಲು ಶರೀರದಲ್ಲಿ ಪ್ರತಿವಿಷವಸ್ತುಗಳ ಉತ್ಪಾದನೆಯನ್ನು ತಡೆಗಟ್ಟುವ ವಿಧಾನ ಅವಗತವಾಗಬೇಕು. ಶರೀರದಲ್ಲಿನ ಎರಡು ಬಗೆಯ ಜೀವಕಣಗಳು ಸೇರಿ ಪರಸ್ಪರ ಸಮನ್ವಯದಿಂದ ಪ್ರತಿವಿಷವಸ್ತುಗಳನ್ನು ಉತ್ಪಾದಿಸುತ್ತವೆ. ಇವೆರಡೂ ಕಣಗಳು ಪ್ರತಿವಿಷಜನಕವನ್ನು ಸರಿಯಾಗಿ ಗುರುತಿಸದ ಹೊರತು ಪ್ರತಿವಿಷ ವಸ್ತುಗಳ ಉತ್ಪಾದನೆ ಸಾಧ್ಯವಾಗುವುದಿಲ್ಲ. ಅರ್ಥಾತ್ ಇವುಗಳ ಈ ಕಾರ್ಯವಿಧಾನದಲ್ಲಿ ತೊಡಕನ್ನುಂಟು ಮಾಡಿದರೆ ಅಲರ್ಜಿ ಸಂಭವಿಸುವುದೇ ಇಲ್ಲ.

ಈ ವಿಚಾರಸರಣಿಯನ್ನು ಅನುಸರಿಸಿಯೇ ಇತ್ತೀಚೆ ಡೇವಿಡ್ ಕಾಟ್ಜ್ ಎಂಬ ವಿಜ್ಞಾನಿಗಳ ನೇತೃತ್ವದಲ್ಲಿನ ತಂಡವೊಂದು ಇಲಿಗಳ ಮೇಲೆ ಯಶಸ್ವಿಯಾದ ಪ್ರಯೋಗವನ್ನು ನಡೆಸಿತು. ಅದು ಪ್ರತಿವಿಷಜನಕವನ್ನು ಸಂಶ್ಲೇಷಣಾತ್ಮಕವಾದ ಒಂದು ಬಗೆಯ ಪ್ರೋಟೀನಿಗೆ ಸೇರಿಸಿ ಚುಚ್ಚುಮದ್ದಿನ ರೂಪದಲ್ಲಿ ಇಲಿಗಳಿಗೆ ಕೊಟ್ಟಾಗ ಪ್ರತಿವಿಷಜನಕವು ಒಂದು ಬಗೆಯ ಜೀವಕಣಗಳಲ್ಲಿ ಪ್ರತಿಕ್ರಿಯೆಯನ್ನುಂಟು ಮಾಡಿದರೆ ವಾಹಕವಾಗಿ ಬಳಸಲಾದ ಆ ಸಂಶ್ಲೇಷಣಾತ್ಮಕ ಪ್ರೋಟೀನನ್ನು ಇನ್ನೊಂದು ಬಗೆಯ ಜೀವಕಣಗಳು 'ಗುರುತಿಸಿದವು'. ಅರ್ಥಾತ್ ಅದು ಪ್ರತಿವಿಷಜನಕವೆಂದು ತಪ್ಪಾಗಿ ಭಾವಿಸಿ ಮೋಸ ಹೋದವು. ಹೀಗಾಗಿ ಪ್ರತಿವಿಷವಸ್ತುಗಳ ಉತ್ಪಾದನೆ ಅವುಗಳಿಂದ ಸಾಧ್ಯವಾಗಲಿಲ್ಲ. ಈ ಚುಚ್ಚುಮದ್ದನ್ನು ಮೇಲಿಂದ ಮೇಲೆ ಕೊಟ್ಟಾಗ ಪ್ರತಿವಿಷಜನಕಕ್ಕೆ ಮೊದಲು ಪ್ರತಿಕ್ರಿಯಿಸಿದ ಇನ್ನೊಂದು ಬಗೆಯ ಜೀವಕಣಗಳೂ 'ಸ್ತಬ್ಧ'ವಾದವು. ಈ ಚುಚ್ಚುಮದ್ದಿನ ಪ್ರಭಾವ ಇಲಿಗಳಲ್ಲಿ ಆರು ತಿಂಗಳ ವರೆಗೂ ಇತ್ತು. ಅಂದರೆ ಆರು ತಿಂಗಳವರೆಗೂ ಅವು ಅಲರ್ಜಿಯಿಂದ ದೂರವಾಗಿದ್ದವು.

ಈ ವಿಧಾನವನ್ನು ಇನ್ನಷ್ಟು ಪರಿಷ್ಕರಿಸಿದರೆ ಬೇರೆ ಬಗೆಯ ಅಲರ್ಜಿಗಳನ್ನು ದೂರ ಮಾಡಲು ಸಾಧ್ಯವಾಗಬಹುದು. ✡



ಗೆದ್ದಲು ಕಟ್ಟಿಗೆಯನ್ನು ತಲುಪುವದಕ್ಕಾಗಿ ಐದು ಇಂಚು ದಪ್ಪದ ಕಾಂಕ್ರೀಟನ್ನೂ ಕೊರೆಯಬಲ್ಲದು.

ಕೆಲವೊಮ್ಮೆ ಸತ್ಯ ಕಟ್ಟುಕಥೆಗಳಿಗಿಂತಲೂ ವಿಚಿತ್ರವಾಗಿರುತ್ತದೆ– ಇದು ನಮ್ಮ ಪ್ರಶ್ನೆಗೆ ಕೃಷ್ಣನ ಉತ್ತರ.

"ಇಂಥಹ 'ಹೈಕಿಂಗ್'ಗೆ ಬರುವಾಗ ಇಷ್ಟು 'ಮಜಬೂತು' ಬ್ರೀಫ್‌ಕೇಸನ್ನು ಯಾಕೆ ತಂದೆಯಪ್ಪಾ?"– ಇದು ನಮ್ಮ ಪ್ರಶ್ನೆ.

"ಬೋರ್ಲ್ಸ್." ನಾವು ಅವಿರೋಧವಾಗಿ ತೀರ್ಮಾನಿಸಿದೆವು

"ಹಾಗಾದರೆ, ನಿಮಗೆ ಸುನಂದಳ ಪರಿಚಯವಿಲ್ಲ," ಎಂದ ಕೃಷ್ಣ.

"ಆದರೆ ತೊಂದರೆಯಿಲ್ಲ," ಎಂದು ನಾವು ತಲೆ ಆಡಿಸಿದೆವು. ಕೃಷ್ಣನನ್ನು ಮಾತಿಗೆ ಎಳೆಯುವುದು ಮಾತ್ರ ಮುಖ್ಯವಾಗಿತ್ತು ನಂಥವರು ಬೇಕು. ನಮಗೆ ದಣಿವೇ ತಿಳಿಯಲಾರದು.

"ಒಂದು ಹತ್ತು ವರ್ಷಗಳ ಹಿಂದೆ ಮಧುಸೂದನ ಭಟ್ಟ ಎನ್ನುವವರು ಆಕಸ್ಮಿಕ ದುರ್ಘಟನೆಯಲ್ಲಿ ದುರ್ಮರಣಕ್ಕೀಡಾದುದು ಯಾರಿಗಾದರೂ ನೆನಪಿದೆಯೋ?" ಕೃಷ್ಣ ಪ್ರಾರಂಭಿಸಿದ. ನಾವು ಮುಖ ಮುಖ ನೋಡಿಕೊಂಡೆವು.

ಹೌದು. ಗೋಪಾಲಣ್ಣನಿಗೆ ಅಸ್ಪಷ್ಟವಾಗಿ ನೆನಪಿದೆ. ಟೈಮ್ಸ್‌ನಲ್ಲಿ ಬಂದಿತ್ತು. ಹವ್ಯಕ ಸಂಘದವರು ಸಂತಾಪಸೂಚಕ ನಿರ್ಣಯವನ್ನು ಮಂಡಿಸಿದ್ದಾರೆ. ಹೆಂಡತಿಯೊಡನೆ ವಿಹಾರಕ್ಕಾಗಿ ಮಾಥೆರಾನಿಗೆ ಹೋಗಿದ್ದರಂತೆ.

ದವಪ್ರಾಣಿ

ಕೆ. ಗೋವಿಂದ ಭಟ್ಟ

ನಮಗೆ. ಅವನು ಸೂಟ್‌ಕೇಸನ್ನೇ ತಂದಿದ್ದರೂ ನಮಗೇನು ನಷ್ಟ?

ಖಂಡಾಲದ ಗುಡ್ಡ ಬೆಟ್ಟಗಳ 'ಹೈಕಿಂಗ್' ಪ್ರೋಗ್ರಾಂ ಹಾಕಿದ್ದೆವು. ರಾಮಭಾವ, ಗೋಪಾಲಣ್ಣ, ಶರ್ಮ ಮತ್ತು ನಾನು. ಡೆಕ್ಕನ್ ಎಕ್ಸ್‌ಪ್ರೆಸ್‌ನಲ್ಲಿ ಮಾತಿಮಾತು ಆಡುತ್ತ ನಗುತ್ತಿದ್ದಾಗ ನಮ್ಮನ್ನು ಕೂಡಿಕೊಂಡ ವ್ಯಕ್ತಿ ಕೃಷ್ಣ. ಒಳ್ಳೆಯ ಮಾತುಗಾರ. ನಮ್ಮವನೇ ಬೇರೆ. ಪರಿಚಯ ಬೆಳೆಯುವುದು ಮತ್ತೆ ಎಷ್ಟರದು? ಮಧ್ಯಾಹ್ನದ ಹೊಗೆ ಹತ್ತಿ, ಇಳಿದು ದಣಿದಿದ್ದೆವು. ಒಂದೆಡೆ ಕುಳಿತು ಲಂಚ್‌ಪಿಟ್, ಪೊಟ್ಟೆಗಳನ್ನು ಕಬಳಿಸುತ್ತಿದ್ದಾಗ ಮೇಲಿನ ಸಂಭಾಷಣೆ ನಡೆದುದು. ಇಂತಹ ಪಾರ್ಟಿಗಳಲ್ಲಿ ಕೃಷ್ಣ-

ಅಲ್ಲಿ ಒಂದು ಅಗಾಧ ಪ್ರಪಾತಕ್ಕೆ ಆಕಸ್ಮಾತ್ ಬಿದ್ದು ತಕ್ಷಣ ಮೃತರಾದರಂತೆ. ಆದರೆ, ಅವರ ಹೆಂಡತಿ–ಅದು ಆಕಸ್ಮಿಕವಲ್ಲ. ಒಟ್ಟಿಗೆ ಬಂದಿದ್ದ ತಮ್ಮ ಬೀಳುವಂತೆ ದೂಡಿದ್ದ. ಅದು ಕೊಲೆ–ಎಂದು ಆರೋಪಿಸಿದ್ದಳು. ಅದೇ ಅಲ್ಲವೇ? ನಿಜ. ವಿಚಾರಣೆಯೂ ನಡೆದಿತ್ತು. ಹೇಳಿದ ಹಾಗೆ, ಮತ್ತೆ ಏನಾಯಿತದು?

"ಡೇಲ್ ಡಾಂ ಜರ್", ಎಂದ ಕೃಷ್ಣ. "ಮತ್ತೆ ಆಗುವುದೇನು? ಅವನನ್ನು ಇವನೇ ಕೊಂದ ಎಂದು ನಾನೂ ಹೇಳಿಯೇನು. ಆದರೆ ಸಾಕ್ಷಿ? ಆಗಿದ್ದು ಅಷ್ಟೇ. ವಾದಗಟ್ಟಲೆ ವಿಚಾರಣೆಯಾಗಿ, ಆ ತಮ್ಮನಿಗೆ ಪಾಪ, ಇಲ್ಲದ ಹಿಂಸೆಯನ್ನು ಕೊಟ್ಟು, ಕಡೆಗೆ 'ಆಕಸ್ಮಿಕ'



ಎಂದು ಸಾರಿದ್ದು. ಹೋದವ ಹೋದ್ದೇ..."

ಕುತೂಹಲದ ಪ್ರಸಂಗ–ಸೇಂಡ್‌ವಿಚ್‌ಗಳ ಲೆಕ್ಕ ತಪ್ಪಿತು.

ಆ · ·ಮಧುಸೂದನನ ಹೆಂಡತಿಯೇ ಸುನಂದ. ಸರ್ವೇಸಾಧಾರಣ ಹುಡುಗಿ ಅವಳು. ತಂದೆಗೆ ಚೆಂಬೂರಿನಲ್ಲಿ ದೊಡ್ಡ ಜವಳಿ ಮಳಿಗೆ ಇದೆ. ಸೌಕರ್ಯಕ್ಕೆ ಕೊರತೆ ಇಲ್ಲ. B. A. ಆಯಿತು. B. Ed ಆಯಿತು. ಅದೇ ಸಮಯಕ್ಕೆ, ಈ ವರ್ಷ ಮದುವೆಯಾಗಲೇ ಬೇಕೆಂದು ಛಲ ತೊಟ್ಟು ಹತ್ತಾರು ಕಡೆಗಳಲ್ಲಿ ಸೂಚನೆ ಕೊಟ್ಟವ ಮಧುಸೂದನ. ಭಾಭಾ ಅಣು ಕೇಂದ್ರದಲ್ಲಿ ಉತ್ತಮ ಹುದ್ದೆ ಇದೆ. ಕಂಪನಿಯೇ ಮನೆಯನ್ನು ಕೊಟ್ಟಿದೆ.

"ಸಾಕು" ಎಂದರು ಸುನಂದಳ ತಂದೆ. ಏನೋ ಒಂದು ಥರ ಕಾಣುತ್ತಾನಪ್ಪ–ಎಂದು ಹೆಂಡತಿ ಆಕ್ಷೇಪಿಸಿದಾಗ, ನಿನಗೆ ಬುರುಡೆ ಇಲ್ಲ. ಎಂದು ಬಾಯಿ ಮುಚ್ಚಿಸಿದರು. ಮದುವೆ ನಡೆದೇ ಹೋಯಿತು.

ಹೆಂಡತಿಯಾದರೇನು? ಅವಳ ದೇಹದ ಮೇಲೆ ಪ್ರಭುತ್ವ ಸ್ಥಾಪಿಸಿದರಾಯಿತೇ? ಮನಸ್ಸನ್ನು ಗೆಲ್ಲಬೇಡವೇ? ಮಧುಸೂದನ ಇದರಲ್ಲೆಲ್ಲಾ ತಲೆ ಕೆಡಿಸಿದವನಲ್ಲ. ಮನಸ್ಸು ಎಲ್ಲಿದೆ? ಎನ್ನುವವರ ಕೂಟದವ ಅವನು. ಈ ಸಂಗತಿ ಸುನಂದಳಿಗೆ ಒಂದೊಂದಾಗಿ ತಿಳಿದುದು ಅವಳ ಮೈದುನ ಶಂಕರನಿಂದ."

ಮಧುಸೂದನ ಉನ್ನತ ಹುದ್ದೆಯಲ್ಲಿದ್ದಾನಷ್ಟೇ ಹೊರತು ಕುಟುಂಬಕ್ಕೆ ಏನೂ ಪ್ರಯೋಜನವಿರಲಿಲ್ಲ. ಹಾಗಾಗಿ ಕಾಲೇಜು ವ್ಯಾಸಂಗವನ್ನು ಕಷ್ಟದಿಂದಲೇ ಶಂಕರ ಮುಂದುವರಿಸಬೇಕಾಯಿತು. ಸಾಲವೋ-ಸೋಲವೋ, B. Com. ಮುಗಿದಾಗ ಅವನು ಒಂದು ಉಸಿರು ಬಿಟ್ಟ. ಸೆಕೆಂಡ್ ಕ್ಲಾಸಿನಲ್ಲಿ ಪಾಸಾಯಿತು. ಕೆಲಸದ ಬೇಟೆ ಶುರುವಾಯಿತು. ಬೇಸತ್ತು ಅಣ್ಣನಿಗೆ ಕಾಗದ ಬರೆದಾಯಿತು–ಒಂದು ಉಪಕಾರ ಮಾಡಿಬಿಡು ಅಣ್ಣ.

ಉತ್ತರ ಬಂತು– ಮಗ, ಫಸ್ಟ್‌ಕ್ಲಾಸಿನಲ್ಲಿ ಪಾಸಾಗಲು ನಿನಗೇನಾಗಿತ್ತು ಧಾಡಿ?

ನಿನ್ನಂತಹ ದಡ್ಡ ಶಿಖಾಮಣಿಗೆ ಕೆಲಸ ಕೇಳ ಹೋಗಿ ಮುಖಕ್ಕೆ ಮಂಗಳಾರತಿ ಮಾಡಿಕೊಳ್ಳಬೇಕೇನು? ಇತ್ಯಾದಿ. ಬೇಟೆ ಮತ್ತೂ ಕೆಲವು ಸಮಯ ನಡೆಯಿತು. ನಿಷ್ಫಲ. ಶಂಕರ ಕಳಕಳಿಯಿಂದ ಅಣ್ಣನನ್ನು ಬೇಡತೊಡಗಿದ. ಉತ್ತರವೇ ಬರಲಿಲ್ಲ. ಹೀಗಿರುವಾಗ ಅವನ ದೂರದ ಸಂಬಂಧಿ ಮೋಹನ ಊರಿಗೆ ಬಂದ. ಶಂಕರ ಅವನನ್ನು ಕಂಡಾಯಿತು. ಏನು! ಮಧುಸೂದನ ಹಾಗೆ ದೂರಿದನೆ! ಎನ್ನುವಾಗ ಮೋಹನನ ಮುಖ ವಿವರ್ಣವಾಯಿತೇಕೆ ಎಂದು ಶಂಕರನಿಗೆ ತಿಳಿಯಲಿಲ್ಲ.

ಮೋಹನನ ಪ್ರಯತ್ನದಿಂದಾಗಿಯೇ ಶಂಕರ ಬೊಂಬಾಯಿಗೆ ಬಂದ ಎನ್ನಬೇಕು. ಸಣ್ಣದೊಂದು ಕೆಲಸವಾದುದೂ ಅವನಿಂದಾಗಿಯೇ. ಸಂಬಳ ಏನೂ ಸಾಲದುದರಿಂದ ಮೋಹನನೊಂದಿಗೇ ಇರಬೇಕಾಯಿತು. ಆದರೆ ಕೆಲವೇ ದಿನಗಳಲ್ಲಿ ಅಣ್ಣ, 'ಮನೆಗೆ ಬಂದು ಇರಬಹುದಲ್ಲಾ' ಎಂದು ಕರೆದಾಗ ಅವನ ಆಶ್ಚರ್ಯಕ್ಕೆ ಎಣೆ ಇರಲಿಲ್ಲ. ಮೋಹನನ ಕೈವಾಡವೇ? ಮೋಹನನ ಮಾತುಗಳನ್ನು ನಿರಾಕರಿಸಲು ಅಣ್ಣನಿಗೆ ಕಷ್ಟವಾಗುತ್ತದೆ ಎಂದು ಅವನಿಗೆ ತಿಳಿದುಬಂದಿದೆ. ಅವರಿವರಲ್ಲಿ ಸೂಕ್ಷ್ಮವಾಗಿ ವಿಚಾರಿಸುವಾಗ, ಮೋಹನ ನಿನ್ನ ಅಣ್ಣನಿಗೆ ಎಷ್ಟು ದಿನ ಊಟ ಹಾಕಿದ್ದಾನೆ ಎಂದು ನಿನಗೆ ಗೊತ್ತೇ? ಎಂಬ ಉತ್ತರ ಸಿಕ್ಕಿದೆ!

ಇದನ್ನೆಲ್ಲ ಕೇಳುವಾಗ ಸುನಂದಳ ಮನಸ್ಸಿನ ತಳ ಕಲಕಿದ್ದರೆ ಆಶ್ಚರ್ಯವಿಲ್ಲ. "ನೀನು ಇಲ್ಲಿರಲು ಹೇಗೆ ಒಪ್ಪಿದರಪ್ಪಾ?" ಎಂದು ಅವಳು ಆಶ್ಚರ್ಯಗೊಂಡಳು.

"ನಿನಗೆ ಗೊತ್ತಾಗುವುದಿಲ್ಲವೇ ಅತ್ತಿಗೆ? ಶಂಕರ ಎಂದು ಒಮ್ಮೆ ಸಹಾ ನನ್ನನ್ನು ಅಣ್ಣ ಕರೆದವರಲ್ಲ. ಮಂಗ, ಅನ್ನ ಇಷ್ಟು ಬೇಯುವಾಗ ನಿನಗೆ ಜ್ಞಾನವಿರಲಿಲ್ಲವೇನೋ? ಮಂಗ, ಈ ಪೇಂಟನ್ನು ತೊಳೆದು ಹಾಕುತ್ತಿದ್ದರೆ ನಿನ್ನ ಕೈ ಕಳೆಯುತ್ತಿತ್ತೇನೋ? ಮಂಗ, ಅದು ಬೂಟ್ಸಿನ ಕಲೆ. ಈ ಬೆಡ್ ಶೀಟನಲ್ಲಿ ಹೇಗೆ ಬಂತು ಹೇಳು? ಎಂದು ಒಂದು ದಿನ ಗದರಿದರು ಅತ್ತಿಗೆ. ಇನ್ನೂ ಬೂಟ್ಸನ್ನು ಖರೀದಿಸಲಿಲ್ಲವಲ್ಲಾ ಅಣ್ಣಾ ಎಂದೆ. ಥೂ ಮಂಗ ಎಂದು ಬಿಟ್ಟರು ಅತ್ತಿಗೆ! ಹೀಗೆಯೇ ನಾನು ಮಾತ್ರ ಉಪಾಯವಿಲ್ಲದುದರಿಂದ ಇಲ್ಲಿ ಇರಲೇಬೇಕಾಗಿದೆ..."

ಹೌದು. ಅವಳಿಗೂ ಆ ಬೂಟ್ಸಿನ ಪರಿಚಯ ಚೆನ್ನಾಗಿ ಇದೆ!

ಆಫೀಸಿನಿಂದ ಬಂದು, ಕುರ್ಚಿಯಲ್ಲಿ ಕಾಲನ್ನು ಮೇಲಕ್ಕೆಳೆದುಕೊಂಡೇ ಮಧುಸೂದನನಿಗೆ ಚಾ ಕುಡಿಯಬೇಕು. ಬೂಟ್ಸನ್ನು ತೆಗೆಯಿರಿ ಎನ್ನುವಳು ಸುನಂದ. ಹೋ. ಸ್ಸಾರಿ ಸುನಿ' ಎನ್ನುತ್ತಾ ಮಧುಸೂದನ ಎದ್ದು ಹೋಗಿ ಮಂಚದಲ್ಲಿ ಕುಳಿತುಕೊಳ್ಳುವನು ಕಾಲನ್ನು ಮೇಲಕ್ಕೆಳೆದುಕೊಂಡೇ! ಸುನಂದ ನಿಟ್ಟುಸಿರು ಬಿಡುವಳು. ಎಷ್ಟು ಸಲ ಹೀಗೆ ನಡೆದಿರಲಿಲ್ಲ!

"ಒಂದು ದಿನ ಯಾರೋ ಇಬ್ಬರು ಬಂದಿದ್ದರು ಅತ್ತಿಗೆ. ಮಂಗ, ನೋಡುತ್ತಿಯೇನು? ಜ್ಯೂಸ್ ಮಾಡು ಎಂದರು ಅಣ್ಣ. ಜ್ಯೂಸ್ ತಂದಾಗ, ಇಷ್ಟು ಕಮ್ಮಿ ಯಾಕೆ ಮಾಡಿದ್ದು? ಮಂಗ ಎಂದರು. ಅಷ್ಟೇ ಟೊಮೆಟೋ ಇದ್ದುದು ಎಂದೆ. ನಿನಗೆ ಅನ್ನ ಹಾಕುವುದು ದಂಡ ಮತಿಮಂಗ ಎಂದರು ಅತ್ತಿಗೆ. ಆಗ ಆ ಬಂದವರು ಏನೆಂದರು ಗೊತ್ತೇನು? 'ಎಂ. ಸೂದನ್, ಯುವರ್ ಸರ್ವೆಂಟ್ ಮಂಗ ಸೀಮ್ಸ್ ಟು ಬಿ ಯೂಸ್‌ಲೆಸ್! ಅಣ್ಣ ಆಗ ನಗುತ್ತಾ ಇದ್ದುಬಿಟ್ಟರು ಅತ್ತಿಗೆ! ನಾನು ಒಳಗೆ ಹೋಗಿ ಅತ್ತೆ..."

*

"ಊಟ ಹಾಕಬಹುದಲ್ಲಾ ಸುನಿ"– ಎಂದ ಮಧುಸೂದನ ವಾಚು ನೋಡುತ್ತಾ.

"ನಿಮಗಿನ್ನೂ ಸ್ನಾನವೇ ಆಗಿಲ್ಲ?"

"ಸೆಕೆಯೇ ಇಲ್ಲವಲ್ಲ ಸುನಿ!"

ಸುನಂದ ಮಂಚದಲ್ಲಿ ಕುಳಿತು 'ಪ್ರಜಾಮತ' ಓದುತ್ತಿದ್ದ ಗಂಡನನ್ನೇ ನೋಡಿದಳು. ನನಗೂ ಗೊತ್ತಾಗುತ್ತದೆ ಶಂಕರ, ನಾನು ದುಡುಕಿದೆ ಎಂದು ಅವಳು ಮರುಗಿದಳು.

ಅದೇ ಸಮಯಕ್ಕೆ ಶಂಕರ ಬಂದ.

"ಮಂಗ ಹೊತ್ತಲ್ಲದ ಹೊತ್ತಿಗೆ ಇಲ್ಲಿಗೆ ಬರಲು ಇದು ಹೋಟೇಲೇನು ? ನಿನ್ನನ್ನು ಇಲ್ಲಿಗೆ ಬರಹೇಳಿದ್ದೇ ತಪ್ಪಾಯಿತು. ಸ್ವಲ್ಪವೂ ಮ್ಯಾನರ್ಸ್ ಇಲ್ಲ ?" "ನಾನು ನಿಮ್ಮ ಮಾವನ ಮನೆಗೆ ಹೋಗಿದ್ದೆ ಅಣ್ಣ. ನನಗೊಂದು ಒಳ್ಳೆಯ ಕೆಲಸ ನೋಡಿದ್ದಾರಂತೆ ಅವರು. ಇನ್ನು ಒಂದು ವಾರದಲ್ಲಿ ಸಿಗಹುದು ಅಣ್ಣ !"

"ಶಟಪ್ ಯು ಫೂಲ್. ಯಾರಲ್ಲಿ ಹೇಳಿ ಅಲ್ಲಿಗೆ ಹೋದೆ ? ಏನೆಂದು ಕೇಳಿದೆ ? ನನ್ನನ್ನು ಅವಮಾನಿಸುತ್ತೀಯಾ ಅಲ್ಲಿಗೆ ಹೋಗಿ ? ಗೆಟ್ ಔಟ್. ಹೋಗಿನ್ನು, ಇಲ್ಲಿ ಸ್ಥಳವಿಲ್ಲ. ಮಾವನಲ್ಲಿ ಕೂಡಲೇ ಹೇಳಿ ಬಿಡುತ್ತೇನೆ– ಅದನ್ನು ಕೇನ್ಸಲ್ ಮಾಡಲು. ಅಲ್ಲಿಗೆ ಇನ್ನು ಹೋದರೆ ಜಾಗ್ರತೆ."

ಅಂತೂ ಸುನಂದಳ ಮಧ್ಯಸ್ಥಿಕೆಯಿಂದ ಆ ದಿನ ಅಲ್ಲಿರಲು ಅವನಿಗೆ ಅಪ್ಪಣೆಯಾಯಿತು. ಆ ದಿನ ರಾತ್ರಿ ಅವಳನ್ನು ಎದೆಗೆ ಎಳೆದುಕೊಳ್ಳುತ್ತಾ ಮಧುಸೂಧನ ನುಡಿದ, "ಅವನನ್ನು ಹೇಗೆ ಹೊರಗೆ ತಳ್ಳುವುದು ಎಂದು ಯೋಚಿಸುತ್ತಿದ್ದೆ ಸುನಿ. ಎಷ್ಟು ಒಳ್ಳೆಯ ಛಾನ್ಸ್ ಸಿಕ್ಕಿತು ನೋಡು ! ಮಾವನ ಎದುರು ನನ್ನನ್ನು ಸಣ್ಣ ಮಾಡಬಹುದೇ ಅವನು ?" ಸುನಂದಳ ದೇಹ ಆ ಮಾತು ಗಳನ್ನು ಕೇಳುತ್ತಿದ್ದಂತೆಯೇ ಕೊರಡಿನಂತಾಯಿತು. ಆದರೆ ಮಧುಸೂದನ ಅದನ್ನು ಗಮನಿಸಲೇ ಇಲ್ಲ...! ಅವಳಿಗೂ ಗಮನವಿರಲಿಲ್ಲ. ಅವಳಿಗೆ ಗಂಡ ಆಗಾಗ ಸೀರೆಗಳನ್ನು ಪೇಂಟ್‌ಗಳನ್ನು ತರುತ್ತಿದ್ದಾಗ ಹೇಳುತ್ತಿದ್ದುದು ನೆನಪಾಗುತ್ತಿತ್ತು. "ಮಾವನ ಅಂಗಡಿಗೆ ಹೋದೆ ಸುನಿ. ಎಷ್ಟಾಯಿತು ? ಎಂದು ಕೇಳುವುದು. ದಾಕ್ಷಿಣ್ಯದಿಂದ ಇನ್ನೊಮ್ಮೆ ನೋಡುವ ಎನ್ನುತ್ತಾರೆ. ಹೇಗೆ ? ಬಿಂದೇಳು ಹೇಗಿದೆ ?"...'

ಮನಸ್ಸೆಂದರೆ ಮರ್ಕಟನ ಹಾಗೆ ನೋಡಿ– ಕೃಷ್ಣ ಮುಂದುವರಿಸಿದ: ಅದಕ್ಕೆ ಮದ್ಯ ಕುಡಿಸಿದರೆ ಹೇಗೆ ? ಮಧುಸೂದನನ ರೀತಿ ನೀತಿಗಳು ಸುನಂದಳ ಚಿತ್ರಭಿತ್ತಿಯನ್ನು ಕೆಡಿಸುತ್ತಲೇ ಹೋದುವು. ದಿನಗಳು ಉರುಳುತ್ತಿದ್ದ ಹಾಗೆಯೇ, ಎಂಥಹಾ ವ್ಯಕ್ತಿಯಪ್ಪಾ! ಎಂಬ ಜಿಗುಪ್ಸೆ ಬೆಳೆಯುತ್ತಲೇ ಹೋಯಿತು. ಆ ಗೋಡೆಯನ್ನು ಭೇದಿಸಲು ಮಧುಸೂದನ ಪ್ರಯತ್ನಿಸಲೇ ಇಲ್ಲ. ಅವನಿಗೆ ಅದರ ಪರಿವೆ ಇದ್ದರೆ ತಾನೇ !

ಅವಳ ಮನಸ್ಸು ಹಲವು ಯೋಜನೆಗಳ ಕಾರಸ್ಥಾನದಲ್ಲಿದ್ದಾಗ ಒಂದು ದಿನ ಮಧುಸೂದನ ಹೇಳಿದ– "ಸುನಿ, ನಾಡಿದು ಮಾಥೆರಾನಿನ ಪ್ರೋಗ್ರಾಂ ಹಾಕಿದ್ದೇನೆ ಒಂದು ವಾರ ಮಜಾವಾಗಿರುವ ಆಗದೇ ?" ಮಾಥೆರಾನಿಗೆ ಗಂಡನೊಡನೆ ಹೋಗಬೇಕೆಂದು ಅವಳು ಎಷ್ಟು ಬಾರಿ ಆಶಿಸಿದ್ದಳು! ಅವಳ ಕಣ್ಣುಗಳು ಹೊಳೆದುವು. ಆದರೆ ಇವನೊಡನೆ ! "ನನಗೆ ಮನಸ್ಸಿಲ್ಲ. ನಾನು ಬರುವುದಿಲ್ಲ."

ಮಧುಸೂದನ ಒತ್ತಾಯಿಸುವನೆಂದು ಆಕೆ ತಿಳಿದಿದ್ದಳು. ಅವನು ನಿರ್ವಿಕಾರವಾಗಿ, ಹಣ ಉಳಿಯಿತು– ಎಂದ. ಅವಳ ಮುಖ ಬಿಗಿಯಿತು. ಹಾಗಾದರೆ ಹೋಗುವ ಎಂದಳು ಸುನಂದ. ಒಂದು ನಿಮಿಷ ಯೋಚಿಸುತ್ತಿದ್ದು, ಮಧುಸೂದನ ನುಡಿದ—ನಾಳೆ ಶಂಕರನನ್ನು ಕರೆಯುತ್ತೇನೆ ಸುನಂದಳಿಗೆ ಗಂಡನ ಹೃದ್ಗತ ತಕ್ಷಣ ಅರ್ಥವಾಯಿತು. ಅವಳ ಹುಬ್ಬುಗಳು ಒಂದುಗೂಡಿದವು.

ಮಾಥೆರಾನಿನಲ್ಲಿ ನಡೆದ ದುರ್ಘಟನೆಯ ವಿಚಾರ ನಾನು ಆಗಲೇ ತಿಳಿಸಿದೆನಷ್ಟೇ...

"ನಿಲ್ಲು." ರಾಮಭಾವ ತಡೆದರು. "ಇದು ನಡೆಯಬಲ್ಲ ಸಂಗತಿಯೇ. ಇದರಲ್ಲಿ ವಿಚಿತ್ರ ವೇನು ?"

"ತಮ್ಮ, ಅಣ್ಣನನ್ನು ದೂಡಿ ಹಾಕಿದ್ದು ವಿಚಿತ್ರವಲ್ಲ ?" ಕೃಷ್ಣ ಮರುನುಡಿದ, "ದೂಡಿಹಾಕಿದ್ದರೂ ಆಶ್ಚರ್ಯವಲ್ಲ." ಶರ್ಮ ನುಡಿದರು, "ಅವನು ದೂಡಿದ್ದು ಹೌದೇ ಹಾಗಾದರೆ ?"

ಅದೇ ನಾನು ಹೇಳಹೊರಟಿದ್ದು. ಕೃಷ್ಣನೆಂದ– ನಂತರ ಏನಾಯಿತು ಎನ್ನುತ್ತೀರಿ ? ತಮ್ಮನ ವಿಚಾರಣೆಯಾಗಿ, ಬಿಡುಗಡೆಯಾಗಿ

ಆರು ತಿಂಗಳುಗಳು ಕಳೆದಿರಬಹುದು. ಸುನಂದ ಒಂದು ದಿನ ಶಂಕರನಿಗೆ ಫೋನು ಮಾಡಿ, ಅವಳನ್ನು ಕಾಣುವಂತೆ ಹೇಳಿದಳು. ಅವನ ಪರಿಚಯು ನಿಮಗೆ ಆಯಿತಲ್ಲಾ. ಅವನು ವಿಧೇಯನಂತೆ ಬಂದ.

"ನಾನು ಹುಚ್ಚಿಯಂತೆ ವರ್ತಿಸಿದೆ ಶಂಕರ. ನನಗೆ ಏನಾಗಿತ್ತು ಎಂದೇ ನನಗೆ ತಿಳಿದಿರಲಿಲ್ಲ. ನನ್ನದು ತಪ್ಪಾಯಿತು ಶಂಕರ. ಇದನ್ನೇ ಯೋಚಿಸಿ ಯೋಚಿಸಿ ನಾನು ಕಂಗಾಲಾಗಿದ್ದೇನೆ ಶಂಕರ..." ಆಕೆ ನುಡಿಯುತ್ತಲೇ ಇದ್ದಳು. ಅವಳ ಕಣ್ಣುಗಳು ತುಂಬುವುದನ್ನು ಶಂಕರ ಕಂಡ. ಅವನಿಗೆ ಗಲಿಬಲಿಯಾಯಿತು.

"ಬಿಡಿ ಅತ್ತಿಗೆ, ಆ ದುಃಖದಲ್ಲಿ ನೀವು ಏನು ಹೇಳಿದ್ದರೂ ಅದು ಸಾಧುವೇ. ನೀವು ನನ್ನನ್ನು ಆಕ್ಷೇಪಿಸಿದ್ದು ಆಶ್ಚರ್ಯವಲ್ಲ."

"ಹಾಗಲ್ಲ ಶಂಕರ. ಅವರನ್ನು ನೀನು ದೂಡಿ ಹಾಕಿರಲು ಸಾಧ್ಯವೇ ಇಲ್ಲ. ನನಗೆ ಅದು ಖಚಿತವಾಗಿ ಗೊತ್ತು."

"ಆದಕಾರಣವೇ ಅದು ಆಕಸ್ಮಿಕವೆಂದು ತೀರ್ಮಾನವಾಯಿತಲ್ಲ ?" ಶಂಕರ ಕೇಳಿದ.

"ಹಾಗಲ್ಲ. ಅದು... ಅದು ಆಕಸ್ಮಿಕವಲ್ಲ ಶಂಕರ. ಅವರಾಗಿ ಬೀಳಲಿಲ್ಲ..."

ಶಂಕರನಿಗೆ ಒಂದು ಕ್ಷಣ ಏನೂ ಅರ್ಥವಾಗಲಿಲ್ಲ. ಆದಾಗ ಅವನು ದಿಙ್ಮೂಢನಾಗಿ ಅವಳನ್ನೇ ಎವೆಯಿಕ್ಕದೆ ನೋಡಿದ. ಸುನಂದ ತಲೆತಗ್ಗಿಸಿದಳು. ಒಂದು ನಿಮಿಷ ಅಲ್ಲಿ ದಟ್ಟ ಮೌನ ಕವಿಯಿತು.

ಸುನಂದಳೇ ಪುನಃ ನುಡಿದಳು, "ನೋಡು ಶಂಕರ, ಆದದ್ದು ಆಯಿತು. ಇದೆಲ್ಲವನ್ನೂ ಸರಿಪಡಿಸಲು ಒಂದೇ ಒಂದು ದಾರಿಯಿದೆ. ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಹೇಳಲೇನು ?" ಶಂಕರ, ಹೂಂ ಅಂದ.

"ನನ್ನನ್ನು ಮದುವೆಯಾಗುತ್ತೀಯಾ ?"

ಈಗ ಮಾತ್ರ ಶಂಕರ ದಿಗ್ಭ್ರಮೆಗೊಂಡ. "ಇದೊಂದೇ ದಾರಿ ಶಂಕರ. ಇದೊಂದೇ ದಾರಿ," ಎಂದು ಅವಳು ಅಂಗಲಾಚಿದಳು.'

"ಈಗ ಏನೆನ್ನುತ್ತೀರಿ?" ಎಂದ ಕೃಷ್ಣ ಕಥೆಯನ್ನು ಮುಗಿಸುತ್ತ.

"ಹೆಚ್ಚು ಪಟಾಕಿ ಬಿಡಬಾರದು ಕೃಷ್ಣ," ನಾನು ನುಡಿದೆ, "ಬಹಳ ಗುಪ್ತವಾದ ಸಂಗತಿಗಳಿವು. ಯಾರಾದರೂ ಬಚ್ಚಿಡುವಂಥಾದ್ದು. ನೀನು ಸೇಂಡ್‌ವಿಚ್ ಕಬಳಿಸಿದ್ದು ಹೆಚ್ಚಾಯಿತು. ಸ್ವಲ್ಪ ನೀರು ಕುಡಿ."

"ಇಲ್ಲಿ ಕೊಡು," ಎನ್ನುತ್ತಾ ಕೃಷ್ಣ ಗ್ಲಾಸು ತೆಗೆದುಕೊಂಡ. "ನೀವು ನುಬಲಾರಿರಿ. ಆದರೆ ಸತ್ಯ ಸಂಗತಿ ನನಗೇ ಗೊತ್ತು. ಯಾಕೆಂದರೆ, ನನ್ನಲ್ಲಿಯೇ ಅವಳು ಇವನ್ನೆಲ್ಲಾ ಹೇಳಿದ್ದಳು."

"ಸಾಧ್ಯವೇ ಇಲ್ಲ," ಎಂದರು ಶರ್ಮ.

"ಯಾಕಿಲ್ಲ ? ಮದುವೆಯಾಗುತ್ತೀಯಾ ಎಂದು ಅವಳು ಕೇಳಿದ್ದೇ ನನ್ನಲ್ಲಿ !"

ಗೋಪಾಲಣ್ಣ– ಮತ್ತೆ ನೀನು ಹೆಸರು ಕೃಷ್ಣ ಎಂದೆ ?

"ಬಲರಾಮ ಎನ್ನುತ್ತೇನೆ. ನೀವು ಅಲ್ಲ ಎನ್ನುತ್ತಿದ್ದಿರೋ ?"

ನಾವು ನಕ್ಕೆವು. "ತಮಾಷೆ ಬೇಡ ಕೃಷ್ಣ. ನೀನು ಹೇಳಿದ್ದು ಸತ್ಯ ಎಂದೇ ತಿಳಿಯುವ. ಆದರೆ ಈ ಬ್ರೀಫ್‌ಕೇಸು ಯಾಕೆ ?" ರಾಮಭಾವನ ಪ್ರಶ್ನೆ.

"ನಾನು ಇಲ್ಲಿದ್ದೇನೆ ಎಂದು ಯಾರು ಹೇಳಿದರು ?" ಎಂದು ಗಹಗಹಿಸಿ ನಕ್ಕ ಕೃಷ್ಣ. "ನಾನು ಈ ದಿನ ಬೆಳಿಗ್ಗೆ ೫–೩೦ ರ ಡೆಕ್ಕನ್ ಎಕ್ಸ್‌ಪ್ರೆಸ್ಸಿನಲ್ಲಿ ಪೂನಾಕ್ಕೆ ಆಫೀಸು ಕೆಲಸದಲ್ಲಿ ಹೋಗಿದ್ದೇನೆ ಎಂದು ನನ್ನ ಹೆಂಡತಿಗೆ ಗೊತ್ತು!"

ನಾನು ಗಕ್ಕನೆ ಆ ಬ್ರೀಫ್‌ಕೇಸನ್ನು ಎಳೆದು, ತೆರೆದೆ. ಅದರೊಳಗೆ ನೀಟಾಗಿ ಮಡಚಿದ್ದ ಸೂಟು, ಟೈ, ಶರ್ಟುಗಳು ನಮ್ಮನ್ನು ನೋಡಿ ನಗುತ್ತಿದ್ದುವು!

ಕೃಷ್ಣ ಹಸಿಹಸಿ ಸುಳ್ಳು ಹೇಳುತ್ತಿದ್ದಾನೆ ಎಂಬ ಸಂದೇಹ ನಮಗಿದ್ದರೂ ನಾವು ಯಾರೂ ನಗಲಿಲ್ಲ. ಅವನನ್ನೇ ಮಿಕಿಮಿಕಿ ನೋಡಿದೆವು. ❋

ನಗೆಮಲ್ಲಿಗೆ

ಕಷ್ಟ

ಅತ: ನನ್ನ ಪತ್ನಿ ಮನೆಗೆ ಬಂದ ದಿನವೇ ಮನೆಯಲ್ಲಿ ಕಳ್ಳತನವಾಯಿತು.

ಈತ: ಕಷ್ಟ ಒಂಟಿಯಾಗಿ ಬರುವುದಿಲ್ಲ ಎಂಬುದಾಗಿ ಹಿರಿಯರು ನುಡಿದಿರುವುದು ಸತ್ಯ! —ಎನ್. ಕೆ. ನರಸಿಂಹಮೂರ್ತಿ

"ಅದು ಒಳ್ಳೆಯದೇ"

ಡಾಕ್ಟರ್: ನಿಮ್ಮ ಯಜಮಾನರಿಗೆ ನರಗಳ ದೌರ್ಬಲ್ಯ ತೀವ್ರಗೊಂಡಿದೆ. ಅವರು ಪೂರ್ಣ ವಿಶ್ರಾಂತಿ ತೆಗೆದುಕೊಳ್ಳುವಂತೆ ಎಚ್ಚರ ವಹಿಸಿ.

ಆಕೆ: ಅವರು ನನ್ನ ಮಾತೆಲ್ಲಿ ಕೇಳ್ತಾರೆ, ಡಾಕ್ಟರ್?

ಡಾಕ್ಟರ್: ಹಾಗಾದ್ರೆ ಒಳ್ಳೇದೆ ಆಯ್ತು. ಅವರು ಅದಷ್ಟು ಬೇಗ ಕಾಯಿಲೆಯಿಂದ ಚೇತರಿಸಿಕೊಳ್ತಾರೆ!

—ಎಂ. ಡಿ. ಗಣಪತಿ ಹೆಗಡೆ

ಇಮ್ಮಡಿ ಭಾಗ್ಯ

ಚಿತ್ರಮಂದಿರದ ಎದುರಿನಲ್ಲಿ ತನ್ನ ಮಿತ್ರನ ಮಗನನ್ನು ಕಂಡು ಒಬ್ಬನು ಅವನಿಗೆ ಕೇಳಿದನು.

"ಸಿನೇಮಾಕ್ಕೆ ಬಂದಂತೆ ಕಾಣುತ್ತದೆ? ಎಂಥ ಭಾಗ್ಯಶಾಲಿಯಪ್ಪಾ ನೀನು!"

"ಈ ಹೊತ್ತು ವಿಶೇಷ ಭಾಗ್ಯಶಾಲಿಯಾಗಿದ್ದೇನೆ! ಕಾರಣವೆಂದರೆ ನನ್ನಣ್ಣನ ತಿಕೀಟಿನ ಮೇಲೆ ಬಂದಿದ್ದೇನೆ."

"ಯಾಕೆ ಅತ ಬಿಜಾರಿ-ಗಿಜಾರಿ ಇದ್ದಾನೆಯೋ?"

"ಛೇ, ಛೇ,! ಮನೆಯಲ್ಲಿ ತಿಕೀಟು ಹುಡುಕುತ್ತಿದ್ದಾನೆ." —ಅರವಿಂದ ಪಾಟೀಲ

ಪಿಕ್ ಪಾಕೆಟ್

ರಾಮಣ್ಣ: ಲೇ ಈವತ್ತು ಮುನ್ನೂರು ರೂಪಾಯಿ ಪಿಕ್ ಪಾಕೆಟ್ ಆಯಿತು ಕಣೇ. ಈ ತಿಂಗಳು ಕಳೆಯುವುದು.

ರಾಮಣ್ಣ: ಏ, ನಂದಲ್ಲಾ ಕಣೇ ಪಿಕ್-ಪಾಕೆಟ್ ಆಗಿದ್ದು; ಆ ಚಂಡಾಲ ಶಾಮಣ್ಣನದು. ಹಂಗೇ ಆಗಬೇಕು ಅವನಿಗೆ. ಹೋದ ತಿಂಗಳು ನೂರು ರೂಪಾಯಿ ಸಾಲ ಕೊಡೋ ಎಂದರೆ ಇಲ್ಲ ಎಂದಿದ್ದ.

—ಎನ್. ಎಸ್. ಶ್ರೀನಾಥ

ಉಪಾಯ

ರಾಮು: ಒಂದು ಕೆಟ್ಟ ಪುಸ್ತಕ ಮತ್ತು ಒಂದು ಅತಿಯಾಗಿ ಮಾತನಾಡುವ ಹೆಣ್ಣಿನಲ್ಲಿ ಯಾವ ಅಂತರವಿದೆ?

ಸೋಮು: ನೀನು ಪುಸ್ತಕವನ್ನು ಮುಚ್ಚಿಡಬಹುದು. ಆದರೆ ಹೆಣ್ಣನ್ನು...!

—ಸರಸ್ವತಿ ಎಸ್. ಭಟ್ಟ

ಮುಗೀತು

ಗೆಂಡಿ: ಇದ್ಯಾಕೆ, ನಾಟ್ಕ ನೋಡ್ಕಂಡ್ಬರ್ತಿನ್ನೀಂತ ಊಟಾನೂ ಮಾಡ್ದೆ ಹೋದವ್ರು ಇಸ್ಟ್ ಬ್ಯಾಗ್ನೆ ಬಂದ್ಬಿಟ್ರೀ...!

ಗುಂಡ: ಇನ್ನ್ಯಾನ್ ಮಾಡ್ಕತದೆ. ರಾಮ್ದೇವ್ರೂ, ಸೀತಾದೇವ್ರೂ ಹದಿನಾಲ್ಕ್ವರ್ಷ ವನ್ವಾಸಕ್ಕೋದ್ರು. ನನ್ಗಂತು ಈಗ್ಲೆ ಹೊಟ್ಟೆ ಸುಟ್ಟೋದಿಯಾಯ್ತಾಲಿದೆ. ಇವ್ ಅವ್ರು ವನವಾಸ ಮುಗಿಸ್ಕೊಂಡ್ಬರೋವರ್ಗೂ ಕಾಯ್ಕೊಂಡ್ ಕುಂತಿರಕಾಗುತ್ತದ.

—ಎ. ಕೆಂಪರಾಜ

ಯಾವ ದಿಕ್ಕಿನಲ್ಲಿ?

ದುರ್ಘಟನಾಗ್ರಸ್ತವಾದ ಹಡಗಿನ ಒಬ್ಬ ಯಾತ್ರಿಕನು ಬಹು ಪ್ರಯಾಸದಿಂದ ಒಂದು ತೆಪ್ಪವನ್ನು ತಲುಪಿದನು. ಅದರ ಮೇಲೆ ಅದೇ ಹಡಗಿನ ಇನ್ನೊಬ್ಬ ಮನುಷ್ಯನಿದ್ದನು.

"ಇಲ್ಲಿಂದ ಭೂಮಿಯು ತುಂಬಾ ದೂರದಲ್ಲಿದೆಯೋ?" ಮೊದಲ ಯಾತ್ರಿಕ ಕೇಳಿದ.

"ಎರಡು-ಮೂರು ಮೈಲು ದೂರದಲ್ಲಿದೆ-"

"ವಾಹ್, ಇಷ್ಟು ಸಮೀಪ! ಯಾವ ದಿಕ್ಕಿನಲ್ಲಿ?

"ಕೆಳಗಿನ ದಿಕ್ಕಿನಲ್ಲಿ."

—ಡಿ. ಎಚ್. ರಾಜೇಂದ್ರ

ಏಕ್ರೀ ಹೀಗೆ?

ರೈಲ್ವೆ ಅಧಿಕಾರಿ:- ಅಲ್ರೀ, ನಿಮ್ಮ ಹೆಂಡತಿ ರೈಲಿನಿಂದ ಬಿದ್ದ ತಕ್ಷಣ ಏಕ್ರೀ ರೈಲನ್ನು ನಿಲ್ಲಿಸಲಿಲ್ಲ?

ಪ್ರಯಾಣಿಕ:- ಮುಖ್ಯವಾದ ಅಥವಾ ಬೆಲೆ ಬಾಳುವ ವಸ್ತು ಬಿದ್ದ ಹೊರತು ರೈಲು ನಿಲ್ಲಿಸಬಾರದೆಂದು ನನ್ನ ಮಿತ್ರನೊಬ್ಬ ಹೇಳಿದ ನೆನಪಿತ್ತು. ಅದಕ್ಕಾಗಿ ಅವಳು ಬಿದ್ದರೂ ಸುಮ್ಮನಿದ್ದೆ.

—ಬಿ. ಈ. ಗೋವಿಂದ

ನಂಬುವದು ಯಾವಾಗ?

ಮೂವರು ಮಿತ್ರರು ಸಮುದ್ರ ದಂಡೆಯ ಮೇಲೆ ಮಾತನಾಡುತ್ತಾ ಕುಳಿತಿದ್ದರು. ಮೊದಲನೆಯವನೆಂದ, "ಮನುಷ್ಯ ದೇವರನ್ನು ಯಾವಾಗ ನಂಬುತ್ತಾನೆ?"

ಕೂಡಲೇ ಎರಡನೇಯವನೆಂದ, "ಅವನೇ ಪ್ರತ್ಯಕ್ಷನಾದ ಮೇಲೆ"

"ಇಲ್ಲ."

"ಹಾಗಾದರೆ ಸತ್ತ ಮೇಲೆ" ಮೂರನೆಯವನೆಂದ.

"ಇಲ್ಲ, ಇಲ್ಲ, ಮದುವೆಯಾದ ಮೇಲೆ." ಮೊದಲನೆಯವ ಶಾಂತವಾಗಿ ಉತ್ತರಿಸಿದ.

—ಎಸ್. ಜಿ. ಮೊಕಾಶಿ

ಯಾರು ಶ್ರೇಷ್ಠ?

ಇಬ್ಬರು ಹುಡುಗರು ತಮ್ಮಲ್ಲಿಯೇ ಹರಟುತ್ತಾ ಹೊರಟಿದ್ದರು. ಮೊದಲನೆಯ ಹುಡುಗ, "ಈಗಿನ ಕಾಲದಾಗ ಮನಶ್ಯಾರಗಿಂತ ಪ್ರಾಣಿನ ಮೇಲು ಅನಸ್ತದ" ಎಂದ.

ಎರಡನೆಯ ಹುಡುಗ ಆಶ್ಚರ್ಯದಿಂದ ಏಕೆಂದು ಪ್ರಶ್ನಿಸಿದ.

ಆಗ ಮೊದಲನೆಯ ಹುಡುಗ,"ನೋಡಪಾ ರೇಸನಾಗ ಹತ್ತಹನ್ನೆರಡು ಕುದರಿ ಓಡಿಸ್ತಾರ. ಅದನ್ನ ನೋಡಲಿಕ್ಕೆ ಲಕ್ಷಾಂತರ ಮಂದಿ ಬಂದಿರ್ತಾರ. ಆದರ ಅದ ಹತ್ತ-ಹನ್ನೆರಡು ಮಂದಿನ್ನ ಓಡಿಸಿದರ ಒಂದ ಕುದರಿನೂ ನೋಡಲಿಕ್ಕ ಬಂದಿರಂಗಿಲ್ಲ" ಎಂದ. ಆಗ ಎರಡನೆಯ ಹುಡುಗನಿಗೆ ಆತ ಹೇಳಿದ್ದು ಸರಿ ಎನಿಸಿ ತಲೆಹಾಕಿದ!

—ರಾಜೇಂದ್ರ ವಿ. ಕುಲಕರ್ಣಿ

"ಯಾವ ಕೇಸು?"

ವಕೀಲರೊಬ್ಬರು ತಮ್ಮ ಆಫೀಸಿನಲ್ಲಿ ಯಾವ ಕೇಸುಗಳಿಲ್ಲದೇ ಬೇಸರದಿಂದ ಕುಳಿತಿದ್ದರು. ಸ್ವಲ್ಪ ಸಮಯದ ಬಳಿಕ ವಕೀಲರು ತಮ್ಮ ಆಫೀಸಿನ ಕಡೆಗೆ ಕೆಲವು ಜನರು ಬರುವುದನ್ನು ಕಂಡರು. ಆಗ ಅವರಿಗೆ ಈ ದಿನ ಒಂದಾದರೂ ಕೇಸು ಸಿಕ್ಕಿತಲ್ಲ ಎಂದು ಅವರು ಸಂತೋಷಪಟ್ಟುಕೊಂಡರು. ಆ ಜನರು ತಮ್ಮ ಆಫೀಸಿನಲ್ಲಿ ಬರುತ್ತಿರುವಂತೇ ವಕೀಲರು ತಮ್ಮ ದೊಡ್ಡತನವನ್ನು ತೋರಿಸಿಕೊಳ್ಳಲು ಫೋನಿನ ರಿಸೀವರನ್ನು ಎತ್ತಿ ಏನನ್ನೋ ಪಿಸುಗುಟ್ಟದರು. ವ್ಯಕ್ತಿಗಳು ಒಳಗೆ ಬಂದ ನಂತರ ವಕೀಲರು ರಿಸೀವರನ್ನು ಕೆಳಗಿರಿಸಿ ಸ್ವಲ್ಪ ಗಡುಸತನದಿಂದ, "ಏನು ಬೇಕಾಗಿತ್ತು, ಯಾವ ಕೇಸು," ಎಂದು ಕೇಳಿದಾಗ ಆ ಜನರು, "ಸಾರ್, ನಿಮ್ಮ ಫೋನು ಕೆಟ್ಟಿರುವದೆಂದು ತಿಳಿದು ರಿಪೇರಿ ಮಾಡಲು ಬಂದಿದ್ದೇವೆ" ಎಂದಾಗ ವಕೀಲರಿಗೆ ಸುಸ್ತೋ ಸುಸ್ತು.

—ಗೋಪಾಲ ಇಲ್ಲೂರ್

ಒಳ್ಳೆ ಅಡುಗೆ

ಮಾವ ಸೊಸೆಯನ್ನು ಕರೆದು, ಏನೇ ಶಾರದಾ ಇವತ್ತಿನ ಅಡುಗೆ? ಸಾಂಬಾರಿಗೆ ಬರೀ ನೀರೇ ಇರುವುದೊಂತ ಕಾಣುತ್ತೆ. ಕೊತ್ತಂಬ್ರಿ, ಜೀರಿಗೆ ಏನೂ ಹಾಕಲಿಲ್ಲವೆ?

ಸೊಸೆ:- ಇವತ್ತಿನ ಅಡುಗೆ ಅತ್ತೇನೇ ಮಾಡಿಬಿಟ್ರು ಮಾವಯ್ಯ.

ಇದನ್ನು ಕೇಳಿದ ಮಾವ: ಅವಳಿಗೆ ಚೆನ್ನಾಗಿ ಗೊತ್ತು ಕಣೆ ಈಗ ತುಟ್ಟಿ ಕಾಲ ಅಂತ. ಅಂತೂ ನನಗೆ ಬೇಕಾದ ಹಾಗೆ ಮಾಡಿ ಬಿಟ್ಟಿದ್ದಾಳಮ್ಮ. ಪರವಾಗಿಲ್ಲ ನಿನ್ನ ಅತ್ತೆ.

—ಪುಷ್ಪಾ ಎಸ್. ತಾಮಣಕರ

ಸಸ್ಯಗಳಲ್ಲಿ ಅತೀಂದ್ರಿಯ ಪ್ರಜ್ಞೆ

ಕೆ. ಚಿದಾನಂದ

ಸ್ವಾಮಿ ವಿವೇಕಾನಂದರು ಉಪಸ್ಥಿತರಿದ್ದ ಗೋಷ್ಠಿಯೊಂದರಲ್ಲಿ ಪಾಶ್ಚಾತ್ಯ ಮಹಿಳಾವಿಜ್ಞಾನಿಯೊಬ್ಬರು ಮಾತನಾಡುತ್ತಾ, "ನಮ್ಮ ಪ್ರಾಧ್ಯಾಪಕರು ಲಿಲಿ ಹೂವಿನ ಗಿಡದ ಬೆಳವಣಿಗೆ ಮತ್ತು ಅದರ ಪ್ರತಿಕ್ರಿಯೆಗಳನ್ನು ಅಧ್ಯಯನ ಮಾಡಲು ಬಹಳ ಕ್ಲಿಷ್ಟವಾದ ಪ್ರಯೋಗಗಳನ್ನು ನಡೆಸುತ್ತಿದ್ದಾರೆ," ಎಂದರು. ಆಗ ಸ್ವಾಮಿ ವಿವೇಕಾನಂದರು ನಸುನಗುತ್ತಾ, "ಸಜೀವಿಯಾದ ಲಿಲಿ ಹೂವಿನಗಿಡದ ಪ್ರತಿಕ್ರಿಯೆಯನ್ನರಿಯಲು ನಿಮ್ಮ ಪ್ರಾಧ್ಯಾಪಕರು ನಡೆಸುತ್ತಿರುವ ಪ್ರಯೋಗಗಳು ಬಹಳ ವಿಶಿಷ್ಟವಾದವು ಎಂದು ನನಗನಿಸುವುದಿಲ್ಲ. ನಮ್ಮ ದೇಶದ ವಿಜ್ಞಾನಿ ಜಗದೀಶಚಂದ್ರ ಬೋಸ್‌ರವರು ಲಿಲಿ ಹೂವಿನಗಿಡ ಬೆಳೆಯುವ ಪಾತ್ರೆಯೇ ತನ್ನ ಪ್ರತಿಕ್ರಿಯೆಯನ್ನು ತೋರಿಸುವಂತೆ ಮಾಡಬಲ್ಲರು!" ಎಂದು ನಗೆಯಾಡಿದರಂತೆ.

ಸಸ್ಯಗಳಲ್ಲೂ ಸಂವೇದನೆ

ಸ್ವಾಮಿ ವಿವೇಕಾನಂದರು ಜಗದೀಶಚಂದ್ರ ಬೋಸ್‌ರವರ ಬಗ್ಗೆ ನುಡಿದುದರಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲ. ಭಾರತದ ಪ್ರಖ್ಯಾತ ಭೌತವಿಜ್ಞಾನಿಯಾದ ಬೋಸರ ವೈಜ್ಞಾನಿಕ ಕೊಡುಗೆಯು ಭೌತವಿಜ್ಞಾನ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ ಜೀವವಿಜ್ಞಾನ ಕ್ಷೇತ್ರವನ್ನೂ ಒಳಗೊಂಡಿತ್ತು. ವಿದ್ಯುತ್ ಗ್ರಾಹಕ ಮತ್ತು ಸಜೀವ ಸ್ನಾಯುಗಳ ಪ್ರತಿಕ್ರಿಯೆಗಳಲ್ಲಿರುವ ಸಾಮ್ಯವನ್ನು ಗುರುತಿಸಿ, ಅದರಿಂದ ಪ್ರಚೋದನೆಗೊಂಡ ಬೋಸರು ನಿರ್ಜೀವ ವಸ್ತುಗಳು, ಸಸ್ಯಗಳು ಮತ್ತು ಪ್ರಾಣಿಗಳು ಬಾಹ್ಯಪ್ರಚೋದನೆ ನೀಡಾದಾಗ ಯಾವರೀತಿಯ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತವೆ ಎಂಬುದನ್ನು ಮನಗಾಣಲು ಕ್ಲಿಷ್ಟವಾದ ಹಲವು ಪ್ರಯೋಗಗಳನ್ನು ನಡೆಸಿದರು. ಉತ್ತೇಜನಕಾರಕ ಪರಿಸರದಲ್ಲಿ ಪ್ರತಿಕ್ರಿಯೆಗಳಲ್ಲಿ ಕಂಡುಬರುವ ಏರುವಿಕೆ, ಹಾನಿಕಾರಕ ಪರಿಸರದಲ್ಲಿ ಪ್ರತಿಕ್ರಿಯೆಗಳಲ್ಲಾಗುವ ಇಳಿಯುವಿಕೆ ಮತ್ತು ವಿಷಪ್ರಾಶನದಿಂದಾಗಿ ಪ್ರತಿಕ್ರಿಯೆಯಲ್ಲಾಗುವ ಶಾಶ್ವತ ಸ್ಥಗಿತತೆ (ಜೀವಿಗಳಲ್ಲಿ ಇದು ಸಾವು ಎಂದು ಕರೆಯಲ್ಪಡುತ್ತದೆ) ಇವುಗಳು ನಿರ್ಜೀವ ವಸ್ತು, ಸಸ್ಯ ಮತ್ತು ಪ್ರಾಣಿಗಳಲ್ಲಿ ಒಂದೇ ತೆರನಾಗಿವೆ ಎಂಬುದನ್ನು ಅವರು ಮನಗಂಡರು. ಪ್ರತಿಕ್ರಿಯೆಗಳಲ್ಲಿರುವ ಸಾಮ್ಯವು ಅವುಗಳ ನಡುವಣ ಅವಿಚ್ಛಿನ್ನತೆಯನ್ನು ಸೂಚಿಸುವುದರಿಂದ ನಿರ್ಜೀವ ವಸ್ತು, ಸಸ್ಯ ಮತ್ತು ಪ್ರಾಣಿಗಳನ್ನು

ಮಿಂಗಡಿಸುವ ಗೆರೆಗಳು ಅಸ್ಪಷ್ಟವಾಗುತ್ತವೆ. ಇಲ್ಲಿಗೆ ಭೌತಿಕ ಗುಣದ ಪರಿಸಮಾಪ್ತಿಯಾಯಿತು; ಇಲ್ಲಿಂದ ಮುಂದೆ ಜೈವಿಕ ಗುಣ ಕಾಣಿಸಿಕೊಳ್ಳುತ್ತದೆ ಎನ್ನುವುದು ಸ್ಪಷ್ಟಕರವಾಗಿ ಕಂಡುಬರುತ್ತದೆ. ಪ್ರತಿಕ್ರಿಯೆಗಳಲ್ಲಿರುವ ಸಾಮ್ಯವು ನಿರ್ಜೀವ ವಸ್ತು ಮತ್ತು ಸಜೀವಿಗಳಲ್ಲಿ ಸುಪ್ತವಾಗಿರುವ ಒಂದು ನಿಗೂಢ ಗುಣದ ಅಸ್ತಿತ್ವವನ್ನು ಸಾರುತ್ತದೆ. ಸಜೀವಿಗಳಲ್ಲಿ ಚೈತನ್ಯಪೂರ್ಣವಾಗಿ ಕಾಣಿಸಿಕೊಳ್ಳುವ ಪ್ರತಿಕ್ರಿಯಾ ವಿಧಾನವು ನಿರ್ಜೀವ ವಸ್ತುಗಳಲ್ಲಿ ಜಡರೂಪದಲ್ಲಿರುತ್ತದೆ. ಸಸ್ಯಗಳ ಜೀವವಿಧಾನವು ಪ್ರಾಣಿಗಳ ಜೀವವಿಧಾನದೊಡನೆ ಸಾಮ್ಯವನ್ನು ಹೊಂದಿದ್ದು, ಸಸ್ಯಗಳು ಪ್ರಾಣಿಗಳಂತೆಯೇ ಬಾಹ್ಯಪ್ರಚೋದನೆಗನುಗುಣವಾಗಿ ಸಂವೇದನೆಯನ್ನು ಅನುಭವಿಸುತ್ತವೆ. ಸುಖ, ದುಃಖವೆಂಬ ದ್ವಂದ್ವವು ಸಸ್ಯಜಗತ್ತಿಗೂ ಅನ್ವಯವಾಗುತ್ತದೆ. ಬೋಸರು ತಾವು ಮಾಡಿದ ಪ್ರಯೋಗಗಳ ಆಧಾರದಿಂದ ಇಂತಹ ಹಲವು ವಿಸ್ಮಯಕರವಾದ ಅಭಿಪ್ರಾಯಗಳನ್ನು ಜಗತ್ತಿಗೆ ತಿಳಿಯಪಡಿಸಿದರು.

ಅಮೇರಿಕದ ಕ್ಲೀವ್ ಬೇಕಸ್ಟರ್ ಎಂಬವನು ಸಸ್ಯಗಳು ತೋರಿಸುವ ಪ್ರತಿಕ್ರಿಯೆಗಳ ಕುರಿತು ಸಂಶೋಧನೆ ನಡೆಸಿ ಇನ್ನೂ ಅತ್ಯಾಶ್ಚರ್ಯಕರವಾದ ವಿಷಯಗಳನ್ನು ಹೊರಗೆಡವಿದನು. ಸಸ್ಯಗಳು ಮನುಷ್ಯನ ಸಾಮೀಪ್ಯವನ್ನು ಅರಿಯಬಲ್ಲುವಲ್ಲದೆ, ಒಂದು ಬಗೆಯ ಅತೀಂದ್ರಿಯ ಪ್ರಜ್ಞೆಯಿಂದ ಮನುಷ್ಯನ ಮನಸ್ಸಿನ ಇಂಗಿತವನ್ನೂ ಗುರುತಿಸಬಲ್ಲವು ಎಂದು ಅವನು ತೋರಿಸಿಕೊಟ್ಟನು.

ಅಸತ್ಯ ಶೋಧಕ ಯಂತ್ರ

ಕ್ಲೀವ್ ಬೇಕ್‌ಸ್ಟರನು ಅಮೇರಿಕದ ಪೋಲೀಸ್ ವಿಭಾಗದಲ್ಲಿ ಪೋಲಿಗ್ರಾಫ್ ಯಂತ್ರ (ಅಸತ್ಯ ಶೋಧಕ ಯಂತ್ರ) ಇದರ ತಜ್ಞನಾಗಿದ್ದ. ಪೋಲಿಗ್ರಾಫ್ ಯಂತ್ರವು ಒಬ್ಬ ವ್ಯಕ್ತಿಯು ಸುಳ್ಳು ಹೇಳುತ್ತಿದ್ದರೆ ಅದನ್ನು ಪತ್ತೆಹಚ್ಚಬಲ್ಲುದು. ಹೀಗಾಗಿ ಕೈದಿಗಳ ವಿಚಾರಣೆಯ ಕಾಲದಲ್ಲಿ ಈ ಯಂತ್ರವು ಪೋಲೀಸರಿಗೆ ತುಂಬಾ ಸಹಕಾರಿ. ಈ ಯಂತ್ರವು ಮಾನವನ ಚರ್ಮದ ವಿದ್ಯುತ್ ನಿರೋಧವನ್ನು ಅಳೆಯಲು ಸಮರ್ಥವಾಗಿರುತ್ತದೆ. ಈ ಯಂತ್ರಕ್ಕೆ ಅಳವಡಿಸಲ್ಪಟ್ಟಿರುವ ಒಂದು ಸೂಚ್ಯ ಲೇಖನಿಯು ಕಾಗದದ ಮೇಲೆ ರೇಖಾಚಿತ್ರವನ್ನು ಎಳೆಯಬಲ್ಲುದು. ವಿಚಾರಣೆಗೊಳಗಾಗಿರುವ ಮನುಷ್ಯನು ಸತ್ಯವನ್ನೇ ನುಡಿಯುತ್ತಿದ್ದರೆ, ಪೋಲಿಗ್ರಾಫ್ ಯಂತ್ರದ ಲೇಖನಿಯು ಎಳೆಯುವ ರೇಖಾಚಿತ್ರದಲ್ಲಿ ಗಮನಾರ್ಹವಾದ ಬದಲಾವಣೆ ಅಥವಾ ಏರಿಳಿತಗಳಿರುವುದಿಲ್ಲ. ಆದರೆ ಅವನು ಸುಳ್ಳು ಹೇಳಿದ ತಕ್ಷಣ ರೇಖಾಚಿತ್ರದಲ್ಲಿ ಗಮನಾರ್ಹವಾದ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ.

ಅತೀಂದ್ರಿಯ ಪ್ರಜ್ಞೆ

೧೯೬೬ ರ ಫೆಬ್ರವರಿ ತಿಂಗಳ ಒಂದು ಮುಂಜಾನೆ. ಕ್ಲೀವ್ ಬೇಕ್‌ಸ್ಟರ್ ಹೂವಿನ ಕುಂಡಗಳಿಗೆ ನೀರೆರೆಯುತ್ತಿದ್ದ. ಇದ್ದಕ್ಕಿದ್ದಂತೆ ಬೇಕ್‌ಸ್ಟರನಿಗೆ ಒಂದು ಯೋಚನೆ ಬಂತು– ಒಂದು ಗಿಡದ ಬುಡಕ್ಕೆ ಎರೆಯಲ್ಪಟ್ಟ ನೀರು ಆ ಗಿಡದ ಕಾಂಡ ಮತ್ತು ಗೆಲ್ಲುಗಳ ಮೂಲಕ ಮೇಲೇರಿ ಎಲೆಗಳನ್ನು ತಲುಪಲು ತೆಗೆದುಕೊಳ್ಳಬಹುದಾದ ಸಮಯವನ್ನು ಅಳೆಯಲು ಸಾಧ್ಯವಾಗಬಹುದೇ ಎಂದು. ಎಲೆಯಲ್ಲಿರುವ ನೀರಿನ ಅಂಶದ ಹೆಚ್ಚಳವನ್ನು ಪೋಲಿಗ್ರಾಫ್ ಯಂತ್ರದ ಸಹಾಯದಿಂದ ಗೊತ್ತುಹಚ್ಚುವುದರ ಮೂಲಕ ಇದು ಸಾಧ್ಯವಾಗಬಹುದು ಎಂದು ಸ್ವಲ್ಪ ಯೋಚಿಸಿದಾಗ ಅವನಿಗೆ ಹೊಳೆಯಿತು. ಇದನ್ನು ಪರೀಕ್ಷಿಸಲು ಅವನು ಕುಂಡದ ರಬ್ಬರ್ ಗಿಡವೊಂದರ ಎಲೆಯ ಹಿಂಭಾಗ ಮತ್ತು ಮುಂಭಾಗಗಳಿಗೆ ಪೋಲಿಗ್ರಾಫ್ ಯಂತ್ರದ ಎರಡು ಎಲೆಕ್ಟ್ರೋಡುಗಳನ್ನು ಜೋಡಿಸಿ, ಆ ಗಿಡದ ಬುಡಕ್ಕೆ ನೀರೆರೆದು ಯಂತ್ರದ ಲೇಖನಿಯು ಎಳೆಯುವ ರೇಖಾ

ಚಿತ್ರವನ್ನು ಗಮನಿಸಲಾರಂಭಿಸಿದನು. ಆದರೆ ಎಷ್ಟು ಹೊತ್ತು ಕಾದರೂ ರೇಖಾಚಿತ್ರದಲ್ಲಿ ಗಮನಾರ್ಹವಾದ ಬದಲಾವಣೆಯೇನೂ ಕಂಡುಬರಲಿಲ್ಲ. ಬಳಿಕ ಗಿಡದ ಮೇಲೆ ಚಿತ್ರಹಿಂಸೆಯ ಪರಿಣಾಮವು ಏನಾಗಬಹುದು ಎಂಬುದನ್ನು ಪರೀಕ್ಷಿಸಲು ಅವನು ಆ ಗಿಡದ ಎಲೆಯೊಂದನ್ನು ಕುದಿಯುವ ಕಾಫಿಯಲ್ಲಿ ಮುಳುಗಿಸಿದನು. ಆಗಲೂ ಪೋಲಿಗ್ರಾಫ್ ಯಂತ್ರವು ಗಮನಾರ್ಹವಾದ ಬದಲಾವಣೆಯನ್ನು ತೋರ್ಪಡಿಸಲಿಲ್ಲ. ತನ್ನ ನಿರೀಕ್ಷೆ ನಿಜವಾಗಲಿಲ್ಲವೆಂದು ಬೇಕ್‌ಸ್ಟರನಿಗೆ ತುಸು ಆಶಾಭಂಗವಾಯಿತು. ಕೊನೆಯದಾಗಿ ಅವನು ಒಂದು ಬೆಂಕಿಪೆಟ್ಟಿಗೆಯನ್ನು ತಂದು ಆ ಗಿಡದ ಎಲೆಯೊಂದನ್ನು ಸಂಪೂರ್ಣವಾಗಿ ಸುಟ್ಟು ಅದರ ಪರಿಣಾಮವೇನಾಗುವುವೆಂಬುದನ್ನು ಪರೀಕ್ಷಿಸುವುದಾಗಿ ನಿರ್ಧರಿಸಿದನು. ಅವನು ಹಾಗೆ ಯೋಚಿಸಿದ ತಕ್ಷಣ ಪೋಲಿಗ್ರಾಫ್ ಯಂತ್ರದ ಲೇಖನಿಯು ರೇಖಾಚಿತ್ರದಲ್ಲಿ ತೀವ್ರವಾದ ಬದಲಾವಣೆಯನ್ನು ಸೂಚಿಸಿತು. ಬೇಕ್‌ಸ್ಟರನು ಆ ಗಿಡದ ಎಲೆಯನ್ನು ಸುಡುವುದಿರಲಿ–ಅದರ ಸಮೀಪಕ್ಕೇನೇ ಹೋಗಿರಲಿಲ್ಲ. ಹೀಗಿರುವಾಗ ರೇಖಾಚಿತ್ರದಲ್ಲಿ ಕಂಡುಬಂದ ತೀವ್ರವಾದ ಏರುವಿಕೆಗೆ ಕಾರಣವೇನು? ತಾನು ಗಿಡದ ಎಲೆಯನ್ನು ಸುಡುವುದಾಗಿ ಮಾಡಿದ ಯೋಚನೆಯು ಗಿಡಕ್ಕೆ ಅರ್ಥವಾಗಿ ಅದು ಈ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿರಬಹುದೇ ಎಂದು ಅವನಿಗನಿಸಿತು. ಗಿಡದ ಎಲೆಯನ್ನು ಸುಡುವುದಾಗಿ ಇನ್ನೊಮ್ಮೆ ಅವನು ಯೋಚಿಸಿದನು. ಆಗಲೂ ರೇಖಾಚಿತ್ರದಲ್ಲಿ ಬದಲಾವಣೆ ಕಂಡುಬಂತು. ಅವನು ಗಿಡದ ಎಲೆಯನ್ನು ಸುಡುವುದಾಗಿ ಯೋಚಿಸಿದಾಗಲೆಲ್ಲಾ ಪೋಲಿಗ್ರಾಫಿನ ಲೇಖನಿಯು ತೀವ್ರವಾದ ಏರುವಿಕೆಯನ್ನು ಸೂಚಿಸುತ್ತಿತ್ತು. ಏನಿದರ ಅರ್ಥ? ತಾನು ಮಾಡಿದ ಯೋಚನೆಯೆಲ್ಲಾ ಆ ಗಿಡಕ್ಕೆ ಅರ್ಥವಾಗುತ್ತಿದೆಯೇ? ತಾನು ಆಕಸ್ಮಿಕವಾಗಿ ಮಾಡಿದ ಶೋಧನೆಯ ಮಹತ್ವವನ್ನು ಊಹಿಸಿ ಬೇಕ್‌ಸ್ಟರ್ ಪರಮಾಶ್ಚರ್ಯಗೊಂಡ.

ಆತ್ಮೀಯ ಸಸ್ಯ ಸ್ನೇಹಿತ

ಅವನು ಅನೇಕ ರೀತಿಯ ಸಸ್ಯಗಳ ಮೇಲೆ ತನ್ನ ಪ್ರಯೋಗಗಳನ್ನು ನಡೆಸಿ ತನ್ನ ಕೆಲವು ಅನಿಸಿಕೆಗಳು ಅವುಗಳಿಗೆ ಅರ್ಥವಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಂಡ. ಆದರೆ ಎಲ್ಲಾ ಸಸ್ಯಗಳ ಗ್ರಹಣಸಾಮರ್ಥ್ಯವು ಒಂದೇ ಮಟ್ಟದಲ್ಲಿಲ್ಲವೆಂಬುದೂ ಅವನ ಗಮನಕ್ಕೆ ಬಂತು. ಅವನು ಪ್ರಯೋಗಕ್ಕೊಳಪಡಿಸಿದ ಸಸ್ಯಗಳಲ್ಲಿ ಒಂದು ಅವನಿಗೆ ಬಹಳ ಆತ್ಮೀಯವೆನಿಸಿತು. ಅವನ ಹೆಚ್ಚಿನ ಅನಿಸಿಕೆಗಳೆಲ್ಲಾ ಅದಕ್ಕೆ ಅರ್ಥವಾಗುತ್ತಿತ್ತು. ಇದು ಪೋಲಿಗ್ರಾಫ್ ಯಂತ್ರದ ರೇಖಾಚಿತ್ರದಲ್ಲಿ ಸ್ಪಷ್ಟವಾಗಿ ಸೂಚಿತವಾಗುತ್ತಿತ್ತು. ಹಾಗಾಗಿ ಅದನ್ನು ಪ್ರಯೋಗಕ್ಕೊಳಪಡಿಸುವಾಗ ಅವನು ಬಹಳ ಎಚ್ಚರದಿಂದಿರುತ್ತಿದ್ದ. ಆ ಸಸಿಗೆ ಯಾತನೆಯನ್ನುಂಟು ಮಾಡುವಂತಹ ಪ್ರಯೋಗಗಳನ್ನು ಮಾಡದೆ ಅದನ್ನು ತನ್ನ ಸಹಾಯಕನಿಗೆ ಬಿಡುತ್ತಿದ್ದ. ಹಾಗಾಗಿ ಆ ಸಸಿಗೆ ಬೇಕ್‌ಸ್ಟರನನ್ನು ಕಂಡರೆ ಎಷ್ಟು ಆತ್ಮೀಯತೆಯಿತ್ತೋ, ಅವನ ಸಹಾಯಕನನ್ನು ಕಂಡರೆ ಅಷ್ಟೇ ಭಯವಿತ್ತು. ಬೇಕ್‌ಸ್ಟರನ ಸಹಾಯಕನು ತನ್ನ ಸಮೀಪಕ್ಕೆ ಬಂದಾಗಲೆಲ್ಲಾ ಆ ಬಡಪಾಯಿ ಸಸಿಯು ಅಪಾಯದ ಸಂಕೇತವನ್ನು ಪೋಲಿಗ್ರಾಫ್ ಯಂತ್ರದ ರೇಖಾಚಿತ್ರದಲ್ಲಿ ವ್ಯಕ್ತಪಡಿಸುತ್ತಿತ್ತು. ಅವನು ಅಲ್ಲಿಂದ ಹೋದ ಅರ್ಧ ಗಂಟೆಯ ಬಳಿಕವೇ ಅದು ಸಮಾಧಾನ ಸೂಚಕವಾದ ಪ್ರತಿಕ್ರಿಯೆಯನ್ನು ಪ್ರಕಟಪಡಿಸುತ್ತಿತ್ತು. ಬೇಕ್‌ಸ್ಟರ್ ತನ್ನ ಬಳಿ ಅಥವಾ ಪಕ್ಕದ ಕೋಣೆಯಲ್ಲಿದ್ದಾಗಲೆಲ್ಲಾ ಅದು ಸಂತೃಪ್ತಿ ಸೂಚಕವಾದ ಸಂಕೇತವನ್ನು ವ್ಯಕ್ತಪಡಿಸುತ್ತಿತ್ತು. ಅದರ ಅತೀಂದ್ರಿಯಪ್ರಜ್ಞೆ ಎಷ್ಟು ಸೂಕ್ಷ್ಮವಾಗಿತ್ತೆಂದರೆ ಬೇಕ್‌ಸ್ಟರನು ನೂರಾರು ಮೈಲು ದೂರದಲ್ಲಿದ್ದು ಆ ಸಸಿಯ ಕುರಿತು ಯೋಚಿಸಿದ ಅಥವಾ ಅದರ ಕುರಿತು ಮಾತನಾಡಿದ ಗಳಿಗೆಗೆ ಸರಿಯಾಗಿ ಅದು ರೇಖಾಚಿತ್ರದಲ್ಲಿ

ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸುತ್ತಿತ್ತು.

ಬೇಕ್‌ಸ್ಟರನ ಮಿತ್ರ ಒಬ್ಬ ಸಸ್ಯಶಾಸ್ತ್ರಜ್ಞ. ಪ್ರಯೋಗಾರ್ಥವಾಗಿ ಅವನು ದಿನವೂ ಹಲವು ಗಿಡಗಳನ್ನು ನಾಶಮಾಡುವ ಸಂದರ್ಭ ಬರುತ್ತಿತ್ತು. ಅವನು ಬೇಕ್‌ಸ್ಟರನ ಪ್ರಯೋಗ ಶಾಲೆಗೆ ಬಂದಾಗಲೆಲ್ಲಾ ಅಲ್ಲಿದ್ದ ಸಸಿಯು ಅಪಾಯ ಸಂಕೇತವನ್ನು ರೇಖಾ ಚಿತ್ರದಲ್ಲಿ ವ್ಯಕ್ತಪಡಿಸುತ್ತಿತ್ತು.

ಇನ್ನೊಂದು ಪ್ರಯೋಗವನ್ನು ಬೇಕ್‌ಸ್ಟರನು ಹೀಗೆ ನಿಯೋಜಿಸಿದ. ಪ್ರಯೋಗ ಶಾಲೆಯ ಪಕ್ಕದ ಕೋಣೆಯೊಂದಕ್ಕೆ ಆರು ಜನರನ್ನು ಬರಮಾಡಲಾಯಿತು. ಆ ಕೋಣೆಯೊಳಗಿದ್ದ ಸಸಿಯೊಂದನ್ನು ನಾಶ ಮಾಡುವಂತೆ ಆ ಆರು ಜನರಲ್ಲಿ ಒಬ್ಬನಿಗೆ ಆದೇಶ ನೀಡಲಾಯಿತು. ಆ ಬಳಿಕ ಆ ಆರು ಜನರನ್ನು ಒಬ್ಬೊಬ್ಬರನ್ನಾಗಿಯೇ ಪ್ರಯೋಗ ಶಾಲೆಯೊಳಗೆ ಬರಮಾಡಲಾಯಿತು. ಇತರ ಐದು ಜನರು ಪ್ರಯೋಗ ಶಾಲೆಯನ್ನು ಪ್ರವೇಶಿಸಿದಾಗ ಅಲ್ಲಿಯ ಗಿಡವೊಂದಕ್ಕೆ ಜೋಡಿಸಲ್ಪಟ್ಟಿದ್ದ ಪೋಲಿಗ್ರಾಫ್ ಯಂತ್ರದ ರೇಖಾಚಿತ್ರದಲ್ಲಿ ಗಮನಾರ್ಹ ಬದಲಾವಣೆಯೇನೂ ಕಂಡು ಬರಲಿಲ್ಲ. ಆದರೆ ಪಕ್ಕದ ಕೋಣೆಯಲ್ಲಿ ಗಿಡವೊಂದನ್ನು ನಾಶ ಮಾಡಿದ್ದ ಆ ರ್‍ನೆಯವನು ಪ್ರಯೋಗಶಾಲೆಯನ್ನು ಪ್ರವೇಶಿಸಿದಾಗ ರೇಖಾಚಿತ್ರದಲ್ಲಿ ತೀವ್ರವಾದ ಏರಿಕೆ ಕಂಡುಬಂತು. ಇದರಿಂದ ಸಸ್ಯಗಳು ತಮ್ಮ ಮಿತ್ರ ಅಥವಾ ಶತ್ರುವನ್ನು ಸುಲಭವಾಗಿ ಪತ್ತೆ ಹಚ್ಚಬಲ್ಲವು ಎನ್ನುವುದು ಸ್ಪಷ್ಟವಾಗುತ್ತದೆ.

ಸಸ್ಯಗಳ ಸ್ವಭಾವವು ಮನುಷ್ಯರ ಸ್ವಭಾವಕ್ಕಿಂತ ತೀರಾ ಭಿನ್ನವಲ್ಲ. ಅವು ಹೊಗಳಿಕೆಗೆ ಹಿಗ್ಗುತ್ತವೆ; ತೆಗಳಿಕೆಗೆ ಕುಗ್ಗುತ್ತವೆ. ಇತರರು ಆತ್ಮೀಯತೆಯನ್ನು ತೋರಿಸಿದಾಗ ಉತ್ತಮವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತವೆ. ದಿನವೂ ಮಧುರ ಸಂಗೀತವನ್ನು ಕೇಳುವುದರಿಂದ ಸಸಿಗಳು ಸೊಂಪಾಗಿ ಬೆಳೆಯುತ್ತವೆ ಎನ್ನುವುದು ಪ್ರಾಯೋಗಿಕವಾಗಿ ಸಮರ್ಥಿಸಲ್ಪಟ್ಟಿದೆ.

ಸರ್ವಂ ಖಲು ಇದಂ ಬ್ರಹ್ಮ

ಇತರ ಜೀವಿಗಳು ಅನುಭವಿಸುವ ಯಾತನೆಯು ಅದೇ ಪರಿಸರದಲ್ಲಿರುವ ಸಸ್ಯಗಳ ಮೇಲೆ ಏನಾದರೂ ಪರಿಣಾಮವನ್ನು ಉಂಟುಮಾಡುವುದೇ ಎಂಬುದನ್ನು ಅರಿಯಲು ಬೇಕ್‌ಸ್ಟರನು ತನ್ನ ಪ್ರಯೋಗಶಾಲೆಯಲ್ಲಿ ಕುದಿಯುವ ನೀರಿನ ಪಾತ್ರೆಗೆ ಜೀವವಿದ್ದ ಸಿಗಡಿಗಳನ್ನು ಹಾಕಿ ಪರೀಕ್ಷಿಸಿದನು. ಪ್ರತಿಯೊಂದು ಸಿಗಡಿ ಕುದಿಯುವ ನೀರಿಗೆ ಬಿದ್ದು ಸತ್ತಾಗಲೆಲ್ಲಾ ಅಲ್ಲಿಯೇ ಇದ್ದ ಗಿಡವೊಂದರ ಎಲೆಗೆ ಜೋಡಿಸಲ್ಪಟ್ಟ ಪೋಲಿಗ್ರಾಫ್ ಯಂತ್ರದ ರೇಖಾಚಿತ್ರದಲ್ಲಿ ತೀವ್ರವಾದ ಏರಿಕೆ ಕಂಡುಬರುತ್ತಿತ್ತು. ಆದರೆ ಮೊದಲೇ ಸತ್ತಿದ್ದ ಸಿಗಡಿಗಳನ್ನು ಕುದಿಯುವ ನೀರಿಗೆ ಹಾಕಿದಾಗ ರೇಖಾಚಿತ್ರದಲ್ಲಿ ಯಾವ



……ಏನು ಬುದ್ಧೀ ಬ್ಯಾಂಕಿನಲ್ಲಿ ದುಡ್ಡು ತೆಗೆದುಕೊಂಡರೆ………ವಾಪಸ್ ಕೊಡಲೇ ಬೇಕಾ?!……"

ರೀತಿಯ ಬದಲಾವಣೆಯೂ ಕಂಡುಬರುತ್ತಿರಲಿಲ್ಲ. ರೇಖಾಚಿತ್ರದಲ್ಲಿ ವ್ಯಕ್ತವಾದ ತೀವ್ರ ಬದಲಾವಣೆಯು ಸಿಗಡಿಯ ಸಾವಿನಿಂದಾಗಿ ಗಿಡವು ಅನುಭವಿಸಿದ ವೇದನೆಯಿಂದಾಗಿರಬಹುದೆ? ಅಥವಾ ಸಿಗಡಿಯು ಕುದಿಯುವ ನೀರಿನಲ್ಲಿ ಬಿದ್ದು ಸತ್ತಾಗ ತನ್ನ ಮನಸ್ಸು ಅನುಭವಿಸುವ ಸಂವೇದನೆಯಿಂದಾಗಿ ರೇಖಾಚಿತ್ರದಲ್ಲಿ ತೀವ್ರ ಬದಲಾವಣೆ ಉಂಟಾಗುವುದೆ? ಇದನ್ನು ಪರೀಕ್ಷಿಸಲು ಬೇಕ್‌ಸ್ಟರನು ಪ್ರಯೋಗ ಶಾಲೆಯಲ್ಲಿ ಯಾರೂ ಇಲ್ಲದಿರುವ ಸಮಯ ಒಂದು ಯಂತ್ರವು ಸ್ವಯಂ ನಿಯಂತ್ರಿತವಾಗಿ ಸಿಗಡಿಗಳನ್ನು ಕುದಿಯುವ ನೀರಿಗೆ ಅನಿರ್ದಿಷ್ಟವಾಗಿ ಎಸೆಯುವಂತೆ ಏರ್ಪಾಡು ಮಾಡಿದನು. ಯಂತ್ರವು ಜೀವವಿದ್ದ ಸಿಗಡಿಗಳನ್ನು ಕುದಿಯುವ ನೀರಿಗೆಸೆದು ಕೊಲ್ಲುವ ಕಾಲಕ್ಕೆ ಸರಿಯಾಗಿ ಗಿಡವು ಅನುಭವಿಸುವ ವೇದನಾ ಪ್ರತಿಕ್ರಿಯೆಯು ಪೋಲಿಗ್ರಾಫ್ ಯಂತ್ರದ ರೇಖಾ ಚಿತ್ರದಲ್ಲಿ ಕಂಡುಬರುತ್ತಿತ್ತು. ತನ್ನ ಪರಿಸರದಲ್ಲಿರುವ ಇತರ ಜೀವಿಗಳು ಅನುಭವಿಸುವ ಸಂವೇದನೆಗಳು ಸಸ್ಯಗಳಿಗೆ ಅರ್ಥವಾಗಿ ಅವೂ ಸಂವೇದನೆಯನ್ನು ಅನುಭವಿಸುತ್ತವೆ ಎಂಬುದು ಈ ಪ್ರಯೋಗದಿಂದ ಬೇಕ್‌ಸ್ಟರನಿಗೆ ಸ್ಪಷ್ಟವಾಯಿತು.

ಬೇಕ್‌ಸ್ಟರ್ ನಡೆಸಿದ ಪ್ರಯೋಗಗಳು ಇತರ ಪ್ರಯೋಗಶಾಲೆಗಳಲ್ಲಿ ಪುನರಾವರ್ತಿಸಲ್ಪಟ್ಟಾಗ ಅವನ ಸಂಶೋಧನೆಗಳು ನಿಜವೆಂದು ಸಮರ್ಥಿಸಲ್ಪಟ್ಟವು. ಆದರೆ ಸಸ್ಯಗಳ ಈ ಸೂಕ್ಷ್ಮ ಗ್ರಹಣಶಕ್ತಿಯು ಯಾವ ತತ್ವವನ್ನು ಅವಲಂಬಿಸಿದೆಯೆಂಬುದು ವಿಜ್ಞಾನಿಗಳಿಗೆ ಇನ್ನೂ ಅರ್ಥವಾಗಿಲ್ಲ. ಸಸ್ಯಗಳ ಈ ಶಕ್ತಿಯು ವಿದ್ಯುತ್ಕಾಂತೀಯ ಅಲೆಗಳನ್ನು ಅವಲಂಬಿಸಿಲ್ಲವೆಂಬುದು ಪ್ರಾಯೋಗಿಕವಾಗಿ ತಿಳಿದುಬಂದಿದೆ. ಆಳವಾಗಿ ಯೋಚಿಸಿದಾಗ, ಬೇಕ್‌ಸ್ಟರನ ಶೋಧಗಳು ಹಲವು ನೈತಿಕ ಸಮಸ್ಯೆಗಳನ್ನು ನಮ್ಮ ಮುಂದಿಡುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಹಳೆಯ ನೀತಿಶಾಸ್ತ್ರಗಳು ಪ್ರಾಣಿಹಿಂಸೆ ಮಾಡಬೇಡಿ ಎಂದು ಹೇಳುತ್ತಿದ್ದರೆ, ಮುಂದಿನ ನೀತಿಶಾಸ್ತ್ರಗಳು ವಿನಾಕಾರಣ ಸಸ್ಯಹಿಂಸೆಯನ್ನು ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ನೀವು ದಾರಿಯಲ್ಲಿ ನಡೆಯುತ್ತಿರುವಾಗ ಪಕ್ಕದ ಗಿಡವೊಂದರಿಂದ ವಿನಾಕಾರಣ ಎಲೆಯನ್ನು ಕೀಳಲೆಂದು ಕೈಚಾಚಿದ ಸಮಯ ನಿಮಗೆ ಬೇಕ್‌ಸ್ಟರನ ಸಂಶೋಧನೆಗಳು ನೆನಪಾದರೆ, ಸಸ್ಯಹಿಂಸೆ ಸಲ್ಲದೆಂದು ನೀವು ಕೈಯನ್ನು ಹಿಂತೆಗೆದುಕೊಂಡರೆ ಆಶ್ಚರ್ಯವಿಲ್ಲ.

ತಮ್ಮ ಪರಿಸರದಲ್ಲಿರುವ ಇತರ ಜೀವಿಗಳು ಅನುಭವಿಸುವ ಸಾವು ನೋವುಗಳನ್ನು ಅತೀಂದ್ರಿಯಪ್ರಜ್ಞೆಯ ಮೂಲಕ ಅರಿತು ಸಂವೇದನೆಯನ್ನು ಅನುಭವಿಸುವ ಗುಣವು ಸಸ್ಯಗಳಿಗೆ ಮಾತ್ರ ಸೀಮಿತವಲ್ಲ. ಹಣ್ಣು, ತರಕಾರಿ, ಅಮೀಬ, ಯೀಸ್ಟ್, ಮತ್ತು ರಕ್ತಕಣ ಮೊದಲಾದವುಗಳು ಕೂಡ ಈ ರೀತಿಯ ಸಂವೇದನೆಯನ್ನು ಅನುಭವಿಸುತ್ತವೆಂದು ಬೇಕ್‌ಸ್ಟರನು ಕಂಡುಹಿಡಿದಿದ್ದಾನೆ. ಬೇಕ್‌ಸ್ಟರನ ಸಂಶೋಧನೆಗಳ ಹೊಸ ಬೆಳಕಿನಲ್ಲಿ ಉಪನಿಷತ್ತಿನ "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" ಎಂಬ ವಾಣಿಯು ಬಹಳ ಅರ್ಥವತ್ತಾಗಿ ಕಂಡುಬರುವುದಲ್ಲವೇ?

ಶಕ್ತಿಶಾಲಿ ವಿಚಾರಗಳ ಕೈವಾರಿಗಳಾಗಿರುವ ವರೆಗೆ ನಾವೂ ಶಕ್ತಿಶಾಲಿಗಳೇ. ಆದರೆ ಅವನ್ನು ವಿರೋಧಿಸತೊಡಗಿದ ಕೂಡಲೇ ನಾವು ಶಕ್ತಿಹೀನರಾಗಿ ಬಿಡುತ್ತೇವೆ.

— ಫ್ರಾಯಿಡ್

ಜೀವನ ವೇಗ

ಮೂಲ: ವಿ. ರಾಜಾರಾಮ ಮೋಹನರಾವ್
ಕನ್ನಡಕ್ಕೆ: ಆದಿತ್ಯ

ಗಾಳಿಯ ವೇಗ ಅದರ ಸ್ಪರ್ಶದಿಂದ ತಿಳಿಯಬಲ್ಲೆವು...

ಪ್ರವಾಹ ಹಾಗೂ ಜಲಪಾತಗಳ ವೇಗ ಕಣ್ಣಿಗೆ ಕಾಣಬಲ್ಲವು...

ಆದರೆ ದಿನದಿನಕ್ಕೂ ಬದಲಾಗುತ್ತಿರುವ ಜೀವನದ ವೇಗ ಮಾತ್ರ ಸ್ವಲ್ಪ ತಡೆದು ಆಲೋಚಿಸಿದ ಹೊರತು ನಮ್ಮ ದೃಷ್ಟಿಗೆ ಬಾರದು.

*

ಅವಳನ್ನು ಆ ಬೀದಿಯಲ್ಲಿ ಅನೇಕರು ಅನೇಕ ಸಲ ಕಂಡಿದ್ದರು. ಆದರೆ ಅವಳು ಯಾರೆಂದು ಮಾತ್ರ ಯಾರಿಗೂ ಗೊತ್ತಿಲ್ಲ.

ಗಾಳಿಯನ್ನು ಸೀಳಿಕೊಂಡು ಹೋಗುತ್ತಿರುವಂತೆ, ಪ್ರಪಂಚದಲ್ಲಿ ಎಲ್ಲರಿಗಿಂತಲೂ ತನಗೇ ಅತಿ ಅವಸರದ ಕೆಲಸವಿರುವಂತೆ ಸರ ಸರನೆ ಹೆಜ್ಜೆ ಹಾಕುತ್ತ ವೇಗವಾಗಿ ನಡೆಯುತ್ತಾಳೆ.

ಕೈಯಲ್ಲೊಂದು ಸಣ್ಣ ಬಟ್ಟೆಯ ಗಂಟು...ಎತ್ತಲೋ ನೋಡುವ ಜೇನಿನ ಬಣ್ಣದ ಕಣ್ಣುಗಳು...ಎದ್ದು ಕಾಣುವ ನಗು...ಬೇಗಬೇಗ ನಡೆಯುವ ನಡಿಗೆಯ ವೇಗ...ಅವಳ ಹೆಸರು ಏನೋ ಯಾರಿಗೂ ತಿಳಿಯದು. ಆದರೂ...ಆ ಇಪ್ಪತ್ತೈದು ವರ್ಷದ ಆಕಾರವನ್ನು ಎಲ್ಲರೂ ಕರೆಯುವುದು ಮಾತ್ರ 'ಹುಚ್ಚಿ'ಯೆಂದೇ.

ಒಮ್ಮೆ ಮೈತುಂಬಾ ಬಟ್ಟೆಯಿದ್ದರೆ ಇನ್ನೊಮ್ಮೆ ಅರ್ಧ ಮೈಯ್ಯೇ ಮುಚ್ಚಿರುತ್ತದೆ. ಹಾಗಿದ್ದಾಗ ಅವಳು ತನ್ನ ಬಟ್ಟೆಯ ಗಂಟನ್ನು ಎಡ ಭಾಗದ ಎದೆಗೆ ಒತ್ತಿಹಿಡಿದು, ಬಲ ಭಾಗವನ್ನು ಹಾಗೆಯೇ ಗಾಳಿಗೆ ಬಿಟ್ಟುಕೊಂಡು ಏನೂ ತಿಳಿಯದ ಚಿಕ್ಕ ಹುಡುಗಿಯಂತೆ ಅದೇ ರೀತಿ ನಗುತ್ತ ಮುಂದೆ ನಡೆಯುತ್ತಾಳೆ.

ಅವಳ ಆ ನಡಿಗೆಯ ವೇಗಕ್ಕೆ ಮೇಲಕ್ಕೂ ಕೆಳಕ್ಕೂ ಭಾರವಾಗಿ ತುಯ್ಯುತ್ತಿರುವ ಇಪ್ಪತ್ತೈದರ ನಗ್ನಯೌವ್ವನವನ್ನು ಎಷ್ಟೋ ಕಣ್ಣುಗಳು ನೋಡುತ್ತಿರುತ್ತವೆ. ಆಸೆ ತುಂಬಿದ, ಆತುರವಾಗಿ ನೋಡುವ ಆ ನೋಟಗಳೊಂದಿಗೆ ತನಗೇನೂ ಸಂಬಂಧವಿಲ್ಲವೆಂಬಂತೆ ತನ್ನಷ್ಟಕ್ಕೆ ತಾನೇ ಎಳೇ ಮಗುವಿನಂತೆ ನಗುತ್ತ ನಡೆಯುತ್ತಿರುತ್ತಾಳೆ.

ಸರಸರನೆ ನಡೆಯುತ್ತಿದ್ದವಳು ಇದ್ದಕ್ಕಿದ್ದಂತೆ ನಡಿಗೆಯನ್ನು ನಿಲ್ಲಿಸಿ ಯಾರ ಮುಂದೆಯೋ ಕೈಚಾಚಿ, "ಪೈಸಾ ದೇವ್"

ಅನ್ನುತ್ತಾಳೆ.

ಅವರು ಕೇಳಿಸಿಕೊಂಡರೂ, ಕೇಳಿಸಿಕೊಳ್ಳದಿದ್ದರೂ ಅವಳು ಮತ್ತೆ ಮತ್ತೆ ಎರಡು ಮೂರು ಸಲ, "ಪೈಸಾ ದೇವ್" ಅನ್ನುತ್ತಾಳೆ. ಹಾಗೆ ಕೇಳುವಾಗ ಅವಳ ದನಿಯಲ್ಲಿ ಮೊಂಡುತನ ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಭಿಕ್ಷೆ ಬೇಡುವವರಲ್ಲಿರಬೇಕಾದ ದೈನ್ಯ, ವಿನಯ ಆ ದನಿಯಲ್ಲಿರುವುದಿಲ್ಲ.

ಹಸಿವಾದಾಗ ಸಿಕ್ಕಿದ್ದನ್ನು ತಿನ್ನುತ್ತಾಳೆ. ಹಗಲೆಲ್ಲಾ ಅದೇ ರೀತಿ ಅಲೆಯುತ್ತಾಳೆ. ಅಲೆಯುತ್ತಾ ತನ್ನಷ್ಟಕ್ಕೆ ತಾನೇ ಏನನ್ನೋ ಗೊಣಗಿಕೊಳ್ಳುತ್ತಾಳೆ. ಒಂದೊಂದು ಬಾರಿ ರಾತ್ರಿಯ ಹೊತ್ತು, ಯಾವುದಾದರೂ ಜಗುಲಿಯ ಮೇಲೆ ಕುಳಿತು ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಏನೇನೋ ಮಾತಾಡುತ್ತ, ಮನಬಂದಂತೆ ಕೂಗಿಕೊಳ್ಳುತ್ತಾಳೆ.

ಕೆಲವು ದಿನ ಒಂದೇ ಜಗುಲಿಯ ಮೇಲೆ ಮಲಗಿದರೆ ಮತ್ತೆ ಕೆಲವು ದಿನ ಇನ್ನೊಂದು ಜಗುಲಿಯ ಮೇಲೆ ಮಲಗುತ್ತಾಳೆ.

ಒಂದೆ ಯಾವಾಗಲೋ ಆ ಬೀದಿಯಲ್ಲಿದ್ದ ಒಬ್ಬ 'ಬ್ರಾಂದಿ ಷಾಪ್' ಮಾಲೀಕನ ಮನೆಯಲ್ಲಿ ಕೆಲಸ ಮಾಡುತ್ತಿದ್ದಳೆಂದೂ, ಆತ ಆ ಊರು ಬಿಟ್ಟು ಬೇರೆ ಊರಿಗೆ ಹೊರಟು ಹೋದನೆಂದೂ ಆ ನಂತರವೇ ಅವಳು ಈ ರೀತಿ ಹುಚ್ಚಿಯಾದಳೆಂದೂ ಕೆಲವರು ಹೇಳುತ್ತಿದ್ದುದುಂಟು...ಆದರೆ ನಿಜವಾದ ವಿಷಯ ಯಾರಿಗೂ ಗೊತ್ತಿರಲಿಲ್ಲ.

ಆ ಬೀದಿಯಲ್ಲಿರುವ ನಾಯಿಗಳನ್ನು ನೋಡುವಂತೆ, ಕಸದ ತೊಟ್ಟಿಯನ್ನು ನೋಡುವಂತೆ ಆ ಹುಚ್ಚಿಯನ್ನು ನೋಡುವುದು ಎಲ್ಲರಿಗೂ ಅಭ್ಯಾಸವಾಗಿಬಿಟ್ಟಿತ್ತು.

*

ಯಾವ ಕತ್ತಲೆಯ ಮೂಲೆಯಲ್ಲಿ ಯಾರು ಅವಳನ್ನು ಇಷ್ಟಪಟ್ಟರೋ ಅಥವಾ ಹುಚ್ಚಿಗೇ ಆ ಸಮಯದಲ್ಲಿ ಇಷ್ಟವಾಯಿತೋ ತಿಳಿಯದು—ಅಂತೂ ಹುಚ್ಚಿ ಬಸಿರಾದಳು,

ಬೆಳೆಯುತ್ತಿದ್ದ ಆ ಹೊಟ್ಟೆ; ಒಂಬತ್ತು ತಿಂಗಳು ಹೊತ್ತ ಆ ಹೊರೆ...ಎಲ್ಲರ ಕಣ್ಣಿಗೂ



ಬಿತ್ತು.

"ಥೂ! ಯಾರೋ ಆ ದರಿದ್ರದವನು..."

"ಎಂಥ ಹಾಳು ಬಯಕೆಯೋ!..."

–ಹೀಗೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಅಂದುಕೊಂಡರು. ಆ ರೀತಿ ಅಂದುಕೊಂಡವರಲ್ಲಿ ಮೊದಲು ಅವಳ ಕಡೆ ಆಸೆ ತುಂಬಿದ ಕಣ್ಣುಗಳಿಂದ ನೋಡಿದವರೂ ಇದ್ದರು!

ಅದಕ್ಕಿಂತ ಹೆಚ್ಚು ಯೋಚಿಸುವ ಅವಶ್ಯಕತೆಯಾಗಲೀ ಅವಕಾಶವಾಗಲೀ ಯಾರಿಗೂ ಇರಲಿಲ್ಲ.

ಹೊಟ್ಟೆ ಬೆಳೆಯುತ್ತಿದ್ದರೂ ಹುಚ್ಚಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ನಡಿಗೆಯ ವೇಗವೊಂದು ಮಾತ್ರ ಕಡಿಮೆಯಾಯಿತಷ್ಟೇ!

*

ಕೊಂಚ ಮಳೆ ಸುರಿದು ಬಿಟ್ಟಿತ್ತು.

ಮೆಲ್ಲಮೆಲ್ಲನೇ ಒಬ್ಬೊಬ್ಬರೇ ಸುತ್ತಲೂ ಸೇರಲಾರಂಭಿಸಿದರು. ಪೋಸ್ಟ್ ಆಫೀಸಿನ ಮುಂದಿದ್ದ ದೊಡ್ಡ ಪೋಸ್ಟ್ ಬಾಕ್ಸಿಗೆ ಒರಗಿ ಕುಳಿತಿದ್ದಳು ಹುಚ್ಚಿ. ಸಣ್ಣ ಸಣ್ಣ ಚೀರಾಟ, ನರಳುವಿಕೆ– ಇವುಗಳಿಂದ ಮಾತ್ರ ಅಲ್ಲಿ ಮನುಷ್ಯರಿದ್ದಾರೆಂದು ಊಹಿಸಬಹುದಷ್ಟೆ.

ಪೋಸ್ಟ್ ಆಫೀಸಿನ ಪಕ್ಕದಲ್ಲಿದ್ದ ಇರಾನಿ ಹೊಟೆಲಿನಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಮನುಷ್ಯರು ಓಡಿಬಂದು ಆ ಗುಂಪಿನಲ್ಲಿ ಸೇರಿ ನೋಡಲಾರಂಭಿಸಿದರು.

"ಅಯ್ಯೋ ಸುಚ್ಚಿ ಕಣೋ..." ಎಂದರು.

ಕೆಲವರ ನೋಡಿ ಹೊರಟುಹೋದರು. ಮತ್ತೆ ಕೆಲವರು ನೋಡಲು ಬಂದು ಸೇರಿದರು. ಇನ್ನೂ ಕೆಲವರು ತಮಾಷೆ ನೋಡುವಂತೆ ನೋಡುತ್ತ ಹಾಗೆಯೇ ನಿಂತುಬಿಟ್ಟರು.

ತರಸೇವಾರಿ ಮಾತುಗಳು...... ಕೊಂಚ ಕರುಣೆ...ಕೊಂಚ ಸಹಾನುಭೂತಿ...

ನೋವಿನಿಂದಲೋ ಅಥವಾ ಭಯದಿಂದಲೋ ಪೋಸ್ಟ್‌ಬಾಕ್ಸಿನ ಕಡೆಗೆ ಮತ್ತಷ್ಟು ಸರಿದಳು ಹುಚ್ಚಿ.

"ಹೇಚ್ಚಿ ರಸ್ತೆಯಲ್ಲೇ ಹಡೆದುಬಿಡೋ ಹಾಗಿದ್ದಾಳಲ್ಲ..." ಎಂದಿತು ಒಂದು ಧ್ವನಿ. ಅದನ್ನು ಕೇಳುತ್ತಲೇ ಹೋಟೆಲಿನ ಮುಂದಿದ್ದ ಜನರಲ್ಲಿ ಇನ್ನೂ ಕೆಲವರು ಬಂದು ಆ ಗುಂಪಿನಲ್ಲಿ ಸೇರಿಕೊಂಡರು.

ಹೊಸದಾಗಿ ಬಂದು ಗುಂಪನ್ನು ಸೇರಿದವರು ಆ ಮೊದಲೇ ಬಂದಿದ್ದವರನ್ನು ಕುರಿತು, "ಏನು, ಏನಾಯಿತು?" ಎಂದು ವಿಚಾರಿಸಿದರು.

ಹುಚ್ಚು ಬಲವೂ ತಡೆದುಕೊಳ್ಳಲಾರದಷ್ಟು ವೇದನೆ...

ಪ್ರಸವವೇದನೆಯನ್ನು ತಾಳಲಾರದೆ ಹುಚ್ಚಿ ಇನ್ನೂ ಸ್ವಲ್ಪ ಜೋರಾಗಿ ಕೂಗಲು ಪ್ರಾರಂಭಿಸಿದಳು. ಕಾಲುಗಳನ್ನು ಪೂರ್ತಿಯಾಗಿ ನೀಡಿಕೊಂಡು ಪೋಸ್ಟ್ ಬಾಕ್ಸಿಗೆ ಒರಗಿ ಓರೆಯಾಗಿ ಮಲಗಿಕೊಂಡಳು.

ಎಲ್ಲರೂ ಹಾಗೆಯೇ ನೋಡುತ್ತಲೇ



"'...ನಮ್ಮ ಹೇರಾಯಿಲ್ ಬಳಸಿದರೆ ಬಿಳೀ ಕೂದಲು ಇರುವುದಿಲ್ಲ.' ಅನ್ನೋ ಜಾಹೀರಾತು ನೋಡಿ, ನೀವು ಆ ಹೇರಾಯಿಲ್ ಅನ್ನು ತರಿಸಲೇ ಬಾರದಿತ್ತು ಕಣ್ರೀ... ಈಗ ನೋಡಿ ನಿಮ್ಮ ತಲೆಯಲ್ಲಿ ಯಾವ ಕೂದಲೂ ಇಲ್ಲದ ಹಾಗಾಯಿತು!"

ಇದ್ದರು.

ಒಂದು ಕಾಲುಗಂಟೆ ಹೊತ್ತು ಮರಣ ಯಾತನೆ ಅನುಭವಿಸಿದ ಹುಚ್ಚಿ ಪಬ್ಲಿಕ್ ರಸ್ತೆಯ ಮೇಲೆ ಎಲ್ಲರೂ ನೋಡುತ್ತಿರುವಂತೆಯೇ ಕೆಸರು ಕೆಸರಾಗಿದ್ದ ನೆಲದಮೇಲೆ ಒಂದು ಮಗುವನ್ನು ಹಡೆದುಬಿಟ್ಟಳು... ಹಡೆದು ನಿಶ್ಚೇಷ್ಟಳಾಗಿ ಬಿದ್ದುಬಿಟ್ಟಳು.

ಭಿಕ್ಷೆ ಬೇಡುವವಳೋ ಅಥವಾ ಕೂಲಿ ಕೆಲಸ ಮಾಡುವವಳೋ ಇದ್ದಂತೆ ಕಾಣುತ್ತಿದ್ದ ತೇಪೆಸೀರೆಯ ಒಬ್ಬ ಹೆಂಗಸು ಅವಳ ಸಮೀಪಕ್ಕೆ ಹೋದಳು...ಹೋಟೆಲಿನಿಂದ ಯಾರೋ ಒಂದು ಬ್ಲೇಡನ್ನು ತಂದರು...

ಕೆಲ ಕ್ಷಣಗಳಲ್ಲೇ ಮಗುವಿನ ಅಳು ಆ ರಸ್ತೆಯ ಉದ್ದಕ್ಕೂ ಕೇಳಿಸಿತು...

ಅಳುವನ್ನು ಕೇಳಲಾರವೇನೋ ಎಂಬಂತೆ ಅಷ್ಟು ಹೊತ್ತೂ ಎಲ್ಲರೊಂದಿಗೆ ಸೇರಿ ತಮಾಷೆ ನೋಡಿದ ಮೋಡಗಳು ಸಹ ಅಳಲಾರಂಭಿಸಿದವು.

ಮಳೆಯಲ್ಲಿ ತೊಯ್ದುಹೋಗಬೇಕಾಗುತ್ತೆಂಬ ಭಯದಿಂದಲೋ ಅಥವಾ ನೋಡಬೇಕಾದ್ದನ್ನೆಲ್ಲಾ ನೋಡಿಯಾಯಿತೆಂಬ ತೃಪ್ತಿಯಿಂದಲೋ ಅಂತೂ ಅಲ್ಲಿ ಸೇರಿದ್ದ ಗುಂಪು ಚದುರಲಾರಂಭಿಸಿತು. ಜನ ಒಬ್ಬೊಬ್ಬರಾಗಿ ಅಲ್ಲಿಂದ ಸರಿಯಲಾರಂಭಿಸಿದರು.

ಸ್ವಲ್ಪಹೊತ್ತಿಗೆಲ್ಲಾ ಚೇತರಿಸಿಕೊಂಡ ಆ ಹುಚ್ಚಿ ಮಗುವಿನೊಂದಿಗೆ ಎದ್ದು ಮೆಲ್ಲನೆ ಪೋಸ್ಟ್ ಆಫೀಸಿನ ಜಗುಲಿ ಸೇರಿದಳು,

ಅಲ್ಲಿ...ಆ ನಡುರಸ್ತೆಯಲ್ಲಿ ಹೆರಿಗೆಯಾಗಿದ್ದ ಗುರ್ತುಗಳಿದ್ದರೆ ಅಸಹ್ಯವಾಗಿರುವುದೆನ್ನುವಂತೆ ಜೋರಾಗಿ ಸುರಿಯತೊಡಗಿದ್ದ ಮಳೆ ಅದನ್ನೆಲ್ಲಾ ತೊಳೆದುಹಾಕಿತು.

ಗುಂಪಿನಲ್ಲಿ ಒಬ್ಬರೂ ಉಳಿಯದಂತೆ ಎಲ್ಲರೂ ಹೊರಟುಹೋದರು. ರಸ್ತೆಯ ಮೇಲೆ ಆಗುವ ಎಷ್ಟೋ ಆ್ಯಕ್ಸಿಡೆಂಟ್‌ಗಳನ್ನು ನೋಡಿದಂತೆ ಇದನ್ನೂ ನೋಡಿತು ಜನ.

ಕೆಲವರು "ಅಯ್ಯಯ್ಯೋ..." ಎಂದುಕೊಂಡರು. ಮತ್ತೆ ಕೆಲವರು "ಅಯ್ಯೋ ಪಾಪ!" ಎಂದುಕೊಂಡರು. ಇನ್ನೂ ಕೆಲವರು "ಕರ್ಮಫಲ!" ಎಂದುಕೊಂಡರು.

ಇದಕ್ಕೆ ಯಾರದ್ದೂ ತಪ್ಪೆಂದು ಹೇಳಲಾಗದು. ಅವರವರ ಪಾಡು ಅವರವರಿಗೆ. ಅವರವರ ತಾಪತ್ರಯ ಅವರವರಿಗೆ. ಇತರರ ಬಗ್ಗೆ ಯೋಚಿಸುವಷ್ಟು ವ್ಯವಧಾನ ಯಾರಿಗೂ ಇಲ್ಲ. ಎಂಥ ದಾರುಣವನ್ನಾದರೂ ಹಗುರಾಗಿ ಕಾಣುವ ಅಭ್ಯಾಸವಾಗಿಹೋಗಿರುವ ಜನರ ಜೀವನ ವೇಗದ ಫಲ ಇದು! ❋



ವಿವಿಧ ಜನಾಂಗಗಳಲ್ಲಿ ಪ್ರಚಲಿತವಿರುವ ಮದುವೆಯು ವಿಚಿತ್ರ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿನ ವಧುವು ವರನ ತೊಡೆಯ ಮೇಲೆ ಗಟ್ಟಿಯಾಗಿ ಕುಳಿತುಕೊಳ್ಳುವ ವರೆಗೆ ಅವನ ಹೆಂಡತಿಯಾಗುವುದಿಲ್ಲ. ಜಾವಾದ ಮೂಲ ನಿವಾಸಿಗಳು ಗಂಡಹೆಂಡಿರಾಗಿ ಜೀವನಸಾಗಿಸುವ ರೀತಿ ಗಾರ್ಹಸ್ಥ್ಯವನ್ನು ಸುಸಾರ ಪ್ರಾರಂಭಿಸುವ ರೀತಿ. ಇದಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿದೆ. ಮದುವೆಯ ಇತರ ಕಾರ್ಯಕ ವಿಧಿಗಳು ಪೂರ್ಣಗೊಂಡ ವಧೂವರರಿಬ್ಬರೂ ಒಬ್ಬರಿಗೊಬ್ಬರು ಚಪ್ಪಲಿಯಿಂದ ಬಡಿದ ನಂತರವೇ ಅವರು ಗಂಡಹೆಂಡರಾಗಿ ಸಂಸಾರವನ್ನು ಪ್ರಾರಂಭಿಸಿದಂತಾಗುತ್ತದೆ.

ಎಲ್ಲವೂ ಸುಖಕ್ಕೆ: ಎಲ್ಲರೂ ಸುಖ್ಯರು

ಮು ಬ ಚನ್ನಬಸಪ್ಪ

ಶುಭ ಕಾಮನೆ ಅನ್ನುವುದೇನು? ಒಳ್ಳೆಯದನ್ನು ಬೇಕೆನಿಸಿದ ಅಪೇಕ್ಷರಿಗೆ ಹಾರೈಸುವುದರಲ್ಲಿ ಅರ್ಥ ವಿದೆಯೇ? ಈಗಿರು-ವುದಕ್ಕಿಂತ ಹೆಚ್ಚಿನದು ದೊರೆಯಲಿ- ಅನ್ನುವ ಆಶಯದ ಬಯಕೆ ಕೋರಿಕೆಯ ಪರಿಣಾಮವೇನು? ಅದರಿಂದ ಮತ್ತೆ ಅಸಮಾನತೆ ಹೆಗಲೇರಿತಲ್ಲವೆ? ಅಸಮಾನತೆಗೆ ಆಹ್ವಾ-ನವೇ?

ಆಶೀರ್ವಾದ ಮಾಡುತ್ತಾರೆ, ಒಳ್ಳೆಯ ಗಂಡ- ಹೆಂಡತಿ ದೊರಕಲಿ, ಇನ್ನೂ ಹೆಚ್ಚಿನ ಹುದ್ದೆ ಬಡ್ತಿಗಳು ಸಿಗಲಿ, ಆಸ್ತಿ, ಐಶ್ವರ್ಯಗಳು ಲಭಿಸಲಿ- ಇಂತಹವೆಲ್ಲ ಎಲ್ಲರ ಸುಖ ಸಾಮರಸ್ಯ ಹಾರೈಸುವವರ ಬಾಯಿಂದ ಬರಬಹುದು? ಸರ್ವೋದಯ ಹೀಗೆ ಸಾಧ್ಯವೆ?

ಮನುಷ್ಯ ಮನುಷ್ಯನನ್ನು ಸಂಧಿಸಿದಾಗ, ಬಂಧುಗಳನ್ನು ಬೀಳ್ಕೊಡುವಾಗ, ಅಳಿಯ ಮಗಳಿಗೆ ವಿದಾಯ ಹೇಳುವಾಗ, ಪ್ರಯಾಣ ಹೊರಡುವಾಗ, ಕಳಿಸುವಾಗ, ಬೀಳ್ಕೊಳ್ಳುವಾಗ ಸುಖ ಕೋರುತ್ತಾರೆ; ಒಳ್ಳೆಯದನ್ನು ಹಾರೈಸುತ್ತಾರೆ. ಜಗತ್ತಿನಲ್ಲಿರುವ ಒಳ್ಳೆಯದೆಲ್ಲ ದೊರಕಲಿ!

ನಿನಗೆ ಒಳ್ಳೆಯದು ದೊರಕಲಿ! ಅನ್ನುವುದರ ಅರ್ಥ ಉಳಿದವರಿಗೆ ಕೆಟ್ಟದು ದೊರಕಲಿ ಎಂದಾಗುವುದಿಲ್ಲವೆ? ಇರುವುದು ಎಲ್ಲ-ರಿಗೂ ಸಮಾನವಾಗಿ ದೊರಕಲಿ, ಅನ್ನುವುದರಲ್ಲಿ ಸಾಮರಸ್ಯ ಸರ್ವೋದಯ ವಿದೆ. ಬೇಕಾ-ದವರಿಗೆ ಒಳ್ಳೆಯದನ್ನು ಹಾರೈಸುವುದೆಂದರೆ ದ್ವಂದ್ವ, ತುಮುಲ, ಕಿತ್ತಾಟ, ಅಸೂಯೆಗೆ ಆಹ್ವಾನವಿತ್ತಂತೆ!

ಸುಳ್ಳಿನಿಂದ ಸಾಮರಸ್ಯ ಸಾಧ್ಯವೆ? ಪ್ರತಿ ಹೆಣ್ಣಿನ ಬದುಕಿನಲ್ಲಿಯೂ ಮೊದಲು ಒಳ್ಳೆಯ ಗಂಡ ದೊರಕುತ್ತಾನೆಂದು ಆಶ್ವಾಸನೆ ಆಮೇಲೆ ಒಳ್ಳೆಯ ಭಾಗ್ಯವಂತರಾದ ಮಕ್ಕಳು ಹುಟ್ಟುತ್ತಾರೆಂಬ ಆಶೋತ್ತರ! ಕೇಳಿದಾಗ ಹುಚ್ಚಿಗೆ ಬೆಚ್ಚಗನ್ನಿಸುತ್ತದೆ.

ಸುಲಭ ಸಂಪಾದನೆ, ಸುಲಭ ಸಿದ್ಧಿ, ಸುಲಭ ಕೀರ್ತಿಗಳು ಬೇಕೆಂದರೆ ಶುಭಾಶಯ ಮಂಗಳಕಾಮನೆಗಳಿಗೆ ಮರೆಹೋಗಬೇಕು! ಮಂತ್ರಿ ಭರವಸೆ, ಸಾಧುವಿನ ಆಶೀರ್ವಾದ ಇವುಗಳಿಗೆ ಖರ್ಚಿಲ್ಲ- ಅನಂತ ಅರ್ಥ ಮಾತ್ರ ಧಾರಾಳವಾಗಿದೆ. ಸಮ್ಮೋಹನ ಶಕ್ತಿಯ ಗುಟ್ಟು ಅದು.

ಚಿನ್ನದಂತಹ ಹೆಂಡತಿ ದೊರಕುತ್ತಾಳೆಂದರೆ ಎಲ್ಲ ತರುಣರ ಹೃದಯಗಳೂ ಅರಳುತ್ತವೆ. ಕಂಪು ಮಕರಂದ ಬೀರತೊಡಗುತ್ತವೆ. ಹಾಗೆ ಹಾರೈಸಿ ಹೇಳುವವರಿಗೆ ಪುರಸ್ಕಾರ ಪೂಜ್ಯತೆ ಗೌರವ ಮರ್ಯಾದೆ ಘನತೆ ಧನ್ಯತೆಗಳು ಹಡಿಗೆ ಹಡಿಗೆಗಟ್ಟಲೆ ಲಭಿಸುತ್ತವೆ.

ಆಮೇಲೆ ಗಂಡ ಹೆಂಡತಿ ಸುಖವಾಗಿದ್ದರು! ಎಂದೇ ಕಥೆ ಮುಕ್ತಾಯವಾಗಬೇಕು. ಯಾವ ಗಂಡ? ಯಾವ ಹೆಂಡತಿ? ಅನ್ನುವ ಪ್ರಶ್ನೆಯಿಲ್ಲ. ಕೆಟ್ಟದು ಅಶುಭ

ಅಭದ್ರತೆಗಳು ತಮಗೆ ಬೇಡ, ಅನ್ನುವ ಯುಕ್ತಿ- ಶಕ್ತಿ-ಭಕ್ತಿ ಕಥಾನಾಯಕ ನಾಯಿಕೆಯರ ಶುಭ ಆಶಿಸುತ್ತದೆ!

ರಂಗಭೂಮಿಯ ವಿರಳ ರಜತಪರದೆಯಲ್ಲಿನ ವಿಚ್ಛೇದನ ಕಥೆ ಕಾದಂಬರಿ ಕಾವ್ಯಗಳಲ್ಲಿ ಬರುವ ತಿಕ್ಕಾಟ ತಿಸರಾಟ ಕೊಸರಾಟಗಳು ಪ್ರೇಕ್ಷಕ ವಾಚಕರ ಹೃನ್ಮನಗಳಲ್ಲಿ ಪ್ರತಿಕ್ರಿಯೆಯ ವಿಷಜ್ವಾಲೆ ಹರಡುತ್ತವೆ; ಉತ್ಪಾದಿಸುತ್ತವೆ ಚಂಡಮಾರುತದ ಪುಂಡಾಟವನ್ನು.

ಖಳನಾಯಕ ನಾಯಿಕೆಯರಿಗೆ ದುರಂತ ದುಃಖ ದೈನ್ಯತೆಗಳು. ಕಥಾನಾಯಕ ನಾಯಿಕೆಯರಿಗೆ ಸುಖಾಂತ, ಸುಖ ಸಂಪತ್ತು ಸೌಖ್ಯ ಶೋಭಾಯಾತ್ರೆ ವಿಜಯ ವೈಭವಗಳು? ಖಳನಾಯಕ ಸಾಯಬೇಕು? ಖಳನಾಯಿಕೆ ಏಕಿರಬೇಕು? ಇನ್ನು ಉಳಿದ ಸಾಮಾನ್ಯರು ಅನ್ನುವ ಭೇದಭಾವ. ಹೀಗೆಲ್ಲ ವಿಪರೀತ ವೈಪರೀತ್ಯಗಳು ಇರುವುದು ಸಾಧುವೆ?

ಬಲವಂತ ಬೇಡ, ಹೆಚ್ಚಿನದು ಸಲ್ಲ

ದೇವರಿಂದ ರಾಜ್ಯ ದೊರಕುತ್ತದೆ, ನಾಯಕನಿಂದ ಲೈಸೆನ್ಸ್ ಲಭಿಸುತ್ತದೆ. ಇಂತಹದೆಲ್ಲ ಭಾಗ್ಯೋದಯ ಶುಭೋದಯ. ಇದೆಲ್ಲ ಆಶಿಸುವಂತಹದೆಂದು ಈ ಪರಿಯ ಸೊಬಗನ್ನು ಹಿಂದಿನ ಪುರಾಣಗಳಲ್ಲಿ ಮುಂದಿನ ಜನಜೀವನದಲ್ಲಿ ಹೆಸರಿಸಿ ಕುಣಿಸಿ ಮರೆಸಲಾಗುತ್ತಿದೆ.

ಲಕ್ಷ ಮಂದಿ ಲಾಟರಿ ಟಿಕೆಟ್ ಕೊಂಡು ಲಕ್ಷದತ್ತ ತದೇಕಚಿತ್ತರಾಗಿ ಲಕ್ಷ ಪೂರೈಸಿರುತ್ತಾರೆ. ಆದರೆ ವಾಸ್ತವವಾಗಿ ಲಕ್ಷ ಸಿಕ್ಕುವುದು ಲಕ್ಷದಲ್ಲೊಬ್ಬನಿಗೆ ಮಾತ್ರ! ಉಳಿದವರಿಗೆ ನಿರಾಶೆ ನೋವು ಸಂಕಟಗಳನ್ನು ತರಲೆಂದೇ ಲಾಟರಿ, ಜೂಜು, ರಾಜ್ಯ. ಅಧಿಕಾರ, ದೈವ. ಅದೃಷ್ಟಗಳು.

ಹೆಚ್ಚಿನದರ ಆಸೆ ಪ್ರಲೋಭದಿಂದ ಆತ್ಮಹತ್ಯೆ. ಚಲನಚಿತ್ರ ತಾರೆಯನ್ನು ನೋಡಿದ ಮೇಲೆ ಸ್ವಂತ ಹೆಂಡತಿ ಸವಕಲಾಗುತ್ತಾಳೆ. ರಂಗಭೂಮಿಯ ರಾಜನನ್ನು ಕಂಡ ಮೇಲೆ ಮನೆಯ ಗಂಡ ಕಳಾಹೀನ ತೇಜೋಹೀನ ಸಪ್ಪೆಸಿಪ್ಪೆಯಾಗಿ ನಿಸ್ಸಾರ ತಿರಸ್ಕಾರ ತಾತ್ಸಾರ ಯೋಗ್ಯನಾಗುತ್ತಾನೆ.

ಕೆಡುಕು ಹಾರೈಸುವುದು ಮಾತ್ರ ತಪ್ಪು; ಪಾಪವೆಂದು ಜಗತ್ತು ಭ್ರಮಿಸಿದೆ. ಜಗತ್ತಿಗೀಗ ಹೊಸದಾಗಿ ಹೇಳಿ ತಿಳಿಸಿಕೊಡಬೇಕಾಗಿದೆ. ಶುಭಕಾಮನೆ ಮಂಗಳ ಕೋರಿಕೆ ಭಾಗ್ಯೋದಯ ಅನ್ನುವಂತಹದೂ ಕೂಡ ಪರಮ ಪಾಪವೆಂದು. ಬೇಕಾಗಿರುವುದು ಹೆಚ್ಚಿನದೋ ಸಾಮರಸ್ಯವೋ?

ವಿದ್ಯೆ ವಿಜ್ಞಾನಗಳು ಏಕೆ ಪಾಪ ತಾಪದಾಯಕವೆಂದರೆ, ಅವು ಸಾಮರಸ್ಯವನ್ನು ಸಾಯಿಸಿ, ಹೆಚಿನದರತ್ತ ಎಲ್ಲರನ್ನೂ ಕೊಂಡೊಯ್ಯುತ್ತವೆ. ಕೆಲವರಿಗೆ ಕಾರು, ಪೇರು, ಡಿವಿಡೆಂಡ್, ಸುಂದರಿ, ಸ್ಕಾಚ್ ವಿಸ್ಕಿ. ಉಳಿದವರಿಗೆ ಕೊಳಚೆಗುಂಡಿ, ದುರ್ವಾಸನೆ ಕಷ್ಟಕಾರ್ಪಣ್ಯ. ಇದುವರೆಗಿನ ಜಗತ್ತು ಗುಡಿಸಿ ಗುಡ್ಡೆ ಹಾಕಿಕೊಳ್ಳಲು ಅವಕಾಶ ನೀಡಿದೆ. ಹಾಗೂ ಬಡವ ಬಲ್ಲಿದರ ಮಧ್ಯದ ಅಂತರವನ್ನು ಕಡಿಮೆ ಮಾಡುವ ಇಬ್ಬಂದಿ ಮಾತಾಡುತ್ತದೆ. ಅಂತರವಂತೂ ಅನಿವಾರ್ಯವೆನ್ನುತ್ತದೆ! ಕಮ್ಯೂನಿಸ್ಟ್ ಮೃಗಜಲ ಭೌತಿಕ, ಅನ್ನ, ಬಟ್ಟೆ, ಸಾಮರಸ್ಯ ಸಾಧಿಸುವುದರಲ್ಲಿ ಅಷ್ಟಿಷ್ಟು ಯಶಸ್ವಿಯಾಗಿದೆ. ಆದರೆ ಪ್ರತಿಯೊಬ್ಬನ ಹಿಂದೆಯೂ ಎಸ್ ಎಸ್ ಗೆಸ್ಟಪೋ ಕೆಜಿಬಿ! ಗುಪ್ತಚರರು!

ಅನಾಗರಿಕತೆಯೆಂದರೆ ಎಲ್ಲರಿಗೂ ಗುಡಿಸಲು ಮರದ ಪೊಟರೆ ಕಲ್ಲು ಗುಹೆ-ಅಲ್ಲಿ ಎಲ್ಲರಿಗೂ ತಿನ್ನಲು ಹಣ್ಣು ಮಾಂಸ ಒಣರೊಟ್ಟಿ, ಕುಡಿಯಲು ನೀರು ದೊರೆಯುತ್ತದೆ. ಇನ್ನು ಉಡುಪೂ ಹೆಚ್ಚಿನ ಹೊದಿಕೆ ಯಾರಿಗೂ ಇಲ್ಲ-ಅಲ್ಲ, ಬೇಕೆನಿಸುವುದಿಲ್ಲ. ಗೊತ್ತಿದ್ದರೆ ತಾನೇ ಆಸೆ ಆಕಾಂಕ್ಷೆ?

ನಾಗರಿಕತೆಯೆಂದರೆ ಕೆಲವರಿಗೆ ಗಗನಚುಂಬಿ ಹವಾ ನಿಯಂತ್ರಿತ ಮಹಲುಗಳು. ಅವುಗಳಲ್ಲಿ ವಿಟ, ವೇಶ್ಯೆಯರು, ಸ್ಕಾಚ್ ವಿಸ್ಕಿ, ಕಾರು, ವಿಮಾನ ಬ್ಯಾಂಕ್ ಬ್ಯಾಲೆನ್ಸ್. ಉಳಿದವರಿಗೆ ತಗಡಿನ ಪೆಟ್ಟಿಗೆ! ಗಲ್ಲಿ ಗಟಾರಗಳಲ್ಲಿ ಹೊಟ್ಟೆ

ಹಸಿದಿರುತ್ತದೆ, ಗರ್ಭಾಶಯ ತುಂಬಿರುತ್ತದೆ ಸದಾ–

–ಎಂದೇನಲ್ಲ! ಇದು 'ನಿರೋಧ್' ಜಗತ್ತು! ಎಷ್ಟು ಬೇಡ ಬೇಡವೆಂದರೂ ನುಗ್ಗಿ ನುಗ್ಗಿ ಹುಟ್ಟಿ ಬರುತ್ತಿರುತ್ತಾರೆ ಲಕ್ಷಲಕ್ಷ ಸಂಖ್ಯೆಯಲ್ಲಿ. ಇದು ಕುಟುಂಬ ಯೋಜನೆ ಪ್ರಪಂಚ. ಗಂಡ–ಹೆಂಡತಿಯಲ್ಲ, ವಿಟ ವೇಶ್ಯೆ. ಮಗುವಿಗೆ ಸ್ವಾಗತವಿಲ್ಲ, ಮನೆಗೆ ಮಹತ್ವ; ಮಾನವೀಯತೆ ನಷ್ಟಭ್ರಷ್ಟ.

ವಿದ್ಯೆ ವಿಜ್ಞಾನಗಳಿಂದ ಜಗತ್ತೂ ಕಿರಿದಾಗುತ್ತಿದೆ, ಹೃನ್ಮನಗಳೂ ಕೂಡ!

ಲೈಂಗಿಕತೆ ಅತಿಕಾಮ ವಿಕೃತಕಾಮ 'ಮೃಗೀಯ' ವರ್ತನೆ ಬಲವಂತ ಭೋಗಗಳು ಮಾತ್ರವಲ್ಲ, ಬದುಕಿನ ಎಲ್ಲ ರಂಗ ವಲಯ ಅರ್ಥ ಪರಿಸರಗಳಲ್ಲೂ ಮಲಿನತೆ ಕೊಳಕು ಹೊಲಸು ತುಂಬಿತುಳುಕುತ್ತಿದೆಯಲ್ಲ. ಈ ಪರಿಸ್ಥಿತಿ ೫೦ ವರ್ಷಗಳ ಹಿಂದೆ ಇಷ್ಟು ಪ್ರಮಾಣದಲ್ಲಿ ಇಷ್ಟು ಅರ್ಥವ್ಯಾಪ್ತಿ ಆಳದಲ್ಲಿ ಇರಲಿಲ್ಲ. ಇದು ಅನುಭವಜನ್ಯ ನುಡಿಯಷೆ.

ಇನ್ನೂ ೫೦ ವರ್ಷ ಹಿಂದಕ್ಕೆ ಹೋದಲ್ಲಿ, ಆಗ ಪರಿಸ್ಥಿತಿ ಮತ್ತಷ್ಟು ಹಿಡಿತದಲ್ಲಿತ್ತು. ಅದರರ್ಥವೆಂದರೆ ಭ್ರಷ್ಟಾಚಾರ, ಆಂತರಿಕ ಬಾಹ್ಯ ಮಾಲಿನ್ಯ ಹೊಲಸು ಕಡಿಮೆಯಾಗಿತ್ತು. ನಡತೆ ವರ್ತನೆ ಚಾರಿತ್ರ್ಯಗಳು ಅಷ್ಟು ಹದಗೆಟ್ಟಿರಲಿಲ್ಲವೆಂದು. ಮತ್ತೆ ೫೦ ವರ್ಷ ಹಿಂದೆ ಹೋದಂತೆ ಸಹನೀಯ ಇನ್ನೂ.

ಅಂಕಿಯಿಂದ ಕಳ್ಳತನ, ಅಕ್ಷರದಿಂದ ಲೈಂಗಿಕತೆ. ಅಂಕಿ ಅಕ್ಷರಗಳಿಲ್ಲದಿದ್ದಾಗಲೂ ಮಾನವ ಬುದ್ಧಿ ಆಗಿನ ಅಗತ್ಯಕ್ಕೆ ತಕ್ಕ ಪರಿಜ್ಞಾನ, ವಿವೇಚನೆ ಆಲೋಚನೆ, ಯೋಜನೆಗಳನ್ನು ಹೊಂದಿತ್ತು; ಚಿಂತಿಸುತ್ತಿತ್ತು. ಅಂಕಿ ಅಕ್ಷರಗಳು ಅವುಗಳ ಅರ್ಥವ್ಯಾಪ್ತಿಗಳು ಹೆಚ್ಚಿದಂತೆ ಕಳ್ಳತನ ಕಾಮುಕತೆ.

ಕಳ್ಳತನವನ್ನೂ ಯಾರೂ ಹೇಳಿಕೊಡಬೇಕಾಗಿಲ್ಲ. ಹೆಚ್ಚಿನದನ್ನು ಕಂಡರೆ, ರುಚಿಯಾದುದನ್ನು ಅಪೇಕ್ಷಿಸುವುದು ಸಹಜ ಸ್ವಾಭಾವಿಕ. ಲೈಂಗಿಕ ಆಕರ್ಷಣೆ ಎಳೆತ ಸೆಳೆತಗಳನ್ನು ಯಾರೂ ತಿಳಿಸಿ ಕೊಡಬೇಕಾಗಿಲ್ಲ. ಅವೆಲ್ಲ ಹುಟ್ಟುಗುಣ, ರಕ್ತಗತ ಪ್ರವೃತ್ತಿಗಳು.

–ಸ್ವಾಭಾವಿಕವಾದುದನ್ನು ಕೃತಕ ಕಪಟ ಹಟ ಚಟ ಗೀಳು ಚಾಳಿಗಳನ್ನಾಗಿ ಕುಲಗೆಡಿಸಿ ಹೊಲಸುಗೊಳಿಸುವುದು ಅಂಕಿ ಅಕ್ಷರಗಳ 'ಗುಣಧರ್ಮ'. ಅಂಕಗಣಿತ ಬೀಜಗಣಿತ ರೇಖಾಗಣಿತಾದಿಗಳು ಉದಿಸಿದಂತೆ ವೃದ್ಧಿಸಿದಂತೆ ಅಭಾವ ಕೃತಕ ಕಳ್ಳ ಸುಳ್ಳುತನಗಳು! ವ್ಯಾಪಾರ ವಾಣಿಜ್ಯ ಬಡ್ಡಿ ಬಾಡಿಗೆ, ದಲಾಲಿ ಇವೆಲ್ಲ ಪಾಪ ನೀಚತನಗಳು.

ಹಸುವಿನ ಹಿಂದೆ ಹೋರಿ! ಹೆಣ್ಣು ಕುದುರೆಯನ್ನು ಗಂಡುಗುದುರೆ ಅಟ್ಟಿಸಿಕೊಂಡು ಹೋಗುತ್ತದೆ. ಹಕ್ಕಿ ಪಕ್ಷಿ ನಾಯಿ ಬೆಕ್ಕು ಕ್ರಿಮಿಕೀಟಗಳ ಲೈಂಗಿಕ ಕ್ರಿಯೆ ಆಬಾಲ ವೃದ್ಧ ಸ್ತ್ರೀ–ಪುರಷರೆಲ್ಲರಿಗೂ ಅರಿವಾಗುತ್ತದೆ ದಿನನಿತ್ಯ. ಕವಿ ಸಾಹಿತ್ಯ ಪ್ರಾಕಾರಗಳು ಕೃತಕ ಕಪಟ. ಹೊಸದು ಹೆಚ್ಚಿನ ರುಚಿ ಚಾಳಿಗೀಳಿನ ಪ್ರಲೋಭನೆ ಲಾಲಸೆ ಪ್ರಚೋದನೆಗಳನ್ನು ರೂಪಿಸುತ್ತವೆ.

ಮೀನಿಗೆ ಈಜು ಕಲಿಸಲೆತ್ನಿಸುವುದು, ಹಕ್ಕಿಗೆ ಹಾರುವುದನ್ನು ಕಲಿಸಲೆತ್ನಿಸುವುದು, ಬೆಕ್ಕಿಗೆ ಇಲಿಯನ್ನು ಹಿಡಿಯುವ ಕಲೆಯನ್ನು ತಿಳಿಸಿಕೊಡಲೆತ್ನಿಸುವುದು ಎಷ್ಟು ಹಾಸ್ಯಾಸ್ಪದ! ಎಲ್ಲ ಕಲೆ ಸಾಹಿತ್ಯಗಳ ಬಹುತೇಕ ಚಟುವಟಿಕೆಯೆಂದರೆ ಕಳ್ಳ ಮುತ್ತು, ಅಕ್ರಮ ಆಲಿಂಗನ.

ಇರುವೆಗೆ ಅಂಕಿಯ ಅಗತ್ಯವಿಲ್ಲ, ಜೇನು ಹುಳುವಿಗೆ ಅಕ್ಷರ ಅನವಶ್ಯಕ. ಏಕೆಂದರೆ ಜೇನು ಇರುವೆಗಳಲ್ಲಿ ಕುಳಿತುಣ್ಣುವ, ಅನ್ಯರ ಬೆವರು ನೆತ್ತರು ಶ್ರಮವನ್ನು ಕದಿಯುವ, ಶೋಷಣೆ ದಂಡಿಸುವಿಕೆಗಳಿಲ್ಲ. ಅಲ್ಲಿ ಎಲ್ಲರೂ ದುಡಿದು ತಿನ್ನಬೇಕು!

ಮಾನವ ಪ್ರಪಂಚದಲ್ಲಿ ಮಾತ್ರ ವಿಚಿತ್ರ. ಇಲ್ಲಿನ ಎಲ್ಲ ದೈವಿಕತೆ ಬುದ್ಧಿವಂತಿಕೆ ಮಾನವೀಯತೆಗಳೂ ಉಳಿದವರ ತುತ್ತು ಕಿತ್ತುಕೊಳ್ಳುವುದಕ್ಕೆ ಗಂಟಲು ಹರಿದುಕೊಳ್ಳು-

ವುದಕ್ಕೆ. ಅಸಹಾಯಕರ ತೆರಿಗೆ ದುಡಿಮೆಗಳ ತಲೆಯ ಮೇಲೆ ಎಲ್ಲ ಲಲಿತಕಲೆ ಸೌಜನ್ಯ ಸಂಸ್ಕೃತಿ

ದುಡಿಮೆಗೆ ಒಂದೇ ದಾರಿ, ಕಳ್ಳತನಕ್ಕೆ ನೂರಾರು

ಮಾನವ ಜೀವನ ವ್ಯಾಪಾರ ವ್ಯವಹಾರಗಳು ಎಲ್ಲ ಕಾಲ ದೇಶಗಳಲ್ಲೂ ಒಂದೆ. ಬದಲಾವಣೆ ಅನ್ನುವುದೇನಿದ್ದರೂ ಬಣ್ಣ ವರ್ಣ ವಿನ್ಯಾಸಗಳ ಅಳವಡಿಕೆ. ಚಿತ್ರಣ, ಪ್ರದರ್ಶನಗಳಲ್ಲಿ ಮಾತ್ರ. ಗೌಡನ ಹೆಂಡತಿ ಹಡೆಯುವುದಕ್ಕೆ ಹಳ್ಳಿಯವರೆಲ್ಲ ತಿಣುಕಾಡಿದರಂತೆ

ಹಿಂದೆಲ್ಲ ಅರಮನೆಯ ಲೈಂಗಿಕತೆಗೆ ರಾಜ್ಯದವರೆಲ್ಲ ಸೊಂಟಕಟ್ಟಿ ನಿಲ್ಲಬೇಕಾಗಿತ್ತು. ಎಲ್ಲ ಕಾಲ ದೇಶಗಳ ಎಲ್ಲ ಹರೆಯ ನೊರೆಹಾಲು, ಸಕ್ಕರೆ, ಕಳಿತ ರಸಬಾಳೆ ಹಣ್ಣು, ಜೇನು ಎಲ್ಲವೂ ಅರಮನೆ ಗುರುಮನೆಗಳ ರಾಜಕೀಯ ಸಾಹಿತ್ಯ ಸಂಸ್ಕೃತಿ ಮುಖವಾಡಗಳ ಕಾಮುಕತೆ. ರಾಣಿಯ ಹಾದರಕ್ಕೆ ಮನೆ ಮಂದಿಯೆಲ್ಲ ನಿದ್ದೆಗೆಡಬೇಕಾಗುತ್ತದೆ, ಅನ್ನುವುದು ಸರ್ವಕಾಲ ದೇಶೀಯ ನಗ್ನಸತ್ಯ. ಬುದ್ಧಿಜೀವಿಗಳು ರಾಜಕಾರಣಿಗಳು ಧಾರ್ಮಿಕ ಧುರೀಣ ಕಾರ್ಮಿಕ ನಾಯಕರ ಹಗರಣ ಗೊಂದಲ– ತೆರಿಗೆ ಹಣ ಕಾಣಿಗೆ ಸಂಗ್ರಹವಲ್ಲ ಹೋಮ.

ನಾಗರಿಕತೆಯೆಂದರೆ ರಾತ್ರಿರಾಣಿ ರಾತ್ರಿರಾಜರ ನೈಟ್‌ಕ್ಲಬ್ ಜೀವನ. ನಗರವೆಂದರೆ ಕಳ್ಳಸಾಗಾಣಿಕೆ ತೆರಿಗೆಗಳ್ಳತನ ಹೆಂಡತಿಯನ್ನು ಗಂಡನಿಂದ ತಪ್ಪಿಸುವುದು. ಗಂಡನನ್ನು ಹೆಂಡತಿಯಿಂದ ಅಗಲಿಸಿ ಬೇರ್ಪಡಿಸುವುದು ದಿನದಿನವೂ ಜೊತೆ ಬದಲಾಯಿಸುವುದು

ಕಾಮಕೇಳಿ ಅಥವಾ ಯುದ್ಧ– ಅನ್ಯ ಹೆಂಗಸಿನೊಡನೆ ಕುಸ್ತಿ ಇಲ್ಲವೆ ಸಹ ಗಂಡಸಿನೊಡನೆ ಕದನ. ಕಾಮಕೇಳಿ ರಣಕೇಳಿ—ಕವಿ ಕಾವ್ಯ ಸಾಹಿತ್ಯಸಭೆ ಅನ್ನುವಂತಹದೆಲ್ಲದರ ಘುನುಗುಂ ಗುನುಗ. ಅಂದರೆ ಇವೇ ಇಂತಹದೇ. ಕಾಲಕಾಲಕ್ಕೆ ಮಳೆಬೆಳೆಗಳು ಸಿದ್ಧಿಸುತ್ತಿದ್ದರೆ ಯಾರಾದರೂ ರಾಜ್ಯವಾಳಬಹುದು. ಅದನ್ನು 'ಸುವರ್ಣಯುಗ' ವೆನ್ನಿಸಲು ಚರಿತ್ರೆಕಾರ ಕವಿಗಳು ಸಿದ್ಧ.

ನಾಗರಿಕತೆಯೆಂದರೆ ದರ್ಜಿಗಳ ಮತ್ತು ಪತ್ರಿಕೋದ್ಯೋಗಿಗಳ ಬೆಡಗು ಬಿನ್ನಾಣ. ಸಿಂಪಿಗ ಹೊಲಿದರೆ ಅಗಸ ಇಸ್ತ್ರಿ ಮಾಡಿದರೆ ನಾಯಿಂದ ತಲೆ ಬಾಚಿದರೆ ರೂಪರಸ ಚೆಲುವ ಸುಂದರಿ ಸಿಂಗಾರಿ ರಾಜಕುಮಾರಿಯರು ಸಿದ್ಧವಾದಂತೆ. ರಂಗಭೂಮಿ ರಜತಪರದೆಗಳಲ್ಲಿ ವಿವಸ್ತ್ರರಾದರೆ ಅದು ಕಲೆ. ರಸಿಕತೆಯೆಂದರೆ ವಸ್ತ್ರಾಪಹರಣ.

ಹಿಂದೆ ಸಾಹಿತ್ಯ ಅರಮನೆಯನ್ನು ಗಂಡಿಸುತ್ತಿತ್ತು. ಮುಂದೆ ಪತ್ರಿಕೋದ್ಯಮ ಸಚಿವಾಲಯದ ಹೊಲಸಿಗೆ ಸುಗಂಧ ಪರಿಮಳ ಪೂಸುತ್ತಿದೆ. ಹಿಂದೆ ಸಾಹಿತಿಯನ್ನು ಸಾಕಿಕೊಂಡಿರುತ್ತಿದ್ದರು. ಈಗ ಪತ್ರಿಕೋದ್ಯೋಗಿಯನ್ನು ಸಾಕಿಕೊಂಡಿರುತ್ತಾರೆ. ನಾಯಕನ ಹಿಂದೆ ನಾಯಿ.

ಅಪರಾಧಗಳಲ್ಲಿಯೂ ಸಂಶೋಧನೆ ನಡೆಸುತ್ತಿರುತ್ತಾರೆ, ಅದಕ್ಕೆ ತಕ್ಕಂತೆ ಕಾನೂನು ತಿದ್ದುಪಡಿಯಲ್ಲಿಯೂ ವಿಮರ್ಶೆ ಸಾಗಿರುತ್ತದೆ. ರಾಜಕಾರಣಿ ಕೆಮ್ಮಿದರೆ ಪತ್ರಿಕೋದ್ಯೋಗಿ ಎರಡು ಕಾಲು ಅನ್ನುತ್ತಾನೆ. ಮಂತ್ರಿಯ ಹಿಂದೆ ಟೈಪಿಸ್ಟ್; ಆಕೆಯ ಹಿಂದೆ ಪತ್ರಿಕೋದ್ಯೋಗಿ.

ನಾಗರಿಕತೆಯಲ್ಲಿ ತಪ್ಪು ಮಾಡದಿರುವವರೆಂದರೆ ಇಬ್ಬರೇ. ಮಾನ್ಯ ಸಚಿವರು ಹಾಗೂ ಘನವೆತ್ತ ಪತ್ರಿಕೋದ್ಯೋಗಿಗಳು! ಒಬ್ಬರದು ಉಪದೇಶ; ಇನ್ನೊಬ್ಬರದು ಮೇಲ್ಪಂಕ್ತಿ.

ನಾನು ಮಡಿ— ಮೈಲಿಗೆ ದೂರ ಸರಿ

ಸಣ್ಣ ವೇಶ್ಯೆ ದೊಡ್ಡ ವೇಶ್ಯೆಯ ಖರ್ಚು ವೆಚ್ಚಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಜವಾನ ಅಧಿಕಾರಿಯ ಹೆಂಡತಿಯ ಸೀರೆ ಒಗೆದುಕೊಡುತ್ತಾನೆ. ಸಣ್ಣ ಅಧಿಕಾರಿ ದೊಡ್ಡ ಅಧಿಕಾರಿಯ ಆಸರ ಬೇಸರ ಅರಿತು ಅಣಿಗೊಳಿಸಿ ಕೊಡುವುದು ಸೌಜನ್ಯ ಸೂಕ್ಷ್ಮ ಸಂಕೇತ.

ಕೇಂದ್ರ ಸಚಿವ ರಾಜ್ಯಸಚಿವನಿಗಿಂತ ಮೇಲು. ರಾಜ್ಯದಲ್ಲಿ ಅಲ್ಲಿಯ ಸಚಿವರ ಹಗರಣ, ರಾಷ್ಟ್ರದಲ್ಲಿ ಕೇಂದ್ರ ಸಚಿವರ ಗೊಂದಲ, ವಿಶ್ವಸಂಸ್ಥೆ ಅಂತಾರಾಷ್ಟ್ರೀಯ (ಮಲ್ಟಿನ್ಯಾಷನಲ್) ವ್ಯವಸ್ಥೆಗಳಲ್ಲಿ ವಿಶ್ವನೇತಾ ದೇವಿಯರ ಚೆಲ್ಲಾಟ. ಕಾನೂನು. ಕುಡಿತ, ಕಂಠಶ್ವಾನ ಪ್ರಿಯ, ರಕ್ತ ರಾಜ್ಯ.

ಇವುಗಳಿಗೆಲ್ಲ ಮರುಗಳಿಗೆಯಲ್ಲಿ ಬಾನುಲಿ ದೂರದೃಷ್ಟಿಗಳಲ್ಲಿ ಮಾರನೆ ದಿನ ಪತ್ರಿಕೆಯಲ್ಲಿ ರಾಜಕೀಯ ಸುದ್ದಿ ಚಿತ್ರ, ತಲೆಬರಹ ಸಂಪಾದಕೀಯ ಟಿಪ್ಪಣಿಗಳು. ಹಿಂದೆ ಕಾಲಕ್ಷೇಪ ಅನ್ನುತ್ತಿದ್ದರು ಈಗ ನೂರೊಂದು ಬಗೆಯಲ್ಲಿ ಸಮಿತಿ ಚರ್ಚಾಗೋಷ್ಠಿ ಅನ್ನುತ್ತಾರೆ. ಜೀವನೋಪಾಯ ಖರ್ಚಿಗೊಂದು ದಾರಿ, ಕೂಟಬೇಟೆಗಳಿಗೆ ಅನುವು.

ಸಣ್ಣಮಟ್ಟ ಮಜಲುಗಳಲ್ಲಿ ತಿರಸ್ಕಾರ, ದೊಡ್ಡಮಟ್ಟದ ಮಜಲುಗಳಲ್ಲಿ ಪುರಸ್ಕಾರ ಪ್ರೋತ್ಸಾಹ ಪೂಜ್ಯತೆ, ಸಣ್ಣ ಕಚೇರಿಗಳಲ್ಲಿ ದಿನಚರಿ, ಕಾರ್ಯವಿವರ ಒಪ್ಪಿಸಿ ಮೆಚ್ಚಿಸಬೇಕಾಗುತ್ತದೆ. ದೊಡ್ಡ ಕಚೇರಿ, ಮೇಲಿನ ಕಾರ್ಯಾಲಯಗಳಲ್ಲಿ ಆರಾಮ ಸುಖ ನಿದ್ರೆ!

ಸೌದೆ ಒಡೆದು ಹಾಕಿಯೇ ಕೂಲಿ ಪಡೆಯಬೇಕು. ಎಲ್ಲ ಕೊಳೆ ಬಟ್ಟೆಗಳನ್ನು ಒಗೆದೇ ಒಡತಿಯನ್ನು ಒಪ್ಪಿಸಬೇಕು ಕೈ ಸೋತಿದೆ ಇನ್ನೊಂದೆರಡು ಕಾಫಿ ಬಸಿಗೆ ತೊಳೆಯುವುದು ಉಳಿದಿದೆ ಎಂದರೆ ಹೋಟೆಲಿನವ ಕೇಳುತ್ತಾನೆಯೆ? ತೊಳೆದು ಮಾತ್ರ ಹೊರಕ್ಕೆ ಹೋಗೆನ್ನುತ್ತಾನೆ. ಇಲ್ಲವಾದರೆ ಚೂರು ಪಾರು ಕಳಕಲು ದೊರೆಯುವುದಿಲ್ಲ.

ಎಲ್ಲ ದೇಶಗಳಿಂದ ವಿಶ್ವಸಂಸ್ಥೆಯ ಕೆಲಸಕ್ಕೆ ನ್ಯೂಯಾರ್ಕಿಗೆ ಹೋಗುತ್ತಾರೆ ಅವರೆಲ್ಲ ದಿನಚರಿಯನ್ನು ಬರೆಯುತ್ತಾರೆ ಈವತ್ತೆಲ್ಲ ಆಲಸ್ಯ; ಶಿರನೆಯ ಮಹಡಿಯಲ್ಲಿ ನಿಯಂತ್ರಿತ ಹವೆಯಲ್ಲಿ ಅಕ್ಷರಶಃ ನಿದ್ರೆ, ಇಲ್ಲಿ ನನ್ನ ಸಹೋದ್ಯೋಗಿ ಸಿಂಪ್ಸನ್ ಸೌಜನ್ಯ ಮೂರ್ತಿ. ಆಕೆಯ ಜೊತೆಯಲ್ಲಿದ್ದ ನನ್ನನ್ನು ನಾನು ಮರೆಯುತ್ತೇನೆ.

ನಿನ್ನೆ ಸಂಜೆ ಪೆರು ರಾಯಭಾರಿ ಪತ್ನಿಯಿಂದ ಪಾರ್ಟಿ. ಮೊನ್ನೆ ಡೆನ್‌ಮಾರ್ಕ್ ಹ[illegible]ಗನ ಕಾರಿನಲ್ಲಿ ಹೋಗಿದ್ದೆ. ಈವತ್ತು ಬೆಳಿಗ್ಗೆ ಮಾನವೀಯತೆ ಕುರಿತಾದ ವಿಚಾರಗೋಷ್ಠಿಯಲ್ಲಿ ನನ್ನ ಲೇಖನ ಮಂಡಿಸಲು ಸಾಧ್ಯವಾಯಿತು. ಇಂಡೋನೇಷ್ಯ ಪ್ರತಿನಿಧಿಯ ಮೇಲೆ ಅದು ತುಂಬಾ ಪರಿಣಾಮ ಮಾಡಿರಬೇಕು. ಏಕೆಂದರೆ ಸಭೆ ಮುಗಿದ ಮೇಲೆ ಬಂದು ಭುಜ ತಟ್ಟಿದ.

ಸ್ವದೇಶದಲ್ಲಿ ಕೂಲಿ ದಿನಕ್ಕೆ ಎರಡು ರೂಪಾಯಿ. ಯೆನ್ ಮಾರ್ಕ್ ಕೊಪೆಕ್ಸ್ ರೂಬೆಲ್ ಪೌಂಡ್ ಸಂಬಳವಾದರೆ ದಿನಕ್ಕೆ ಹತ್ತರಿಂದ ನೂರು ಹಣ ನ್ಯೂಯಾರ್ಕಿನಲ್ಲಿ ದಿನಕ್ಕೆ ಐನೂರು ಹಣ ವೆಚ್ಚ! ಒಂದೊಂದು ದೇಶದಿಂದಲೂ ಬಂದು ಸ್ವದೇಶಿ ತೆರಿಗೆ ಹಣ, ವಿದೇಶಿ ವಿನಿಮಯವನ್ನೆಲ್ಲ ಸೂಲಾಡುತ್ತಾರೆ, ಸ್ವದೇಶದ ಹಿತಚಿಂತನೆ ವಿಶ್ವಕಲ್ಯಾಣದ ಹೆಸರಿನಲ್ಲಿ.

ಅಧಿಕಾರ ವಹಿಸಿಕೊಂಡು ವರ್ಷಗಳೆರಡು ಉರುಳಿದರೂ ನಾನು ಏನಾದರೂ ಮಾಡಿದ್ದೇನೆ ಹೇಳಿಕೊಳ್ಳಬಹುದಾದದ್ದು – ಎಂದು ನನಗನಿಸುವುದಿಲ್ಲ. ಮುಖ್ಯ ಕಾರಣ ಅನಾರೋಗ್ಯ ಸ್ಕಾಚ್ (ವಿಸ್ಕಿ) ನನ್ನನ್ನು ಹಾಳು ಮಾಡಿತು. ಇಳಿ ವಯಸ್ಸಿನಲ್ಲಿ ಬಿಳಿಬತ್ತಿಯನ್ನು ಬಿಡುವುದು ಅಸಾಧ್ಯ.

ಯಾಕೆ ಹೀಗೆಲ್ಲ ಬರೆಯುತ್ತಾರೆ! ಸಮಾಜ ಸರಕಾರ ಸೈನ್ಯ ಪೋಲೀಸು ವ್ಯವಸ್ಥೆ ಅನ್ನುವುದೇ ಪಾಪ, ಅವೆಲ್ಲ ಇರುವವರೆಗೆ ರಾಜಕೀಯ ರಾವ; ಬಡವರ ಉದ್ಧಾರ! ಪತ್ರಿಕೆ, ಪುಸ್ತಕ ಸಾಹಿತ್ಯ. ಸುದ್ದಿ ಇವೆಲ್ಲ ಮನಸ್ಸನ್ನು ವ್ಯವಸ್ಥಿತವಾಗಿ ಪಾಪದ ಕಾರ್ಖಾನೆಯನ್ನಾಗಿ ಪರಿವರ್ತಿಸುತ್ತವೆ. ಸದ್ದಿ ಸಮಾಚಾರ, ರಾಚೆ ತಾತಿ ಸಾವರ್ ಸ್ನಾನ ಪ್ರಸಾರ ಅನ್ನುವುದೆಲ್ಲ ಪರಿಣಾಮದಲ್ಲಿ ಅಂಟುಜಾಡ್ಯ, ವ್ಯಭಿಚಾರ ಜಾಲ.

ಯಾರ ಹುಣ್ಣಿಗೆ ಯಾರು ಎಣ್ಣೆ ಸವರಬೇಕು?

ಯಾರೋ ಬಲಾತ್ಕರಿಸುತ್ತಾರೆ ಯಾರೋ

ಚಿತ್ರಿಸುತ್ತಾರೆ. ಜಗತ್ತಿನ ವ್ಯಾಪಾರ ಬೆಸ್ತು ಇಲಿಗಳ ಸಂಬಂಧವೆ? ಯೋಚಿಸಿದಂತೆಲ್ಲ ನೋವು ಸಂಕಟಗಳು ಕೆಲವರಿಗೆ. ಕೆಲವರಿಗೆ ನಡೆದು ನುಗ್ಗಿ ಧಾಟಿಯೇಕ್ಕಿ ಸೂರೆಗೈದಂತೆಲ್ಲ ಹೂವಿನ ಹಾಸಿಗೆ. ಮಕರಂದ ಸಿಂಚನ ರಾಜಕಾರಣ!

ರೈಲು ಬಂದೇ ಬಂತು. ಕೊನೆಗೂ 'ಸಮುಶ್ಮರಿ'ಗೆ. ಮಾನ್ಯ ಸಚಿವರು ಹಸಿರು ಬಾವುಟ ತೋರಿಸುತ್ತಾರೆ. ಅಲಂಕೃತ ಎಂಜಿನ್ ಮಂದಗತಿಯಿಂದ ಗಜಗಮನೆಯಾಗಿ ಚಲಿಸುತ್ತದೆ. ಜನತೆ ಹರ್ಷೋದ್ಗಾರ ಜಯಕಾರ ಹಾಕುತ್ತದೆ– ಮಂತ್ರಿಗೆ ಜಯವಾಗಲಿ, ನಾಡು ಪ್ರಗತಿ ಪಥದಲ್ಲಿದೆ.

ಊರಿನ ಶ್ರೀಮಂತರು ಸಂಸಾರ ಸಮೇತರಾಗಿ ದಿನಸತ್ಯ ನಿಲ್ದಾಣಕ್ಕೆ ಬಂದು ಎಳನೀರು ಕುಡಿದು ಕುರುಕುಲು ತಿಂಡಿ ತಿಂದು ಚಾ ಕುಡಿದು ರೈಲು ಹೊರಟಂತೆ ಕೈ ಆಡಿಸುತ್ತಾರೆ. ಮಂದಹಾಸದಿಂದ ವಿದಾಯ ಹೇಳಿ ಶುಭಕಾಮನೆ ಕೋರುತ್ತಾರೆ. ಮರೆಯಾದ ರೈಲು ನೋಡಿ ಕಾರು ಏರುತ್ತಾರೆ,

ಉಳಿದ ಅಮಾಯಕ ಬಡಪಾಯಿಗಳಿಗೆ ಖಾಲಿ ಭಾಗ್ಯ; ನೋಡಿದ್ದೇ ಲಾಭ. ರೈಲು ವ್ಯಾಪಾರ ವ್ಯವಹಾರ ಪ್ರಗತಿ ಉದ್ಯಮ ಉದ್ಯೋಗ ಆರ್ಥಿಕ ಮುನ್ನಡೆ ಕೈಗಾರಿಕೆ ಕ್ರಾಂತಿ ಜನಜೀವನದಲ್ಲಿ ಬದಲಾವಣೆ ಅನ್ನುವಂತಹದೆಲ್ಲ ಅವರಿಗೆ ಅರ್ಥವಾಗುವುದಿಲ್ಲ. ಪುಕ್ಕು ಪುಕ್ಕು ಬರುತ್ತದೆ, ಭುಂಕು ಭುಂಕು ಗುತ್ತದೆ: ಮಕ್ಕಳಿಗೆ ತೋರಿಸಿ ಪುಳಕಗೊಳ್ಳುತ್ತಾರೆ.

ರೈಲು ಬರುತ್ತದೆ ಅನ್ನುವುದು ಶತಮಾನಗಳ ಕನಸು ಅನಿಸಿಕೆ. ರೈಲು ಬರುವುದನ್ನು ಕುರಿತು ದಶಕಗಟ್ಟಲೆ ಮಂತ್ರಿ ಮಹೋದಯರು ಭರವಸೆ ನೀಡುತ್ತಾರೆ. ನೀಲನಕ್ಷೆಗಳು ಸುದ್ದಿಗುದ್ದುಗಳು ಹಂಚಿಕೆ ಸಂಚುಗಳು– ಯಾವ ಯಾವ ಊರುಗಳಲ್ಲಿ, ಯಾರ ಯಾರ ಹೊಲಗದ್ದೆಗಳಲ್ಲಿ ಹೋಗಬೇಕು? ಯಾರ್ಯಾರಿಗೆ ಏನೇನು ಪರಿಹಾರ ಕಲ್ಪನೆ ಕಿತ್ತಾಟ.

ಭೂಸ್ವಾಧೀನ ಹವಾ ಏಳುತ್ತದೆ. ಭೂಮಿ ಅಳೆದು ಗುರ್ತಿಸುವಿಕೆ? ಭೂಮಿ ಕಳೆದುಕೊಂಡವರಿಗೆ ಪರಿಹಾರ ಪುನರ್ವಸತಿ ಸೌಲಭ್ಯ. ಅಧಿಕಾರಿ ನೌಕರರ ಓಡಾಟ, ಕಟ್ಟುಗಳ ಹಾರಾಟ–ನಗದು ಪರಿಹಾರ ದಿಢೀರು ಸಾಧ್ಯ. ಶೇಕಡ ಹತ್ತು ಲಂಚ. ೫೦ ಸಾವಿರ ಪರಿಹಾರ ಬಂದರೆ ಐದು ಸಾವಿರ ಮುರಿದು ಹಂಚಿಕೊಳ್ಳುತ್ತಾರೆ. ಒಂದು ರೈಲು ಮಾರ್ಗವೆಂದರೆ ಎಷ್ಟು ಹಳ್ಳಿಗಳು, ಎಷ್ಟು ಕುಟುಂಬಗಳಿಗೆ ಪರಿಹಾರ! ಅದೆಲ್ಲದರ ಶೇಕಡ ಹತ್ತು!

–ಎಷ್ಟಾಯಿತು ಹಣ? ಅಧಿಕಾರಿ ನೌಕರರಿಗೆ ಹೊನ್ನಿನ ಸುರಿಮಳೆ. ಶ್ರೀಮಂತ ರೈತರಿಗೆ ಭಾಗ್ಯೋದಯ. ಬಡಪಾಯಿ ಹಿಡುವಳಿದಾರರಿಗೆ ಬಂದ ಅಷ್ಟಿಷ್ಟು ನಗದು ಪರಿಹಾರವು ಲಂಚ ಕುಡಿತ ಮದುವೆ ತುರ್ತು ಖರ್ಚು ವೆಚ್ಚವೆಂದು ಮಾಯವಾಗಿ ಮರುಕ್ಷಣದಲ್ಲಿ ಬೀದಿ ಬಿಕಾರಿಗಳು.

–ಒಂದು ಯೋಜನೆಯೆಂದರೆ ಮೂರು ಜನ ಲಾಯರುಗಳು ನೂರು ಜನ ಫೂಟ್‌ಲಾಯರು ಪುಢಾರಿಗಳು. ರಸ ಹೀರಿ ಸಿಪ್ಪೆ ಎಸೆದಂತೆ. ಬೀಡಿ ಸೇದಿ ತುಂಡು ಬೀಸಾಡಿದಂತೆ ದೊಡ್ಡ ದೊಡ್ಡ ವಿಷವೃತ್ತಗಳು. ಬಸ್ಸು ಹೋಟೆಲು ಸಿನಿಮಾ ಇತರೆ ವೆಚ್ಚ–ಲಾಯರು ಫೂಟ್ ಲಾಯರು ಪುಢಾರಿ ತಿಂದು ತೇಗುತ್ತಾರೆ. ಸಮಾಜ ಸರಕಾರ ಜನಜೀವನ ಮಾನಸಿಕ ವ್ಯಾಪಾರ ನೈತಿಕಮಟ್ಟ ಯುಕ್ತಾಯುಕ್ತ ವಿವೇಚನೆಗಳು ಕುಲಗೆಟ್ಟು ಹೋಗುತ್ತವೆ. ಒಂದೊಂದು ಯೋಜನೆಯೂ ಹೀಗೆ ಜನತಾ ಶಿಕ್ಷಣ ಶಿಬಿರ! ಅಂಜಿಕೆ ಹೇಸಿಕೆ ನಾಚಿಕೆ ಅನ್ನುವುದೇ ಉಳಿಯುವುದಿಲ್ಲ.

ಕಾಮಗಾರಿಕೆ ಕಂಟ್ರಾಕ್ಟರುಗಳು ಒಂದು ಯೋಜನೆಯಿಂದ ಇನ್ನೊಂದು ಕಾಮಗಾರಿಗೆ ಸರಕಾರಿ ಅಧಿಕಾರಿಗಳೊಡನೆ ನೆಗೆಯುತ್ತಾರೆ. ಅವರವರಲ್ಲಿ ಅನ್ಯೋನ್ಯ ಒಪ್ಪಂದ. ಹಾಗೆ ಎಲ್ಲ ಇಲಾಖೆಗಳಲ್ಲಿಯೂ ಬುದ್ಧಿವಂತ ಅಧಿಕಾರಿ ನೌಕರರು ಇರುತ್ತಾರೆ. ಅವರಿಗೆ 'ವ್ಯಾಪಾರ ವ್ಯವಹಾರ, ಬೇಕೇ ವಿನಾ ದಿನನಿತ್ಯದ ಕಚೇರಿ ಕುರ್ಚಿ ಮೇಜು ಕೆಲಸ ರುಚಿಸದು!

ರೈಲು ಭುಂಗ್! ಭುಂಗ್! ಪುಕ್! ಪುಕ್! ಹರಿಯುತ್ತದೆ. ರೈಲುದಾರಿ ನಿರ್ಮಿಸಿದ ಬಡಪಾಯಿ ಕೂಲಿ ಜನಕೆ ಎಲುಬಿನ ಗೂಡು ಚಿಂದಿಬಟ್ಟೆಯು ಮಕ್ಕಳೊಡನೆ ಸಾಲುಗಟ್ಟಿ ನಿಲ್ಲುತ್ತಾರೆ ಗುಡಿಸಲುಗಳ ಮುಂದೆ ಮಂದಹಾಸ ಬೀರುತ್ತ. ತಾವು ನಿರ್ಮಿಸಿ ರೂಪಿಸಿದ ಭಾಗಿಯಾಗಿದ್ದ ಭಾಗ್ಯ ಸೌಭಾಗ್ಯ?

ನಗರದಿಂದ ನಾಶ, ನಾಗರಿಕತೆಯೆಂದರೆ ವಿನಾಶ

ಒಂದು ಪರಂಗಿ ಹಣ್ಣಿನಲ್ಲಿ ನೂರು ಬೀಜ. ರುಚಿಕರ ಹಣ್ಣು! ನೂರು ಬೀಜದಿಂದ ನೂರು ಗಿಡಗಳು, ಒಂದೊಂದು ಗಿಡದಲ್ಲಿ ನೂರು ಹಣ್ಣುಗಳು! ಮನುಷ್ಯ ಕಷ್ಟಪಡ ಬೇಕಾಗಿಯೇ ಇಲ್ಲ! ಸುಂದರ ಕನಸು-ಭವ್ಯ ಭವಿಷ್ಯ! ಆದರೆ ಹಾಕಲು ಭೂಮಿಯೇ ಇಲ್ಲವಲ್ಲ.

ಒಂದು ಫಲರಾಜ ಮಾವು. ರುಚಿಕರ ಸವಿ ಹಣ್ಣು. ವಾಟೆಯನ್ನು ಭೂಮಿಯಲ್ಲಿ ಹುಗಿದರೆ ಮಾವಿನ ಮರ ಸಾವಿರಾರು ಹಣ್ಣು, ಕೊಡುತ್ತದೆ. ಒಂದು ಮಾವಿನ ಮರಕ್ಕೆಲ್ಲ ಎಷ್ಟು ಭೂಮಿ ಬೇಕಾದೀತು! ಆದರೆ ಮನೆಯ ಸುತ್ತ ಮನೆಗಳು ಚರಂಡಿ ದುರ್ಗಂಧ ತಿಪ್ಪೆ.

ಮನೆಯ ಸುತ್ತ ಇಪ್ಪತ್ತೈದು ಅಡಿ ತ್ರಿಜ್ಯದ ಹಿತ್ತಲಿದ್ದು, ಅದರಲ್ಲಿ ಐದು ಪರಂಗಿ ಹಣ್ಣಿನ ಗಿಡಗಳು, ಒಂದು ಹಲಸು, ಒಂದು ಮಾವು, ನಾಲ್ಕು ಮೂಲೆಗಳಲ್ಲಿ ನಾಲ್ಕು ತೆಂಗಿನ ಮರಗಳು, ಬಚ್ಚಲು ನೀರ ಹರಿಯು ವಲ್ಲಿ ಬಾಳೆಯುವನ ಅಡಿಕೆ ಗಿಡಗಳೆರಡು ಇದ್ದರೆ!

ಬೇಲಿಯಲ್ಲಿ ಬಳ್ಳಿ ಅನಾನಸ್ ಮಾದಳ ನಿಂಬೆ ಸೀಬೆ ಚಕ್ಕೋತ ಕಿತ್ತಳೆ ಸೇಬು ದ್ರಾಕ್ಷಿ-ಬಳ್ಳಿ ಇಂತಹದರಲ್ಲಿ ಕೆಲವೊಂದಿದ್ದು ಉಳಿದಂತೆ ಹಿತ್ತಲು ಹಣ್ಣು ತರಕಾರಿ ಗಿಡಬಳ್ಳಿಗಳಿಂದ ತುಂಬಿದ್ದರೆ! ಮಾವಿನ ಮರದಡಿಯಲ್ಲಿ ಕೊಟ್ಟಿಗೆ ದನಕರು ಆಡು ಕುರಿ ಕೋಳಿಗಳು.

ಇಷ್ಟಿದ್ದರೆ ಹೀಗಿದ್ದರೆ ಕುಟುಂಬದ ಅರ್ಧ ಮುಖ್ಯಾಲು ಭಾಗ ಆಹಾರ ಹಾಲು ಮಾಂಸ ಮೊಟ್ಟೆ ತರಕಾರಿ ಹಣ್ಣು ದೊರೆತಂತಾಯಿತಲ್ಲವೆ? ಮುಖ್ಯ ಸಂಗತಿಯೆಂದರೆ ಇದಕ್ಕೆಲ್ಲ ಹೆಚ್ಚಿನ ಶ್ರಮ ಆಗತ್ಯವಿಲ್ಲ! ಮಕ್ಕಳು ಮನೆ ಮಂದಿ ಓಡಾಡಿ ವಾಸಿಸುವ ಅಂಗಳ ಹಿತ್ತಲು ಅಷ್ಟೆ!

ಜೊತೆಗೆ ೧೨ ಚೀಲ ಧಾನ್ಯ ಲಭಿಸುವಷ್ಟು ಭೂಮಿ-ಅರ್ಧ ಎಕರೆ ಗದ್ದೆ ಅಥವಾ ಎರಡು ಎಕರೆ ಹೊಲ ಅಥವಾ ತೋಟ ಇಷ್ಟಿದ್ದರೆ! ಪ್ರತಿ ಕುಟುಂಬಕ್ಕೂ ಹೀಗಿದ್ದರೆ! ಪ್ರತಿ ಮನೆಯ ಸುತ್ತ ಆದರ ಅನ್ನ ಭೂಮಿ ಇದ್ದರೆ! ಪ್ರತಿ ಎರಡು ಮನೆಗಳ ಮಧ್ಯೆ ಹೊಲ ಗದ್ದೆ ಹಿತ್ತಲಿದ್ದರೆ!

(ಹೊಸ ಕುಟುಂಬಗಳಿಗೆ ನವದಂಪತಿಗಳಿಗೆ ಹೊರಗಡೆ ಎರಡೆಕರೆ ಭೂಮಿ ಹಿತ್ತಲು ಒದಗಿಸಬಹುದು. ಪ್ರತಿ ಕುಟುಂಬಕ್ಕೆ ಎರಡೆಕರೆ ಎಂದರೆ ಭೂ ಕೊರತೆ ಅನ್ನುವುದೇ ಇಲ್ಲ. ಈ ಅರ್ಥದಲ್ಲಿ ಬೆಟ್ಟಗುಡ್ಡ ಕೊರಕಲು ಕಮರಿ ಕೂಡ ಭೂಮಿಯೆ! ಅಲ್ಲೆಲ್ಲ ಹಣ್ಣು ತರಕಾರಿ ಗಿಡ ವೃಕ್ಷ ಬೆಳೆಯಬಹುದಲ್ಲ! ಜಗತ್ತು ಆಗ ಎಷ್ಟು ವಿಶಾಲ ಸಮೃದ್ಧ).

ಅಂತಹ ವಾತಾವರಣ ಉಂಟಾದ ಹತ್ತು, ಐದು ವರ್ಷಗಳಲ್ಲಿ ಜಗತ್ತಿನ ಮುಖದಿಂದ ಅಭಾವ ಪ್ರಭಾವ ಹಂಗು ದಾಕ್ಷಿಣ್ಯ ಕೋಪ-ತಾಪ ನೋವು ಸಂಕಟಗಳು ಅಳಿಸಿ ಹೋಗುತ್ತವೆ. ಕೃಷಿ ಪಶುಪಾಲನೆಗಳು ಮಾತ್ರ ಇರುವಾಗ ಮನುಷ್ಯನಿಗೆ ಆಶಿಸಲು ಹೆಚ್ಚಿನದು ಇರುವುದೇ ಇಲ್ಲ ಎಂದೇನಲ್ಲ. ದೊಡ್ಡ ಲಕ್ಕದಲ್ಲಿ ತೃಪ್ತ ಬದುಕು ನೆಮ್ಮದಿ ಬಾಳು.

ಆಗ ಸೈನ್ಯ ಸರಕಾರ ಪೋಲೀಸು ನ್ಯಾಯಾಲಯ ಕಾನೂನು ಕಚೇರಿ ಇವೆಲ್ಲ ತಂತಾನೆ ಮಾಯವಾಗುತ್ತವೆ. ಪ್ರತಿ ಮನೆಯ ಸುತ್ತ ಹಿತ್ತಲು ಹೊಲ ಗದ್ದೆ ಅನ್ನುವಾಗ ರಸ್ತೆ ಅಂಚೆ ಪತ್ರಿಕೆ ವಿದ್ಯಾಭ್ಯಾಸ ವ್ಯಾಪಾರ ಅನ್ನುವುದರ ಕಲ್ಪನೆ ಅವಶ್ಯಕತೆಗಳೇ ಉಳಿಯುವುದಿಲ್ಲ.

ಮನೆಯ ಸುತ್ತ ಚರಂಡಿ ಮನೆಗಳು ಇರುವಾಗ ದೇಹ ಮನಸ್ಸು ಎರಡೂ ವಿಷ-ಪೂರಿತವಾಗುತ್ತವೆ. ರಾಗದ್ವೇಷ ಪರಧನ

ಜಾಸತಿ ಪರವಸ್ತು ಸಂಗತಿ ವಿಶೇಷಗಳೇ ತಲೆ ತಿನ್ನುತ್ತಿರುತ್ತವೆ ದಿನನಿತ್ಯ. ಮನಸ್ಸಿನ ತುಂಬ ಹಣ ಹಾಗೂ ದೇವರು! ಆಸೆ ಆಕಾಂಕ್ಷೆ ಲೋಭಗಳು.

ದಾನಿಗಳು ಇದ್ದಾರೆಂದೆ....

ಸರಕಾರ ಶ್ರೀಮಂತರನ್ನು ಉಳಿಸಿ ಬೆಳೆಸಿ ಪೋಷಿಸಿ ಕಾಪಾಡಿ ಸಂರಕ್ಷಿಸುತ್ತದೆ. (ಜೊತೆಗೆ ಬಡವರ ಉದ್ಧಾರ, ಉಳ್ಳವರು ಹಾಗೂ ಇಲ್ಲದವರ ಮಧ್ಯದ ಅಂತರ ಕಡಿಮೆ ಮಾಡುವ ಮಾತನ್ನೂ ಆಡುತ್ತದೆ ಆ ಮಾತೇ ರಾಜಕೀಯ. ಪತ್ರಿಕೆಗಳಿಗೆ ಅನ್ನ. ಸಾಹಿತ್ಯಕ್ಕೆ ವಸ್ತು. ಜನತೆಗೆ ಹುಲ್ಲುಗಾವಲು!) ಸಮಾಜ ಇದೆಯೆಂದೆ ಉಳ್ಳವರು ಹೆಚ್ಚಿನವರು ಕೊಬ್ಬಿ ಉಬ್ಬುತ್ತಿದ್ದಾರೆ. ಎಲ್ಲ ವ್ಯವಸ್ಥೆ ಸಂಘ ಸಂಸ್ಥೆ ಅನ್ನುವುದೆಲ್ಲ ಕುಳಿತುಣ್ಣುವುದನ್ನು ಸುಲಭ ಸಂಪಾದನೆಯನ್ನು ಮೈಗಳ್ಳತನವನ್ನು ರೂಪಿಸಿ ರೂಢಿಸಲು!

ವ್ಯಾಪಾರ ಇಲ್ಲದಿದ್ದರೆ ಬೀಡಿ ಸಿಗರೇಟು ಕಾಫಿ ಟೀ ಹೋಟೆಲು ಸಿನಿಮಾ ಇರುತ್ತಿದ್ದುವೆ? ವಾಹನ ಸಾಗಾಣಿಕೆ ಇರುವುದರಿಂದ ಪಟ್ಟಣಗಳು ಸಾಧ್ಯವಾಗಿವೆ ಆಡಳಿತ ಸರಕಾರ ನೌಕರಿ ಸಂಬಳ ಕಾರ್ಖಾನೆ ವ್ಯಭಿಚಾರ ವೈಯ್ಯಾರ ಬೆಡಗು ಸೊಗಸುಗಾರಿಕೆಗಳು ವಾಹನ ಸಾಗಾಣಿಕೆ ಇರುವುದರಿಂದ. ವಾಹನ ರಸ್ತೆ ಸೇತುವೆ ದೋಣಿ ಹಡಗು ಇಲ್ಲವಾದರೆ!

ವಿನಿಮಯ ಮಾಧ್ಯಮ ಹಣ ಅನ್ನುವುದೇ ಇಲ್ಲದಿದ್ದರೆ! ಹಣದ ಆಧಾರದಿಂದ ಕೂಲಿ ಸಂಬಳ ಪ್ರತಿಫಲ ಕೊಟ್ಟು ವ್ಯಕ್ತಿ ವ್ಯಕ್ತಿಯನ್ನು ಅಂಗಡಿ ಹೊಲಗದ್ದೆ ಕಾರ್ಖಾನೆ ಕಚೇರಿ ಉದ್ದಿಮೆ ನೌಕರಿಗಳಲ್ಲಿ ದುಡಿಸುತ್ತಿದ್ದಾನೆ, ಶೋಷಿಸುತ್ತಿದ್ದಾನೆ. ಹಣ ವಿನಿಮಯ ಮಾಧ್ಯಮ ಅನ್ನುವುದೇ ಇಲ್ಲವಾದರೆ! ಎರಡೆಕರೆ ಪರಿಸ್ಥಿತಿಗೆ ಕ್ರಮೇಣ ಹೊಂದಿಕೊಂಡು ಬಿಡುತ್ತಾನೆ!

ವ್ಯಾಪಾರವಿದೆಯೆಂದೇ ವೈವಿಧ್ಯಗಳು. ವಿದ್ಯೆ ವಿಜ್ಞಾನಗಳು ರುಚಿ ಹೆಚ್ಚಿನ ವಿಶೇಷಗಳನ್ನು ಪಡೆಯುತ್ತವೆ. ಅವು ಎಲ್ಲರಿಗೂ ಸಿಕ್ಕುವುದಿಲ್ಲ. ಪರಿಣಾಮವಾಗಿ ಕಿತ್ತಾಟ ಹುಚ್ಚಾಟ ಕ್ರೋಧ ಮಾತ್ಸರ್ಯಗಳು. ಇದ್ದವರ ಆಟಾಟೋಪ; ಇಲ್ಲದವರ ಹುಯಿಲು ಅಳಲು ತೊಳಲಾಟಗಳು.

ಇದುವರೆಗಿನ ಸಮಾಜ ಸರಕಾರ ಸೈನ್ಯ ಪೋಲೀಸು ನ್ಯಾಯಾಲಯ ಕಾನೂನು ಕಚೇರಿ ಆಡಳಿತ ವ್ಯಾಪಾರ ಅನ್ನುವುದೆಲ್ಲ ಯುವಕರನ್ನು ಆಧರಿಸಿವೆ. ಅದರ ಬದಲು ಊರಿನ ಆಗುಹೋಗು ಉಳಿದವರ ಹಿತಚಿಂತನೆ ಅನ್ನುವುದೆಲ್ಲ ಮೊಮ್ಮಕ್ಕಳಿರುವ ಮುದುಕ ಮುದುಕಿಯರ ಕೈಯಲ್ಲಿರಬೇಕು. ಅವರು ನ್ಯಾಯ ನಿರ್ಣಯಿಸಿ ಜಗಳ ಪರಿಹರಿಸುವಂತಾಗಬೇಕು. ಮುಪ್ಪಿನ ಮುದುಕರಿಗೇನು ಸ್ವಾರ್ಥವಿದ್ದೀತು!

ಇಂದಿನ ಹಕ್ಕು ಒಡೆತನ, ಆಸ್ತಿ ಅಧಿಕಾರ ಹಣ ದ್ರವ್ಯದ ಜಗತ್ತಿನಲ್ಲಿ ಮುದುಕರೂ ರಾಗದ್ವೇಷ ಈರ್ಷ್ಯಾಸೂಯಾಭರಿತರಾಗಿದ್ದಾರೆ. ಪ್ರತಿ ಕುಟುಂಬಕ್ಕೂ ಎರಡೆಕರೆ ಭೂಮಿ ಅನ್ನುವ ವಾತಾವರಣದಲ್ಲಿ ಜಗಳ ಅಸೂಯೆಗಳಿಗೆ ಅವಕಾಶವೇ ಇರುವುದಿಲ್ಲ ಬಹುಶಃ.

ಹೆಣ್ಣು ಗಂಡಿನ ಮನೋವ್ಯಾಪಾರವೇ ಜಗತ್ತು. ಹಕ್ಕು ಆಸ್ತಿ ಲಾಭ ವ್ಯಾಪಾರ ಜಗತ್ತಿನಲ್ಲಿ ವ್ಯಕ್ತಿಗಳ ಗೌರವ ಮರ್ಯಾದೆ ಬೆಲೆ ಕಿಮ್ಮತ್ತುಗಳು ಅಸ್ಥಿರ! ನಿತ್ಯ ಬದಲಾವಣೆಯಲ್ಲಿ ತೇಲಿ ಮುಳುಗುತ್ತಿರುತ್ತವೆ. ತನ್ನ ಆಸೆ ಹಣ ಅಧಿಕಾರಗಳಿಗೆ ತಕ್ಕಂತೆ ಹೆಣ್ಣುಗಳನ್ನು ಕೊಳ್ಳಬಹುದು; ಗಂಡುಗಳನ್ನು ದುಡಿಸಬಹುದು, ಶೋಷಿಸಬಹುದು.

ಪ್ರತಿ ಕುಟುಂಬಕ್ಕೂ ಎರಡೆಕರೆ ಭೂಮಿ ಅನ್ನುವ ವಾತಾವರಣದಲ್ಲಿ ಹಸಿವು ಅನ್ನುವುದೇ ಇರುವುದಿಲ್ಲ. ಅಭಾವ ಪ್ರಭಾವಗಳು ಇಲ್ಲದಿರುವಾಗ, ಪ್ರತಿ ಗಂಡಿನ ಬೆಲೆ ನೆಲೆಗಳೂ ಒಂದೇ ಆಗಿರುತ್ತವೆ. ಲಾಭವಿಲ್ಲದಿರುವಾಗ ನಿಷ್ಠೆ ಬದಲಾಯಿಸುವ ಅಗತ್ಯತೆಯೂ ಉಂಟಾಗುವುದಿಲ್ಲ.

ಗಂಡಸು ಕಳ್ಳನಲ್ಲ, ಹೆಂಗಸು ವ್ಯಭಿಚಾರಿ-

ಯಿಲ್ಲದಿರುವ ಲೋಕಕ್ಕೆ ಪ್ರತಿ ಕುಟುಂಬವೂ ಸಮೃದ್ಧವಾಗಿರುವ ವಾತಾವರಣ! ಹಸಿವಿಲ್ಲ ಅನೀತಿಯಿಲ್ಲ. ದ್ವೇಷ ಮಾತ್ಸರ್ಯಕ್ಕೆ ಅವಕಾಶವೇ ಇಲ್ಲ! ಇದಕ್ಕಿಂತ ಒಳ್ಳೆಯ ಕಲ್ಪನೆ ಇನ್ನೇನಿರಬಲ್ಲುದು! ಈಗಿನ ಸ್ವರ್ಗ, ಸ್ವರ್ಗವೇ ಅಲ್ಲ.

ಮನಸ್ಸು ಹೂವಾಗಿರುವಾಗ ಮನುಷ್ಯ ಚಿರಂಜೀವಿಯಾಗುತ್ತಾನೆ. ಕಾತುರ ಕಳವಳ ನಾಳಿನ ಚಿಂತೆ ಕೊರತೆ ಅಭಾವಗಳೇ ಇಲ್ಲದಿರುವಾಗ ಮುಪ್ಪು ರೋಗ ಆಲಸ್ಯ ಅನ್ನುವುದೇ ಇರುವುದಿಲ್ಲ. ಮನುಷ್ಯ ಮನುಷ್ಯನಿಗೆ ಬೇಕಾಗುತ್ತಾನೆ. ಎಲ್ಲವರೂ ತನ್ನವರು ಬೇಕಾದವರು.

ಶರಣೆನ್ನುವುದೇ ಸಾವು
ಆಶ್ರಯ ಅನ್ನುವುದು ಆತ್ಮಹತ್ಯೆ

ಯೋಚಿಸಬೇಕಾಗಿರುವುದು ದೇವರಿದ್ದಾನೆಯೇ? ಅನ್ನುವುದಲ್ಲ. ದೇವರ ಅವಶ್ಯಕತೆ ಇದೆಯೆ? ಅನ್ನುವುದು ಪ್ರಶ್ನೆ. ಅಸಮಾನತೆ ಅಭಾವ ವೈಷಮ್ಯಗಳಿರುವಾಗ ರಕ್ಷಕ ಸಹಾಯಕರು ಬೇಕೆನಿಸುತ್ತಾರೆ. ಸಮೃದ್ಧಿ ಸಾಮರಸ್ಯಗಳು ಸಹಜ ಸ್ವಾಭಾವಿಕವಾಗಿಯೇ ಮನೆ ಸುತ್ತ ಅನ್ನ ಹಣ್ಣು ಹಾಲು ತುಪ್ಪ ಮೊಸರು ಇರುವಲ್ಲಿ ಕಣ್ಣು ಹಾಕಲು ಕಮ್ಯೂನಿಸಮ್ಮಿಗೂ ಭಯ; ದೈವಕ್ಕೂ ಹೆದರಿಕೆ ಗಡಗಡ ನಡುಕ!

ಭಕ್ತಿಗೆ ಮಣಿಯುತ್ತಾನೆಯೇ ವಿನಾ ಭಗವಂತ ಬುದ್ಧಿಗೆ ಬಗ್ಗುವವನಲ್ಲ. ಬುದ್ಧಿಶಕ್ತಿ ವಿಚಾರ ವಿವೇಕ ಯುಕ್ತಾಯುಕ್ತತೆಗಳನ್ನು ಕಟ್ಟಿ ಹೊಳೆಗೆಸೆದು, ಶರಣಾಗತನಾಗಿ ಪ್ರಶ್ನಿಸದೆ ಸಂದೇಹಿಸದೆ ಸಮ್ಮತಿಸಿ, ಹೂಗುಟ್ಟುವ ಗುಲಾಮ ದಾಸ ಶರಣರು ಇದ್ದಾರೆಂದೇ ದೇವಕ್ಕೂ ಅಸ್ತಿತ್ವ; ಕಮ್ಯೂನಿಸಮ್ಮಿಗೂ ಘನತೆ ಗೌರವಗಳು

ವಿದ್ಯೆ ಬುದ್ಧಿ ಜ್ಞಾನ ವಿಜ್ಞಾನ ಅನ್ನುವಂತಹದೆಲ್ಲ ಅಭಾವ ಅಸಮಾನತೆ ವೈಷಮ್ಯಗಳನ್ನು ರೂಪಿಸುತ್ತವೆ. ಪರಿಣಾಮವಾಗಿ ಅಸಹಾಯಕತೆ ಬಡತನ ರೋಗ ದಾರಿದ್ರ್ಯ ವಿಲಾಸ ದರ್ಪ ಕ್ರೌರ್ಯ ದೌರ್ಜನ್ಯ ವೈಪರೀತ್ಯ ಅಸ್ಥಿರತೆಗಳು ವಿಜೃಂಭಿಸತೊಡಗುತ್ತವೆ.

ಆಗ ಬಡವರ ಬಂಧುಗಳು, ರೈತ ಕಾರ್ಮಿಕ ಸಿಂಧುಗಳು ಉದ್ಭವಿಸುತ್ತಾರೆ. ಆಗ ಕರುಣೆ ಸಹಾಯ ದಾನ ಔದಾರ್ಯಗಳಿಗೆ ನೆಲೆ ಬೆಲೆಗಳು. ಪ್ರಮಾದಿಗಳು ದಾನ ಮಾಡಿಸಲು ಹೆಣಗಿದರೆ, ಮಹಾತ್ಮರು ಔದಾರ್ಯ ಕರುಣೆಗಳ ರಾಗರೋಗ ಪ್ರಾರಂಭಿಸುತ್ತಾರೆ.

ಒಳ್ಳೆಯದು ಕೆಟ್ಟುದು ಹೆಚ್ಚಿನದು ರುಚಿಯಾದುದು ಹೆದರಿಕೆ ಬೆದರಿಕೆ ಎಲ್ಲವೂ ಅಸಮಾನತೆ. ಹೆಚ್ಚಿನದು ದೊರೆಯುವ ಸಂಭವದ ಫಲಗಳೆ. ಎರಡೆಕರೆ ಭೂಮಿಯಲ್ಲಿ ಮಾನವ ಬುದ್ಧಿ ವಿವೇಚನೆಗಳಿಂದ ಎಷ್ಟು ಏನು ಲಭಿಸುತ್ತದೊ ಅದರಿಂದ ಅಷ್ಟರಲ್ಲಿ ತೃಪ್ತಿ ಕಾಣಬೇಕು. ಹೆಚ್ಚಿನದರ ಆಸೆ ಹೊಸದರ ರುಚಿಯೇ ಮೃತ್ಯು.

ಹೆಚ್ಚಿನದು ಕೊಟ್ಟವರಿಗೆ ರುಚಿ ದೊರಕಿಸಿದವರಿಗೆ ಗೌರವ ಮರ್ಯಾದೆಗಳು! ಅವರು ಮೇಲೆ, ಇವರು ಕೆಳಗೆ! ಸುಲಭ ಸೌಖ್ಯ ಯಾರಿಗೆ ಬೇಡ! ಎಲ್ಲರೂ ನುಗ್ಗುತ್ತಾರೆ. ದರ್ಶನಕ್ಕೆ ಆಶೀರ್ವಾದ ಪಡೆಯಲು ಉಪದೇಶ ಪಡೆದುಕೊಂಡು ಪುನೀತರಾಗಲು!

ಮತ್ತೆ ಪ್ರಪಂಚ ವ್ಯಾಪಾರ ವ್ಯವಹಾರ ಪ್ರಾರಂಭವಾಗುತ್ತದೆ. ಆಶಾಪಾಶ ದೋಷ ನಿವಾರಣೆ ದೈವದ ಸಿಟ್ಟು ಅದಕ್ಕೆ ಶಾಂತಿ ಹೀಗೆಲ್ಲ. ಮನಸ್ಸು ಮಸಣವಾದರೆ ಹೃದಯ ನರಕವಾದರೆ ಮಾನಸಿಕ ರೋಗ ದೈಹಿಕ ವ್ಯಾಧಿಗಳು. ನೆಮ್ಮದಿ ಭರವಸೆ ಭದ್ರತೆ ವಿಮೆಗಳಿಗಾಗಿ ಪರದಾಟ ಪರಿಪಾಟಲು.

ಮುರುಕಲು ಮನಸ್ಸು ಮುರಿದ ಹೃದಯ. ಮತ್ತೂ ದೈನ್ಯ ಇನ್ನೂ ಅಸಹಾಯಕತೆ. ●

ಮೂರನೇ ತಿಂಗಳಲ್ಲಿ ಮಗುವಿಗೆ ಕೊಡುವ ಘನ ಆಹಾರ - ಮಗುವಿನ ಪೂರ್ತಿ ಜೀವಮಾನಕ್ಕೆ ಆಧಾರ

ಡಾಕ್ಟರರು ಹೇಳುತ್ತಾರೆ: ಹಾಲು ಒಂದೇ ಸಾಕಾಗದು.



ಡಾಕ್ಟರರು ಶಿಫಾರಸು ಮಾಡುತ್ತಾರೆ:

ಫೆರೆಕ್ಸ್®


ಸಂತುಲಿತ ಘನ ಆಹಾರ
ಶೀಘ್ರ, ಸರ್ವಾಂಗೀಣ ಬೆಳವಣಿಗೆಗಾಗಿ

ಮಗುವಿನ ಶರೀರ ಮತ್ತು ಮೆದುಳು ತ್ವರಿತ ಗತಿಯಿಂದ ಬೆಳೆಯುತ್ತಿರುವ ಕಾಲಾವಧಿಯಲ್ಲಿ ಹಾಲೊಂದೇ ಸಾಕಾಗುವುದಿಲ್ಲ. ತಾಯಿಯ ಹಾಲು ಕಡಿಮೆ ಮಾಡಿ ಘನಾಹಾರಗಳನ್ನು ಕೊಡಲು ಆರಂಭಮಾಡಬೇಕು— 3ನೇ ತಿಂಗಳಿನಲ್ಲಿಯೇ. ಅಗಿದು ತಿನ್ನಲು ಮಗು ಕಲಿಯಬೇಕು. ಅದಕ್ಕಾಗಿ... ಡಾಕ್ಟರರು ಫೆರೆಕ್ಸ್ ಶಿಫಾರಸು ಮಾಡುತ್ತಾರೆ. ಕಾರಣ: ಅದು ಮಗುವಿನ ಬೆಳವಣಿಗೆಯ ಅನೇಕ ಅವಶ್ಯಕತೆಗಳನ್ನು ಪೂರೈಸುವ ಸಂತುಲಿತ ಆಹಾರ. ರಕ್ತದ ಆರೋಗ್ಯಕ್ಕಾಗಿ ಮತ್ತು ಚೈತನ್ಯಕ್ಕಾಗಿ ಸರಿಯಾದ ಪ್ರಮಾಣದಲ್ಲಿ ಕಬ್ಬಿಣ ಸತ್ವ; ಎಲುಬುಗಳ ಮತ್ತು ಹಲ್ಲುಗಳ ಗಟ್ಟಿಮುಟ್ಟುತನಕ್ಕಾಗಿ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ2, ಮೆದುಳಿನ ಮತ್ತು ಶರೀರದ ಶೀಘ್ರ ಬೆಳವಣಿಗೆಗಾಗಿ ಸರಿಯಾದ ಪ್ರೋಟೀನ್‌ಗಳು; ಬೆಳೆಯುವ ಶರೀರಕ್ಕೆ ಶಕ್ತಿ— ಇವೆಲ್ಲ ಫೆರೆಕ್ಸ್‌ನಲ್ಲಿವೆ. ತಾಯಂದಿರು ಬೇರೆ ಯಾವುದೇ ಘನ ಆಹಾರಕ್ಕಿಂತ ಅಧಿಕವಾಗಿ ಫೆರೆಕ್ಸನ್ನು ಆರಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಣ್ಣುಗಳು, ತರಕಾರಿಗಳು, ಬೇಳೆ, ಮಾಂಸ, ಮೊಟ್ಟೆಗಳು—ಇವುಗಳಲ್ಲಿ ಯಾವುದರೊಡನೆಯಾದರೂ ಬೆರಸಿ ಕೊಡಲು ಫೆರೆಕ್ಸ್ ರುಚಿಕರವಾಗಿದೆ. ಫೆರೆಕ್ಸ್ ಆದರ್ಶವಾದ ಪ್ರಥಮ ಘನ ಆಹಾರ.

ನಮ್ಮ ಉಚಿತ ಫೆರೆಕ್ಸ್ ಪುಸ್ತಿಕೆಯನ್ನು ಮತ್ತು ರೂ. 2 ರಿಯಾಯಿತಿಯ ಯೋಜನೆಯ ವಿವರವನ್ನು ಪಡೆಯಲು ಇಂದೇ ಬರೆಯಿರಿ.

ನಿಮ್ಮ ಹೆಸರು ಮತ್ತು ವಿಳಾಸದ ಜೊತೆಗೆ (ಭಾಷೆಯ ಹೆಸರನ್ನು ನಮೂದಿಸಿರಿ) 25 ಪೈಸೆ ಸ್ಟಾಂಪನ್ನು ಇಟ್ಟು ಪೋಸ್ಟ್ ಬ್ಯಾಗ್ ನಂ. 19119, ಬೊಂಬಾಯಿ 400 026 ಈ ವಿಳಾಸಕ್ಕೆ ಕಳಿಸಿರಿ.



ಗ್ಲಾಕ್ಸೊ

SIL.GF-53-935 KN

ಕ್ರಾಸ್ ಕಂಟ್ರಿ ರೇಸ್ ಎಂದರೇನು?

ಜಿ. ಎಸ್. ಭಟ್ಟ

ಕಳೆದ ಸೆಪ್ಟೆಂಬರ್ ೧೯ ರಂದು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ದಕ್ಷಿಣ ಭಾರತದಲ್ಲಿಯೇ ಮೊಟ್ಟಮೊದಲಿಗೆ ವೈಭವಪೂರ್ಣ ಕ್ರಾಸ್‌ಕಂಟ್ರಿ ರೇಸ್ ನಡೆಯಿತು. ಇದು ೧೦ ನೆಯ ರಾಷ್ಟ್ರೀಯ ಕ್ರಾಸ್‌ಕಂಟ್ರಿ ರೇಸ್. ಇದು ವರೆಗೆ ಇಂಥ ಒಂಬತ್ತು ರೇಸ್‌ಗಳು ದೇಶದ ಬೇರೆ ಬೇರೆ ಕಡೆಗಳಲ್ಲಿ ನಡೆದಿವೆ. ರಾಜ್ಯ ಮಟ್ಟದವೂ ಪ್ರತಿರಾಜ್ಯದ ಒಂದೊಂದು ಕಡೆ ಪ್ರತಿ ವರ್ಷ ನಡೆಯುತ್ತಿವೆ. ಪತ್ರಿಕೆಗಳಲ್ಲಿ ವರದಿ, ಲೇಖನ ಓದುತ್ತೇವೆ. ಫೋಟೋ ನೋಡುತ್ತೇವೆ. ಆದರೆ ಕ್ರಾಸ್‌ಕಂಟ್ರಿ ರೇಸ್ ಎಂದರೇನು ಬಲ್ಲಿರಾ ?

ಓಟವೆಂದ ಕೂಡಲೇ, ಸಿದ್ಧ ಕ್ರೀಡಾಂಗಣದಲ್ಲಿ ನಡೆಯುವ ಓಟದ ಸ್ಪರ್ಧೆ ನೆನಪಿಗೆ ಬರುವುದು ಸಹಜ. ನೇರ, ತಿರುವುಗಳುಳ್ಳ ಕ್ರೀಡಾಂಗಣ ಅಥವಾ ರಸ್ತೆ ಓಟ ಸಾಮಾನ್ಯ. ಆದರೆ ಈ ಕ್ರಾಸ್‌ಕಂಟ್ರಿ ರೇಸ್ ಸಿದ್ಧ ಕ್ರೀಡಾಂಗಣದಲ್ಲಿ ನಡೆಯುವುದಿಲ್ಲ. ಟಾರ್ ರಸ್ತೆಯಲ್ಲೂ ಅಲ್ಲ. (ಕಾಡೇ ಕ್ರೀಡಾಂಗಣ) Forest is the Stadium ಎನ್ನುವುದು ಮೊದಲು ಮೂಲಭೂತ ಘೋಷಣೆ. ಈ ಸ್ಪರ್ಧೆಯಲ್ಲಿ ಓಡುವ ದಾರಿ ಗುಡ್ಡ, ದಿನ್ನೆ, ಹಳ್ಳ, ಕೊಳ್ಳ, ತಗ್ಗು, ತೆವರು ಮುಂತಾದವುಗಳಿಂದ ಕೂಡಿರಬೇಕು. ನೈಸರ್ಗಿಕವಾಗಿ ಭೂಮಿಯ ಮೇಲ್ಭಾಗದಲ್ಲಿ ಹೇಗೆಲ್ಲ ಸ್ಥಿತಿಗಳುಂಟಾಗುವುವೋ ಅವ್ಯಾವುವನ್ನೂ ಲೆಕ್ಕಿಸದೆ ಓಡುವ ಓಟ. ಕಾಡು ನೆಲವೇ ಇದರ ಕ್ರೀಡಾಂಗಣ. ಕೆಂಪು, ಬಿಳಿ ನಿಶಾನಿಗಳನ್ನು ಹುಡುಕಿಕೊಂಡು, ಗುಡ್ಡ ಹತ್ತಿ, ದಿನ್ನೆ ದಾಟಿ, ಹಳ್ಳ ಹಾದು, ಕೊಳ್ಳ ಇಳಿದು, ಗದ್ದೆಗುದುಕಿ, ಕಾಡು ಕಳೆದು, ತಗ್ಗಿನಲ್ಲಿ ತೆವಳುತ್ತ ಕುಂಡೆಗೆ ಕಾಲು

ಹೆಚ್ಚುವ ಕಸುಬು. ಸಿದ್ಧ ಕ್ರೀಡಾಂಗಣದ ಅವಶ್ಯಕತೆಯೇ ಇಲ್ಲ. ಕ್ರೀಡಾಂಗಣದಲ್ಲಿ ಓಡಿ ಪಳಗಿದವ ಇಲ್ಲಿ ಕೆಲ ಸಲ ಓಡಲಾರ. ಇದೇ ತಾನೇ ನಿಜ ಓಟ? ಹಿಂದೆ, ಬಹು ಹಿಂದೆ ಮನುಷ್ಯ ಅಡವಿಯಲ್ಲಿ ವಾಸಿಸುವಾಗ ಅರಣ್ಯೋತ್ಪಾದನೆಗಳನ್ನರಸುತ್ತ ಇಂಥ ಹಾದಿಯಲ್ಲಿ ಓಡಾಡುತ್ತಿದ್ದ. ಬೇಟೆಯಾಡುವಾಗ ಪ್ರಾಣಿಗಳನ್ನು ಬೆನ್ನಟ್ಟಿ ಹಾಗೆಯೇ ಓಡುತ್ತಿದ್ದ. ಕ್ರೂರಪ್ರಾಣಿಗಳಿಂದಾಗಲೀ ಬೇರೆ ಗುಂಪಿನ ಆಕ್ರಮಣಕಾರರಿಂದಾಗಲಿ ತಪ್ಪಿಸಿಕೊಳ್ಳುವಾಗ ಇಂಥ ಹಾದಿಯಲ್ಲೇ ಓಡಬೇಕಾಗುತ್ತಿತ್ತು. ಇದೇ ದುರ್ಗಮ ಪಥದಲ್ಲಿ ಸಾವು ಬದುಕುಗಳ ಹೋರಾಟ ನಡೆಸುತ್ತಿದ್ದ. ಈ ಕ್ರಾಸ್‌ಕಂಟ್ರಿ ರೇಸ್ ಪುನಃ ಇದನ್ನೇ ನೆನಪಿಗೆ ತರುತ್ತಿದೆ.

ಕ್ರೀಡೆ ಸಂಸ್ಕೃತಿಯಲ್ಲಿ ಆಳ ಬೇರುಬಿಟ್ಟಿರುವ ದೇಶಗಳಲ್ಲಿ ಉಳಿದ ಕ್ರೀಡೆಗಳ ಜತೆ ಈ ಕ್ರಾಸ್‌ಕಂಟ್ರಿ ರೇಸ್ ಬಹಳ ಜನಪ್ರಿಯವಾಗಿದೆ. ಇಂಥ ನೆಲದಲ್ಲಿ ಓಡುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಹಂಬಲವುಳ್ಳ ಓಟಗಾರರು ಓಡುವುದರಲ್ಲಿಯೇ ವಾರಗಟ್ಟಲೆ ಅಡವಿಗಳಲ್ಲಿ ಕಳೆಯುತ್ತಾರೆ. ಬೇರೆ ಬೇರೆ ತೆರನ ಪರಿಸರ ಓಡಲು ಸಿಕ್ಕಿದರೆ ನಿಧಿ ಸಿಕ್ಕಿದಷ್ಟು ಸಂತೋಷ ಪಡುತ್ತಾರೆ. ಇಂಥ ರಾಕ್ಷಸ ಓಟಗಳ ಸತತ ತರಬೇತಿಯಿಂದ ಕೆಲದೇಶಗಳು ಗಟ್ಟಿಮುಟ್ಟಾದ ಒಲಿಂಪಿಕ್ ಆಟಗಾರರನ್ನು ಹೊಂದಿವೆ. ಆಫ್ರಿಕಾದಲ್ಲಿ ಈ ಓಟ ಹೆಚ್ಚು ಜನಪ್ರಿಯವಾಗಿರುವುದಲ್ಲದೆ ಅತಿ ನಿಷ್ಣಾತ ಓಟಗಾರರನ್ನು ಹೊಂದಿದೆ. ಅದಕ್ಕೆ ಅಲ್ಲಿಯ ಭೂಸ್ಥಿತಿ, ಜೀವನ ವಿಧಾನಗಳೂ ಕಾರಣ. ಜತೆಗೆ ಅವರ ಕಾಲಿನ ಮೊಣಗಂಟಿನ ಕೆಳಭಾಗ ಇಂಥ ಓಟಕ್ಕೆ ಹೇಳಿಮಾಡಿಸಿದ ಹಾಗಿದೆಯೆಂದು ತಜ್ಞರು ಅಭಿಪ್ರಾಯಪಡುತ್ತಾರೆ.


ಕ್ರಿ. ಪೂ. ೫೦೦ ರಲ್ಲಿಯೇ ತಮ್ಮ ಕ್ರೀಡಾಪಟುಗಳನ್ನು ತರಬೇತಿಗೊಳಿಸಲು ಗ್ರೀಕರು ಉಸುಕಿನ ಓಡುವ ಮೈದಾನಗಳನ್ನು ಬಳಸಿ-



ದಂದಕ್ಕೆ ದಾಖಲೆಗಳಿವೆ. ಬ್ರಿಟನ್ನಿನಲ್ಲಿಯೂ ಉಸುಕಿನ ದಿನ್ನೆಯೋಟ ಇತಿಹಾಸದುದ್ದಕ್ಕೂ ಜನಪ್ರಿಯವಾದುದನ್ನು ಗುರುತಿಸಬಹುದು. ಹಿಮಪ್ರದೇಶದಲ್ಲಿ ಓಡುವ ಓಟ ಇದಕ್ಕಿಂತ ಹೆಚ್ಚು ರೋಮಾಂಚಕಾರಿಯಾಗಬಲ್ಲದು. ರಶಿಯಾದಂಥ ದೇಶದಲ್ಲಿ ೭,೦೦,೦೦೦ ಜನ ಇಂಥ ರೇಸಿನಲ್ಲಿ ಭಾಗವಹಿಸುತ್ತಾರೆ. ಪ್ರಪಂಚದ ಕ್ರೀಡಾಸಕ್ತ ರಾಷ್ಟ್ರಗಳೆಲ್ಲ ಇಂಥ ಸ್ಪರ್ಧೆಯನ್ನು ಜನಪ್ರಿಯಗೊಳಿಸುತ್ತಿವೆ. ಸತತ ಪರಿಶ್ರಮದಿಂದ ಅತ್ಯುತ್ತಮ ಕ್ರಾಸ್ ಕಂಟ್ರಿ ರೇಸ್ ಓಟಗಾರರನ್ನು ಪಡೆಯುತ್ತಿವೆ. ಒಲಿಂಪಿಕ್‌ನಲ್ಲಿ ಸ್ಟೀಪಲ್ ಚೇಸ್‌ಗಳು ಹೆಚ್ಚು ಪೈಪೋಟಿಯಿಂದ ನಡೆಯುತ್ತಿವೆ. ೧೫೦೦ ಮೀಟರ್ ಓಟದಲ್ಲಿ ಫಿಲ್ಬರ್ಟ್ ಬೇ, ಕೆನಿಯನ್ ಸ್ಟಾರ್ ಮ್ಯಾಕ್‌ಬ್ರೈಟ್ ಹಾಗೂ ಒಲಿಂಪಿಕ್ ವಿಜೇತ ಜಾನ್ ವಾಕರ್ ಮುಂತಾದವರು ಅತ್ಯದ್ಭುತವಾದ ತಮ್ಮ ಓಟಗಳಿಂದ ವಿಶ್ವ-ದಾಖಲೆ ಸ್ಥಾಪಿಸಿದ್ದಾರೆ.

ಭಾರತದ ಭೂಸ್ಥಿತಿ, ಮೇಲ್ಮೈ ವಾತಾವರಣ ಸಹಜವಾಗಿಯೇ ಕ್ರಾಸ್ ಕಂಟ್ರಿ ರೇಸ್‌ಗೆ ಹೊಂದುವಂತಹುದು. ಜನಸಂಖ್ಯೆಯ ಹೆಚ್ಚು ಪ್ರಮಾಣ ಗುಡ್ಡಗಾಡು ಪ್ರದೇಶದಲ್ಲಿಯೇ ವಾಸಿಸುತ್ತಿವೆ. ಇಲ್ಲಿಯ ಬದುಕಿಗೂ ಇಂಥ ಓಟ ಅತ್ಯವಶ್ಯ. ಆದರೂ ಭಾರತದಲ್ಲಿ ಈ ರೇಸ್ ಅಷ್ಟು ಜನಪ್ರಿಯವಾಗಿಲ್ಲ. ಒಲಂಪಿಕ್‌ನಲ್ಲೂ ಈ ದಿಶೆಯಲ್ಲಿ ಭಾರತೀಯರ ಸಾಧನೆ ಪೇಲವವಾದುದು. ಸಾಗರದಲ್ಲಿ ನಡೆದ ರೇಸ್‌ನಲ್ಲಿ ಕೂಡ ಭಾಗವಹಿಸಿದವರ ಸಂಖ್ಯೆ ಆಕರ್ಷಕವಾದುದಲ್ಲ. ಜನಪ್ರಿಯಗೊಳಿಸಬೇಕಾದುದು ಅತ್ಯವಶ್ಯ. ಕಾಲಿನ ಹಿಡಿತ, ದೈಹಿಕ ಭದ್ರತೆ, ಮಾನಸಿಕ ಎಚ್ಚರಗಳಿಂದ ಉತ್ತಮ ಕ್ರೀಡಾಪಟುಗಳನ್ನು ಹೊಂದಬಹುದು. ಭಾರತೀಯ ಕ್ರೀಡಾಕ್ಷೇತ್ರವೂ ಜೀವಂತವಾಗಬಹುದು. ಕೇವಲ ಕ್ರೀಡಾಂಗಣ ಓಟದ ತರಬೇತಿ ವಿಶೇಷ ಪ್ರಯೋಜನಕಾರಕವಾಗಲಾರದು.

ಕ್ರೀಡಾಂಗಣದಲ್ಲಿ ಓಡುವುದಕ್ಕೂ, ಕ್ರಾಸ್-ಕಂಟ್ರಿಯಲ್ಲಿ ಓಡುವುದಕ್ಕೂ ತುಂಬ ವ್ಯತ್ಯಾಸವಿದೆ. ಸಿದ್ಧ ಕ್ರೀಡಾಂಗಣದಲ್ಲಿ ನೇರ ತಿರುವುಗಳ ತಾರತಮ್ಯವಷ್ಟೆ. ನೆಲ ಎಲ್ಲ ಕಡೆ ಒಂದೇ ತೆರ. ಗಾಳಿಯ ಪ್ರತಿಕ್ರಿಯೆ, ಬಿಸಿಲಿನ ಕೋನ ವ್ಯತ್ಯಾಸ ಸಾಮಾನ್ಯ ಒಂದೇ ತೆರ. ನೆಲ ಪ್ರತಿಕ್ರಿಯಿಸುವ ರೀತಿಯಲ್ಲಿ ಕೂಡ ವ್ಯತ್ಯಾಸವಿರುವುದಿಲ್ಲ. ಕ್ರಾಸ್‌ಕಂಟ್ರಿ ರೇಸ್‌ನಲ್ಲಿ ನೆಲ, ಗಾಳಿ, ಬಿಸಿಲುಗಳ ಪ್ರತಿಕ್ರಿಯೆಯು ರುಣ ವಿವಿಧವಾಗಿರುತ್ತದೆ. ಏರು ತಗ್ಗುಗಳ ಜತೆಗೆ ಗಟ್ಟಿ, ಮೆದುವು, ಉಸುಕು, ಜವುಗು ಕೆಸರು, ನೀರು, ಜಾರೆ, ಹುಲ್ಲು, ಟಾರು-ಎಲ್ಲದರ ಪ್ರತಿಕ್ರಿಯೆಯ ವಿಧಾನ ಬೇರೆ. ಕೆಲ ಕಡೆ ಕಾಲಿಡಲು ಕೂಡ ಭಯವುಂಟಾಗುತ್ತದೆ. ನಿಷ್ಣಾತ ಓಟಗಾರ ಈ ವ್ಯತ್ಯಾಸಕ್ಕೆ ಒಗ್ಗಿ ಹೋಗಿರುತ್ತಾನೆ. ಕಣ್ಣಿನಲ್ಲಿ ಕಂಡ ತಕ್ಷಣ, ಕಾಲಿನಲ್ಲಿ ಸ್ಪರ್ಶಿಸಿದ ತಕ್ಷಣ, ತಾನು ಓಡಬೇಕಾಗಿದ್ದ ನೆಲದ ಪ್ರತಿಕ್ರಿಯೆ ಮಟ್ಟ ಅರಿತು ಓಟದ ವೇಗವನ್ನು ಸಂತುಲಿಸಿಕೊಂಡು



ಸರಾಯಿಯ ಕಡೆ ಕಣ್ಣೆತ್ತಿ ಕೂಡ ನೋಡ-ಬಾರದೆಂದು ಹೆಂಡತಿಯು ಪ್ರಮಾಣ ಮಾಡಿದ್ದಾಳೆ. ಆದಕ್ಕೆ ಕಣ್ಮುಚ್ಚಿ ಕುಡಿತಿರೋದು.

ಬಿಡುತ್ತಾವೆ. ಈ ರೇಸಿನಲ್ಲಿ ಇದು ಬಹು ಮುಖ್ಯ. ಈ ಎಲ್ಲ ದೃಷ್ಟಿಯಿಂದ ಸಾಗರದಲ್ಲಿ ನಡೆದ ಕ್ರಾಸ್‌ಕಂಟ್ರಿ ರೇಸಿನ ರಹದಾರಿ ಎಷ್ಟರ ಮಟ್ಟಿಗೆ ಸೂಕ್ತವಾದುದು ? ಮಲೆನಾಡಿನ ಭೂಸ್ಥಿತಿ ಯೋಗ್ಯವಾದುದರಿಂದ ಇದಕ್ಕಾಗಿ ಶ್ರಮಪಡಬೇಕಾಗಿಲ್ಲ. ರೇಸಿನ ಐದೂ ವಿಭಾಗಗಳಿಗೆ ಸೂಕ್ತ ರಹದಾರಿಯನ್ನು ಗೊತ್ತುಪಡಿಸಿದ್ದರು. ರಹದಾರಿಯಲ್ಲಿ ಕ್ರಾಸ್-ಕಂಟ್ರಿ ರೇಸ್‌ಗೆ ಹೊಂದುವಂಥ ಲಕ್ಷಣಗಳೆಲ್ಲ ಇದ್ದುವು.

‘ಇದರ ಬಗ್ಗೆ ನಿಮ್ಮ ಅಭಿಪ್ರಾಯ ವೇನು ?’– ಪುರುಷರಿಗಾಗಿ ಇಟ್ಟ ೧೪.೫ ಕಿ. ಮೀ. ದಲ್ಲಿ ಪ್ರಥಮ ಸ್ಥಾನ ಪಡೆದ ಪೂರನ್‌ಸಿಂಗ್ ಹೇಳುತ್ತಾರೆ: “ನನ್ನ ಕ್ರಾಸ್-ಕಂಟ್ರಿ ರೇಸ್ ಬದುಕಿನಲ್ಲಿಯೇ ಇದು ಅತ್ಯಂತ ಕ್ಲಿಷ್ಟವಾದಿ. ಆದರೆ ಇದು ಹೀಗೆಯೇ ಇರಬೇಕು. ಕ್ರಾಸ್‌ಕಂಟ್ರಿ ರೇಸಿನ ನಿಜವಾದ ಅನುಭವವಾದುದೇ ಇಲ್ಲಿ. ಆದರೂ ಜನಕ್ಕೆ ನೋಡಲು ಅನುಕೂಲವಾಗಬೇಕೆಂಬ ದೃಷ್ಟಿ-ಯಿಂದ ರೇಸಿನ ಅರ್ಧ ದಾರಿಯನ್ನು ಟಾರ್ ರಸ್ತೆಯಲ್ಲಿಡಲಾಗಿದೆ. ಒಟ್ಟು ಅಂತರ ಗುಡ್ಡ-ಗಾಡಿನಲ್ಲಿಯೇ ಇದ್ದರೆ ಚೆನ್ನಾಗಿತ್ತು.”

ಪೂರನ್‌ಸಿಂಗರ ಅಭಿಪ್ರಾಯ ಮೌಲಿಕವಾದುದೇ. ಸರ್ವಿಸಸ್ ಸ್ಪೋರ್ಟ್ಸ್, ಕಂಟ್ರೋಲ್ ಬೋರ್ಡಿನ ಮ್ಯಾನೇಜರರೂ ಪ್ರಸ್ತುತ ರೇಸಿನ ತಾಂತ್ರಿಕ ಸಲಹೆಗಾರರೂ ಆದ ಲೆ. ಕ. ವಿಲ್ಲಿ ಡಯಾಸ್ ಅವರೂ ಮೆಚ್ಚುಗೆ ವ್ಯಕ್ತಪಡಿಸಿದರೆ ಆಶ್ಚರ್ಯವಲ್ಲ. ಜನ ನೋಡಲು ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಎಲ್ಲ ರೇಸಿನ ಅರ್ಧದಷ್ಟು ದಾರಿ ರಸ್ತೆಯಾದುದೂ ನಿಜವೇ. ಅದು ಸ್ವಾಗತಾರ್ಹವೇ. ಭಾರತದಲ್ಲಿ ಇನ್ನೂ ಪ್ರಾರಂಭದ ಹಂತದಲ್ಲಿರುವ ಈ ರೇಸನ್ನು ವ್ಯವಸ್ಥಿತವಾಗಿ ಏರ್ಪಡಿಸುವಷ್ಟೇ ಜನಪ್ರಿಯಗೊಳಿಸುವುದೂ ಮುಖ್ಯ. ಉಳಿದ ವ್ಯವಸ್ಥೆಗಳ ಬಗ್ಗೆ, ಮಲೆನಾಡಿನವರ ಕ್ರೀಡಾಸಕ್ತಿಯ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ಬಿಚ್ಚುಕೊರಳಿನ ಹೊಗಳಿಕೆಯನ್ನು ಎಲ್ಲರೂ ಗಮನಿಸಿದ್ದಾರೆ.

ಬದುಕಿನ ವಾಸ್ತವಿಕ ಸವಾಲನ್ನೆದುರಿಸುವ ತಾಕತ್ತು ಕೊಡುವ ಕ್ರಾಸ್‌ಕಂಟ್ರಿ ರೇಸನ್ನು ಭಾರತದಲ್ಲಿ ಜನಪ್ರಿಯಗೊಳಿಸುವುದು ತೀರ ಅವಶ್ಯ. ಇದಕ್ಕೆ ವಿಶೇಷ ಹಣದ ಅವಶ್ಯಕತೆ ಇಲ್ಲ. ಕ್ರೀಡಾಂಗಣ ಬೇಕಿಲ್ಲ. ಉಪಕರಣ ಬೇಕಿಲ್ಲ. ಕಾಲಿಗೆ ಬೂಟು ಇದ್ದರೂ ಸರಿ ಇರದಿದ್ದರೂ ಸರಿ. ದೈಹಿಕ ಶಕ್ತಿ, ಆಸಕ್ತಿ, ಅವಕಾಶ. ಪ್ರೋತ್ಸಾಹಗಳನ್ನು ಒದಗಿಸಿದರೆ ಸಾಕು. ಅಂತಾದರೆ ಒಲಿಂಪಿಕ್‌ನಲ್ಲಿ ಮಾನ ಉಳಿಸಿಕೊಳ್ಳಬಹುದು. ೩೦೦೦ ಮೀಟರಿನ ಸ್ಟೀಪಲ್‌ಚೇಸ್‌ಗಾದರೂ ತರಬೇತಿ ಹೊಂದಬಹುದು. ಈ ದೃಷ್ಟಿಯಿಂದ ಮುಂದಿನ ರೇಸ್‌ಗಳನ್ನೂ ಹೆಚ್ಚು ಹೆಚ್ಚು ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸ್ಥೆಗೊಳಿಸುವುದು ಬಹಳ ಒಳ್ಳೆಯದು ಅಲ್ಲವೇ ?



ಯಾರ ಸುಖದುಃಖಗಳಿಗೆ ಯಾರೂ ಕಾರಣರಲ್ಲ.
ಹೆರವರಿಂದ ತಮಗೆ ನೋವು ನಲಿವುಗಳುಂಟಾಗು
ತ್ತವೆಂದು ಭಾವಿಸುವುದು ಕುಬುದ್ಧಿ ಮಾತ್ರ. ಅಲ್ಲದೆ
ಅಹಂ ಕರ್ತಾ ಎಂಬುದೂ ದುರಭಿಮಾನ. ಪ್ರತಿಯೊಬ್ಬರೂ
ತನ್ನ ಕರ್ಮ ಪರಂಪರೆಯಿಂದ ಬದ್ಧನಾಗಿರುತ್ತಾನೆ. – ಸುಭಾಷಿತ

ಯಾರು ಹಿತವರು ನಿನಗೆ?

ಶ್ರೀಮತಿ ಜಯಮ್ಮ ಶಂಕರನಾರಾಯಣರಾವ್

ಒಂದು ಸಲ ಮುಂಬಯಿಗೆ ಶ್ರೀ ಗುಬ್ಬಿ ಚಿದಂಬರ ಸ್ವಾಮಿಗಳು ಬಂದಾಗ ನಮ್ಮಲ್ಲಿಗೂ ಬಂದಿದ್ದರು. ಲೋಕಾಭಿರಾಮವಾಗಿ ಮಾತಾಡುತ್ತ ಒಮ್ಮೆಲೆ, "ನಿಮಗೊಂದು ಕತೆ ಹೇಳುತ್ತೇನೆ. ಅದರಲ್ಲಿರುವ ಒಗಟನ್ನು ನೀವಾರಾದರೂ ಬಿಡಿಸಿ, ನೋಡೋಣ," ಅಂತ ಹೇಳಿದರು. ನಾವೆಲ್ಲ ಕುತೂಹಲದಿಂದ ಒಪ್ಪಿಕೊಂಡು ಕಿವಿಗೊಟ್ಟು ಕುಳಿತೆವು.

ಒಬ್ಬ ವ್ಯಕ್ತಿಗೆ ಮೂರು ಮಂದಿ ಸ್ನೇಹಿತರು. ಆದರೆ ಅವರಲ್ಲಿಬ್ಬರನ್ನು ಮಾತ್ರ ಆ ವ್ಯಕ್ತಿ ತುಂಬಾ ಪ್ರೀತಿಸುತ್ತಿದ್ದ. ಮೂರನೆಯವನನ್ನು ಲೆಕ್ಕಕ್ಕೇ ಇಡದೆ ಬಹಳ ಕಡೆಗಾಣಿಸುತ್ತಿದ್ದ. ಒಂದು ಸಲ ಆ ವ್ಯಕ್ತಿಗೆ ಕೋರ್ಟಿನಲ್ಲಿ ಹಾಜರಾಗುವ ಪ್ರಸಂಗ ಬಂತು. ಸಾಕ್ಷಿ ಹೇಳಲು ಯಾರಾದರೊಬ್ಬರು ಬೇಕಿತ್ತು. ಆಗ ಆ ವ್ಯಕ್ತಿ, 'ನನಗೇನು, ಅತ್ಯಂತ ಆಪ್ತರಾದ ಇಬ್ಬರು ಮಿತ್ರರಿದ್ದಾರೆ. ಅವರಲ್ಲಿ ಯಾರಾದರೊಬ್ಬರು ಸಾಕ್ಷಿ ಹೇಳಲು ಕೂಡಲೆ ಬರುತ್ತಾರೆ' ಎಂಬ ವಿಶ್ವಾಸದಿಂದ ನಿಶ್ಚಿಂತೆಯಾಗಿ ಮೊದಲನೆಯವನ ಬಳಿ ಹೋದ. ಆ ಗೆಳೆಯ ಬಹಳ ಸಂತೋಷದಿಂದ ಆ ವ್ಯಕ್ತಿಯನ್ನು ಸತ್ಕರಿಸಿ ಬಂದ ಕಾರ್ಯವೇನೆಂದು ಕೇಳಿದ. ಆ ವ್ಯಕ್ತಿ ತುಂಬಾ ವಿಶ್ವಾಸದಿಂದ, "ನೋಡಪ್ಪ, ನನಗೆ ಇಂದು ಕೋರ್ಟಿಗೆ ಹೋಗಬೇಕಾಗಿ ಬಂದಿದೆ. ನೀನು ಬಂದು ನನ್ನ ಪರವಾಗಿ ಸಾಕ್ಷಿ ಹೇಳಬೇಕು," ಅಂದಷ್ಟೇ ಸಾಕು, ಆ ಮನುಷ್ಯ ಕೂತ ಜಾಗದಿಂದಲೂ ಏಳದೆ, "ಸ್ವಾಮಿ, ನಿಮ್ಮಂಥವರ ಸ್ನೇಹ ಸಾಕು. ಈ ಕ್ಷಣವೇ ನನ್ನ ಮನೆ ಬಿಟ್ಟು ಹೊರಡಿರೆ"ಂದು 'ದನ' ಅಟ್ಟಿದ ಹಾಗೆ ಹೊರಗೆ ಅಟ್ಟಿಬಿಟ್ಟನು.

ಆ ವ್ಯಕ್ತಿ ತುಂಬಾ ನೊಂದುಕೊಂಡರೂ ಮತ್ತೊಬ್ಬ ಆತ್ಮೀಯನನ್ನು ನೆನೆಸಿಕೊಂಡು ಸಮಾಧಾನ ಮಾಡಿಕೊಂಡು ಅವನ ಮನೆಯತ್ತ ನಡೆದನು. ಅವನಾದರೂ ಅತಿ ಸಡಗರದಿಂದ ಭಾರೀ ಔತಣವನ್ನೇರ್ಪಡಿಸಿ ಆ ವ್ಯಕ್ತಿಯನ್ನು ಉಪಚರಿಸಿ, "ಬಂದ ಕಾರ್ಯವೇನು, ನಿಸ್ಸಂಕೋಚವಾಗಿ ಆಜ್ಞಾಪಿಸಿ," ಎಂದು ಕೇಳಿಕೊಂಡನು. ಆ ವ್ಯಕ್ತಿ ಹಿಂದಿನ ನೋವನ್ನೆಲ್ಲ ಮರೆತು ಮತ್ತಷ್ಟು ವಿಶ್ವಾಸದಿಂದ ಇವನು ಮೊದಲನೆಯ ಮಿತ್ರನಂಥ ವಿಶ್ವಾಸ ಘಾತುಕನಲ್ಲ ಅಂದುಕೊಂಡು ತುಂಬ ಸಂತೋಷದಿಂದ, "ನಿನ್ನಂಥ ಗೆಳೆಯನಿರಬೇಕಾದರೆ ನನ್ನ ಕಾರ್ಯವೆಲ್ಲ ಹೂವನ್ನೆತ್ತಿ ಇಡುವಷ್ಟು ಸುಗಮವಾಗಿ ನಡೆಯುವುದರಲ್ಲಿ ಸಂದೇಹವೇ ಇಲ್ಲ. ಇಂದು ನೀನು ಸ್ವಲ್ಪ ಕೋರ್ಟಿಗೆ ಬಂದು ನನ್ನ ಪರವಾಗಿ ಸಾಕ್ಷಿ ಹೇಳಬೇಕು," ಎಂದು ತನ್ನ ಕಷ್ಟವನ್ನು ವಿವರಿಸಿದ. ಆ ಮನುಷ್ಯ, "ಹೌದೆ, ಪಾಪ!" ಅಂತ ಕೋರ್ಟಿನವರೆಗೂ ಸಂಗಡ ಬಂದು "ನೋಡಪ್ಪ, ನಾನು ಮಾಡಲು ಸಾಧ್ಯವಾದಷ್ಟು ಮಾಡಿದ್ದೇನೆ. ಕೋರ್ಟಿನೊಳಗೆ ಬಂದು ಸಾಕ್ಷಿ–ಗೀಕ್ಷಿ ಹೇಳಲಾರೆ," ಎಂದವನೆ ಎದುರುತ್ತರಕ್ಕೂ ಕಾಯದೆ ಹಿಂತಿರುಗಿ

ಕೂಡ ನೋಡದೆ ಹೋಗಿಬಿಟ್ಟ.

ಆ ವ್ಯಕ್ತಿ ಬೇರಾವ ದಾರಿಯನ್ನೂ ಕಾಣದೆ ಅತ್ಯಂತ ದುಃಖಾಕ್ರಾಂತನಾಗಿ ಕೋರ್ಟಿನ ಬಾಗಿಲಲ್ಲಿ ಮೌನವಾಗಿ ಕುಳಿತಿರಬೇಕಾದರೆ ಮೂರನೆಯ ಗೆಳೆಯ ಕಾಣಿಸಿಕೊಂಡು ಅತ್ಯಂತ ಪ್ರೀತಿಯಿಂದ ಆ ವ್ಯಕ್ತಿಯ ಕ್ಷೇಮ-ಸಮಾಚಾರ ವಿಚಾರಿಸಿದನು. ಆ ವ್ಯಕ್ತಿಯಾದರೋ ನಿರುತ್ಸಾಹ ಹಾಗೂ ನಿರಾಸೆಯಿಂದ, "ನನ್ನ ಕ್ಷೇಮ ಸಮಾಚಾರ ಏನು ಹೇಳಲಿ? ನನ್ನ ಸ್ಥಿತಿ ನನ್ನ ಶತ್ರುಗಳಿಗೂ ಬೇಡ. ನನಗೀಗ ಕೋರ್ಟಿನಿಂದ ಕರೆ ಬಂದಿದೆ. ನನ್ನ ಪರವಾಗಿ ಯಾರಾದರೊಬ್ಬರು ಬಂದು ಸಾಕ್ಷಿ ಹೇಳಬೇಕು. ಆದರೆ ಅಂಥ ಸ್ನೇಹಿತರು ನೆಂಟರಿಷ್ಟರು ನನಗಾರಿದ್ದಾರೆ!" ಅಂತ ಗೋಳಾಡಿದನು. ತಕ್ಷಣ ಆ ಮೂರನೆಯ ಮಿತ್ರ, "ಗೆಳೆಯ, ಏಕಿಷ್ಟು ದುಃಖಿಸುವೆ. ನಾನು ನಿನ್ನ ಸ್ನೇಹಿತನಲ್ಲವೆ? ಕಷ್ಟಕ್ಕೆ ಆಗದ ಸ್ನೇಹಿತ ಸ್ನೇಹಿತನೇ ಅಲ್ಲ. ನೀನು ಯೋಚನೆ ಮಾಡಬೇಡ; ನಾನು ಸದಾ ನಿನ್ನ ಬೆಂಬಲಕ್ಕೆ ಇದ್ದೇನೆ," ಎಂದವನೆ ಕೋರ್ಟಿನೊಳಗೆ ಆ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಸಾಕ್ಷಿ ಹೇಳಿದನು.

ಹೀಗೆಂದು ಸ್ವಾಮಿಗಳು ಕತೆಯನ್ನು ಮುಗಿಸಿದರು. "ಇದರಲ್ಲಿ ಒಗಟೆಲ್ಲಿ ಬಂತು ಗುರುಗಳೇ?" ಎಂದು ನಾನು ಕೇಳಿದೆ. ಅದಕ್ಕೆ ಅವರು, "ಒಗಟೆಂದರೆ ಇಷ್ಟೇ ಕಣಮ್ಮಾ, ಮೊದಲಿಗೆ ಆ ವ್ಯಕ್ತಿ ಯಾರು ಹಾಗೂ ಆ ಮೂವರು ಸ್ನೇಹಿತರು ಯಾರು ಹೇಳಬಲ್ಲಿರಾ?" ಎಂದು ಪ್ರಶ್ನಿಸಿದರು.


ನಾವೆಲ್ಲ ಸಾಕಷ್ಟು ಯೋಚಿಸಿ ತಲೆ ಕೆಡಿಸಿಕೊಂಡೆವು ಆದರೆ ಏನೂ ಹೊಳೆಯಲೇ ಇಲ್ಲ. ಕೊನೆಗೆ, "ಗುರುಗಳೆ, ನೀವೇ ದಯವಿಟ್ಟು ಒಗಟನ್ನು ಬಿಡಿಸಿಕೊಡಿ," ಎಂದಾಗ ಅವರು ಹೀಗೆ ಹೇಳಿದರು:

ವ್ಯಕ್ತಿಯೆಂದರೆ ಯಾವ ವ್ಯಕ್ತಿಗೂ ಅನ್ವಯಿಸುತ್ತವೆ. ಮೊದಲನೆಯ ಸ್ನೇಹಿತ ಐಶ್ವರ್ಯ; ಎರಡನೆಯ ಸ್ನೇಹಿತ ನೆಂಟರಿಷ್ಟರು; ಮೂರನೆಯ ಸ್ನೇಹಿತನೆಂದರೆ ಆ ವ್ಯಕ್ತಿ ಮಾಡುವ ಸತ್ಕರ್ಮ.

ಹೇಗೆಂದರೆ ವ್ಯಕ್ತಿ ಜೀವಂತವಾಗಿರುವವರೆಗೂ ಐಶ್ವರ್ಯದ ಉಪಯೋಗ, ಐಶ್ವರ್ಯವೇ ತನ್ನ ಜೀವವೆಂದು ವ್ಯಕ್ತಿ ಭ್ರಮೆಯಲ್ಲಿರುತ್ತಾನೆ. ಆದರದು ನಶ್ವರ. ಸತ್ತ ಗಳಿಗೆಯಲ್ಲೇ ಅದು ಅವನನ್ನು ತೊರೆಯುತ್ತದೆ. ಅಪಾರ ಐಶ್ವರ್ಯವನ್ನು ಸಂಗ್ರಹಿಸಿ ಕೋಟೆ-ಕೊತ್ತಲಗಳ ಮಧ್ಯೆ ಅಡಗಿಸಿಟ್ಟುಕೊಂಡು ಕುಳಿತರೂ ಅಸು ನೀಗುತ್ತಿದ್ದಂತೆಯೇ ಆ ವ್ಯಕ್ತಿಯನ್ನು ಹೊರಗೆ ಹಾಕುತ್ತಾರೆ.

ಮತ್ತೆ, ವ್ಯಕ್ತಿಯ ಬಂಧುಗಳ ವ್ಯಾಮೋಹದಲ್ಲಿ ಸಿಕ್ಕು ಅವರನ್ನು ತುಂಬಾ ಆಪ್ತರನ್ನಾಗಿ ಕಾಣುತ್ತಿರುತ್ತಾನೆ. ಅವರಾದರೋ ವ್ಯಕ್ತಿಯನ್ನು ಯಮನ ದೂತರು ಬಂದು ಸೆಳೆದುಕೊಂಡು ಹೋಗುವಾಗ ಕಣ್ಣೀರ್ಗರೆಯುತ್ತ ಸ್ಮಶಾನದ ವರೆಗೂ ಬಂದು ಬೂದಿ ಮಾಡಿ ಹಿಂತಿರುಗದೆ ಹೋಗಿಬಿಡುತ್ತಾರೆ.

ಆದರೆ ಆ ವ್ಯಕ್ತಿ ಮಾಡಿದ ಸತ್ಕರ್ಮ ಮಾತ್ರ ಸದಾ ಅವನ ಬೆಂಬಿಡದೆ ಇರುತ್ತದೆ. ಆದರೆ ಆ ವ್ಯಕ್ತಿ ಜೀವಂತನಾಗಿರುವಾಗ ಅದರ ಕಡೆ ಗಮನವನ್ನೇ ಕೊಡುವುದಿಲ್ಲ. ಗತಿತಪ್ಪಿ ಹೋಗುವಾಗ ಸತಿ ಸುತರೂ ಬರುವುದಿಲ್ಲ. ಧನ-ಧಾನ್ಯದಿಂದಲೂ ಉಪಯೋಗವಿಲ್ಲ. ಆದ್ದರಿಂದ ನಮ್ಮ ಕೊನೆಗಾಲದಲ್ಲಿ ನಾವು ಗೈದ ಸತ್ಕರ್ಮಗಳೇ ನಮ್ಮ ಬುತ್ತಿ, ನಮ್ಮ ನೆರಳು, ನಮ್ಮ ಬೆಂಬಲಿಗ, ನಮ್ಮ ಸಂಗಡಿಗ. ✻



ಒಂಬತ್ತನೆಯ ಶತಮಾನದಲ್ಲಿ
ಜೀವಿಸಿದ್ದ ಮಹಾನ್
ಭಾರತೀಯ ಇಂಜಿನಿಯರ್

ಅನ್ನದಾತನಾದ ಸುಯ್ಯ

ಹರಿದತ್ತ ವೇದಾಲಂಕಾರ

ಕಾಶ್ಮೀರವನ್ನು ಭೂತಲದ ಸ್ವರ್ಗ ಎಂದು ಕರೆಯುವುದಿದೆ. ಆದರೆ ಝೇಲಮ್ ನದಿಗೆ ಮಹಾಪೂರ ಬಂದು ಪ್ರತಿ ವರ್ಷ ಇಂತಹ ಸ್ವರ್ಗವೂ ನರಕಸದೃಶವಾಗುತ್ತಿತ್ತು. ಅದೇ ಕಾಲಕ್ಕೆ ಭಾರತದಲ್ಲಿ ಅತಿ ದೊಡ್ಡ ಸಿಹಿ ನೀರಿನ ಸರೋವರವಾದ ಮಹಾಪದ್ಮ ಸರೋವರವೂ ಕ್ರಮೇಣವಾಗಿ ವ್ಯಾಪಿಸುತ್ತಾ ಸರೋವರದ ಅಂಚಿನಲ್ಲಿದ್ದ ಹೊಲಗಳನ್ನು ವ್ಯಾಪಿಸಿಬಿಡುತ್ತಿದ್ದುದರಿಂದ ಕೃಷಿ ಯೋಗ್ಯವಾದ ಭೂಮಿ ದಿನೇದಿನೇ ಕುಗ್ಗಿ ಹೋಗಿ ಮೇಲಿಂದ ಮೇಲೆ ಬರಗಾಲ ಬೀಳುತ್ತಿತ್ತು. ಎಷ್ಟು ಚಿಂತಿಸಿದರೂ ಇದರ ಪರಿಹಾರ ರಾಜಾ ಅವಂತಿವರ್ಮನಿಗಾಗಲಿ (೮೫೫- ೮೮೩ ಇಸವಿ) ಅವನ ಮಂತ್ರಿಗಾಗಲಿ ಹೊಳೆಯುತ್ತಿರಲಿಲ್ಲ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಸುಯ್ಯನೆಂಬ ಕಾಶ್ಮೀರಿ ತರುಣ, "ಇದರ ಪರಿಹಾರ ನನಗೆ ಗೊತ್ತಿದೆ. ಆದರೆ ಅದನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಸೌಲಭ್ಯಗಳಿಲ್ಲ. ನಾನಾದರೂ ಏನು ಮಾಡಲಿ?" ಎಂದು ಹೇಳಿಕೊಂಡು ಓಡಾಡುತ್ತಿದ್ದ. ಈತನೇನೋ ಹುಚ್ಚ; ಇವನನ್ನು ಯಾರು ನಂಬಿಯಾರು? ಎಂದು ಜನ ಅವನ ಮಾತುಗಳನ್ನು ಗಣನೆಗೆ ತಂದುಕೊಳ್ಳುತ್ತಿರಲಿಲ್ಲ. ಹೀಗಾಗಿ ಪಂಡಿತರ ಗೋಷ್ಠಿಗಳಲ್ಲಿ ಅವನು ತನ್ನ ಮಾತುಗಳನ್ನು ಸಮರ್ಥಿಸಿದರೂ ಆತನ ಮಾತುಗಳಿಗೆ ಏನೂ ಬೆಲೆ ಬರುತ್ತಿರಲಿಲ್ಲ.


ಇದಕ್ಕೆ ಕಾರಣವೂ ಇತ್ತು. ಸುಯ್ಯನ ಜಾತಿಯಾಗಲಿ ಕುಲಗೋತ್ರಗಳಾಗಲಿ ಯಾರಿಗೂ ಗೊತ್ತಿರಲಿಲ್ಲ. ಸಯ್ಯಾಳೆಂಬ ಹೊಲೆಯವಳು ಕಸ ಗುಡಿಸುತ್ತಿದ್ದಾಗ ದಾರಿಯ ಬದಿಯಲ್ಲಿ ಮಣ್ಣಿನ ಮಡಿಕೆಯಲ್ಲಿ ಅದೇ ತಾನೆ ಜನಿಸಿದ ಮಗುವನ್ನು ಬಿಟ್ಟುಹೋದದ್ದನ್ನು ಕಂಡಳು. ಮಗುವು ನೋಡಲು ಬಹು ಮುದ್ದು ಮುದ್ದಾಗಿದ್ದುದರಿಂದ ಅವಳು ಈ ಅನಾಥ ಮಗುವನ್ನು ತಂದು ಸಾಕಿದ್ದಳು. ಸುಯ್ಯನಿಗೆ ಈ ಹೆಸರು ಬಂದಿದ್ದು ಹೀಗೆ.

ಸಮಾಜದಲ್ಲಿ ಮೇಲು ಕೀಳೆಂಬ ಭಾವನೆ ಪ್ರಬಲವಾಗಿದ್ದಾಗ ನಿಮ್ನವರ್ಗಕ್ಕೆ ಸೇರಿದವನೊಬ್ಬನ ಮಾತುಗಳಿಗೆ ಜನ ಕಿವಿಗೊಡದಿರುವುದು ಸ್ವಾಭಾವಿಕವಾಗಿಯೇ ಇತ್ತು. ಆದರೆ ಅವನು ನೀಚಕುಲದಲ್ಲಿ ಹುಟ್ಟಿದ್ದು ಸಮಾಜದ ಶೋಚನೀಯ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಾಣುವ ಅವಕಾಶವನ್ನು ಸುಯ್ಯನಿಗೆ ಒದಗಿಸಿ ಕೊಟ್ಟಿತ್ತು. ಹೀಗಾಗಿ ಮಹಾಪೂರವನ್ನು ನಿಯಂತ್ರಿಸಿ ರಾಜ್ಯದಲ್ಲಿ ಸುಭಿಕ್ಷೆ ನೆಲಸುವಂತೆ ಮಾಡಬೇಕೆಂಬ ಲವಲವಿಕೆ ಚಿಕ್ಕಂದಿನಿಂದಲೂ ಅವನಲ್ಲಿತ್ತು. ಆದರೆ ಕಾಲವಿನ್ನೂ ಪಕ್ವವಾಗಿರಲಿಲ್ಲ.

ಜನರು ಆತನ ಮಾತುಗಳನ್ನು ನಂಬದಿರುವುದಕ್ಕೆ ಇನ್ನೊಂದು ಕಾರಣವಿತ್ತು. ಕಾಶ್ಮೀರದಲ್ಲಿ ಉಳಿದೆಲ್ಲ ನದಿಗಳಲ್ಲಿಯೂ ಮಹಾಪೂರ ಬರುವುದಕ್ಕೆ ಮಹಾಪದ್ಮ ಸರೋವರವೇ ಕಾರಣ ಎಂದು ಕಲ್ಹಣನು 'ರಾಜತರಂಗಿಣಿಯ'

ಯಲ್ಲಿ ಹೇಳಿದ್ದಾನೆ. ಲಲಿತಾದಿತ್ಯ ಮುಕ್ತಾಪೀಡನು ಎಂಟನೆಯ ಶತಮಾನದಲ್ಲಿ ಮಹಾಪೂರವನ್ನು ನಿಯಂತ್ರಿಸಲು ಪ್ರಯತ್ನಿಸಿ ಸ್ವಲ್ಪ ಮಟ್ಟಿಗೆ ಮಾತ್ರ ಸಫಲನಾಗಿದ್ದ. ಆದರೆ ಜಯಾಪೀಡನಂತಹ ಅಸಮರ್ಥ ಪ್ರಭುಗಳು ಕಾಶ್ಮೀರವನ್ನಾಳುತ್ತಿದ್ದಾಗ ಪ್ರವಾಹ ಮತ್ತೆ ಪ್ರಬಲವಾಗಿ ಫಲವತ್ತಾದ ಭೂಮಿಯನ್ನೂ ಬೆಳೆಯನ್ನೂ ಕೊಚ್ಚಿಕೊಂಡು ಹೋಗತೊಡಗಿ ಮತ್ತೆ ದುರ್ಭಿಕ್ಷ ತಲೆದೋರಲಾರಂಭಿಸಿತು. ಬೆಲೆಗಳು ಏರತೊಡಗಿ ಇನ್ನೂರೈವತ್ತು ದೀನಾರುಗಳಿಗೆ ನಾಲ್ಕು ಮಣಗಳಂತೆ ಮಾರಾಟವಾಗುತ್ತಿದ್ದ ಧಾನ್ಯ ಸಾವಿರ ದೀನಾರುಗಳಿಗೂ ದೊರಕದಂತಾಯಿತು.

ಕೃಷಿಯೋಗ್ಯ ಭೂಮಿಯನ್ನು ವಿಸ್ತರಿಸಿ ಪ್ರವಾಹವನ್ನು ತಡೆಗಟ್ಟಿ. ಹೀಗೆ ತಡೆಗಟ್ಟಿದ ನೀರನ್ನು ಕೃಷಿಯೋಗ್ಯ ಭೂಮಿಗೆ ಅಗತ್ಯವಾದ ಪ್ರಮಾಣದಲ್ಲಿ ಒದಗಿಸಿದರೆ ಮಾತ್ರ ಈ ಭೀಷಣ ಪರಿಸ್ಥಿತಿಯನ್ನು ಸುಗಮಗೊಳಿಸಬಹುದಾಗಿತ್ತು. ಇಂತಹ ಜಟಿಲ ಸಮಸ್ಯೆಯನ್ನು ಸುಯ್ಯನೆಂಬ ಸಾಮಾನ್ಯ ಮನುಷ್ಯ ಬಗೆಹರಿಸುವನೆಂದರೆ ಜನ ನಂಬಬಹುದೆ?



ವಿತಸ್ತಾ ಹಾಗು ಸಿಂಧುವಿನ ಸಂಗಮ
(ಸ್ಟೈನ್ ಅವರ ನಕ್ಷೆಯನಾಧರಿಸಿ)

ಕೊನೆಗೆ ಗುಪ್ತಚಾರರ ಮುಖಾಂತರ ಸುಯ್ಯನ ವೃತ್ತಾಂತ ರಾಜಾ ಅವಂತಿವರ್ಮನ ಕಿವಿಗೆ ಬಿತ್ತು. ಅವನು ಸುಯ್ಯನನ್ನು ಕರೆಸಿ ಅವನ ಯೋಜನೆಯನ್ನು ಕೇಳಿ ತುಂಬಾ ಪ್ರಭಾವಿತನಾದ. ಅದನ್ನು ಕಾರ್ಯಗತಗೊಳಿಸಲು ಸಹಾಯವಾಗಲೆಂದು ರಾಜಕೋಶದಿಂದ ಸಾಕಷ್ಟು ಸಂಖ್ಯೆಯಲ್ಲಿ ಸ್ವರ್ಣಮುದ್ರೆಗಳನ್ನು ಕೊಟ್ಟ.

'ರಾಜತರಂಗಿಣಿ'ಯು ಹೇಳುವ ಹಾಗೆ ಆತ ಶ್ರೀನಗರದ ದಕ್ಷಿಣಕ್ಕಿರುವ ಮಾಡವ ರಾಜ್ಯದ ನಂದನ ಎಂಬಲ್ಲಿಗೆ ಆ ಸ್ವರ್ಣ-ಮುದ್ರೆಗಳನ್ನು ತೆಗೆದುಕೊಂಡು ಹೋಗಿ ಅಲ್ಲಿನ ನದಿಯಲ್ಲಿ ಸಾವಿರಾರು ಸ್ವರ್ಣಮುದ್ರೆಗಳನ್ನು ಸುರಿದ. ಬಳಿಕ ಶ್ರೀನಗರದ ಉತ್ತರದಲ್ಲಿರುವ ಕ್ರಮರಾಜ್ಯದ ಯಕ್ಷದರಕ್ಕೆ ಹೋಗಿ ಅಲ್ಲಿನ ವಿತಸ್ತಾ ನದಿಯಲ್ಲಿ ಸ್ವರ್ಣಮುದ್ರೆ

ಗಳನ್ನು ಮನಸ್ಸಿಗೆ ಬಂದಂತೆ ಬೀಸಾಡಿದ. ಆವನ ಈ ವಿಕ್ಷಿಪ್ತ ವರ್ತನೆಯಿಂದ ಸುಯ್ಯನೊಬ್ಬ ಹುಚ್ಚನೆನ್ನುವುದರಲ್ಲಿ ರಾಜ-ಪರಿವಾರದವರಿಗೆ ಏನೂ ಸಂಶಯವುಳಿಯಲಿಲ್ಲ. ಅವರು ಅವಂತಿವರ್ಮನ ಬಳಿಗೆ ಹೋಗಿ, "ಏನು ಸ್ವಾಮಿ, ಹುಚ್ಚನೊಬ್ಬನ ಮಾತನ್ನು ಕೇಳಿ ಮೋಸ ಹೋದಿರಲ್ಲಾ, ನಾವು ಮೊದಲೆ ಹೇಳಿರಲಿಲ್ಲವೆ?" ಎಂದು ತಮಾಷೆ ಮಾಡಿದರು.

ಆದರೆ ಸುಯ್ಯನ ವರ್ತನೆ ತಾವು ಭಾವಿಸಿದ ಹಾಗೆ ವಿಕ್ಷಿಪ್ತವಾಗಿರದೆ ಜಾಣತನದ್ದಾಗಿದೆಯೆಂಬುದು ಬೆಳಕಿಗೆ ಬರಲು ಹೆಚ್ಚು ವೇಳೆ ಹಿಡಿಯಲಿಲ್ಲ. ವಿತಸ್ತಾ ನದಿಯ ಎರಡೂ ಬದಿಗಳಲ್ಲೂ ಪರ್ವತಶ್ರೇಣಿ ಹಬ್ಬಿದ್ದು ಶಿಖರಗಳಿಂದ ಉರುಳಿದ ಕಲ್ಲುಬಂಡೆಗಳು ಪ್ರವಾಹದ ದಿಕ್ಕನ್ನೇ ಬದಲಿಸಿದ್ದರಿಂದ ನೀರು ಮಹಾಪದ್ಮ ಸರೋವರದಲ್ಲಿ ಹರಿಯುತ್ತಿತ್ತು. ಸುಯ್ಯನು ನದಿಯಲ್ಲಿ ಸ್ವರ್ಣಮುದ್ರೆಗಳನ್ನು ಒಗೆದ ಸುದ್ದಿ ಮೊದಲೆ ಬರಗಾಲ ಪೀಡಿತರಾದ ಜನರಿಗೆ ತಿಳಿಯುವುದೇ ತಡ, ಅವರು ಸಾವಿರಗಟ್ಟಳೆಯಲ್ಲಿ ಅಲ್ಲಿಗೆ ಧಾವಿಸಿಬಂದು ಕಲ್ಲುಬಂಡೆಗಳನ್ನು ನದಿಮಾರ್ಗದಿಂದ ಸರಿಸಿ ಕೆಳಗೆ ಸಿಕ್ಕಿಬಿದ್ದ ಸ್ವರ್ಣಮುದ್ರೆಗಳನ್ನು ಹೆಕ್ಕಿ ತೆಗೆಯಲಾರಂಭಿಸಿದರು. ಫಲವಾಗಿ ಕೆಲವೇ ದಿನಗಳಲ್ಲಿ ವಿತಸ್ತಾ ನದಿಯು ಯಾವ ಅಡೆತಡೆಗಳೂ ಇಲ್ಲದೆ ಸ್ವಾಭಾವಿಕವಾದ ದಿಸೆಯಲ್ಲಿಯೆ ಹರಿಯತೊಡಗಿತು.

ಆಗ ಸುಯ್ಯನು ಸಾಕಷ್ಟು ಕಾರ್ಮಿಕರನ್ನು ನಿಯಮಿಸಿ ಕೇವಲ ಒಂದು ವಾರದ ಅವಧಿಯಲ್ಲೇ ಒಂದು ಅಣೆಕಟ್ಟನ್ನು ತಾತ್ಕಾಲಿಕವಾಗಿ ನಿರ್ಮಿಸಿದ. ಬಳಿಕ ಅಣೆಕಟ್ಟಿನ ಆಚೆ ಬದಿಯ ಪ್ರವಾಹಮಾರ್ಗದಲ್ಲಿನ ಅಡೆತಡೆಗಳನ್ನೆಲ್ಲಾ ತೆಗಿಸಿ ಶಿಖರಗಳಿಂದ ಕೆಳಗುರುಳುವ ಬಂಡೆಗಳನ್ನು ತಡೆಯಲು ನದಿಯ ಎರಡೂ ಬದಿಗಳಲ್ಲಿ ಒಡ್ಡುಗಳನ್ನು ಕಟ್ಟಿಸಿದ. ಇದಾದ ನಂತರ ಅಣೆಕಟ್ಟನ್ನು ಕಳಚಿ ನದಿಯು ಮುಕ್ತವಾಗಿ ಹರಿಯುವಂತೆ ಮಾಡಿದ.

ಚಿರಕಾಲ ಬಂಧಿತವಾಗಿದ್ದ ನದಿಯು ತನ್ನ 'ಪತಿ'ಯನ್ನು (ಸಮುದ್ರ) ಕೂಡಿಕೊಳ್ಳಲು ಅತೀವ ಉತ್ಕಂಠಿತವಾಗಿ ಹರಿಯತೊಡಗಿತು ಎಂದು ಕಲ್ಹಣನು ಬರೆದಿದ್ದಾನೆ. (ರಾಜತರಂಗಿಣಿ ೫. ೯೩) ಹೀಗಾದದ್ದರಿಂದ ದಂಡೆಯನ್ನು ಮೀರಿ ಬದಿಯಲ್ಲಿನ ಫಲವತ್ತಾದ ಭೂಮಿಯನ್ನು ಆಕ್ರಮಿಸಿದ ನೀರು ವೇಗವಾಗಿ ಹರಿದು ಜಲಾವೃತವಾಗಿದ್ದ ಭೂಮಿ ಮತ್ತೆ ಕೃಷಿಯೋಗ್ಯವಾಯಿತು.

ಅನಂತರ ಆವನು ನದಿಯ ಸುತ್ತಮುತ್ತಲಿನ ಪ್ರದೇಶದಲ್ಲೆಲ್ಲ ಸಂಚರಿಸಿ ಮಹಾಪೂರ ಬಂದಾಗ ನೀರು ಸ್ವಾಭಾವಿಕ ಪಾತ್ರವನ್ನು ಮೀರಿ ಹರಿಯುವ ಸ್ಥಾನಗಳನ್ನೆಲ್ಲಾ ಗುರುತಿಸಿದ ಬಳಿಕ ಅಲ್ಲಲ್ಲಿ ಕಾಲುವೆಗಳನ್ನೂ ಕೆರೆಗಳನ್ನೂ ನಿರ್ಮಿಸಿ ಈ ಹೆಚ್ಚಾದ ನೀರು ವ್ಯರ್ಥವಾಗದೆ ಹೊಲಗಳಿಗೆ ಪೂರೈಕೆಯಾಗುವಂತೆ ವ್ಯವಸ್ಥೆಗೊಳಿಸಿದ.

ಅವನು ಮಾಡಿದ ಮೂರನೆಯ, ಮಹಾಪೂರವನ್ನು ತಡೆಯುವಲ್ಲಿ ಮಾಡಿದ ಕಾರ್ಯವೆಂದರೆ ವಿತಸ್ತಾ ಹಾಗೂ ಸಿಂಧು ನದಿಗಳ ಸಂಗಮಸ್ಥಾನವನ್ನು ಬದಲಿಸಿದ್ದು. ಮೊದಲು ಇವೆರಡೂ ನದಿಗಳು ತ್ರಿಗ್ರಾಮಿಯೆಂಬಲ್ಲಿ ವೈನ್ಯಸ್ವಾಮಿಯ ಮಂದಿರದ ಹತ್ತಿರ ಕೂಡುತ್ತಿದ್ದವು. ಸುಯ್ಯನು ಇವೆರಡೂ ನದಿಗಳ ಪ್ರವಾಹದ ದಿಕ್ಕನ್ನು ಬದಲಿಸಿ ಅವು ಮುಂದೆ ಐದು ಮೈಲು ದೂರದಲ್ಲಿ ಶ್ರೀನಗರದ ಬಳಿ ಪರಿಹಾಸಪುರದಲ್ಲಿ ಕೂಡಿಕೊಳ್ಳುವಂತೆ ಮಾಡಿದ.

ಇದು ತುಂಬಾ ಮಹತ್ವದ್ದಾಗಿತ್ತು. ಮಂತ್ರತಂತ್ರಗಳನ್ನು ಬಲ್ಲ ಹಾವಾಡಿಗ ಸುಲಭವಾಗಿ ಹಾವನ್ನು ವಶಪಡಿಸಿಕೊಳ್ಳುವಂತೆಯೆ ಸುಯ್ಯನು ತನ್ನ ಇಚ್ಛಾನುಸಾರವಾಗಿ ನದಿಗಳ ಪ್ರವಾಹವನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದ ಎಂದು ಕಲ್ಹಣನು ಹೇಳಿದ್ದಾನೆ.

ಬೇಸಿಗೆಯಲ್ಲಿ ಹಿಮಕರಗುವುದರಿಂದ ಮಹಾಪದ್ಮ ಸರೋವರದಲ್ಲಿ ಮಹಾಪೂರ ಬರುತ್ತಿದ್ದರೆ ಮಳೆಗಾಲದಲ್ಲಿ ವಿತಸ್ತಾ ನದಿಯು ರಭಸದಿಂದ ನುಗ್ಗಿ ಸುತ್ತಲಿನ ಪ್ರದೇಶವನ್ನೆಲ್ಲಾ ನೀರಿನಲ್ಲಿ ಮುಳುಗಿಸಿ

ಬಿಡುತ್ತಿತ್ತು. ಮಹಾಪದ್ಮ ಸರೋವರವನ್ನು ಇನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದರಿಂದ ಮಾತ್ರ ಹೀಗಾಗುವುದನ್ನು ತಪ್ಪಿಸಬಹುದಾಗಿತ್ತು. ಆದ್ದರಿಂದ ಸುಯ್ಯನು ಸರೋವರದ ಸುತ್ತಲಿನ ಪ್ರದೇಶವನ್ನೆಲ್ಲ ಸೂಕ್ಷ್ಮವಾಗಿ ನಿರೀಕ್ಷಿಸಿದನಲ್ಲದೆ ಸರೋವರ ಎಲ್ಲಿ ಹೆಚ್ಚು ಆಳವಾಗಿದೆಯೆಂಬುದನ್ನು ಕಂಡುಕೊಂಡ. ಅನಂತರ ವಿತಸ್ತಾ ನದಿಯು ಗುಂಟ ಏಳು ಯೋಜನಗಳ ವರೆಗೆ (ಒಂದು ಯೋಜನವೆಂದರೆ ಸುಮಾರು ನಾಲ್ಕುವರೆ ಮೈಲುಗಳು) ಕಲ್ಲಿನ ಕಟ್ಟೆಯನ್ನು ಕಟ್ಟಿ ನದಿಯು ಪ್ರವಾಹ ಸರೋವರ ಹೆಚ್ಚು ಆಳವಿದ್ದಲ್ಲಿಗೆ ಹೊರಳುವಂತೆ ಮಾಡಿದ. ಹೀಗೆ ಸಂಗ್ರಹವಾದ ನೀರು ಶರವೇಗದಿಂದ ಇನ್ನೊಂದು ಬದಿಯಿಂದ ಹೊರಗೆ ಹರಿದು ಹೋಗುವಂತೆ ವ್ಯವಸ್ಥೆಗೊಳಿಸಿದ.

ಹೀಗೆ ಮಹಾಪದ್ಮ ಸರೋವರವನ್ನೂ ವಿತಸ್ತಾ ನದಿಯನ್ನೂ ತಹಬಂದಿಗೆ ತಂದಿದ್ದರಿಂದ ನೀರಿನಲ್ಲಿ ಮುಳುಗಿದ ನೆಲ ಮತ್ತೆ ಒಣವಾಯಿತು. ಒಕ್ಕಲಿಗರು ಅಲ್ಲಿ ಭರದಿಂದ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಆದರೂ ನೆರೆಹಾವಳಿಯ ಭಯ ಸ್ವಲ್ಪ ಮಟ್ಟಿಗೆ ಇದ್ದೇ ಇತ್ತು. ಸುಯ್ಯನು ಮಹಾಪದ್ಮ ಸರೋವರದ ಆಸುಪಾಸಿನ ಹಳ್ಳಿಗಳ ಸುತ್ತ ವೃತ್ತಾಕಾರವಾಗಿ ಒಡ್ಡುಗಳನ್ನು ಕಟ್ಟಿಸಿ ಮಹಾಪೂರದ ಬಗೆಗಿದ್ದ ಅಲ್ಪ ಭಯವನ್ನೂ ನಿವಾರಿಸಿದ.

ವಿತಸ್ತಾ ಹಾಗೂ ಮಹಾಪದ್ಮ ಸರೋವರಗಳಿಂದ ಬೇಸಿಗೆಯಲ್ಲೂ ಮಳೆಗಾಲದಲ್ಲೂ ನೆರೆಹಾವಳಿಯುಂಟಾಗುತ್ತಿದ್ದರೆ ಕಾಶ್ಮೀರದ ಇನ್ನೂ ಕೆಲವು ಭಾಗಗಳಲ್ಲಿ ಮಳೆಯೇ ಆಗುತ್ತಿರಲಿಲ್ಲ. ಸುಯ್ಯನು ಆ ಭಾಗಗಳಲ್ಲೆಲ್ಲ ಸಂಚರಿಸಿ ಅಲ್ಲಿಯ ಮಣ್ಣನ್ನು ಪರೀಕ್ಷಿಸಿದ.

ಬೆಳೆಗಳನ್ನು ಬೆಳೆಯಲು ಯಾವ ಪ್ರಕಾರದ ಭೂಮಿಗೆ ಎಷ್ಟು ಪ್ರಮಾಣದಲ್ಲಿ ನೀರು ಬೇಕಾಗುವುದೆಂಬುದನ್ನು ತನ್ನ ಸ್ವಂತ ಅನುಭವದ ಮೇಲೆ ಲೆಕ್ಕಹಾಕಿದ. ಅನಂತರ ವಿತಸ್ತಾ, ಅನೂಲಾ ಹಾಗೂ ಇತರ ಕೆಲವು ನದಿಗಳಿಂದ ಕಾಲುವೆಗಳನ್ನು ತೋಡಿ ನೀರಿಲ್ಲದ ಆ ಹಳ್ಳಿಗಳಿಗೆ ವರ್ಷವಿಡೀ ಅವಶ್ಯಕ ಪ್ರಮಾಣದಲ್ಲಿ ನೀರಿನ ಪೂರೈಕೆಯಾಗುವಂತೆ ಮಾಡಿದ.

ಕೆಲವೇ ವರ್ಷಗಳಲ್ಲಿ ಬಂಜರು ಭೂಮಿಗಳೂ ಹಚ್ಚಹಸುರಾದ ಬೆಳೆಗಳಿಂದ ಕಳಕಳಿಸತೊಡಗಿದವು. ಬರಗಾಲ ಕಾಶ್ಮೀರದಿಂದ ದೂರವಾಯಿತು. ಸಮೃದ್ಧಿಯ ಕಾಲ ಮೊದಲಾಯಿತು. ಈ ಮೊದಲು ಅಲ್ಲಿ ಚೆನ್ನಾಗಿ ಫಸಲು ಬಂದಾಗಲೂ ಆಹಾರ ಧಾನ್ಯಗಳ ಬೆಳೆ ನಾಲ್ಕು ಮಣದ ಚೀಲಕ್ಕೆ ಇನ್ನೂರು ದೀನಾರುಗಳಿಗಿಂತ ಕಡಿಮೆ ಇಳಿಯುತ್ತಿರಲಿಲ್ಲ. ಆದರೆ ಸುಯ್ಯನ ಈ ಕ್ರಮಗಳಿಂದಾಗಿ ಉತ್ಪಾದನೆ ಅಗಾಧವಾಗಿ ಹೆಚ್ಚಿ, ಆಹಾರ ಧಾನ್ಯಗಳ ಬೆಲೆ ಮೊದಲಿನ ಆರು ಪಟ್ಟು ಕಡಿಮೆಯಾಯಿತು ಎಂದು ಕಲ್ಹಣನು ಹೇಳುತ್ತಾನೆ.

ಆಗ ಕಾಶ್ಮೀರಕ್ಕೆ ಎಂಥಾ ಸಮೃದ್ಧಿಯ ಕಾಲ ಬಂತೆನ್ನುವುದನ್ನು 'ಧ್ವನ್ಯಾಲೋಕ'ದ ಕರ್ತೃವಾದ ಆನಂದವರ್ಧನನ ಸಂರಕ್ಷಕನೂ



"ಎಲ್ಲಾ ಸರಿ ಅಕ್ಕಾ, ಇವರು ಯಾರು ಅನ್ನೋದು ಗೊತ್ತಾಗಿಲ್ಲವಲ್ಲಾ."

'ಇಂದ್ರನ ಹಾಗೆ ಪೃಥ್ವಿಯನ್ನು ಪರಿಪಾಲಿಸುವವನೂ' ಆದ ಅವಂತಿವರ್ಮನ ಆಳ್ವಿಕೆಯು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಅವನು ಶ್ರೀನಗರದಿಂದ ಹದಿನೈದು ಮೈಲುಗಳಷ್ಟು ದೂರದಲ್ಲಿ ವಿತಸ್ತಾ ನದಿಯ ಆಗ್ನೇಯ ದಿಕ್ಕಿನಲ್ಲಿ ಒಂದು ಸುಂದರವಾದ ತಾಣವನ್ನು ಆರಿಸಿ ಅವಂತಿಪುರವೆಂಬ ಹೆಸರಿನಲ್ಲಿ ಹೊಸ ರಾಜಧಾನಿಯನ್ನು ಕಟ್ಟಿಸಿದ. ಅಲ್ಲಿ ಅವನು ಕಟ್ಟಿಸಿದ ಅವಂತೀಶ್ವರ, ಅವಂತಿಸ್ವಾಮಿ, ತ್ರಿಪುರೇಶ್ವರ ಭೂತೇಶ ಹಾಗೂ ವಿಜಯೇಶರ ಮಂದಿರಗಳ ಭಗ್ನಾವಶೇಷಗಳಲ್ಲಿ ಕಂಡುಬರುವ ವಾಸ್ತುಶಿಲ್ಪ ಅವುಗಳನ್ನು ನಿರ್ಮಿಸಿದ ರಾಜನ ಆರ್ಥಿಕ ಸಮೃದ್ಧಿಯನ್ನು ಎತ್ತಿ ತೋರಿಸುತ್ತದೆ ಎಂದು ಆರೆಲ್ ಸ್ಟೈನ್ ಹೇಳಿದ್ದಾರೆ.

ಸುಯ್ಯನ ಸಾಧನೆಯಿಂದಾಗಿ ತನ್ನ ಜೀವಿತ ಕಾಲದಲ್ಲಿಯೇ ಅವನಿಗೆ ಅಭೂತಪೂರ್ವವಾದ ಮಾನಸನ್ಮಾನಗಳು ಸಿಕ್ಕಿದವು. ಅನೇಕ ಅವತಾರಗಳಲ್ಲಿ ದೇವರು ಮಾಡಿದ್ದನ್ನು ಒಂದೇ ಜನ್ಮದಲ್ಲಿ ಮಾಡಿ ಮುಗಿಸಿದ ವ್ಯಕ್ತಿ ಎಂದಾತ ಹೊಗಳಲ್ಪಟ್ಟ. ಅವಂತಿವರ್ಮನ ಪುಣ್ಯಬಲದಿಂದ ಅನ್ನದಾತನಾದ ಸಾಕ್ಷಾತ್ ಭಗವಂತನೆ ಸುಯ್ಯನ ರೂಪದಲ್ಲಿ ಜನ್ಮವೆತ್ತಿದ್ದಾನೆ. ಕಾಶ್ಮೀರದ ಜನ್ಮದಾತರಾದ ಕಶ್ಯಪ, ಸಂಕರ್ಷಣರೂ ಕಾಶ್ಮೀರದ ಮೇಲೆ ಈತ ಮಾಡಿದಷ್ಟು ಉಪಕಾರ ಮಾಡಿಲ್ಲ ಎಂದು ಕಲ್ಹಣನು ಹೇಳುತ್ತಾನೆ. (ರಾಜತರಂಗಿಣಿ ೫.೭೨)

ವಿಷ್ಣುವು ವರಾಹಾವತಾರವನ್ನು ತಾಳಿ ಜಲಾವೃತವಾದ ಪೃಥ್ವಿಯನ್ನು ಮೇಲೆತ್ತಿದ. ಪರಶುರಾಮನ ರೂಪದಲ್ಲಿ ಕ್ಷತ್ರಿಯರನ್ನು ಸಂಹರಿಸಿ ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿತ್ತ. ರಾಮನ ಅವತಾರ ತಾಳಿ ಸೇತುಬಂಧನವನ್ನು ಮಾಡಿದ. ಕೃಷ್ಣಾವತಾರ ತಾಳಿ ಕಾಳಿಮರ್ದನವನ್ನು ಮಾಡಿದ. ಆದರೆ ವಿಷ್ಣುವು ನಾಲ್ಕು ಅವತಾರಗಳಲ್ಲಿ ಸಾಧಿಸಿದ್ದನ್ನು ಸುಯ್ಯ ಒಂದೇ ಜನ್ಮದಲ್ಲಿ ಸಾಧಿಸಿ ತೋರಿಸಿದ. ಅವನು ವಿತಸ್ತಾ ನದಿ ಹಾಗೂ ಮಹಾಪದ್ಮ ಸರೋವರಗಳಿಂದ ಜಲಾವೃತವಾದ ಭೂಮಿಯನ್ನು ಪುನಃ ಕೃಷಿಯೋಗ್ಯವಾಗಿ ಮಾಡಿ ಕಾಶ್ಮೀರವನ್ನು ಉದ್ಧರಿಸಿದ. ಫಲವತ್ತಾದ ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಿದ. ವಿತಸ್ತಾ ನದಿಯನ್ನು ತಹಬಂದಿಗೆ ತರುವುದಕ್ಕೆ ತೀರದ ಗುಂಟ ಒಡ್ಡುಗಳನ್ನು ಕಟ್ಟಿದ. ಹಾಗೂ ಮಹಾಪದ್ಮ ಸರೋವರದ ಜಲವನ್ನು ಸರಿಯಾಗಿ ನಿಯಂತ್ರಿಸುವ ಮೂಲಕ ಅದರಲ್ಲಿರುವ ನಾಗನನ್ನು ದಮನಗೊಳಿಸಿದ ಎಂದು ಕಲ್ಹಣನು ಬರೆದಿದ್ದಾನೆ.

ಸುಯ್ಯನು ಹೀಗೆ ಕೀರ್ತಿಶಿಖರವನ್ನೇರಿ ಉಚ್ಛ್ರಾಯದಲ್ಲಿದ್ದಾಗಲೂ ಅನಾಥ ಶಿಶುವಾಗಿ ಬೀದಿಯಲ್ಲಿ ಬಿದ್ದ ತನ್ನನ್ನು ತಂದು ಸಾಕಿ ಸಲಹಿದ ಮಾತೆಯನ್ನು ಮರೆಯಲಿಲ್ಲ. ಆತ ಅವಳ ಹೆಸರಿನಲ್ಲಿ 'ಸುಯ್ಯಾಸೇತು'ವೆಂಬ ಸೇತುವೆಯನ್ನು ಕಟ್ಟಿಸಿದ. 'ಸುಯ್ಯಾಕುಂಡಲ'ವೆಂಬ ಗ್ರಾಮವನ್ನು ನಿರ್ಮಿಸಿ ಬ್ರಾಹ್ಮಣರಿಗೆ ಧಾರೆಯೆರೆದ. ಸುಯ್ಯನು ಮಾಡಿದ ಉಪಕಾರವನ್ನು ನೆನೆದು ಕಾಶ್ಮೀರದ ಜನತೆ ಮಹಾಪದ್ಮ ಸರೋವರದಿಂದ ವಿತಸ್ತಾ ನದಿಯು ಹೊರಡುವಲ್ಲಿ ಸುಯ್ಯಪುರವೆಂಬ ಬಸ್ತಿಯನ್ನು ನಿರ್ಮಿಸಿತು. ಅಲ್ಲಿ ಯಾರೂ ಮೀನುಗಳನ್ನು ಹಿಡಿಯದಂತೆ ಹಾಗೂ ವನ್ಯಮೃಗಗಳ ಬೇಟೆಯನ್ನು ಆಡದಂತೆ ನಿರ್ಬಂಧಿಸಿ ಅಭಯಾರಣ್ಯಗಳನ್ನು ನಿರ್ಮಿಸುವ ಪ್ರಾಚೀನ ಪರಂಪರೆಯನ್ನು ಪುನರುಜ್ಜೀವಿತಗೊಳಿಸಿತು. ಒಂಬತ್ತನೆಯ ಶತಮಾನದಲ್ಲಿ ಜೀವಿಸಿದ್ದ ಮಹಾನ್ ಭಾರತೀಯ ಇಂಜನಿಯರನೊಬ್ಬನ ಸ್ಮಾರಕವಾಗಿ ಸುಯ್ಯಪುರ ಇಂದಿಗೂ ಕಾಶ್ಮೀರದಲ್ಲಿ ನಿಂತಿದೆ. ಅದನ್ನಿಂದು ಸೋಪುರವೆಂದು ಅಪಭ್ರಂಶ ರೂಪದಲ್ಲಿ ಕರೆಯಲಾಗುತ್ತಿದೆ.

ಕೃಪೆ : 'ನವನೀತ' ಹಿಂದಿ ಡೈಜೆಸ್ಟ್

ಒಂದು ದಶಕದ ಸಾಧನೆ

ಕನ್ನಡ ಅಧ್ಯಯನ ಸಂಸ್ಥೆ

ಜಿ. ಎಸ್. ಭಟ್ಟ

ಕನ್ನಡಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ ಒಂದೇ ಕಡೆ ನಡೆಯಬೇಕೆಂಬ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ (೧೯೬೬) ಸ್ಥಾಪಿತವಾದ ಕನ್ನಡ ಅಧ್ಯಯನ ಸಂಸ್ಥೆಗೆ ಡಿಸೆಂಬರ ೮-೧೯೭೬ರಂದು ಹತ್ತು ವರ್ಷಗಳು ತುಂಬುತ್ತವೆ. ಕನ್ನಡ ಭಾಷೆಯ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿರಿಸಿಕೊಂಡ ಪ್ರೊ. ದೇಜಗೌ ಅಧ್ಯಯನ ಸಂಸ್ಥೆಯ ಸ್ಥಾಪಕರು. ಅವರೇ ಅದರ ಪ್ರಥಮ ನಿರ್ದೇಶಕರೂ ಆಗಿದ್ದರು. ಕಳೆದ ಹತ್ತು ವರ್ಷಗಳಲ್ಲಿ ಈ ಸಂಸ್ಥೆಯ ಸಾಧನೆ ಕನ್ನಡ ಸಾಹಿತ್ಯ ಮತ್ತು ಭಾಷೆಗಳ ಇತಿಹಾಸದಲ್ಲೇ ಅತ್ಯಂತ ಮಹತ್ತರವಾದ ಅಧ್ಯಾಯ. ಕನ್ನಡಕ್ಕೆ ಕರ್ನಾಟಕದಲ್ಲೆಲ್ಲ ಯೋಗ್ಯ ಸ್ಥಾನಮಾನ ದೊರೆಯಬೇಕೆಂದು ಜನಜಾಗೃತಿ ಉಂಟಾದಾಗಲೇ ಈ ಸಂಸ್ಥೆ ಪ್ರಾರಂಭವಾದುದು ಒಂದು ಸುಯೋಗ.

ಈ ಸಂಸ್ಥೆಯನ್ನು ಉದ್ಘಾಟಿಸುವಾಗ ಆದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ಡಾ. ಕೆ. ಎಲ್. ಶ್ರೀಮಾಲಿ ಹೀಗೆ ನುಡಿದಿದ್ದರು: "ಕನ್ನಡ ಅಧ್ಯಯನ ಸಂಸ್ಥೆ ಈ ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಶೋಧನೆ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ನಂದಾದೀಪವಾಗಲಿ!"

ಸಂಸ್ಥೆಯ ಪ್ರಥಮ ನಿರ್ದೇಶಕರಾಗಿದ್ದ ಪ್ರೊ. ದೇಜಗೌ ಇದೇ ಸಂದರ್ಭದಲ್ಲಿ ಮಾತನಾಡುತ್ತ, "ಈ ಸಂಸ್ಥೆ ಭೂಮಿ ಬಂಧುರ ವಿಶ್ವಯವಾಗಿ ಕರ್ನಾಟಕ ಸಾಹಿತ್ಯ-ಸಂಸ್ಕೃತಿ-



ಸಂಗ್ರಹದಲ್ಲಿಯ ಸೂತ್ರದ ಬೊಂಬೆ

ಗಳ ಆಧಾರ ಕೇಂದ್ರವಾಗಿ ಜ್ಞಾನ ಸ್ಫೂರ್ತಿಗಳ ಕಲಶಾವೇರಿಯಾಗಿ, ಕನ್ನಡಿಗರ ಪವಿತ್ರ ಯಾತ್ರಾ ಸ್ಥಾನವಾಗಿ ನಾಡಿನ ಪುಣ್ಯವೇ ಸಾಕಾರಗೊಂಡಂತೆ ವಿಕಾಸಗೊಳ್ಳುವುದರಲ್ಲಿ ಎಳ್ಳನಿತೂ ಸಂಶಯವಿಲ್ಲ."

ಮೈಸೂರಿನ ಮಾನಸಗಂಗೋತ್ರಿಯ ಹೃದಯದಲ್ಲಿ ಭವ್ಯವಾದ ಸ್ವಂತ ಕಟ್ಟಡ ಹೊಂದಿರುವ ಕನ್ನಡ ಅಧ್ಯಯನ ಸಂಸ್ಥೆ ಕನ್ನಡದ ಹಲವಾರು ಚಟುವಟಿಕೆಗಳ ಕೇಂದ್ರ. ಬೋಧನ, ಪ್ರಕಟನೆ, ಸಂಪಾದನೆ, ಭಾಷಾಂತರ ಮೊದಲಾದ ಹಲವು ಚಟುವಟಿಕೆಗಳು ಇಲ್ಲಿ ನಡೆಯುತ್ತಿವೆ.

ಕನ್ನಡ, ಜನಪದ, ದಕ್ಷಿಣ, ಭಾರತೀಯ ಅಧ್ಯಯನ, ಭಾಷಾವಿಜ್ಞಾನ—ಇವುಗಳಲ್ಲಿ ಎಂ. ಎ. ತರಗತಿಗಳೂ, ಭಾಷಾಂತರ ಡಿಪ್ಲೋಮಾ, ಭಾಷಾಂತರದಲ್ಲಿ ಎಂ. ಫಿಲ್, ಜಾನಪದ ಡಿಪ್ಲೋಮಾ, ಭಾರತೀಯ ಸಾಹಿತ್ಯದಲ್ಲಿ ಡಿಪ್ಲೋಮಾಗಳು ನಡೆಯುತ್ತಿವೆ. ಇದಲ್ಲದೆ ಕನ್ನಡದಲ್ಲಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳಿವೆ. ರಷ್ಯನ್, ಅಮೇರಿಕನ್, ಜರ್ಮನ್ ಮುಂತಾದ ವಿದೇಶೀ ವಿದ್ಯಾರ್ಥಿಗಳು ಕನ್ನಡ ಭಾಷೆ ಕಲಿಯಲು ಇಲ್ಲಿಗೆ ಬರುತ್ತಾರೆ. ಪ್ರತಿ ವರ್ಷವೂ ಪೆನ್ಸಿಲ್ವೇನಿಯಾದ ವಿದ್ಯಾರ್ಥಿಗಳ ಒಂದು ತಂಡ ಇಲ್ಲಿ ಬರುವುದು ಸಾಮಾನ್ಯ. ಇಲ್ಲಿಗೆ ಬರುವ ವಿದೇಶೀ ವಿದ್ಯಾರ್ಥಿಗಳು ಕರ್ನಾಟಕದ ಸಂಸ್ಕೃತಿ, ಭಾಷೆ, ಸಾಹಿತ್ಯ ಮತ್ತು ಚರಿತ್ರೆಗಳ ಅಧ್ಯಯನ ನಡೆಸುತ್ತಾರೆ. ಅವರ ಉಪಯೋಗಕ್ಕಾಗಿ ಇತ್ತೀಚೆಗೆ (೧೯೭೭) ಭಾಷಾ ಪ್ರಯೋಗಾಲಯವೊಂದನ್ನು ಸ್ಥಾಪಿಸಲಾಗಿದೆ.

ಜನಪದವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ವ್ಯವಸ್ಥೆ ಮಾಡಿದ ಪ್ರಥಮ ವಿಶ್ವವಿದ್ಯಾನಿಲಯ—ಮೈಸೂರು ವಿಶ್ವವಿದ್ಯಾನಿಲಯ. ಅದರಂತೆ ೧೯೬೮ರಲ್ಲಿ ಅಧ್ಯಯನ ಸಂಸ್ಥೆ ಪ್ರಾರಂಭಿಸಿದ ಜನಪದ ವಸ್ತುಸಂಗ್ರಹಾಲಯ ದೇಶ ವಿದೇಶಿಯರ ಮೆಚ್ಚಿಕೆಯ ಪ್ರಶಂಸೆಗೆ ಪಾತ್ರವಾಗಿದೆ. ಪ್ರೊ. ದೇಜಗೌ, ಡಾ. ಹಾ. ಮಾ. ನಾಯಕ, ಡಾ. ಜೀ. ಶಂ. ಪ ಮತ್ತು ಪಿ. ಆರ್. ತಿಪ್ಪೇಸ್ವಾಮಿ ಅವರ ಅವಿರತ ಶ್ರಮದ ಫಲವಾಗಿ ಈಗ ಈ ವಸ್ತು ಸಂಗ್ರಹಾಲಯ ವಿಶೇಷ ಆಕರ್ಷಣೀಯ ಕೇಂದ್ರವಾಗಿದೆ. ಜನಪದ ವಸ್ತುಗಳ ಸಂಗ್ರಹಾಲಯ ವಿಶೇಷ ಆಕರ್ಷಣೀಯ ಕೇಂದ್ರವಾಗಿದೆ. ಜನಪದ ವಸ್ತುಗಳ ಸಂಗ್ರಹದ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯಂತೆ ಅಧ್ಯಯನ ಸಂಸ್ಥೆ ಈಗಾಗಲೇ ೩೫ ಪುಸ್ತಕಗಳನ್ನು ಪ್ರಕಟಿಸಿದೆ. ಕನ್ನಡ ಲೇಖಕರ ಮತ್ತು ಕಲಾವಿದರ ಹಸ್ತಪ್ರತಿಗಳು, ಅವರು ಬಳಸಿದ ಸಾಮಗ್ರಿಗಳನ್ನು ಸಾಹಿತ್ಯಿಕ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ.

ಕನ್ನಡದಲ್ಲಿ ವಿಶ್ವಕೋಶ ಪ್ರಕಟಿಸುವ ೨೫ ಲಕ್ಷ ರೂ. ಗಳ ಯೋಜನೆಯೊಂದನ್ನು ಮೈಸೂರು ಸರ್ಕಾರ ಬಹು ಹಿಂದೆಯೇ ಒಪ್ಪಿಕೊಂಡು ಕಾರ್ಯೋನ್ಮುಖವಾಗಿತ್ತು. ಆದರೆ ಸರಕಾರದ ಒಂದು ಇಲಾಖೆಯಲ್ಲಿದ್ದ ವಿಶ್ವಕೋಶದ ಪ್ರಕಟನೆ ತುಂಬ ವಿಳಂಬವಾಗಿದ್ದುದನ್ನು ಮನಗಂಡ ಸರಕಾರ ಈ ಬೃಹತ್ ಯೋಜನೆಯನ್ನು ಅಧ್ಯಯನ ಸಂಸ್ಥೆಗೆ ಒಪ್ಪಿಸಿಕೊಟ್ಟಿತು (೧೯೬೮). ಒಂದು ವರ್ಷದೊಳಗಾಗಿ ಪ್ರಥಮ ಸಂಪುಟವನ್ನು (ನವೆಂಬರ್-೧-೧೯೬೯) ಪ್ರಕಟಿಸಿದ ಕೀರ್ತಿ ಅಧ್ಯಯನ ಸಂಸ್ಥೆಯದಾಗಿದೆ. ೧೪ ಸಂಪುಟಗಳ ಸಾಮಾನ್ಯ ವಿಶ್ವಕೋಶ ಯೋಜನೆಯಲ್ಲಿ ಈಗಾಗಲೇ ೮ ಸಂಪುಟಗಳು ಪ್ರಕಟವಾಗಿದ್ದು ೯ನೆಯದು ಅಚ್ಚಿಗೆ ಹೋಗಿದೆ.

ಕನ್ನಡ ವಿಷಯ ವಿಶ್ವಕೋಶ ಯೋಜನೆಗೆ ಸರ್ಕಾರ ಒಂದು ಕೋಟಿ ರೂ. ಒಪ್ಪಿಗೆ ನೀಡಿದ್ದು, ಸುಮಾರು ೩೦ ಸಂಪುಟಗಳ ವಿಷಯ ವಿಶ್ವಕೋಶ ಯೋಜನೆಯಲ್ಲಿ ಮೊದಲಿಗೆ ೫ ಸಂಪುಟಗಳನ್ನು ಪ್ರಕಟಿಸಲು ಸಿದ್ಧತೆ ಆಗಿದ್ದು, ಇದರಲ್ಲಿ ಪ್ರಥಮ ಸಂಪುಟ 'ಕರ್ನಾಟಕ' ಈ ವರ್ಷ ಪ್ರಕಟವಾಗಲಿದೆ. ವಿಶ್ವಕೋಶದಂಥ ಬೃಹತ್ ಆಕರ ಗ್ರಂಥವನ್ನು ಅಧ್ಯಯನ ಸಂಸ್ಥೆ ಪ್ರಕಟಿಸುತ್ತಿದೆ.

ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ ಕನ್ನಡ ಮಾಧ್ಯಮ ಮತ್ತು ಆಡಳಿತ ಭಾಷೆಯಾಗಲು ನೆರವಾಗುವಂತೆ ಗ್ರಂಥಗಳನ್ನು ಸಿದ್ಧಗೊಳಿಸಿ ಪ್ರಕಟಿಸಿದೆ. ಬೇರೆ-ಬೇರೆ ಭಾಷೆಗಳಲ್ಲಿಯ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರಿಸುವುದು ಈ ವಿಭಾಗದ ಯೋಜನೆಗಳಲ್ಲಿ ಒಂದಾಗಿದೆ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣದರ್ಶನ ಮಹಾಕಾವ್ಯವನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿ ಸದ್ಯವೇ ಪ್ರಕಟಿಸಲಿದೆ. ಕನ್ನಡ ಲೇಖಕರು ಮತ್ತು ಅವರ ಕೃತಿಗಳನ್ನು ಕನ್ನಡೇತರರಿಗೆ ಪರಿಚಯ ಮಾಡಿಸುವ ಉದ್ದೇಶದಿಂದ 'ಕನ್ನಡ ಲೇಖಕರು ಮತ್ತು ಅವರ ಕೃತಿಗಳು' ಎಂಬ ಮಾಲೆಯನ್ನು ಇಂಗ್ಲಿಷಿನಲ್ಲಿ ಪ್ರಾರಂಭಿಸಲಾಗಿದ್ದು, ಈ ಮಾಲೆಯಲ್ಲಿ ಇಲ್ಲಿಯವರೆಗೆ ೭ ಪುಸ್ತಕಗಳು ಪ್ರಕಟವಾಗಿವೆ. ಮಹಾಭಾರತ ಮತ್ತು ಧರ್ಮಶಾಸ್ತ್ರಗಳ ಇತಿಹಾಸವನ್ನು ಭಾಷಾಂತರಿಸಿದ್ದು, ಸದ್ಯವೇ ಪ್ರಕಟಿಸಲಿವೆ. ಪಠ್ಯಪುಸ್ತಕಮಾಲೆಯಲ್ಲಿ ಅಧ್ಯಯನ ಸಂಸ್ಥೆಯ ಸಾಧನೆ ಹಿರಿದು- ಇಲ್ಲಿಯವರೆಗೂ ಮಾಲೆಯಲ್ಲಿ ಅದು ೧೭೨ ಪುಸ್ತಕಗಳನ್ನು ಪ್ರಕಟಿಸಿದೆ.

ವಿಶ್ವವಿದ್ಯಾನಿಲಯಂದ ಧನಸಹಾಯ ಆಯೋಗದ ನೆರವಿನಿಂದ ಹರಿದಾಸ ಸಾಹಿತ್ಯದ ಸಂಗ್ರಹ ಪ್ರಕಟಣ ಕಾರ್ಯವನ್ನು ಕೈಗೊಂಡಿದ್ದು ಈ ಮಾಲಿಕೆಯಲ್ಲಿ ಈಗಾಗಲೇ ಮೂರು ಪುಸ್ತಕಗಳು ಪ್ರಕಟವಾಗಿವೆ.

ದಿವಂಗತ ಬಿ. ಎಲ್. ರೈಸ್ ಪ್ರಕಟಿಸಿದ್ದ ಎಪಿಗ್ರಾಫಿಯಾ ಕರ್ನಾಟಿಕವನ್ನು ಪರಿಷ್ಕರಿಸಿ ಪುನರ್ಮುದ್ರಿಸುವ ಯೋಜನೆಯನ್ನು ಕೈಗೊಂಡಿದ್ದು ಈಗಾಗಲೇ ನಾಲ್ಕು ಸಂಪುಟಗಳು ಪ್ರಕಟವಾಗಿವೆ.

ಪ್ರಾಚೀನ ಹಸ್ತಪ್ರತಿಗಳು, ತಾಳೆಗರಿಯ ಗ್ರಂಥಗಳನ್ನು ಸಂಗ್ರಹಿಸಿ ಅವನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯವನ್ನು ಅಧ್ಯಯನ ಸಂಸ್ಥೆ ಕೈಗೊಂಡಿದೆ. ಈ ಮಾಲೆಯಲ್ಲಿ ಈಗಾಗಲೇ ೪೯ ಪುಸ್ತಕಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯಂತೆ ಈಗಾಗಲೇ ೩ ಸಂಪುಟಗಳನ್ನು ಹೊರತರಲಾಗಿದೆ.

ಗಾಂಧೀ, ಲೆನಿನ್ನರ ಶತಮಾನೋತ್ಸವ ಸಂದರ್ಭದಲ್ಲಿ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ಅಧ್ಯಯನ ಸಂಸ್ಥೆ ಏರ್ಪಡಿಸಿತ್ತು. ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಗ್ರಂಥಭಂಡಾರದಲ್ಲಿ ೧೫ ಸಾವಿರಕ್ಕೂ ಮಿಕ್ಕ ಉಪಯುಕ್ತ ಗ್ರಂಥಗಳಿವೆ. ಕನ್ನಡದಲ್ಲಿ ವಿಜ್ಞಾನ ಬೋಧಿಸಲು, ಬರೆಯಲು ತರಬೇತಿ ನೀಡುವ ಶಿಬಿರಗಳನ್ನು ಪ್ರತಿವರ್ಷ ಬೇಸಿಗೆಯಲ್ಲಿ ಏರ್ಪಡಿಸಲಾಗುತ್ತಿದೆ.

ಬಿ. ಎಂ. ಶ್ರೀ. ಅವರ ಎಲ್ಲ ಕೃತಿಗಳನ್ನು ಪುನರ್ಮುದ್ರಿಸುವ ಯೋಜನೆ ಅಧ್ಯಯನ ಸಂಸ್ಥೆಯ ಎದುರಿದೆ. ಇಲ್ಲಿಯ ವರೆಗೂ ೩೦೦ ಪುಸ್ತಕಗಳನ್ನು ಈ ಸಂಸ್ಥೆ ಪ್ರಕಟಿಸಿದೆ. ಬಯಲು ಜನಪದ ವಸ್ತುಸಂಗ್ರಹಾಲಯವೊಂದನ್ನು ಸಂಸ್ಥೆ ಪ್ರಾರಂಭಿಸಲಿದೆ.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕರು ಭಾರತದ ಕೆಲವೇ ಸುಪ್ರಸಿದ್ಧ ಭಾಷಾ ಶಾಸ್ತ್ರಜ್ಞರಲ್ಲಿ ಒಬ್ಬರು. ಅವರು ಕನ್ನಡ ಮತ್ತು ಜಾನಪದ ವಿದ್ವಾಂಸರೂ ಆಗಿದ್ದಾರೆ. ಕನ್ನಡವೇ ಉಸಿರೆಂದು ಅಹರ್ನಿಶಿ ದುಡಿಯುತ್ತಿರುವ ಅವರಿಗೆ ಬೆಂಬಲವಾಗಿ ಉತ್ಸಾಹಿ ಕಾರ್ಯಕರ್ತರು ಅಧ್ಯಯನ ಸಂಸ್ಥೆಯಲ್ಲಿದ್ದಾರೆ. ಅವರಲ್ಲಿರುವ ಪ್ರಾಮಾಣಿಕ ದುಡಿಮೆ, ಶ್ರದ್ಧೆ, ಕನ್ನಡದ ಬೆಳವಣಿಗೆಯ ಬಗ್ಗೆ ಇರುವ ಕಳಕಳಿ ಇವುಗಳಿಂದ ಕನ್ನಡ ಅಧ್ಯಯನ ಸಂಸ್ಥೆ ಕನ್ನಡದ ಡಿಂಡಿಮವನ್ನು ಬಾರಿಸುವ ಜ್ಞಾನ ದೇಗುಲವಾಗಿದೆ. ✻

ಕವನಗಳು

ಹೊಲೆಯರು

ಮೌನ
ಇವರ ಮಾತೃಭಾಷೆ.
ಉದ್ಯೋಗ?
ಪ್ರತಿ ತಿಂಗಳು ಮೊದಲನೆಯ ತಾರೀಖು
ಸಂಬಳ ಪಡೆಯುವುದು.
ಹೆಸರು?
ಹೆಸರಿನಲ್ಲೇನಿದೆ!
ಗುಲಾಬಿಯನ್ನು ಯಾವ ಹೆಸರಿನಿಂದ
ಕರೆದರೂ ಅದರ ಕಂಪು ಬೇರೆಯಾಗುವುದೆ?
ವಿಶೇಷ ಅರ್ಹತೆಗಳು?
ತಿನ್ನುವುದು; ತಿನ್ನಲಿಕ್ಕೆ ಕೊಟ್ಟರಷ್ಟೇ
ಕೆಲಸ ಮಾಡಿಕೊಡುವುದು.
ತಿಂದುದನ್ನು
ಪಚನ ಮಾಡಿಕೊಳ್ಳುವುದು
ವಿಳಾಸ?
ಸರಕಾರಿ ಕಚೇರಿಗಳಲ್ಲಿ, ಆಸ್ಪತ್ರೆಗಳಲ್ಲಿ,
ಕಾರಖಾನೆಗಳಲ್ಲಿ ಮುನಸಿಪಾಲಟಿ
ಕಾರ್ಪೊರೇಶನ್ನುಗಳಲ್ಲಿ ಬ್ಯಾಂಕುಗಳಲ್ಲಿ,
ಉದ್ಯೋಗ ವಿನಿಮಯ ಕಾರ್ಯಾಲಯಗಳಲ್ಲಿ,
ಇಂಟರ್‌ವ್ಯೂ ಸಮಿತಿಗಳಲ್ಲಿ, ಪ್ರೊಮೋಶನ್
ಕೊಡುವ ಕಮಿಟಿಗಳಲ್ಲಿ, ದಿನಾಲೂ
ಓಡಾಡುವ
ಸಿಟಿ ಬಸ್ಸುಗಳಲ್ಲಿ, ಶಾಲೆ ಕಾಲೇಜುಗಳಲ್ಲಿ,
ಇವರೇ ತುಂಬಿದ್ದಾರೆ.
ಇವರು ತಿನ್ನುವ ಹೊಲಸು
ಹಂದಿಗಳು ತಿನ್ನುವ
ಹೊಲಸಿಗಿಂತಲೂ
ಹೊಲಸು!
ಇವರನ್ನು ನೋಡಿದಾಗಲೆಲ್ಲ
ಅಣ್ಣ ಬಸವಣ್ಣನವರು ಹೇಳಿದ ವಚನ
ನೆನಪಾಗುತ್ತದೆ,
"ಹೊಲಸು ತಿಂಬುವನೇ ಹೊಲೆಯ."
ಈ ಹೊಲೆಯರು ಹಿಂದುಳಿದವರಲ್ಲ;
ಇವರಿಂದ ದೇಶ ಹಿಂದುಳಿಯಬೇಕಾಗಿದೆ.
ಈ ಹೊಲೆಯರು
ತಮ್ಮ ಉದ್ಧಾರವನ್ನು ತಾವು
ಸಾಕಷ್ಟು ಮಾಡಿಕೊಂಡಿದ್ದಾರೆ.
ಇವರ ಪೆತ್ತಿಯನ್ನು ಒಡೆದು
ಈಗ ದೇಶದ ಉದ್ಧಾರ ಮಾಡಬೇಕಾಗಿದೆ.

ರಾಘವೇಂದ್ರ ಕುಲಕರ್ಣಿ

ಸೂರ್ಯಾಸ್ತ

ಮತ್ತ ಸಿರಿವಂತರ ಕೆಂಪಡೆಯ ಕಣ್ಣಿನಂತೆ
ಸಮತೆ ಸಿಗದೆ ಉರಿದೆದ್ದ ಬಡವರ
ಕೆಂಪು ಮುಖದಂತೆ
ಜೇ. ಭ. ರು ಹೀರುವ ಸರ್ವರ
ರಕ್ತದ ಬಣ್ಣ ತಳೆದು ಹೊರಟಿಹ ಸೂರ್ಯ
ಬೆಲೆಯೇರಿಕೆಯ ಕೆಂಡದಲಿ
ಕೆಂಪು ಮುಷ್ಕರಗಳ ಬೇಗೆಯಲಿ
ಅನೀತಿ ಅಸ್ಪೃಷ್ಟಿಗಳ ಉರಿಯಲಿ
ಎಲ್ಲ ರಂಗಗಳಲ್ಲಿಯ ರಾಜಕೀಯದ
ದಾವಾನಿಲದಲಿ ಸುಟ್ಟು ಕರಕಾದ
ಜನರ ಮನದಂತೆ ಕರ್ರಗಾಗುತ್ತ ಮುಗಿಲು
ಸೂರ್ಯ ಮರೆಯಾದಂತೆ.

—ಜಯಸುತೆ

ತಂಬಾಕು-ಸುಣ್ಣ ಸೇವಿಸುವವರ ಗಮನಕ್ಕೆ

ನಿಮ್ಮ ಧ್ವನಿ ಒಮ್ಮೆಲೇ ಕುಗ್ಗಿದರೆ
ನಿಮ್ಮ ವಸಡಿಯಲ್ಲಿ ಹುಣ್ಣಾದರೆ
ನಿಮ್ಮ ಕಿವಿಯಲ್ಲಿ ಸೂಲಿಯಾದರೆ
ನಿಮ್ಮ ಗಂಟಲನಾಳದಲ್ಲಿ ತೊಂದರೆಯಾಗುತ್ತಿದ್ದರೆ

ಕ್ಯಾನ್ಸರ್ ಮಹಾರೋಗ

ಪ್ರಾರಂಭಾವಸ್ಥೆಯಲ್ಲಿದೆಯೆಂಬುದನ್ನು ನೀವು ತಿಳಿದುಕೊಳ್ಳಬೇಕು

ಎಲೆ ಅಡಿಕೆಯನ್ನು ತಂಬಾಕದೊಡನೆ ಜಗಿಯಲೆಂದು ಬಾಯಿಯಲ್ಲಿ ಅವುಗಳನ್ನಿಟ್ಟುಕೊಂಡು ಮಲಗುವವರಿಗೆ ಈ ರೋಗ ತಗಲುವ ಸಂಭವ ಹೆಚ್ಚಿದೆ. ಅಂಥವರು ಕೂಡಲೇ ಎಚ್ಚರಾಗಬೇಕು.

ಆದರೂ ಅಧೀರರಾಗುವ ಕಾರಣವಿಲ್ಲ. ಪ್ರಾರಂಭಿಕ ಅವಸ್ಥೆಯಲ್ಲಿ ಕ್ಯಾನ್ಸರ್ ನೂರಕ್ಕೆ ನೂರರಷ್ಟು ಗುಣಪಡಿಸಬಹುದು. ನೀವು ಕೂಡಲೇ ಡಾಕ್ಟರರನ್ನು ಕಾಣಿರಿ.

ಕ್ಯಾನ್ಸರ್ ರೋಗದಿಂದ ಇಂಥವರು ಮುಕ್ತರು ಎಂದೂ ಹೇಳಲು ಸಾಧ್ಯವಿಲ್ಲ. ಬೇರೆ ಅವಯವಗಳಲ್ಲಿಯೂ ಅದು ಕಾಣಿಸಿಕೊಳ್ಳಬಹುದು.

ಕ್ಯಾನ್ಸರ್ ರೋಗದ ಉಪಚಾರ ಅತಿ ವೆಚ್ಚದ್ದು. ಆದ್ದರಿಂದಲೇ ಇದರಿಂದ ಬಳಲುವ ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಉಪಚರಿಸಲು ಹುಬ್ಬಳ್ಳಿಯ ಅಮರಗೋಳದ ಬಳಿ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆಯನ್ನು ಲಕ್ಷಗಟ್ಟಲೆ ರೂಪಾಯಿಗಳಿಂದ ಕಟ್ಟಿಸಲು ಯೋಜಿಸಲಾಗಿದೆ.

ಇಂಥ ಸತ್ಕಾರ್ಯಕ್ಕಾಗಿ ಮುಕ್ತಹಸ್ತದಿಂದ ಕಾಣಿಕೆ ನೀಡಿರಿ. ನಿಮ್ಮ ವಂತಿಕೆ ಬೇಗ ಬರಲಿ

ಡಾ. ಆರ್. ಬಿ. ಪಾಟೀಲ

ಚೇರಮನ್

ಕ್ಯಾನ್ಸರ್ ಶುಶ್ರೂಷಾ ಹಾಗೂ ಸಂಶೋಧನೆ ಸಂಸ್ಥೆ, ವಿದ್ಯಾನಗರ, ಹುಬ್ಬಳ್ಳಿ.

SPACE DONATED BY:

THE SANDUR MANGANESE & IRON ORES LTD., SANDUR

(Dist: BELLARY)

రంగుల



ರಾಹುಲ

"ನನಗೇಕೋ ಜಗತ್ತೆಲ್ಲಾ ಬಿಕೋ ಅನ್ನಿಸುತ್ತಿದೆ. ನನಗೆ ಎಲ್ಲಿಯೂ ನೆಲೆಯೇ ಇಲ್ಲ ಅಂತನಿಸುತ್ತಿದೆ–" ಇದು ರಾಹುಲನ ಮೂಲಭೂತ ಸಮಸ್ಯೆಯಾದರೆ; ಅರ್ಥವಿಲ್ಲದೆ ಜೀವನ ಇರಲಾರದೆ– ಇದು ರಾಹುಲನ ಅಸ್ವಸ್ಥತೆಯ ಅನ್ವೇಷಣೆಯ ಒಂದು ಅಂಗವಾಗಿ, "ನನಗಾಗಿ ನಾನು ಜೀವಿಸಬೇಕು. ಹಾಗೆ ಜೀವಿಸಲಿಕ್ಕೆ ಇಲ್ಲಿ ಸಾಧ್ಯವಿಲ್ಲವಾಗಿದೆ, ಈಗಿದ್ದಂತೆ ನನ್ನ ಜೀವನವನ್ನು ಸೀಮಿತಗೊಳಿಸಿ ಒಂದು ನಿರ್ದಿಷ್ಟ ವರ್ತುಳದಲ್ಲಿ ಇದ್ದು ಬಿಡಬಹುದು ನಿಜ- ಹಾಗೆ ಸಾವಿರಾರು ಜನರಿರುತ್ತಾರೆ. ಆದರೆ ನನಗದು ಅಭ್ಯಾಸವಿಲ್ಲ. ನನ್ನದು ಶಾಪಗ್ರಸ್ತ ಆತ್ಮ– ಅದಕ್ಕೆ ಶಕ್ಯಂತರ ಪರಿಸರ ಸಿಕ್ಕರೆ ಮಾತ್ರ ವಿಕ್ಷೇಪದಿಂದ ಮುಕ್ತನಾಗಿ– ಸುಖ ಜಾರಲಿ, ಸಮಾಧಾನ ಸಾಗಲಿ ಕನಿಷ್ಟ ಒಂದು ರೀತಿಯ ಶಾಂತಿಯನ್ನಾದರೂ ಅನುಭವಿಸಬಹುದು–" ಇದು ರಾಹುಲನ ಇಡೀ ಮಾನಸಿಕ ಅವಸ್ಥೆಯನ್ನು ಅಭಿವ್ಯಕ್ತಗೊಳಿಸುವುದೇ ವಿಕ್ಷೇಪ ಕಾದಂಬರಿಯ ವಸ್ತು. ಈ ಕಾದಂಬರಿಯ ಲೇಖಕರಾದ ಶ್ರೀ ಶಾಂತಿನಾಥ ದೇಸಾಯಿ ಅವರು ಈಗಾಗಲೇ ಕನ್ನಡಿಗರಿಗೆ ಸುಪರಿಚಿತ.

ರಾಹುಲನಿಗೆ ಧರ್ಮೋಪದೇಶ ಕೇಳುವುದೆಂದರೆ ಬಹಳ ಉತ್ಸಾಹ. ಚಿಕ್ಕಂದಿನಲ್ಲಿ, ಕಾನ್ವೆಂಟ್ ಸ್ಕೂಲಿನಲ್ಲಿದ್ದಾಗ, ಪ್ರತಿ ರವಿವಾರ ಚರ್ಚಿಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗ ವಹಿಸುತ್ತಿದ್ದ. ತಾಯಿಯಿದ್ದಾಗ ಮನೆಯಲ್ಲಿ ಆಗಾಗ್ಗೆ ಕೇಳಿ ಬರುತ್ತಿದ್ದ ಭಟ್ಟರ ಮಟಗುಟ್ಟುವ ತಿಳಿಯದ ಸಂಸ್ಕೃತ ಶ್ಲೋಕಕ್ಕಿಂತ ಅರ್ಥಪೂರ್ಣ ತಿಳಿಯುವ ಇಂಗ್ಲಿಷ್ ಪ್ರಾರ್ಥನೆಗಳು ಹೆಚ್ಚು ರಮ್ಯವೆನಿಸಿದ್ದುವು. ಎಲ್ಲಕ್ಕೂ ಹೆಚ್ಚು ಮೋಜಿನ ವಿಷಯವೆಂದರೆ– ಪಾಪ ನಿವೇದನೆ. ಫಾದರರ ಮುಂದೆ ಹೇಳಿ ಬಿಟ್ಟರೆ ಆತ್ಮ ಶುದ್ಧವಾಗುವುದೆಂಬ ವಿಲಕ್ಷಣ ವಿಚಾರ. ತಾನೂ ನಿವೇದನೆ ಮಾಡಿ ಒಂದು ರೀತಿಯ ಆನಂದಪಡುತ್ತಿದ್ದ. ನಿವೇದನೆಯಿಂದ ಪಾಪ ಪ್ರವೃತ್ತಿ ಕಡಿಮೆಯಾಗುವುದರ ಬದಲು ನಿವೇದನೆಯಲ್ಲಿ ನಾಟಕೀಯತೆ ತರಲು ಯತ್ನಿಸುವಾಗ ಸುಳ್ಳು ಸೇರಿಸಿ ಹೇಳಿ ತನ್ನಲ್ಲಿರುವ ಸೈತಾನನನ್ನು ಫಾದರ್ ನೋಡಿ ಆಘಾತವಾಗಲೆಂದು ಹೇಳುತ್ತಿದ್ದ. ಒಂದು ಸಾರಿ ಸುಳ್ಳು ಕಂತೆಯನ್ನೇ ಸೇರಿಸಿ ಕೋಲಾಹಲವೆಬ್ಬಿಸಿಬಿಟ್ಟಿದ್ದನು. "ಒಂದು ಸಂಜೆ ಕ್ಲಾಸ್‌ಮೇಟ್ ರೋಜಿಯ ಮನೆಗೆ ಹೋದಾಗ ಅವಳನ್ನುಳಿದು ಯಾರೂ ಇದ್ದಿಲ್ಲ. ರೋಜಿಯೇ ನನ್ನನ್ನು ಮುದ್ದಿಸಿದಳು... ಮುಂದಿನದೆಲ್ಲಾ ಹೇಗೆ ಹೇಳಲಿ, ಫಾದರ್? ನಾನು ಪರ್ವತದ ತುತ್ತ ತುದಿಯಿಂದ ಜಾರಿ ಅಸಹ್ಯವಾದ ಕಣಿವೆಯಲ್ಲುರುಳಿದೆ. ಅಂದಿನಿಂದ ಜೀವನವೇ ಅಸಹ್ಯವಾಗಿದೆ– ಅಭ್ಯಾಸ ಮುಂದೆ ಹೋಗಲೊಲ್ಲದು," ಎಂದು ನಿವೇದಿಸಿದ್ದ. ರೋಜಿ ಮುದ್ದಿಸಿದ್ದು ನಿಜ– ಆದರೆ ಕಣಿವೆಯಲ್ಲಿ ಉರುಳಿದ್ದು ಸುಳ್ಳು. ಫಾದರ್ ರೋಜಿಯನ್ನು ಕರೆಸಿ ವಿಚಾರಣೆಗೆ ಗುರಿಪಡಿಸಿದಾಗ, ಅವಳು ತಾನು ಮಾಡದಿದ್ದುದರ ಸಾಕ್ಷ್ಯ ತೋರಿಸಲು ಲೇಡಿ ಡಾಕ್ಟರರಿಂದ ಸರ್ಟಿಫಿಕೇಟ್ ಒಯ್ದಿದ್ದಳು... ಈ ಎಲ್ಲ ಹಗರಣದಿಂದ ರಾಹುಲ ರೋಜಿಯ

ಸ್ನೇಹ ಕಳೆದುಕೊಂಡಿದ್ದ. ಅವನಿಗೆ ಅವಳು ಬರೆದ ಕೊನೆಯ ಪತ್ರದಲ್ಲಿ, "ನೀನು ನಿರುಪಯೋಗಿ ಮೂರ್ಖ, ಸುಳ್ಳು ಕತೆ ಹೇಳುವ ಹೇಡಿ...ನಿನ್ನ ಮೇಲೆ ನಿಜಕ್ಕೂ ಪ್ರೀತಿಯಿತ್ತು. ಆದರೆ ನಿನ್ನ ಸುಂದರ ಮುಖದ ಹಿಂದೆ ಅಸಹ್ಯವಾದ ಸೇಟನ್ ಕುಳಿತಿದ್ದು ನೋಡಿ ಮನ ರೋಸಿ ಹೋಗಿದೆ, ಇನ್ನೆಂದೂ ನಿನ್ನ ಮುಖ ತೋರಿಸಬೇಡ"ವೆಂದು ಬಯ್ದಿದ್ದಳು.

ಮುಂದೆ ಕಾಲೇಜಿನಲ್ಲಿ ಪಾಪ ನಿವೇದನೆಯ ರೀತಿ ಬದಲಾಯಿತು. ಗೆಳೆಯರ ಮುಂದೆ, ಸಹಾನುಭೂತಿ ತೋರುವ ಪ್ರೊಫೆಸರ ಮುಂದೆ ದೀರ್ಘವಾದ, ಸೂಕ್ಷ್ಮವಾದ ಆತ್ಮವಿಶ್ಲೇಷಣೆ, ಆತ್ಮಪ್ರಶಂಸೆ ಮಾಡುವ ಕಲೆ ರಾಹುಲನಲ್ಲಿ ತಾನೇ ತಾನಾಗಿ ಬೆಳೆಯಿತು. ಇಂಥಾ ಆತ್ಮವಿಶ್ಲೇಷಣೆಯು ಹುಡುಗಿಯರನ್ನು ಆಕರ್ಷಿಸಲು ಒಳ್ಳೆಯ ಸಾಧನವಾಯಿತು. ಆತ ಹ್ಯಾಮ್ಲೆಟ್, ಟ್ರಾಜಿಕ್ ಹೀರೋ ಎಂಬಂತೆ ತನ್ನನ್ನು ವರ್ಣಿಸಿದೊಡನೆ ಯಾವ ಹುಡುಗಿಯ ಮನ ಕರಗಲಿಕ್ಕಿಲ್ಲ? ಹಾಗೆಯೆ ಯಾವ ಹುಡುಗಿ ಅವನ ಜರ್ಜರಿತ ಹೃದಯವನ್ನು ಸಾಂತ್ವನ ಮಾಡಲು ಉದ್ಯುಕ್ತಳಾಗಲಿಕ್ಕಿಲ್ಲ? ಎಷ್ಟೋ ಹುಡುಗರು ಬೆನ್ನು ಹತ್ತಿದ ಮಾಧವಿಯಂತಹ ಹುಡುಗಿಯನ್ನು ಅವನು ಬಲೆಯಲ್ಲಿ ಹಾಕಿಕೊಂಡದ್ದು ತನ್ನ ಕಲಾತ್ಮಕವಾದ ವಿಶ್ಲೇಷಣೆಯಿಂದಲ್ಲವೇ? "ನನ್ನ ತಾಯಿ ದೇವತೆಯಂತಿದ್ದಳು. ಹಾಂ! ನಮ್ಮ ಮನೆಯಲ್ಲಿ ಈಡಿಪಸ್ ಸಂದರ್ಭವಿತ್ತು, ನನಗೂ ನನ್ನ ತಾಯಿಯ ಬಗ್ಗೆ ವಿಪರೀತ ಪ್ರೇಮ. ಅಪ್ಪ ಅವಳನ್ನು ಮುಟ್ಟಿದರೆ ಹೃದಯ ಸಿಡಿಯುತ್ತಿತ್ತು.

"ಮುಂದೆ ಅವಳು ಪ್ರಸೂತಿಯಾಗುವಾಗ ತೀರಿಕೊಂಡದ್ದರಿಂದ ತಂದೆಯೇ ಅವಳ ಮೃತ್ಯುವಿಗೆ ಕಾರಣನೆಂದು ತಿಳಿದು, ಈ ಪಿತೃದ್ವೇಷವೇ ಮುಂದೆ ಎಲ್ಲ ಸಂಪ್ರದಾಯ-ಸಂಸ್ಕಾರ-ರೀತಿ-ರಿವಾಜಗಳ ಬಗ್ಗೆ ದ್ವೇಷವಾಗಿ ರೂಪಾಂತರ ಹೊಂದಿದ್ದರಿಂದ ಕಾನ್ವೆಂಟ್ ಶಿಕ್ಷಣ ಸಮಾಧಾನ ತಂದರೂ ಪೂರ್ಣ ಶಾಂತಿ ಕೊಡಲಿಲ್ಲ." ಈ ರೀತಿಯ ರಸಭರಿತ ಆತ್ಮವಿಶ್ಲೇಷಣೆ ಮಾಡಿದೊಡನೆ ಮಾಧವಿಗೆ 'ಅಹ್, ಜಗತ್ತಿನ ಮಹಾ ದೊಡ್ಡ ದುಃಖವನ್ನು ಅರಗಿಸಿಕೊಂಡ ಒಬ್ಬ ಸುಂದರ ವ್ಯಕ್ತಿ ನನ್ನ ಉಡಿಯಲ್ಲಿ ಬಿದ್ದನಲ್ಲಾ,' ಎಂದು ಆನಂದವಾಗಿತ್ತು. ಇಂಥ ವಿಲಕ್ಷಣ ಮೇಧಾವಿ ಜೊತೆಗೆ ನನ್ನ ಜೀವನ ಇಂಟರೆಸ್ಟಿಂಗ್ ಆಗುವುದಿಲ್ಲವೇ! ಎಂದು ಆತ್ಮಸಂತುಷ್ಟಿ ಹೊಂದಿದ್ದಳು. ಆದರೆ......

ಮಾಧವಿಯನ್ನು ಮದುವೆಯಾಗಬೇಕೆ ಬೇಡವೇ ಎಂಬುದು ರಾಹುಲನ ತಲೆಯಲ್ಲಿ ಕೊರೆಯತೊಡಗಿತ್ತು: ಅದರಲ್ಲೂ ಮಾಧವಿಯ ಮನೆಗೆ ಹೋಗಿದ್ದುಬಂದ ಮೇಲೆ ಅವಳು ಮುಂದೇನಾಗುವಳೆಂಬುದರ ಸಾಕ್ಷಾತ್ಕಾರವಾಗಿತ್ತು. ಲಠ್ಠ ನಿತಂಬಗಳನ್ನು ಮೆತ್ತನೆಯ ಸೋಫಾದಲ್ಲಿ ಇಳಿಬಿಟ್ಟು ಕೀರಲು ಧ್ವನಿಯಲ್ಲಿ ಆಳುಗಳನ್ನು ಕರೆಯುವ, ಅರಳಿವಿಂದುಳಿನ ಸ್ವಸಂತುಷ್ಟ ಹೆಣ್ಣು—ತನ್ನ ಸಮೀಪದಲ್ಲಿಯ ಯಾವ ಮನುಷ್ಯನನ್ನಾದರೂ ತನ್ನ ಆತ್ಮಸಂತುಷ್ಟಿಯ ರಾಕ್ಷಸೀ ಶಕ್ತಿಯಿಂದ ಕೊಂದುಹಾಕಬಲ್ಲ ಮಾಂಸದ ಪರ್ವತ. ಒಂದು ರೀತಿಯ ವೈಪರೀತ್ಯದ ಭೂತ ಅವರ ಮನೆಯಲ್ಲಿ ವಾಸವಾಗಿರುವುದನ್ನು ಕಂಡಿದ್ದ. ಶ್ರೀಮಂತಿಕೆ—ಅದಂತೂ ವಿಪರೀತ! ಮಾಧವಿಯ ತಂದೆ ಕಲ್ಕತ್ತೆಯಲ್ಲಿ—ಇಲ್ಲಿ ಅವಳ ಕಕ್ಕ ಮತ್ತು ಅವಳ ತಾಯಿ! ಅಬ್ಬಾ, ಅವಳ ಕಕ್ಕನೆ ಎಲ್ಲವನ್ನೂ ನುಂಗಬಲ್ಲನೆಂಬ ಆತ್ಮವಿಶ್ವಾಸ, ಅವಳ ಮತ್ತು ಅವಳ ತಾಯಿಯ ಎಲ್ಲವನ್ನೂ ನುಂಗಬಲ್ಲನೆಂಬ ದೇಹ ಸಂತುಷ್ಟಿ. ಪುರುಷ—ಪ್ರಕೃತಿಯ ವಿಪರೀತ ರತಿ! ಮಾಧವಿ ನಿಜವಾಗಿಯೂ ತಂದೆಯ ಮಗಳೋ, ಕಕ್ಕನ ಮಗಳೋ? ಹ್ಯಾಮ್ಲೆಟ್ ನಾಟಕದೊಳಗಿನ ಕಕ್ಕ-ತಾಯಂದಿರ ನೆನಪು.

ಮಾಧವಿಯನ್ನು ಲಗ್ನವಾಗುವುದು. ಹಾಗೇ—ಅವಳು ಒಳ್ಳೆಯ ಹುಡುಗಿ. ಮುಂದೇನಾದರೂ ನಮ್ಮ ಸಂಬಂಧಕ್ಕೆ ಹುಳ ಹತ್ತಿದರೆ, ಸರಿ, ಕತ್ತರಿಸಿ ಬಿಟ್ಟರಾಯಿತು

ಎಂದು ತೊಡಕಾದ ಎಳೆಗಳನ್ನು ಸರಿಪಡಿಸ-ತೊಡಗಿದ.

*

ರಾಹುಲನ ಆತ್ಮವಿಶ್ಲೇಷಣೆಗೆ, ಆತ್ಮ ನಾಟಕಾಭಿನಯಕ್ಕೆ ಒಳ್ಳೆಯ ಪ್ರೇಕ್ಷಕರೆಂದರೆ ಪ್ರೊ॥ ವಿಲಿಯಮ್ಸ್ ಹಾಗೂ ಮಿಸೆಸ್ ವಿಲಿಯಮ್ಸ್. ಅವರಿಬ್ಬರಿಗೂ ರಾಹುಲ ನೆಂದರೆ ದಿಕ್ಕು ಕಾಣದೆ ತೊಳಲಾಡುತ್ತಿರುವ ಭಾರತದ ತರುಣರ ಸುಂದರ ಪ್ರತೀಕ, ಸಂಪ್ರದಾಯ– ಸಂಪ್ರದಾಯಗಳ ತಿಕ್ಕಾಟ-ದಲ್ಲಿ, ಪೂರ್ವ–ಪಶ್ಚಿಮಗಳ ಸಂಕರದಲ್ಲಿ ಮತಿ-ಗೆಟ್ಟ ಸಂವೇದನಾಶೀಲ ಬುದ್ಧಿಜೀವಿ. ವೈಯುಕ್ತಿಕವಾಗಿ ಒಬ್ಬ ಆಕರ್ಷಕ ಸುಂದರ ಇಂಗ್ಲಿಷ್ ಮಾತನಾಡುವ. ಎಲ್ಲರಿಗೂ ಬೇಕಾದವ, ಪ್ರತಿ ಪರೀಕ್ಷೆಯಲ್ಲೂ ಫಸ್ಟ್‌ಕ್ಲಾಸ್ ಗಿಟ್ಟಸುವ, ಕಾಲೇಜಿಗೆ ಕೀರ್ತಿ ತರುವ ವಿದ್ಯಾರ್ಥಿಯಾದ್ದರಿಂದ ಅವರ ಮನೆ ಬಾಗಿಲು ರಾಹುಲನಿಗೆ ಯಾವಾಗಲೂ ತೆರ-ದದ್ದು. ಅಭ್ಯಾಸದಲ್ಲಿಯ ಸಮಸ್ಯೆಗಳು ಹೋಗಲಿ ವೈಯುಕ್ತಿಕ ಸಮಸ್ಯೆಗಳನ್ನು ಅತ್ಯಂತ ಆತ್ಮೀಯವಾಗಿ ಚರ್ಚಿಸುತ್ತಿದ್ದವ ರೆಂದರೆ ವಿಲಿಯಮ್ಸ್ ದಂಪತಿಗಳು. ಅವನಿಗೆ ತಕ್ಕ ಉಪದೇಶ ನೀಡುತ್ತಿದ್ದುದರ ಜೊತೆಗೆ ಎಂಥಾ ಪ್ರಸಂಗ ಬಂದರೂ ಸಹಾಯ ಮಾಡಲೂ ಸಿದ್ಧರಿದ್ದರು. ಇಂದೂ ತನ್ನ ಜೀವನದ ಅಮೂಲ್ಯವಾದ ತೀರ್ಮಾನಕ್ಕಾಗಿ ಅವರ ಬಳಿ ಬಂದಿದ್ದ.

"ಒಂದು ಗಂಭೀರ ಸಮಸ್ಯೆ– ಒಂದು ತೊಡಕು ಸರ್."

"ತೊಡಕು? ಹೃದಯದ ತೊಡಕು ತಾನೇ?" ಪ್ರೊ. ವಿಲಿಯಮ್ಸ್ ತುದಿಗಣ್ಣಿ ನಲ್ಲಿ ನೋಡಿ ನಕ್ಕರು. "ಅದೇ ತೊಡರು ಸರ್. ಅದಕ್ಕೆ ಹೃದಯದ ತೊಡಕೆಂದು ಅನ್ನಬೇಕೆ ಬೇಡವೇ ಎಂಬುದೇ ತೊಡಕಾಗಿದೆ," ಎಂದು ನಾಂದಿ ಹಾಡಿದ.

"ನಾನು ನನ್ನ ಕ್ಲಾಸ್‌ಮೇಟ್ ಮಾಧವಿ ಯನ್ನು ಲಗ್ನವಾದರೆ ನನ್ನ ಉದ್ಧಾರ ವಾಗುವುದೇ ಸರ್?" "ಅದನ್ನು ನಾ ಹೇಗೆ ಹೇಳಬಲ್ಲೆ ರಾಹುಲ? ಅಲ್ಲ ಲಗ್ನಕ್ಕೂ ಉದ್ಧಾರಕ್ಕೂ ಸಂಬಂಧ ಏಕೆ ಹಚ್ಚಿದೆ? ನಿನ್ನ ಉದ್ಧಾರ ನಿನ್ನ ಕೈಯಲ್ಲಿದೆ. ಲಗ್ನ ಅದಕ್ಕೆ ಸಹಾಯ ಮಾಡಬಹುದು. ಒಮ್ಮೊಮ್ಮೆ ಸಹಾಯದ ಬದಲಾಗಿ ಆತಂಕವನ್ನು ತಂದೊಡ್ಡಬಹುದು. ನಿನ್ನ ಉದ್ಧಾರ ನಿನ್ನ ಕೈಯಲ್ಲಿಯೇ!" "ಸರ್, ನನಗೇಕೋ ಈ ಜಗತ್ತೆಲ್ಲಾ ಬಿಕೋ ಎನ್ನಿಸುತ್ತಿದೆ, ನನಗೆ ಎಲ್ಲಿಯೂ ನೆಲೆನೇ ಇಲ್ಲವೇ ಅನ್ನಿಸುತ್ತಿದೆ. ನಾನು ಎಲ್ಲಿಯಾದರೂ ಸರಿಯಾಗಿ ಬೇರು ಬಿಡಬೇಕು ಎಂಬ ಹಂಬಲ ಪ್ರಬಲವಾಗು ತ್ತಿದೆ. ಆದರೆ ನನಗೊಂದು, ನನ್ನದೇ ಒಂದು– ನನ್ನ ಇಡಿ ಆತ್ಮವೇ ಇದೆಯೆಂದು ಹೇಳುವಂಥ ಒಂದು ಕ್ಷೇತ್ರ ಬೇಕಾಗಿದೆ. ಒಂದು ಚಿಕ್ಕ ಮಣ್ಣಿನ ಮಡಕೆಯಾದರೂ ಸರಿ. ಅಷ್ಟೆ ಸಾಕು– ಪ್ರಯೋಗ ಮಾಡಿ ನೋಡಲಿಕ್ಕೆ." ರಾಹುಲನ ಮಾತಿನಲ್ಲಿ ಭಾವಾವೇಶ ತುಂಬಿ ಹರಿಯತೊಡಗಿತು.

"ರಾಹುಲ, ನಿನ್ನದು ಬಹಳ ಅಸ್ವಸ್ಥ ಮನಸ್ಸು– ಬೇರಿಲ್ಲದ ಜೀವ ಆದರೆ ನೀನು ಹುಡುಕುತ್ತಿರುವ– ಪರಿಹಾರ– ಕ್ಷೇತ್ರ– ಮಡಕೆ– ಪ್ರಯೋಗ ಯಾಕೋ ನನಗೆ ತುಂಬಾ ವಿಚಾರಕ್ಕೀಡು ಮಾಡಿದೆ. ನಿನ್ನ ಉದ್ಧಾರ ಕಲ್ಪನೆ ಏನೆಂಬುದನ್ನು ಸ್ಪಷ್ಟಪಡಿಸಿದರೆ ವಿಚಾರಕ್ಕೆ ಸ್ವಲ್ಪ ಸಂಧಿ ದೊರಕಿಸಬಹುದು."

ರಾಹುಲನ ಬಾಯಿ ಬಂದಾಯಿತು. "ಅದೇ-ನೆನ್ನುವುದು ನನಗೆ ನಿಜಕ್ಕೂ ಗೊತ್ತಿಲ್ಲ ಸರ್."

"ಉದ್ಧಾರ ಅಂದರೆ ಸುಖವೇ? ಮನ-ಶ್ಶಾಂತಿಯೇ? ವ್ಯಕ್ತಿತ್ವದ ಕ್ರಿಯಾತ್ಮಕ ಬೆಳವಣಿಗೆಯೇ? ಒಂದು ಬಗೆಯ ಜೀವನ ಸಿದ್ಧಿಯೇ, ಆತ್ಮಸಾಧನೆಯೇ, ಏನು ಉದ್ಧಾರವೆಂದರೆ?"

"ಬಹುಶಃ ನೀವು ಹೇಳಿದ ಎಲ್ಲ ಅಂಶಗಳ ಹೊಂದಾಣಿಕೆಯೇ ಉದ್ಧಾರವಿರಬೇಕು. ಯಾರಿಗೆ ಗೊತ್ತು?"

ಅನಂತರ ವಿಲಿಯಮ್ಸ್ ಮುಂದು ವರಿದು, "ಮಾಧವಿಯೇ ಬೇಕು ಅನಿಸುವುದು ಹೃದಯದಲ್ಲಿಯೋ, ತಲೆಯಲ್ಲಿಯೋ?"

ಎಂದು ನಗುತ್ತ ಕೇಳಿದರು.

"ಹಾಗೆ ಕೇಳಿದರೆ ಎಲ್ಲಿಯೂ ಅನಿಸುವುದಿಲ್ಲ. ಅವಳಿಗೆ ನಾನು ಬೇಕು- ಅದು ಮುಖ್ಯ"

"ನನಗೀಗ ಗೊತ್ತಾಯಿತು ನಿನ್ನ ಸಮಸ್ಯೆ. ಅವಳಿಗೆ ನೀ ಬೇಕು. ನಿನಗೆ ಅವಳು ಬೇಕೋ ಬೇಡವೋ ತಿಳಿಯದು, ಹಾಗಿದ್ದರೆ ಅವಳನ್ನು ಸ್ವೀಕರಿಸಬೇಕೆ? ಸ್ವೀಕರಿಸಿದರೆ ಭವಿಷ್ಯದಲ್ಲಿ ಎಲ್ಲ ಸರಿ ಹೋಗುವುದೇ? ಹಾಗೆ ಸರಿ ಹೋಗಲು ಬೇಕಾದ ಪ್ರೀತಿ- ದಾನ ನಿನ್ನಿಂದ ಇಂದಲ್ಲ ನಾಳೆಯಾದರೂ ಶಕ್ಯವೇ? ಈ ಸ್ವೀಕಾರದಲ್ಲಿ ಏನಾದರೂ ಜೀವನಕೇಂದ್ರ ಸಿಗಬಹುದೇ?- ಈ ಎಲ್ಲ ಸಮಸ್ಯೆಗಳಿಗೂ ಉತ್ತರವಿಲ್ಲ ರಾಹುಲ. ಒಬ್ಬರ ಪ್ರೀತಿ— ಮತ್ತೊಬ್ಬರ ಆತ್ಮಪ್ರೀತಿಯ ಕಕ್ಷೆಯನ್ನು ಬಲಾತ್ಕಾರದಿಂದ ಸೇರಬಾರದು. ನಿನ್ನ ಪ್ರಯೋಗಕ್ಕಾಗಿ ಅವಳು ಬರೇ ಗಿನಿಪಿಗ್ಗಾಗಬಾರದು..."

"ಮಾಧವಿ ಒಳ್ಳೆಯ ಹುಡುಗಿ, ಮೊನ್ನೆಯ ಪಾರ್ಟಿಯಲ್ಲಿ ಅವಳೇ ಕೇಂದ್ರ ವ್ಯಕ್ತಿಯಾಗಿದ್ದಳು. ತುಂಬ ಚೈತನ್ಯದವಳು," ಎಂದು ಮಿಸೆಸ್ ವಿಲಿಯಮ್ಸ್ ನುಡಿದರು.

"ಜೀವನವೆಂದರೆ ಪಾರ್ಟಿಯಲ್ಲ," ಎಂದು ವಿಲಿಯಮ್ಸ್ ನುಡಿದಾಗ ಎಲ್ಲರೂ ನಕ್ಕರು.

"ನನ್ನ ಕೇಳಿದರೆ ಕೊನೆಯದಾರಿ, ನಿನಗೆ ಸ್ವಂತ ಅನಿಸುವ ತನಕ ದಾರಿ ಕಾಯುವುದೇ ನೆಟ್ಟಗೆ," ಎಂದಾಗ, "ಒಳ್ಳೆಯದು ಸಂಯೋಜಿಸುವೆ," ಎಂದು ರಾಹುಲ ಹೊರಟ.

ರೂಮಿಗೆ ಬಂದು ಮಲಗಿದ್ದರೂ ಯೋಚನೆ ಸಾಗುತ್ತಲೇ ಇತ್ತು. ಜೀವನವೆಂದರೆ ಪಾರ್ಟಿಯಲ್ಲ? ಯಾಕಿರಬಾರದು. ತಾನು ಇಷ್ಟು ಹೊತ್ತು ವಿಲಿಯಮ್ಸ್‌ರ ಜೊತೆ ಮಾತಾಡಿದ್ದರಲ್ಲಿ ಪಾರ್ಟಿಯಲ್ಲಿರುವ ಮಾತುಕತೆಯ ಸ್ವರೂಪವೇ ಕಂಡುಬಂತು ರಾಹುಲನಿಗೆ. ಯಾಕೆಂದರೆ ಅದೇ ಬಗೆಯ ಆನಂದ ಅವನ ಮನಸ್ಸಿನಲ್ಲಿ ಸುಳಿದಾಡುತ್ತಿತ್ತು. "ವ್ಯಕ್ತ್ಯತೀತ ಕೇಂದ್ರ- ಉದ್ಧಾರ- ಜೀರ್ಣೋದ್ಧಾರ-ಜೀವ-ಜೀವನ ಸಿದ್ಧಿ-ಜೀವನದ ಅರ್ಥ" ಮುಂತಾದ ಶಬ್ದಗಳೊಡನೆ ತಾನು ಆಡಿದ ಆಟಕ್ಕೂ, ಪಾರ್ಟಿ ಆಟಗಳಿಗೂ ಏನೂ ಅಂತರವಿಲ್ಲ. ಮಿಸೆಸ್ ವಿಲಿಯಮ್ಸ್, ಪ್ರೊ. ವಿಲಿಯಮ್ಸರಿಗೆ ಜೀವನ ಕೇಂದ್ರವಿದೆಯಂತೆ- ವ್ಯಕ್ತ್ಯತೀತ ಜೀವನ ಕೇಂದ್ರವಿದೆಯಂತೆ- ಬೇರಿದೆಯಂತೆ- ತಾನು ಮಾತ್ರ ಬೇರಿಲ್ಲದ ಜೀವವಂತೆ. ಆದರೆ ಬೇರೆ ಯಾಕಿರಬೇಕು. ಯೋಜಿಸುತ್ತ ಯೋಜಿಸುತ್ತ ರಾಹುಲ ಅಸ್ವಸ್ಥಗೊಂಡ.

*

ರಣಜಿತ-ಶಿರೀನ್, ಅರವಿಂದ-ವೈದೇಹಿಯರೊಡನೆ ತಾನೂ ಮಾಧವಿಯ ಸಂಗಡ ಪಿಕ್ನಿಕ್ಕಿಗೆ ಬಂದಿದ್ದರೂ ರಾಹುಲನಿಗೆ ಅದೇಕೋ ಮನಸ್ಸು ಜಡವಾಗಿತ್ತು. ಎರಡು ಮೂರು ದಿನದ ವಿಚಾರ ಸಂಘರ್ಷದಿಂದ, ಅವನ ಮನಸ್ಸು ಮಾಧವಿಯನ್ನು ನೋಡಿದ ನಂತರ ಮೊದಲಿನ ಸರಳತೆಯನ್ನು ಕಳೆದುಕೊಂಡಿತ್ತು. ಟೀಕಾತ್ಮಕ ವಕ್ರತೆ ತಳೆದಿತ್ತು. ಇದೇ ಕಾರಣದಿಂದ ಮಾಧವಿಯತ್ತ ನೋಡುವ ದೃಷ್ಟಿಯಲ್ಲಿ ತೀಕ್ಷ್ಣತೆ, ಆಡುವ ಮಾತಿನಲ್ಲಿ ಒಗರು ತುಂಬಿತ್ತು.



ಅರವಿಂದ-ವೈದೇಹಿಯರ ಸಂಕೋಚ-ಪ್ರವೃತ್ತಿ, ಶಾಂತ-ಗಂಭೀರ-ಶಿಷ್ಟಮುಖಗಳನ್ನು ನೋಡಿದ ಮೇಲೆ ಇಂದು ಪಿಕ್ನಿಕ್ಕಿಲ್ಲಿ ಹದಗೆಡುತ್ತದೆಯೋ ಎಂಬ ಸಂದೇಹ ಉಂಟಾಗಿದ್ದರೂ ಪಿಕ್ನಿಕ್ಕಿನ ಮಜವೆಲ್ಲಾ ರಣಜಿತ-ಶಿರೀನರ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸಿಬಿಟ್ಟಿದೆ ಎನಿಸಿಬಿಟ್ಟಿತು.

ಹಹ್ಹಹ್ಹಾ...... ಹ್ಹಿಹ್ಹಿಹ್ಹೀ...... ಹ್ಹೊಹ್ಹೊಹ್ಹೋ......ಗಳೊಡನೆ ಊಟವಾದ ನಂತರ ರಾಹುಲ ಒಂದು ಯೋಜನೆ ಹೂಡಿದ-ಒಂದು ತಾಸಿನವರೆಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಜೋಡಿ ಬದಲಾಯಿಸಿಕೊಂಡು ತಿರುಗಾಡಿ ಬರಬೇಕು. "ನಾನು ವೈದೇಹಿಯ ಜೊತೆ, ರಣಜಿತ ಮಾಧವಿ, ಅರವಿಂದ ಶಿರೀನಳ ಜೊತೆ! ಪಿಕ್ನಿಕ್ಕಿನಲ್ಲಿ ಬರೇ ನಮ್ಮ ನಮ್ಮ ಗರ್ಲ್ ಫ್ರೆಂಡಿನೊಡನೆ ಹೋಗುವುದರಲ್ಲೇನು ಮಜಾ?" ಎಂದ ರಾಹುಲ.

ಎಲ್ಲರೂ ಒಪ್ಪಿ ಎದ್ದು ನಿಂತರು. ಆದರೆ ಗಂಭೀರವಾಗಿ ಮುಖ ಕೆಳಗೆ ಹಾಕಿ ಕುಳಿತ ವೈದೇಹಿಗೆ ರಾಹುಲ ಹೇಳಿದ: "ನಡೀರಿ ವೈದೇಹಿ, ಹೀಗೇ ಸುತ್ತಾಡಿ ಬರುವ, ನಾವಲ್ಲಿ-ಅದೋ ಆ ಬಂಡೆಗಳವೆಯಲ್ಲಾ ಅಲ್ಲಿ ಕೂಡ್ರುವ," ಎಂದು ಬಂಡೆ ಕಡೆ ನಡೆದ.

"ವೈದೇಹಿ ನಾನೊಂದು ಮಾತು ಹೇಳಬೇಕೆಂದಿರುವೆ."

"ಊಂ?"

"ಯಾರಿಗೂ ಹೇಳಬೇಡಿ...ನಾನು ಮಾಧವಿಯನ್ನು ಲಗ್ನವಾಗಬಾರದೆಂದು ನಿಶ್ಚಯಿಸಿದ್ದೇನೆ."

"ಅಂ?-ಯಾಕೆ?- ಅಂಥಾದ್ದೇನಾಯಿತು?

"ಏನಿಲ್ಲ ವಿಶೇಷ-ಅವಳಿಗೆ ನಾನು ಯೋಗ್ಯನಲ್ಲ."

"ಕಾಣಿಸಲಿಕ್ಕಂತೂ ಯೋಗ್ಯರಿದ್ದೀರಲ್ಲಾ."

"ಹಾಗಲ್ಲ ನಾ ಹೇಳಿದ್ದು, ನೋಡ್ರಿ, ನಾನು ಬಹಳ ವಿಕ್ಷಿಪ್ತ ಮನುಷ್ಯ."

"ಊಂ?"

"ನನ್ನ ಇತಿಹಾಸವೇ ವಿಚಿತ್ರವಿದೆ..." ಎಂದು ರಾಹುಲ ತನ್ನ ತಂತ್ರ ಪ್ರಾರಂಭಿಸಿದ.

ಸ್ವಲ್ಪದರಲ್ಲೆ ತನ್ನ ಇತಿಹಾಸ-ತನ್ನ ಮನೋವಿಶ್ಲೇಷಣಾತ್ಮಕ ಇತಿಹಾಸ- ಹೇಳಿ. ನನ್ನದು ನಿರಾಶೆ ತುಂಬಿದ ಅ-ಸಹಜ ಹೃದಯ. ಬೌದ್ಧಿಕ ವ್ಯಾಸಂಗದಲ್ಲಿ ಮನಸ್ಸನ್ನು ಎಷ್ಟೇ ಹುದುಗಿಡಲು ಪ್ರಯತ್ನಿಸಿದರೂ ಬೇರು ಬಿಟ್ಟ ಆ ನಿರಾಸೆ ನನ್ನ ಹೃದಯವನ್ನೇ ಸೀಳಿದೆ. ಅಂಥ ಹೃದಯಕ್ಕೆ ಮಾಧವಿಯಂಥ ಸುಖವಸ್ತು ಜೀವ ಉಪಯೋಗವಿಲ್ಲ. ನನ್ನ ಬೆನ್ನು ಹತ್ತಿದರೆ ಅವಳ ಮುತ್ತಿನ ಜೀವವೇ ಹಿಂಡಿ ಹಿಪ್ಪೆಯಾಗುವುದು. ನನ್ನ ಮೇಲೆ ಅವಳ ಪ್ರೀತಿ ನಿಸ್ಸೀಮ. ಆದರೆ ನನಗೆ ಅಂಥ ಪ್ರೀತಿಯು ಅವಶ್ಯಕತೆಯಿಲ್ಲ. ಸಮುದ್ರದ ನೀರು ಕುಡಿಯಲಿಕ್ಕೆ ಬರುವುದೇ? ನನಗೆ ಕುಡಿಯುವ ನೀರು ಬೇಕು...ನನ್ನನ್ನು ತಾಯಿಯಂತೆ ಸಲಹುವ, ಪರಿಣಿತಮತಿಯಾದ ಅನುಭವದಿಂದ ಮಾಗಿದ, ಜೀವನ ಆಘಾತಗಳಿಂದ ಹದಗೊಂಡ ಹೆಣ್ಣು ಜೀವ ಬೇಕು. ನನ್ನ ಇಡೀ ಅಂತಃಸತ್ವವನ್ನೇ ಎದೆಗವುಚಿ ನಿಲ್ಲುವಂಥ ಹೆಣ್ಣು ದೇಹ ಬೇಕು. ಮಾಧವಿ ಇನ್ನೂ ಅನನುಭವಿ ತರಳೆ, ಮುತ್ತಿನ ಕೋಘಾದಲ್ಲಿ ಕುಳಿತು ಆಳುಗಳಿಗೆ ಕೀರು ಧ್ವನಿಯಲ್ಲಿ ಕಿರುಚುವ, ಮುತ್ತಿನ ಕಾರುಗಳಲ್ಲಿ ಓಡಾಡಿ ಮೆತ್ತನ್ನ ಹಾಸಿಗೆಯಲ್ಲಿ ಹರಿದಾಡುವ ಚಿಕ್ಕ ಕೂಸು...ಛೇ ನಾನೊಂದು ದೊಡ್ಡ ವ್ಯಾಖ್ಯಾನ ಕೊಟ್ಟೆನಲ್ಲಾ...ಬಹುಶಃ ನಿಮ್ಮಲ್ಲಿಯ ಯಾವುದೋ ಗುಣ, ಸಹಾನುಭೂತಿ ತುಂಬಿದ ಸುಂದರ ಕಣ್ಣುಗಳು ನನ್ನನ್ನು ಈ ರೀತಿ ಹುಚ್ಚನಂತೆ ಬಡಬಡಿಸಹಚ್ಚಿವೆ. ಕ್ಷಮಿಸಿ, ಅರವಿಂದ ನಿಜಕ್ಕೂ ಲಕ್ಕೀ. ಇಷ್ಟು ದಿನ ಬರೇ ನಿಮ್ಮ ಬಗ್ಗೆ ಕೇಳಿಯೇ ಗೊತ್ತಿತ್ತು. ಇುದು ನೋಡಿ ಗೊತ್ತಾಯಿತು. ನಮ್ಮ ಹಿಂದೂ ಸಮಾಜದ ರೂಢಿಗಳು ಎಷ್ಟು ನಿರ್ದಯಿ, ಕ್ರೂರಿ, ಅಸಂಸ್ಕೃತ. ಗಂಡ ಸತ್ತ ಕೂಡಲೇ ಹೆಣ್ಣಿಗೆ ಬೇರಿಲ್ಲದ ಬಳ್ಳಿಯಂತೆ ಚೆಲ್ಲಿ ಬಿಡುವುದು ಎಷ್ಟು ದುಷ್ಟವಾದುದು. ಆ ಬಳ್ಳಿಯನ್ನೇ ಮತ್ತೆ ಬೆಳೆಯುವಂತೆ ಮಾಡಲು ಶಕ್ಯವಿರುವಾಗ, ಮತ್ತೊಂದು ಕ್ಷೇತ್ರದಲ್ಲಿ ಅದನ್ನು ಬೆಳೆಯಲು ಅನುವು ಮಾಡಿಕೊಟ್ಟರೆ

ತಾನಾಗಿಯೇ ಬೇರುಬಿಟ್ಟು ಸುಂದರವಾಗಿ ಪಲ್ಲವಿಸಲು ಶಕ್ಯವಿರುವಾಗ, ಅದನ್ನು ಮೂಲೆಯಲ್ಲಿ ಚೆಲ್ಲುವುದು ಅತ್ಯಾಚಾರವಲ್ಲವೇ ?– ನಿಮ್ಮ ಬಗ್ಗೆ ನನಗೆ ತುಂಬಾ ದುಃಖವೆನಿಸುತ್ತದೆ. ನಿಮ್ಮ ಅಣ್ಣ ಸುಶಿಕ್ಷಿತ, ಸುಸಂಸ್ಕೃತ ಇದ್ದಾರೆಂದು ನೆಟ್ಟಗೆ...

"ಹ್ಞಾಂ ! ಅರವಿಂದನ ಜೊತೆ ನಿಮ್ಮ ಲಗ್ನ ಯಾವಾಗ ?"

"ಊಂ ! ನಾವಿನ್ನೂ ಲಗ್ನದ ವಿಷಯ ಮಾತಾಡಿಲ್ಲ"

"ಆದರೆ ನೀವು ನಿರ್ಧಾರ ಮಾಡಿದಿರಷ್ಟೆ?"

"ಹಾಗೆ ಅರವಿಂದ ಹೇಳಿದನೆ ?"

"ಹೂಂ."

"ಅಣ್ಣನ ಮುಂದೆ ಏನೇನೋ ಹೇಳಿದ್ದಾನಂತೆ...ಆದರೆ ನನಗೇ ಹೇಳಿಲ್ಲ ನೋಡಿರಿ, ಸಂಕೋಚವಿರಬೇಕು !"

"ಮುಂದೆ ನಿಮ್ಮ ವಿಚಾರ?"

"ಅವನು ನೇರವಾಗಿ ಕೇಳಿದ ನಂತರ," ಎಂದು ವೈದೇಹಿ ನಕ್ಕಳು.

"ಒಂದು ಮಾತು ಹೇಳಬೇಕೆನಿಸುತ್ತದೆ. ವೈದೇಹಿ. ಆದರೆ ಆ ಮಾತನ್ನು ನಿಮ್ಮ ಮನಸ್ಸಿನ ಅಂಚಿನಲ್ಲಿ ಗಂಟು ಕಟ್ಟಿಡುವುದಾದರೆ ಹೇಳುವೆ."

ಅವಳು ಏನೂ ಹೇಳಲಿಲ್ಲ; ಅವಳ ಮೌನವೇ ಒಪ್ಪಿಗೆ ಸೂಚಿಸಿತೆಂದು ಕಲ್ಪಿಸಿ, "ಒಂದು ವೇಳೆ ನಿಮ್ಮ ಮತ್ತು ಅರವಿಂದನ ಲಗ್ನ ಕೂಡಿಬರದಿದ್ದರೆ—ಕೂಡಿ ಬರಲೆಂದೇ ನನ್ನ ಹಾರ್ದಿಕ ಇಚ್ಛೆ–ಆದರೆ ಅಕಸ್ಮಾತ್ ಏನಾದರೂ ಸಂಭವಿಸಿ– ಲಗ್ನ ಕೂಡಿ ಬರದಿದ್ದರೆ, ನೀವು... ತಪ್ಪು ತಿಳಿದುಕೊಳ್ಳಬಾರದು,... ನಾನು ನಿಮ್ಮನ್ನು ಲಗ್ನವಾಗಲು ಸಿದ್ಧನಿದ್ದೇನೆ," ಎಂದು ತನ್ನ ನಿರೂಪಣೆಯನ್ನು ತಾನೇ ಮೆಚ್ಚುತ್ತಾ ರಾಹುಲ ಹೇಳಿದ.

"ಥ್ಯಾಂಕ್ಸ್," ಅವಳ ಧ್ವನಿಯಲ್ಲಿ ವ್ಯಂಗ್ಯವಿದ್ದರೂ ರಾಹುಲನಿಗೆ ಗೊತ್ತಾಗಲಿಲ್ಲ.

"ನನ್ನ ಮೆಚ್ಚುಗೆ–ನನ್ನ ಆದರ– ನನಗೆ ಅನಿಸಿದ ಆಕರ್ಷಣೆ, ಇವುಗಳನ್ನು ಹೇಗೆ ವ್ಯಕ್ತಪಡಿಸಬೇಕೋ ತಿಳಿಯದು... ಅಗೋ ಅರವಿಂದ–ಶಿರೀನರು ನಮಗಾಗಿ ಕಾಯುತ್ತಿದ್ದಾರೆ. ಬನ್ನಿ ಹೋಗೋಣ," ಎಂದು ಕರೆದೊಯ್ದನು.

ಬೇರೆ ಬೇರೆ ಜೋಡಿಗಳಿಂದ ಬೇಸರ ಹೊಂದಿದ ಮೇಲೆ ತಮ್ಮ ತಮ್ಮ ಜೋಡಿ ಕಲೆತು ಆಡ್ಡಾಡತೊಡಗಿದರು.

"ರಾಹುಲ, ವೈದೇಹಿ ಹೇಗಿದ್ದಾಳೆ ?" ಮಾಧವಿಯ ಪ್ರಶ್ನೆ.

"ಸತ್ಯ ಹೇಳಬೇಕೆಂದರೆ ವೈದೇಹಿ ಚೆನ್ನಾಗಿದ್ದಾಳೆ. ಅವಳು ವಂಡರ್‌ಫುಲ್ ಇದ್ದಾಳೆ– ನಿಜಕ್ಕೂ."

"ಅರವಿಂದ ಲಕ್ಕೀ ಹುಡುಗ !"

"ನಿಮಗೆ ಅಸೂಯೆಯೇ ?"

"ಸ್ವಲ್ಪ"– ಎಂದು ರಾಹುಲ ನಕ್ಕ.

"ಹೋಗಲಿ ನನ್ನ ಬಗ್ಗೆ ಏನನಿಸುವುದು ?"

"ಪ್ರಾಮಾಣಿಕವಾಗಿ ಹೇಳಬೇಕಾದರೆ– ಅದೇ ನನಗೆ ಗೊತ್ತಿಲ್ಲ. ಉದಾಹರಣೆಗೆ, ಒಂದು ಸಲ ನೀನು ಚೆನ್ನಾಗಿದ್ದೀಯಾ ಎನಿಸಿದರೆ, ಮತ್ತೊಮ್ಮೆ ಶಿರೀನ್ ಚೆನ್ನಾಗಿದ್ದಾಳೆ ಎಂದೆನಿಸುತ್ತದೆ. ಮಗದೊಮ್ಮೆ ವೈದೇಹಿ ಉತ್ಕೃಷ್ಟವಾಗಿದ್ದಾಳೆ ಎಂದೆನಿಸುತ್ತದೆ. ಹೀಗೆ ಅನಿಸಬೇಕೊ, ಅನಿಸಬಾರದೋ ಗೊತ್ತಿಲ್ಲ."

"ಹಾಗಾದರೆ ನನ್ನ ಕೂಡ ನೀನು ಆಡುತ್ತಿರುವುದು ಬರೇ ಆಟವೇ, ನಟನೆಯೋ?"

"ನಿನಗೆ ಹಾಗೆ ಎಂದಾದರೂ ಅನಿಸಿತೇ ಹೇಳು. ನಿನ್ನೊಡನೆ ಸಂಬಂಧ ಬೆಳೆಸುವಾಗ ನಾನು ಮೊದಲಿನಿಂದಲೂ ಬಹಳ ಸೀರಿಯಸ್ಸಿರುವೆ. ಹಿಂದಿನ ಬರೇ ಮಜಾ ಮಾಡುವ ವ್ಯಕ್ತಿಯಲ್ಲ. ಹಾಗಿದ್ದರೆ ಬರೇ ಫ್ಲರ್ಟೇಶನ್ನೇ ಬೇಕಿದ್ದರೆ ನಾನು ಬರೇ ನಿನ್ನ ಮೈಸುಖ ಬಯಸಬಹುದಾಗಿತ್ತು, ನಿನ್ನ ಲಗ್ನದ ಯೋಚನೆ ದೂರೀಕರಿಸಬೇಕಿತ್ತು."

"ರಾಹುಲ, ಲಗ್ನದ ಯೋಚನೆಯನ್ನು ನೀನು ಸ್ವೀಕರಿಸಿದ್ದು ನನ್ನ ಐಶ್ವರ್ಯದ ಸಲುವಾಗಿ ಅಲ್ಲ– ಎನ್ನುವುದು ನಿಜವೇ ? ರಣಜಿತ ಹಾಗೆ ಹೇಳಿದ ಅದಕ್ಕೆ..."

"ನಿಜವಾಗಿ ನೋಡಿದರೆ ನನಗೇ ಗೊತ್ತಿಲ್ಲ ಮಾಧವಿ"- ರಾಹುಲ ಸ್ವಲ್ಪ ಹೊತ್ತು ಸುಮ್ಮನಿದ್ದು, ಒಮ್ಮೆಲೆ ಮಾಧವಿಯ ಕೈ ಹಿಡಿದು ಹೇಳಿದ, "ಮಾಧವೀ, ನೀನು ಎಲ್ಲವನ್ನು ಬಿಟ್ಟು, ನಿನ್ನ ತಾಯಿ-ತಂದೆಯರನ್ನು ಬಿಟ್ಟು ಇಂದೇ ಈಗಲೇ ನೀನಿದ್ದ ಹಾಗೆಯೇ ನನ್ನೊಡನೆ ಬರಲು ಸಿದ್ಧಳಿರುವೆಯಾ? ನಡೆ, ನಾವಿಬ್ಬರೇ ಎಲ್ಲಿಯಾದರೂ ಹೋಗಿ ಇರೋಣ ನಡೆ. ಆಗ ಗೊತ್ತಾಗುವುದು ನಮ್ಮ ಸಂಬಂಧದ ನಿಜ ಸ್ವರೂಪ."

"ಅಂಥ ಪ್ರಯೋಗದ ಅವಶ್ಯಕತೆಯಾದರೂ ಏನು?"

'ಪ್ರಯೋಗ' ಶಬ್ದ ರಾಹುಲನ ಮರ್ಮಸ್ಥಾನವನ್ನೇ ತಿವಿದಂತಾಯಿತು. ಒಮ್ಮೆಲೆ ಕೊಬ್ಬಿನಿಂದ, "ಪ್ರೀತಿ ಎಂದರೇನು ಎಂಬುದಕ್ಕೆ ಉತ್ತರ ಬೇಕಿದ್ದರೆ ಎಂಥಾ ಪ್ರಯೋಗಕ್ಕಾದರೂ ನೀನು ಸಿದ್ಧಳಾಗಬೇಕು. ಲಾರೆನ್ಸನ 'ಸನ್ಸ್ ಆ್ಯಂಡ್ ಲವರ್ಸ್' ಕಾದಂಬರಿ ಓದಿಲ್ಲವೇ? ಅಲ್ಲಿ ಪಾಲ್, ಮಿರಿಯಮ್ಮಳ ಬಗ್ಗೆ ತನಗೇನೇನನಿಸುವುದು, ಅವಳ ಬಗ್ಗೆ ತನ್ನ ರಕ್ತ ಏನೇನು ಹೇಳುವುದು ಎಂದು ನೋಡಲು ಕೆಲವು ದಿನ ಗಂಡ ಹೆಂಡಿರಂತೆ ಕೂಡಿ ಇರುವ ಪ್ರಯೋಗ ಮಾಡಿದರಂತೆ. ಆಗ ಗೊತ್ತಾಯಿತಂತೆ- ಮಿರಿಯಮ್ ತನಗೆ, ತನ್ನ ರಕ್ತಕ್ಕೆ, ತನ್ನ ದೇಹಕ್ಕೆ ಸರಿ ಹೊಂದದ ಪ್ರಾಣಿ ಅಂತ."

"ಅದೆಲ್ಲಾ ಹುಚ್ಚು ಲಾರೆನ್ಸನ ತಲೆ!"

"ನನಗೂ ಹುಚ್ಚು ಹಿಡಿಯುವ ಪ್ರಸಂಗ ಬಂದಿದೆ ಮಾಧವೀ. ನನ್ನ ಹೃದಯದಲ್ಲಿ ಎಲ್ಲವೂ ತಿಳಿಯಾಗಿ ಖಚಿತವಾಗಿದ್ದರೆ, ನಾನೇಕೆ ಹುಚ್ಚನಂತೆ ಎಲ್ಲರ ತಲೆ ಕೆಡಿಸಿ, ಎಲ್ಲರ ಜೊತೆ ಚರ್ಚಿಸಬೇಕಿತ್ತು ನನ್ನ ವಿಷಯ, ನಮ್ಮ ಲಗ್ನದ ವಿಷಯ. ನನ್ನ ವಿಚಿತ್ರ ವಿಪರೀತ, ತಡಕಾಟ ನೋಡಿದರೆ ನನ್ನಲ್ಲಿಯೋ ಒಳಗೆಲ್ಲೋ ರಾಡಿಯಿದೆ- ರಾಡಿಯ ಸಮುದ್ರವೇ ಇದೆ ಎಂದೆನಿಸತೊಡಗಿದೆ. ಮಾಧವೀ, ನಿಜಕ್ಕೂ ಸುಖ ಬೇಕಿದ್ದರೆ ನನ್ನನ್ನು ಬಿಟ್ಟುಬಿಡು. ಈ ರಾಡಿಯ ಸಮುದ್ರದಲ್ಲಿ ನಮ್ಮ ಸಂಸಾರದ ದೋಣಿ ಸಾಗುವುದು ಕಠಿಣವಾದದ್ದು. ನಿನ್ನ ಮಮ್ಮಿ ಹೇಳಿದ- ಯಾರದು, ಶಂಕರ ಅಜ್ಞಾನಿ- ಅವನಿಗೇ ನೀ ಒಮ್ಮೆ ಹೂಂ ಅಂದಿದ್ದೀಯಂತೆ. ಹೋಗು, ಅವನನ್ನು ಲಗ್ನವಾಗಿ ಅವನ ಜೊತೆ ಸುಖವಾಗಿ ಸಂಸಾರ ಸಾಗಿಸು. ನನ್ನ ಬಗ್ಗೆ ನಿನಗೇನೂ ಗೊತ್ತಿಲ್ಲ ಮಾಧವೀ ನನ್ನೊಳಗೆ. ನನ್ನೊಳಗಿನ ರಾಡಿಯಲ್ಲಿ ಒಬ್ಬ ರಾಕ್ಷಸ ವಾಸವಾಗಿದ್ದಾನೆ, ನೀನು ತಿಳಿದುಕೊಂಡ ರಾಜಕುಮಾರ ನಿಜಕ್ಕೂ ರಾಕ್ಷಸನಿದ್ದಾನೆ-"

ತಾನು ಹೇಳುತ್ತಿದ್ದುದರ ಅರ್ಥ ಮಾಧವಿಗೆ ಸಂಪೂರ್ಣ ತಿಳಿಯುತ್ತಿಲ್ಲವೆಂದು ರಾಹುಲನಿಗೆ ಅನ್ನಿಸಿತು. ತಾನು ಮಾತಾಡುತ್ತಿರುವುದು ಬರೇ ಮಾಧವಿಯ ನಗುಮುಖಕ್ಕೆ, ಅವಳ ಎತ್ತರವಾದ ವಕ್ಷಸ್ಥಳಕ್ಕೆ, ಅವಳ ಬೆಳೆಯುತ್ತಿರುವ ಉತ್ತ ನಿತಂಬಗಳಿಗೆ ಎನ್ನುವ ಮಾತು ಸ್ಪಷ್ಟವಾಯಿತು.

"ರಾಹುಲ" ಎಂದೆನ್ನುತ್ತಾ ಮಾಧವಿ, ಆತನನ್ನು ಗಟ್ಟಿಯಾಗಿ ಅಪ್ಪಿಕೊಂಡು ಆತನ ಹೆಗಲ ಮೇಲೆ ತನ್ನ ಮುಖವನ್ನಿಟ್ಟು, ಕುತ್ತಿಗೆಗೆ ಮುತ್ತನಿಟ್ಟಳು.

"ಇಷ್ಟೇಕೆ ಅಸ್ವಸ್ಥನಾಗಿರುವೆ ರಾಹುಲ? ನನಗೆ ಗೊತ್ತಿಲ್ಲವೇ- ಎಂಗೇಜ್‌ಮೆಂಟ್ ಮುಂದೆ ಹೋಯಿತೆಂದಲ್ಲವೇ? ಪರೀಕ್ಷೆಯಾಗುವತನಕ ಹೀಗೇ ಇದ್ದರೆ ಒಳಿತಲ್ಲವೇ?"

ಮಾಧವಿಯು ದೇಹದ ಬಿಸಿ ರಾಹುಲನ ದೇಹವನ್ನು ಸ್ವಲ್ಪ ಕರಗಿಸಿತು. ಆದರೂ ಮನಸ್ಸು ಗಟ್ಟಿ ಮಾಡಿ, ದೂರ ದಿಗಂತದತ್ತ ದೃಷ್ಟಿ ಬೀರಿ ರಾಹುಲ ಹೇಳಿದ:

"ಅದಕ್ಕಿಂತ- ಪರೀಕ್ಷೆಯಾಗುವ ತನಕ- ದೂರದ ಗೆಳೆಯರಂತೆ ಇರುವುದು ಉತ್ತಮ..."

"ದೂರದ ಗೆಳೆಯರಂತೆ ಅಂದರೆ?"

"ಮಾಧವೀ, ನಿನ್ನ ಈ ದೇಹ ನನ್ನ ತಲೆ ಕೆಡಿಸುತ್ತದೆ. ನನ್ನ ತಲೆ, ಹುಚ್ಚು ನಿನ್ನ ತಲೆ ಕೆಡಿಸುತ್ತದೆ. ಅದಕ್ಕಿಂತ ಅಪರಿಚಿತರಂತೆ ಸ್ವಲ್ಪ ದೂರವಿದ್ದು ನೋಡಬೇಕು."

"ಏನು ನೋಡಬೇಕು?"

"ನನಗೆ ಅಲ್ಲ- ನಿನಗೆ ನಾನೇ ಬೇಕೇ ಎಂಬುದು."

"ರಾಹುಲ, ಏನು ಹಾಗೆಂದರೆ ?"

"ನಿನಗೆ ನಾನೇಕೆ ಬೇಕು ಮಾಧವಿ ? ಹೇಳು ನೋಡೋಣ."

"ಅಂದರೆ ?"

"ನಿನ್ನ ಆತ್ಮಪ್ರೀತಿಯನ್ನು ಸಮಾಧಾನ ಪಡಿಸುವ ಸಾಧನವೇ- ನಿನ್ನ ಆತ್ಮವನ್ನು ತೃಪ್ತಿಗೊಳಿಸುವ ಪ್ರೀತಿಯೇ ನಾನು ಎಂಬುದಿನ್ನೂ ನಿರ್ಣಯವಾಗಬೇಕು."

"ರಾಹುಲ, ನೀನು ಬಹಳ ಜಟಿಲವಾಗಿದ್ದೀಯಾ ಇಂದು. ನಿನ್ನನ್ನು ಸರಳ ಮಾಡಲು ಏನು ಮಾಡುವುದು ತಿಳಿಯದಾಗಿದೆ."

"ಬಾ ನನ್ನ ಜೊತೆ ಮಲಗು-"

"ಹಾಂ ಅದೇ ನಿನ್ನ ಎಂದಿನ ಪಲ್ಲವಿ, ಅದಕ್ಕೇ ಲಗ್ನವಾಗೋಣ ಬೇಡ ಅಂತಂದೆ, ಆರೇಳು ತಿಂಗಳು ತಡೆಯಲಾರೆಯಾ ?"

"ಅದೇ ನಾ ಹೇಳಿದ್ದು. ಆರೇಳು ತಿಂಗಳು ದೂರವಿರೋಣ ಎಂದು. ನಡೆ ಹೋಗೋಣ."

"ಒಂದು ಒಳ್ಳೆಯ ಮುತ್ತು ಕೊಡು ರಾಹುಲ," ಎಂದು ತನ್ನ ಚೆಂದವಾದ ತುಟಿಯನ್ನು ಮೇಲೆ ಮಾಡಿ ಹಿಡಿದಳು ಮಾಧವಿ.

ರಾಹುಲ ಒಂದು ಕ್ಷಣ ತೀಕ್ಷ್ಣವಾಗಿ ಅವಳ ಮುಖದಲ್ಲಿ ಇಣುಕಿ ನೋಡಿದ. ಆಮೇಲೆ ಒಮ್ಮೆಲೆ ರಭಸದಿಂದ ಅವಳನ್ನು ಮೊಸಳೆಯಂತೆ ಅಪ್ಪಿದ. ರೊಚ್ಚಿನಿಂದ ಅವಳ ತುಟಿಗೆ ತುಟಿಯೊತ್ತಿ ಹಿಡಿದ.

ಮಾಧವಿಗೆ ಶ್ವಾಸ ಕಟ್ಟಿತು. ಮುಖವನ್ನು ಕೊಸರಿಕೊಂಡು "ರಾಹುಲ್" ಎಂದು ಉನ್ಮಾದದಿಂದ ನರಳಿದಳು.

ರಾಹುಲ ಮರಳಿ ಅವಳ ಮುಖವನ್ನು ತನ್ನ ಕೈಗಳಲ್ಲಿ ಗಟ್ಟಿಯಾಗಿ ಹಿಡಿದು ಬಲತ್ಕಾರದಿಂದ ತನ್ನ ಮುಖವನ್ನೊತ್ತಿದ.

ಮಾಧವಿ ಉದ್ರೇಕದಿಂದ ಚೀರಿದಳು.

"ರಾಕ್ಷಸ ! ಬಿಡು."

*

ಪಿಕ್ನಿಕ್‌ನಿಂದ ಬಂದನಂತರ ಮಾಧವಿಯನ್ನು ನೋಡಲು ಪತ್ರ ಬರೆದು ಅವಳಿಗಾಗಿ ಕಾಯುತ್ತ ನಿಂತಿದ್ದ. ಅವಳು ಬಂದನಂತರ ಬೇರೆ ವಿಷಯದತ್ತ ಗಮನ ಎಲ್ಲಿ ಹಾರಿ ಹೋಗುವುದೆಂದು ಜೋಡಿಸಿಟ್ಟಿದ್ದ ತನ್ನ ಮಾತನ್ನು ಪ್ರಾರಂಭಿಸಿದ್ದ.


"ಮಾಧವೀ, ನಾನು ಹಾಗೇ ಲಗ್ನವಾಗುವ ತನಕ ಪರಿತಪಿಸುತ್ತ, ಉರಿಯುತ್ತ, ಬೂದಿಯಾಗುತ್ತಾ ಹೋಗಬೇಕೇ?"

"ಅದೆಷ್ಟು ದಿನ ರಾಹುಲ, ಬರೇ ಎಂಟು ತಿಂಗಳು, ಹೆಚ್ಚೆಂದರೆ ಒಂದು ವರ್ಷ."

"ಒಂದು ಯುಗ, ಅಲ್ಲಿಯವರೆಗೆ ನಾನು ಜೀವಂತವಿರಬೇಕಲ್ಲಾ- ನೀನು ನನ್ನವಳಾಗಿದ್ದರೆ ನನ್ನ ಮಾತು ಕೇಳು, ನಾಳೆ ನಾವು ಒಂದು ಒಳ್ಳೆಯ ಹೋಟೆಲಿನಲ್ಲಿ......"

"ರಾಹುಲ!"

"ಹೌದು, ನಾಳೆ ಎಂದರೆ ನಾಳೆಯೇ- ಮಾಧವೀ, ಇಲ್ಲದಿದ್ದರೆ ನೀನು ನನ್ನವಳಲ್ಲಾ. ನಾಳೆಯೇ-ಅಲ್ಲ, ಇಂದೇ-ನಮ್ಮ ಸಂಬಂಧ



ಕಡಿದು ಬಿಡೋಣ—ಇಂದೇ ಇದೇ ಕ್ಷಣ."

"ರಾಹುಲ್ ಹೀಗನ್ನಬೇಡ, ನೀನೆಂದರೆ ನನ್ನ ಪ್ರಾಣ, ನನ್ನ ಜೀವನ, ನನ್ನ—"

"ಅದನ್ನು ಸಿದ್ಧ ಮಾಡಿ ತೋರಿಸು."

"ಸಿದ್ಧ ಮಾಡು ಅಂದರೆ—ನಿನ್ನ ಜೊತೆ ಮಲಗಿದರೆ ಸಿದ್ಧವಾದಂತಾಗುವುದೇ? ಸಿದ್ಧ ಮಾಡಲು ಲಗ್ನವಿಲ್ಲವೇ? ಇಷ್ಟೇಕೆ ಆತುರ? ನನಗಂತೂ ತಿಳಿಯದು."

"ಹಾಗಾದರೆ ನಾನು ಹೇಳಿದಂತೆ ಮಾಡು ನಾಳೆ—"

"ರಾಹುಲ್ ಡಾರ್ಲಿಂಗ್ ನಿನ್ನ ಹಟ ನಿನ್ನನ್ನು ಇನ್ನೂ ಹೆಚ್ಚು ಸುಂದರನಾಗಿ ಮಾಡುತ್ತಿದೆ. ನಾಳೆ ಏಕೆ—ಬೇಕಾದರೆ ಇಂದೇ—ಇಲ್ಲಿಯೇ— ಈಗಲೇ, ರಾಹುಲ್."

ಮಾಧವಿ ರಾಹುಲನ ತುಟಿಗೆ ಒಂದು ಸಣ್ಣ ಚುಂಬನವನ್ನಿತ್ತಳು.

"ರಾಹುಲ್, ಆದರೆ—ಆದರೆ—ಇದು ಅದಕ್ಕೆ ತಕ್ಕ ಸ್ಥಳವೂ ಅಲ್ಲ, ಸಮಯವೂ ಅಲ್ಲ. ನಾವೇನು ಪ್ರಾಣಿಗಳೇ—ಬೇಕಾದಲ್ಲಿ, ಬೇಕಾದಾಗ. ಅದಕ್ಕೊಂದು ಸರಿಯಾದ ಸ್ಥಳವಿರಲಿ."

"ಮಾಧವೀ ನಿಜಕ್ಕೂ?"

"ಹುಂ, ನಿನಗೆ ಹಾಗೆ ಅನಿಸುತ್ತಿದ್ದರೆ ನನ್ನ ತಕರಾರಿಲ್ಲ."

ಹಾಗಾದರೆ ನಾಳೆ ಸಾಂತಾಕ್ರೂಜದ 'ಗಂಗೋತ್ರಿ' ಹೋಟೆಲಿಗೆ."

*

"ಡಾರ್ಲಿಂಗ್—ನನ್ನ ಮೈಯಲ್ಲಿ ನೆಟ್ಟಗಿಲ್ಲ, ಸ್ವಲ್ಪ ಜ್ವರ—ಭಯಂಕರ ತಲೆ ನೋವು," ಎಂದು ಚೀಟಿ ಕಳುಹಿಸಿದ್ದಳು ಮಾಧವಿ.

ರಾಹುಲ ಮಾಧವಿ ಬರದಿದ್ದುದರ ಬಗ್ಗೆ ವಿಚಾರ ಮಾಡುತ್ತಲೇ ಕಾಲ ಕಳೆದಿದ್ದ. ಅವಳ ಸಂಬಂಧದ ಜವಾಬ್ದಾರಿತನದಿಂದ ಪಾರಾದೆನೆಂದು ಮನ ನಿರಾಳವಾಗಿದ್ದರೂ ಸಾಂತಾಕ್ರೂಜಕ್ಕೆ ಹೋಗದಿದ್ದುದರಿಂದ ನಿರಾಶೆ ತುಂಬಿ ಸಂಜೆ ಕೆನಡಿ ಬ್ರಿಜ್ಜಿನತ್ತ ತಿರುಗಾಡಲು ಹೊರಟಿದ್ದ. ಅಲ್ಲಿ ಒಬ್ಬ ಮಧ್ಯಸ್ಥ ಆತನಿಗೆ ಏನೇನೋ ಬಡಬಡಿಸಿ, "ತುಂಬಾ ತರುಣಿ—ಬಿಹಾರಿ—ಕಾಣಲು ಚೆಂದ" ಎಂದು ಕರೆದೊಯ್ದು. ನೋಡಿದೊಡನೆ ಹಿಂದಿರುಗಿದ್ದ. ಮಧ್ಯಸ್ಥ ಅವನ ಹಿಂದಿನಿಂದ, "ಸಾರ್ ಅವಳು ಚೆನ್ನಾಗಿಲ್ಲದಿದ್ದರೆ ಇನ್ನೊಬ್ಬಳನ್ನು ತೋರಿಸುವೆ—ಗೋವೆಯ ಮಾಲು" ಎಂದು ದುಂಬಾಲು ಬಿದ್ದಿದ್ದ. ಮಾವಿನ ಹಣ್ಣಿನಂತಿದ್ದಾಳೆ ಹುಡುಗಿ, ಎಂದು ಆಗ್ರಹಪಡಿಸಿದರೂ ಅವನ ಮಾತನ್ನಲಕ್ಷಿಸಿ, ಅವನಿಗೊಂದು ನಮಸ್ಕಾರ ಮಾಡಿ, ಬೇಗ ಬೇಗನೆ ನಡೆದು ಬಿಟ್ಟಿದ್ದ. ಆಪೇರಾ ಹೌಸ್ ಬಳಿ ಬಂದ ನಂತರವೇ ಉಶ್ಯೆಂದು ನಡಿಗೆಯ ವೇಗ ಕಡಿಮೆ ಮಾಡಿದ್ದು.

ರೂಮಿಗೆ ಬಂದು ಕೀಲಿ ತೆಗೆದು, ಬಂದಿದ್ದ ಪತ್ರಗಳನ್ನೆಲ್ಲಾ ಆರಿಸಿಕೊಂಡು ಒಂದೊಂದಾಗಿ ಒಡೆದು ಓದತೊಡಗಿದ. ಅದರಲ್ಲಿ ಅರವಿಂದನ ಪತ್ರ ನೋಡಿ ಕೊಂಚ ಕಸಿವಿಸಿಯಾದರೂ ಒಡೆದು ಓದತೊಡಗಿದ ಓದು—ಲೈಬ್ರರಿ—ಹೋಟೆಲ್—ಪಿಕ್ನಿಕ್, ಮುಂದೆ ಓದುತ್ತಾ, ಓದುತ್ತಾ ವೈದೇಹಿಯ ಬಗ್ಗೆ ಇದ್ದುದರಿಂದ ಏನು ಬರೆದಿದ್ದಾನೆ ಈ ಜೋಕುಮಾರ ಎಂದು ನೋಡತೊಡಗಿದ.

"ನೀನಂದು ಪಿಕ್ನಿಕ್‌ನಲ್ಲಿ ವೈದೇಹಿಗೆ ಹೇಳಿದ್ದೆಲ್ಲಾ ನನಗೆ ಹೇಳಿದಳು. ಅದನ್ನು ಕೇಳಿ ನನ್ನ ಮನಸ್ಸಿಗೆ ಅತೀವ ನೋವಾಯಿತು. ನಿನ್ನ ಬಗ್ಗೆ, ನಿನ್ನ ವ್ಯಕ್ತಿತ್ವದ ಬಗ್ಗೆ ತುಂಬಾ ಆದರವನ್ನಿಟ್ಟುಕೊಂಡವರಲ್ಲಿ ನಾನೊಬ್ಬ. ಆ ಆದರದ ಮೂಲಕವೇ ನಿನ್ನ ವಿಕ್ಷಿಪ್ತತೆಯನ್ನು ಅಲಕ್ಷಿಸಿ ನಿನ್ನಲ್ಲಿಯ ಒಳ್ಳೆ ಗುಣಗಳ ಮೇಲೆ—ನಿನ್ನ ಪ್ರಾಮಾಣಿಕತೆ, ನಿನ್ನ ಸೂಕ್ಷ್ಮತೆ, ನಿನ್ನ ಬುದ್ಧಿವಂತಿಕೆ—ಇವುಗಳ ಮೇಲೆಯೇ ನನ್ನ ಲಕ್ಷ್ಯ ಕೇಂದ್ರೀಕರಿಸಿದ್ದೆ. ನೀನು ಹೀಗೆ ಒಮ್ಮೆಲೇ ಕುತ್ತಿಗೆ ಕೊಯ್ಯುವ ಕೆಲಸ ಮಾಡಬಹುದೆಂದು ನಾನು ಕನಸು—ಮನಸಿನಲ್ಲೂ ಎಣಿಸಿರಲಿಲ್ಲ. ವೈದೇಹಿಯ ಮುಂದೆ ಈ ರೀತಿ ಪ್ರೀತಿ ವ್ಯಕ್ತ ಮಾಡಿ ಅವಳನ್ನು ಲಗ್ನವಾಗಲು ಸಿದ್ಧನಿದ್ದೇನೆಂಬ ಔದಾರ್ಯದ ಬಡಾಯಿ ಹೊಡೆಯುವ ಕಾರಣವೇನಿತ್ತು?

ನಿನಗೆ ನನ್ನ ಜೀವನ, ನನ್ನ ಸುಖ, ನನ್ನ ಆಸೆ-ಆಕಾಂಕ್ಷೆಗಳ ಬಗ್ಗೆ ಮತ್ಸರ ಉಂಟಾಯಿತೇ? ಅಥವಾ ತುಂಟತನದಿಂದ ಹಾಗೇ ಹಾಲಿನಲ್ಲಿ ಹುಳಿ ಹಿಂಡಿ ನೋಡಬೇಕೆಂದು ಬಯಸಿದೆಯಾ? ಅಥವಾ ನಿನಗೆ ನಿಜಕ್ಕೂ ವೈದೇಹಿ ಬೇಕೆ? ವೈದೇಹಿಯ ಸಲುವಾಗಿಯೋ ನೀನೇ ಮಾಧವಿಯನ್ನು ಅನಪೇಕ್ಷಿತವಾಗಿ ದೂರ ಸರಿಸಿಬಿಟ್ಟೆಯಾ? ಇದು ನನಗೆ ಗೊತ್ತಾಗಬೇಕು. ವೈದೇಹಿಯನ್ನು ನಾನು ಲಗ್ನವಾಗುವಿಯಾ ಎಂದು ಕೇಳುವುದಕ್ಕೆ ಮೊದಲು ಅವಳ ಅಂತರಂಗವೆಲ್ಲ ಸ್ಪಷ್ಟವಾಗಿ ಗೊತ್ತಾಗಬೇಕು...... ಅವಳು ಮೊನ್ನೆ ಮಾತನಾಡಿದ ರೀತಿ ನೋಡಿದರೆ, ಅವಳ ಮಾತ್ರ ಹೃದಯ ನಿನ್ನನ್ನು... ರಾಹುಲ, ಆ ದಿನ ಏನಾಯಿತೆಂಬುದನ್ನು ಸ್ಪಷ್ಟಪಡಿಸು ಪ್ಲೀಸ್. ವೈದೇಹಿಗೆ ಹೀಗೆ ಕೇಳುವ ಧೈರ್ಯವಿಲ್ಲ ನನಗೆ. ನೀನೇ ಎಲ್ಲವನ್ನೂ ಹೇಳಿ ಅವಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಸಹಾಯ ಮಾಡುವಿ ಎಂದು ಆಶಿಸುತ್ತೇನೆ."

ರಾಹುಲ ತನ್ನಷ್ಟಕ್ಕೆ ತಾನು ನಕ್ಕ. ಸಹಾಯ ಬೇಕಂತೆ ಸಹಾಯ, ವೈದೇಹಿಯ ಬಗ್ಗೆ ತನಗೆ ಆ ಕ್ಷಣ ಅನಿಸಿದ್ದನ್ನು ತೆಗೆದುಕೊಂಡು ಈತ ವೈದೇಹಿಯ ಮನಸ್ಸಿನ ಸತ್ಯವನ್ನು ಕಂಡುಹಿಡಿಯುವ ಮೂರ್ಖ!

"ಎಲ್ಲಾ ಕೆಲಸ ಮುಗಿಯಿತು ಸಾಬ್, ಮತ್ತೇನಾದರೂ ಬೇಕೇನೂ?" ಎಂದು ಹಾಸ್ಟೆಲ್ ಬಾಯ್ ಕೇಳಿದ.

"ಏನೂ ಬೇಡ, ನಾನು ಕೊಂಚ ಹೊರಗೆ ಹೋಗಲಿರುವೆ," ಎಂದು ಅರಿವೆ ಬದಲಿಸಿ ರೂಮಿಗೆ ಬೀಗ ಜಡಿದು ಹೊರಟನು.

*

ಚೈನೀಜ್ ರೆಸ್ಟೋರೆಂಟಿನ ಅಟ್ಟದ ಮೇಲೆ, ಸುಂದರ ಮಂದ ಪ್ರಕಾಶದಲ್ಲಿ, ನಿರ್ಜನ ಪ್ರದೇಶದಲ್ಲಿ ಎದುರು ಬದುರು ಕುಳಿತುಕೊಂಡು ವೈದೇಹಿ– ರಾಹುಲರು ನೂಡಲ್ಸ್ ತಿನ್ನತೊಡಗಿದ್ದರು. ವೈದೇಹಿ ರಾಹುಲನನ್ನೇ ನೋಡುತ್ತಿದ್ದಳು. ಕಾಲೇಜಿನಿಂದ ಅವಳೊಡನೆ ಕೆಲವು ವಿಷಯ ಮಾತನಾಡಬೇಕೆಂದು ಹೋಟೆಲಿಗೆ ಕರೆ ತಂದಿದ್ದ.

"ವೈದೇಹಿ!" ರಾಹುಲ ಸ್ವಲ್ಪ ಮೃದುವಾಗಿ ನುಡಿದ. "ಉಂ?" ವೈದೇಹಿಯ ಕಣ್ಣುಗಳು ಭೀತಿಯಿಂದ ದೊಡ್ಡದಾಗಿದ್ದುವು.

ರಾಹುಲ ಒಂದು ದೊಡ್ಡ ನಿಟ್ಟುಸಿರು ಬಿಟ್ಟ.

"ವೈದೇಹಿ, ಇದೋ ಇಲ್ಲಿ ಒಂದು ಪತ್ರವಿದೆ."

ವೈದೇಹಿಯ ಕಣ್ಣು ಪ್ರಶ್ನಾರ್ಥಕವಾಗಿ ನೋಡತೊಡಗಿದುವು.

"ಅರವಿಂದನ ಪತ್ರ. ನಿಮ್ಮ ಬಗ್ಗೆ ಇದರಲ್ಲಿ ಏನೇನೋ ಇದೆ, ಓದಿ ನೋಡಿ. ಇದನ್ನೋದಿದರೆ ನಿಮ್ಮ ಮೇಲೆ ಆತನ ಪ್ರೇಮ ಎಷ್ಟಿದೆ ಎಂಬುದು ಖಚಿತವಾಗಿ ಗೊತ್ತಾಗುವುದು. ಆದರೆ ಅದನ್ನು ನಿಮ್ಮ ಮುಂದೆ ಸಂಪೂರ್ಣ ವ್ಯಕ್ತ ಮಾಡಲು ಅವನಲ್ಲಿ ಧೈರ್ಯವಿಲ್ಲ."

"ಧೈರ್ಯ? ಬಹುಶಃ ಅವನಲ್ಲಿ ಸೂಕ್ಷ್ಮತೆ ಹೆಚ್ಚಿನ ಪ್ರಮಾಣದಲ್ಲಿರಬಹುದು– ನಾನು ವಿಧವೆ, ನನ್ನ ಮುಂದೆ ಆತ ಹೇಗೆ ಬಿಚ್ಚು ಮನಸ್ಸಿನಿಂದ ವ್ಯಕ್ತಮಾಡಬಲ್ಲ?"

"ಅದೇ ಸಮಸ್ಯೆ. ಅವನೂ ಹೇಳಲಾರ— ನೀವು ನಿಮ್ಮ ಪರಿಸ್ಥಿತಿಯ ಮೂಲಕ ಬಾಯಿ ಬಿಟ್ಟು ಏನೂ ಹೇಳಲಾರಿರಿ. ಆದ್ದರಿಂದಲೇ ನಾನು ನಿಮ್ಮನ್ನು ಇಲ್ಲಿಗೆ ಕರೆತಂದದ್ದು."

ವೈದೇಹಿ ಪತ್ರ ಬಿಚ್ಚಿ ಓದತೊಡಗಿದಳು. ಓದುತ್ತಾ ಓದುತ್ತ ಮೊದಲು ಗಂಭೀರವಾಗಿದ್ದ ಮುಖ ಒಮ್ಮೆಲೇ ನಗುಮುಖವಾಯಿತು. "ಇದೆಂಥಹ ಹುಚ್ಚುತನ," ಎಂದು ಇನ್ನಷ್ಟು ನಕ್ಕಳು.

"ನೀವೆನ್ನುವುದು ನಿಜ. ಇದು ಹುಚ್ಚುತನವಲ್ಲದೆ ಮತ್ತೇನು? ಆದರೆ ಇದು ಗಂಭೀರವಾದ ವಿಚಾರ ಮಾಡಬೇಕಾದ ಹುಚ್ಚುತನ— ಈ ಪತ್ರದ ಅರ್ಥ ಗೊತ್ತೆ ನಿಮಗೆ?"

"ಏನು?"

"ಇದರರ್ಥ ಆತನ ಪ್ರೇಮ ಬಹಳ ಉತ್ಕಟವಾಗಿದೆ— ಇಷ್ಟೇ ಅಲ್ಲ— ನನ್ನನ್ನು ಬಯ್ದು, ಇದಷ್ಟು ದೂರವಿಟ್ಟು, ನಿಮ್ಮನ್ನು

ವಶಪಡಿಸಿಕೊಳ್ಳಬೇಕಿತ್ತು. ಮುಖ್ಯ, ನನಗೇಕೆ ಪತ್ರ ಬರೆಯಬೇಕು ಹೇಳಿರಿ."

"ಅವರ ಮಿತ್ರರೆಂದು."

"ಥೂ. ಪ್ರೇಮದ ಮೇಲಿನ ಸ್ನೇಹ ಬೂದಿ. ಈ ಪತ್ರದ ಅರ್ಥ ಬೇರೆಯೇ ಇದೆ. ನಿಮ್ಮ ಮೇಲೆ ಅವನ ಪ್ರೇಮವಿದೆ ನಿಜ. ಆದರೆ ನಿಮ್ಮನ್ನು ಯಾವ ಕಾರಣದಿಂದಲೋ, ಏನೋ ಥೂ, ನನ್ನ ಕಡೆ ತಳ್ಳುವ ಉದ್ದೇಶವಿದೆ. ಅದರಲ್ಲಿ." ಎಂದು ತನ್ನ ತಂತ್ರ ಉಪಯೋಗಿಸ ತೊಡಗಿದ.

"ಊಂ?" ವೈದೇಹಿ ನಿಜಕ್ಕೂ ಗೊಂದಲದಲ್ಲಿ ಬಿದ್ದಳು.

"ಅತನಲ್ಲಿ ಉತ್ಕಟ ಪ್ರೇಮವಿದೆ. ಆದರೆ ಯಾವುದೋ ಒಂದು ಭೀತಿ, ಅಧೈರ್ಯ ತನ್ನ ಆ ಪ್ರೇಮಕ್ಕೆ ಸಂಪೂರ್ಣ ಒಪ್ಪಿಸಿಕೊಳ್ಳಲು ಅವನಿಗೆ ಬಿಡಲೊಲ್ಲದಾಗಿದೆ. ಈ ಅಧೈರ್ಯಕ್ಕೆ ಏನೇನೋ ಕಾರಣಗಳಿರಬಹುದು... ಸಂಸ್ಕಾರಕ್ಕೆ ವಿರುದ್ಧವಾದ ಒಂದು ಸಂಗತಿಯನ್ನು ಮಾಡಬೇಕಾದ ಧೈರ್ಯ ಅವನಲ್ಲಿಲ್ಲ ತನ್ನ ಅಣ್ಣ, ವಹಿನಿ ಮತ್ತು ಇನ್ನುಳಿದ ಸಂಬಂಧಿಕರ ಮನಸ್ಸಿನ ವಿರುದ್ಧ ಧೈರ್ಯ ಅವನಲ್ಲಿ ಸಾಕಷ್ಟಿದ್ದಂತಿಲ್ಲ. ಆದರೆ ನೀವು ಅವನಿಗೆ ಬೇಕೇಬೇಕು. ಈ ದ್ವಂದ್ವ–ಹೃನ್ಮನಸ್ಸಿನ ದ್ವಂದ್ವ– ಅವನನ್ನು ಹುಚ್ಚನನ್ನಾಗಿ ಮಾಡುತ್ತಿದೆ. ಸತ್ಯವಂತೆ! ನೀವು ನನಗೆ ಬೇಕಂತೆ, ಸುಮ್ಮಸುಮ್ಮನೆ ತನ್ನ ಮನಸ್ಸಿನಲ್ಲಿ ತಾನೇ ವೇದನೆಯನ್ನು ಬಿತ್ತಿ, ಆ ವೇದನೆಯ ಬೇಲಿಯೊಳಗೆ ಅಳುತ್ತಾ ಕೂತು, ತನ್ನ ನಿಜವಾದ ಹಂಬಲವನ್ನು ತೃಪ್ತಿಗೊಳಿಸುವ ಹೊಣೆಯನ್ನು ತಪ್ಪಿಸಿಕೊಳ್ಳುತ್ತಿದ್ದಾನೆ, ತನ್ನ ಪ್ರೇಮದಿಂದ ತಾನೇ ಓಡಿಹೊರಟಿದ್ದಾನೆ—"

ವೈದೇಹಿ ದಿಙ್ಮೂಢಳಾಗಿ, ಬೆಪ್ಪಾಗಿ ಕೇಳುತ್ತಿದ್ದಳು.

"ಅರವಿಂದನ ಈ ಹುಚ್ಚು ಬಿಡಿಸುವ ಕರ್ತವ್ಯ ನನ್ನದು. ಏನೂ ಹೆದರಬೇಡಿ ಆದರೆ ಅದಕ್ಕೆ ಮುಂಚೆ ನಿಮ್ಮ ಮಾತಿನ ಖಾತ್ರಿಯಾಗಬೇಕು. ನಿಮಗೆ ಅರವಿಂದನ ಬಗ್ಗೆ ಏನನಿಸುವುದು ?"

"ಆಂ ?"

"ಆಂ ಇಲ್ಲ, ಊಂ ಇಲ್ಲ. ಸ್ಪಷ್ಟ ಉತ್ತರಿಸಿ."

"ವಿಚಾರ ಮಾಡಬೇಕು; ನಮ್ಮಣ್ಣನೊಡನೆ ಚರ್ಚಿಸಬೇಕು."

"ಆ ಚರ್ಚಿಸುವ ವಿಚಾರ ನನಗೆ ಬಿಡಿರಿ. ನಿಮ್ಮಣ್ಣನ ಫೋನ್ ನಂಬರ್ ಹೇಳಿರಿ. ಈಗಲೇ ಮಾಡಿ ವಿಚಾರ ತಿಳಿಸುವೆ," ಎಂದು ಎದ್ದನು. ಫೋನಿನಲ್ಲಿ ಮಾತನಾಡಿ ಬಂದು, "ವೈದೇಹಿ ನಿಮ್ಮಣ್ಣ ಈಗಲೇ ಕರೆದಿದ್ದಾನೆ ನನ್ನನ್ನೂ–ಹಾಗೂ ನಿಮ್ಮನ್ನು, ನಡೆಯಿರಿ ಹೋಗೋಣ," ಎಂದು ಎದ್ದನು.

*

ವೈದೇಹಿಯ ಮನೆಯಿಂದ ಹಿಂದಿರುಗಿ ಬಂದ ರಾಹುಲ ತನ್ನ ರೂಮಿನ ಬಾಗಿಲು ತೆಗೆದು ನೇರವಾಗಿ ಕಾಟನತ್ತ ಹೋಗಿ ಬೂಟು ಸಹ ತೆಗೆಯದೆ ಗಾದಿಯ ಮೇಲೆ ಉರುಳಿದ. ತಾನಿಂದು ಆಡಿದ ನಾಟಕದ ನೆನಪು ಬಿಚ್ಚ ತೊಡಗಿತು. ಅವನಿಗೆ ನಗು ಬಂತು. ಇಷ್ಟು ಹೊತ್ತಿನ ತನಕ ಒಂದು ಒಳ್ಳೆಯ ಕೆಲಸ ಮಾಡಿದೆ ಎಂಬ ಸಾರ್ಥಕ್ಯಭಾವ ಅವನ ಮನಸ್ಸಿನಲ್ಲಿ ಸುಳಿದಾಡಿ, ಅವನಿಗೆ ಒಂದು ಬಗೆಯ ಬೆಚ್ಚಗಿನ ಸುಖದ ಅನುಭವ ಕೊಟ್ಟಿತು. ಯಾವುದೇ ಒಂದು ಅಮಲಿನಲ್ಲಿ ಏನೋ ಒಂದು ಮಾಡಿ ಬಂದಂತೆನಿಸಿ, ಮಾಡಿದ್ದರ ಬಗ್ಗೆ ನಗು ಬಂತು. ಬಹಳ ಮೋಜೆನಿಸಿತು. ಧಮನಿಯಲ್ಲಿ ಅಮಲೇರಿದ್ದಾಗ ಕೆಟ್ಟ ಕೆಲಸವನ್ನು ಮಾಡಿದ್ದ. ಅದು ಇನ್ನೊಂದು ಬಗೆಯ ಅಮಲಿನಲ್ಲಿ ಇಂದು 'ಒಳ್ಳೆಯ' ಕೆಲಸ ಮಾಡಿದ್ದ. ಇಂದಿನ ಒಳ್ಳೆಯ ಕೆಲಸದ ಪರಿಣಾಮವಾಗಿ ಅರವಿಂದ–ವೈದೇಹಿಯನ್ನು ಲಗ್ನವಾಗುವ, ಅವಳನ್ನು ಉಪಭೋಗಿಸುವ, ಮುಂದೆ ಅವರ ಸಂಸಾರದ ಫಲವಾಗಿ ನಾಲ್ಕಾರು ಜೀವಿಗಳು ಹುಟ್ಟಿ ಬೆಳೆಯುವರು. ಅರವಿಂದ-ವೈದೇಹಿ ಆನಂದದಿಂದ ತೃಪ್ತಿಯಿಂದ ನಿಃಶ್ವಾಸಬಿಡುವರು.

ಅಂದ ಹಾಗೇ ಬೇರೆಯವರ ಸಲುವಾಗಿ ಏನಾದರೂ ಮಾಡುವುದರಲ್ಲಿ ಒಂದು ಬಗೆಯ

ಆನಂದವಿದೆ ಎಂಬುದು ರಾಹುಲನಿಗೆ ತನ್ನ ಇಂದಿನ ನಾಟಕದ ಮೂಲಕ ಮನದಟ್ಟಾಗಿದೆ! ಒಮ್ಮೊಮ್ಮೆ ತನ್ನ ಸ್ವಂತ ವ್ಯಕ್ತಿತ್ವವನ್ನು, ಅಹಂಭಾವವನ್ನೂ ಮರೆತು, ಒಂದು ಉದ್ದಿಶ್ಯ, ಒಂದು ಗುರಿಯು. ಸಾಧನ ಮಾತ್ರವಾಗಿ ಕೆಲಸಮಾಡುವುದರಲ್ಲಿ ಒಂದು ಬಗೆಯ ಆನಂದವಿದೆ ಎಂಬುದು ಇಂದು ರಾಹುಲನಿಗೆ ಖಚಿತವಾಗಿದೆ.. ಹುಂ, ನಾಳೆ ಎದ್ದ ಕೂಡಲೇ ಬೆಳಗಾವಿಗೆ ಹೋಗಿ ಬಿಡುವುದೇ ಲೇಸು... ಪಾಪ, ಮಾಂಶಿ ಹಾದಿ ಕಾಯುತ್ತಿರಬೇಕು. ಅವಳ ಸಲುವಾಗಿಯಾದರೂ ಕೆಲವು ದಿನ ಹೋಗಿ ಬರಲೇಬೇಕೆಂದು ನಿರ್ಧರಿಸಿ, ದೀಪವಾರಿಸಿ ಕತ್ತಲೆಯ ಮರೆಹೊಕ್ಕ.

*

ಬೆಳಗಾವಿಯ ಮಾಂಶಿ ಮನೆಗೆ ಬಂದ ನಂತರ ಕುಂದಾ ಶಿರೋಡಕರ ಅವನ ಮನಸ್ಸನ್ನು ಈಗೆರಡು ದಿನದಿಂದ ಕಟ್ಟಾಡಿಸುತ್ತಿದ್ದಾಳೆ. ಅವಳ ಹೊಸದಾಗಿ ತುಂಬಿದ ದೇಹದಲ್ಲಿ ನಲಿದಾಡುತ್ತಿರುವ ತಾರುಣ್ಯ, ಅವಳ ಮಾತುಗಳಲ್ಲಿ, ಕಣ್ಣುಗಳಲ್ಲಿ, ಅಂಗವಿನ್ಯಾಸದಲ್ಲಿ ಹರಡಿನಿಂತ ಕಾಮುಕತೆ, ರಾಹುಲನಲ್ಲಿ ಅವಳು ತೋರಿಸುವ ವಿಶೇಷ ಆಸ್ಥೆ, ಆದರ, ಕುತೂಹಲ, ಮುಚ್ಚುಮರೆ ಇಲ್ಲದಂತೆ ಹರಡಿನಿಂತ, ದಿಟ್ಟಿಸಿ ನೋಡುವ ಕಣ್ಣುಗಳಲ್ಲಿ ಹಾಗೂ ಬಿರಿದುನಿಂತ ತುಟಿಗಳಲ್ಲಿ, ನೇರವಾದ ಆಹ್ವಾನ–ಇವೆಲ್ಲಾ ರಾಹುಲನನ್ನು ಆಟವಾಡಿಸುತ್ತಿವೆ. ಅವನೂ ಕೂಡ ವೇಳೆ ಹೋಗಲೆಂದು ಆಟವಾಡುತ್ತಿರುವ.

ಕ್ಯಾಪ್ಟನ್ ಸಾಹೇಬರ ಬಂಗಲೆಯ ಹಿಂಬದಿಯಲ್ಲಿ ಸಿದ್ಧಗೊಳಿಸಿರುವ ಬ್ಯಾಡ್ಮಿಂಟನ್ ಕೋರ್ಟಿನಲ್ಲಿ ಕುಂದಾ ಹಾಗೂ ಅವಳ ಗೆಳೆಯರು ಆಟವಾಡುತ್ತಿದ್ದರು. ಕುಂದಾಳ ನರ್ತಿಸುವ ದೇಹದತ್ತ, ಸುಮ್ಮನೆ ನಿಂತಾಗ ಸುಂದರವಾಗಿ ಕಾಣುವ ಅವಳ ತ್ರಿಭಂಗಿ ನಿಲುವಿನತ್ತ ನೋಡುತ್ತಿದ್ದಾನೆ. ಅವಳಿಗೆ ತಾನೇಕೆ ಜೀವನಾನುಭವ ಕೊಡಬಾರದು ಎಂಬ ವಿಚಾರ ರಾಹುಲನ ಮನಸ್ಸಿನಲ್ಲಿ ಬ್ಯಾಡ್ಮಿಂಟನ್ ಹೂವಿನಂತೆ ಹಾರಾಡುತ್ತದೆ. ಕುಂದಾಳಲ್ಲಿ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸಿದಂತೆ ಅವನ ನಾಳಿನ ಚಿಂತೆ ಮಸುಕಾಗುತ್ತದೆ... ಜಗತ್ತಿನ ಎಲ್ಲಾ ಸಮಸ್ಯೆಗಳನ್ನೂ ಹೀಗೆ ಬಾಡು ಸುಂದರವಾದ ನಳನಳಿಸುವ ಹೆಣ್ಣು ದೇಹದಲ್ಲಿ ಹುದುಗಿಟ್ಟು ನಗುನಗುತ್ತಾ ಜೀವಿಸಿರಲು ಶಕ್ಯವಿಲ್ಲವೇ ಎಂದು ತನ್ನಷ್ಟಕ್ಕೆ ತಾನು ಹೇಳಿಕೊಳ್ಳುತ್ತಿದ್ದಾನೆ ರಾಹುಲ. ಈ ದೃಷ್ಟಿಯಿಂದ ಮಾಧವಿ ಸಂಪೂರ್ಣ ನಿರುಪಯೋಗಿ, ಸ್ವಂತ ವ್ಯಕ್ತಿತ್ವವಿಲ್ಲದ, ತಾನು ಹೇಳಿದಂತೆ ಕೇಳಿದ್ದಕ್ಕೆ ಗೋಣು ಚಾಚುವ, ಬೆನ್ನು ಬಾಗಿಸುವ, ಬ್ಯಾಡ್ಮಿಂಟನ್ ಹೂವು ಬಂದತ್ತ ತಿರುಗುತ್ತ ಅದನ್ನು ಹೊಡೆಯು ಬೇಕಾಗುವಷ್ಟೆ ಶಕ್ತಿಯನ್ನು ಅಂಗವಿನ್ಯಾಸಗಳಲ್ಲಿ ಹಂಚಿ ಹಾಕಿ ಕುಣಿಸುತ್ತ, ಸುಮ್ಮ ಸುಮ್ಮನೆ ಅರ್ಥವಿಲ್ಲದೆ– ಸ್ವಾರ್ಥವಿಲ್ಲದೆ ನಗುತ್ತಾ ಆಡುತ್ತಿದ್ದ ಕುಂದಾಳಂತಹ ನಿರುಪದ್ರವಿ ಜೀವಿ, ಮಾಂಸದ ಮುತ್ತಿಗಿನ ಮುದ್ದೆಯೇ ನಿಜಕ್ಕೂ ಹಿತಕರವಾದುದು ಅಲ್ಲವೇ ಎಂಬ ವಿಚಾರ ಬಂದುದೇ ರಾಹುಲ ಕುಂದಾಳನ್ನು ಕರೆದು,

"ಸ್ವಲ್ಪ ನೀರು ಬೇಕಿತ್ತು," ಎಂದ.

ನೀರ ತರಲು ಕುಂದಾ ಅಡಿಗೆ ಮನೆಗೆ ಹೋದಾಗ ರಾಹುಲನೂ ಹಿಂಬಾಲಿಸಿದ.

"ನೀ ಬಹಳ ಚೆಂದ ಆಡ್ತೀಯಾ, ನಿನ್ನ ಗಲ್ಲವೆಲ್ಲಾ ಕೆಂಪಾಗ್ಬಿಟ್ಟಿದೆ ಟೊಮ್ಯಾಟೊದಂತೆ ವಾಹ್!" ಅಂದ.

ಕುಂದಾ ಕೈಯಲ್ಲಿನ ಲೋಟಾದ ನೀರು ಕೊಡುತ್ತಾ "ಬಿಡಿರಿ, ನಾ ಎಲ್ಲಿ ಚಲೋ ಆಡ್ತೀನಿ." ಎಂದು ನಕ್ಕಾಗ ಸಣ್ಣಗೆ ಅವಳ ತುಟಿ ನಡುಗಿದುವು.

"ನನಗೆ ನೀರು ಬೇಕಿರಲಿಲ್ಲ ಗುಲಾಬು ಶರಾಬು ಬೇಕಿತ್ತು. ತಡೆಯಲಾಗಲಿಲ್ಲ" ಎಂದೆನ್ನುತ್ತಾ ರಾಹುಲ ನೀರಿನ ಲೋಟವನ್ನು ಪಕ್ಕದಲ್ಲಿಟ್ಟು ಕುಂದಾಳನ್ನು ಬರಸೆಳೆದು ಅವಳ ನಡುಗುವ ತುಟಿಗಳನ್ನೂ ಕುಣಿಯುವ ಕಣ್ಣುಗಳನ್ನೂ ಮುದ್ದಿಸಿಬಿಟ್ಟ. "ಕುಂದಾ, ನೀ ಬಹಳ ಸ್ವೀಟಾಗಿದ್ದೀಯೆ" ಎಂದು ಅವಳನ್ನು ಇನ್ನಷ್ಟು ಒತ್ತಿ ಹಿಡಿದ. ಎರಡು



ಮದುರಾ ಸೌಥ ಇಂಡಿಯಾ ಕಾರ್ಪೋರೇಶನ್ (ಪಿ)ಲಿ.,
ನಂ. ೩ ಮೊದಲನೇ ಮೇನ್ ರಸ್ತೆ, ಗಾಂಧಿನಗರ ಬೆಂಗಳೂರು ೫೬೦೦೦೯

MCL-171 KAN

ದಿನಗಳ ಪ್ರಯತ್ನ ಕೊನೆಗೆ ಸಫಲವಾದಂತೆ. ಕುಂದಾ ತೃಪ್ತಿಯಿಂದ ನಿಟ್ಟುಸಿರು ಬಿಟ್ಟರು—'ಆ' ಎಂದು ಮೃದುವಾಗಿ ನರಳಿದಳು. ತನಗೆ ಅರಿವಿಲ್ಲದಂತೆಯೇ ರಾಹುಲನನ್ನು ಒತ್ತಿ ಹಿಡಿದಿದ್ದಳು. ಅನಂತರ ಅವರೆಲ್ಲರೂ ಏನಾದರೂ ತಿಳಿದುಕೊಂಡಾರೆಂದು ನಾಳೆ ಸಂಜೆ ಸಿಕ್ಕುವೆನೆಂದು ಹೇಳಿ ಹೊರಗೋಡಿದಳು.

ಮೂರನೆಯ ದಿನ ಸಂಜೆ ರಾಹುಲ ಕುಂದಾಳನ್ನು ಕ್ಯಾಂಟನ್‌ಮೆಂಟ್ ಪಾರ್ಕಿನ ನಿರ್ಜನ ಮೂಲೆಯೊಂದರಲ್ಲಿ ಬೇರೊಂದು ಲೋಕದಲ್ಲಿ ಓಲಾಡಿಸಿ ಸಾಕಷ್ಟು ಅವಳ ರಕ್ತಕ್ಕೆ ಲಗ್ಗೆಯಿಟ್ಟು ಅವಳನ್ನು ಥಳಕ ಮಾಡಿಯ ಮನೆಗೆ ಮುಟ್ಟಿಸಲು ಹೊರಟಾಗ ರಾತ್ರಿ ಒಂಬತ್ತಾಗಿತ್ತು.

"ರಾಹುಲ, ನಿಮ್ಮ ಮಾಂಶಿಯಂತೂ ನಿಮ್ಮ ಬಗ್ಗೆ ಹೇಳಿ ಹೇಳಿ ನಮ್ಮ ಮನೆಯವರಿಗೆಲ್ಲಾ ಆಸೆ ಇಟ್ಟಿದ್ದಾಳೆ ಗೊತ್ತೇನು ?" ಇದು ಕುಂದಾಳ ಪ್ರಶ್ನೆ.

"ಹೀಗೇನೂ ?"

"ಹೂಂ ಅವಗೇ, ನನಗೆ ನೀವು ಇಂಥಾ ದಿನ ಬರುವವರಿದ್ದೀರಿ-ಇಷ್ಟು ದಿನ ಇರುವವರಿದ್ದೀರಿ. ನಾನು ಇಲ್ಲಿ ಲವರಲ್ಲಿಗೆ ಬರಬೇಕು ಎಂದು ಆಗ್ರಹದಿಂದ ಹೇಳಿದ್ದರು" ರಾಹುಲನಿಗೆ ಈಗ ಒಮ್ಮೆಲೇ ಎಲ್ಲಾ ಸ್ಪಷ್ಟವಾಯಿತು. ಮಾಂಶಿ ನಗುತ್ತಲೇ ಅವನಿಗೆ, ಕುಂದಾಳನ್ನು ಮನೆಗೆ ಕಳಿಸಿ ಬಾ ಎಂದು ಏಕೆ ಹೇಳುವರೆಂಬುವದು !

"ರಾಹುಲ ನಾನು ನಿಮಗೆ ನಿಜಕ್ಕೂ ಸೇರುವೆನೇ ?"

'ಹೂಂ" ರಾಹುಲನ ಬೆರಳುಗಳು ಅವಳ ಅಂಗಾಂಗಳ ಮೇಲೆ ಹರಿದಾಡುತ್ತಿದ್ದುವು

"ಬಹಳ—ಬಹಳ, ಸೇರಿದನೆ ?" ರಾಹುಲನ ಮೈಯಲ್ಲಿ ಅಮಲೇರಿತ್ತು.

"ನನ್ನನ್ನು ನೀವು ಪ್ರೀತಿಸುವುದು ಶಕ್ಯವೇ ?"

ಯಾಕೆ ಕುಂದಾ ನಾನು ಪ್ರೀತಿಸುತ್ತಿಲ್ಲವೇ ಈಗ ?"

ಇನ್ನು ಮೇಲೆಯೂ ನನ್ನನ್ನು ಪ್ರೀತಿಸುವಿರಾ ?"

"ಹುಚ್ಚಿ, ಹುಚ್ಚಿ ನನ್ನ ಮುದ್ದು. ನೀನು ವಂಡರ್‌ಫುಲ್, ಬಹಳ ಸ್ವೀಟಾದ ಹುಡುಗಿ." ಎಂದು ರಾಹುಲನ ಹಲ್ಲುಗಳು ಅವಳ ತುಟಿ ಕಚ್ಚಿ ಹಿಡಿದಿದ್ದುವು

"ನನಗೆ ಮೇಲಿಂದ ಮೇಲೆ ಪತ್ರ ಬರೆಯಬೇಕು ಹಾಂ ? ನನ್ನನ್ನೆಂದೂ ಮರೆಯಬಾರದು."

"ಛೇ ಅದು ಶಕ್ಯವೇ ?"

ರಾಹುಲ ಸನ್ನಿವೇಶಕ್ಕೆ ತಕ್ಕಂತೆ ಮಾತಾಡಿದ್ದ. ಆ ಸನ್ನಿವೇಶದ ಹೊರಗೆ, ಆ ಮಾತುಗಳಿಗೆ ಅವನ ದೃಷ್ಟಿಯಿಂದ ಯಾವ ಅರ್ಥವೂ ಇದ್ದಿಲ್ಲ. ಈಗ ಆ ಮಾತುಗಳಿಗೆ ಅರ್ಥ ಉಂಟಾದುದನ್ನು ನೋಡಿ ಅವನು ಒಮ್ಮೆಲೇ ಗೊಂದಲದಲ್ಲಿ ಬಿದ್ದ. ತನ್ನಿಂದ ತನಗೆ ಗೊತ್ತಾಗದೇ ಒಂದು ಪ್ರಮಾದವಾಯಿತು. ಸುಮ್ಮನೆ ಒಂದು ಜವಾಬ್ದಾರಿ ತನ್ನ ಮೇಲೆ ಬಂತು ಎಂದು ಕಸಿವಿಸಿಗೊಂಡ. ಈಗಲೇ ಏನಾದರೂ ಪ್ರತಿಕ್ರಿಯೆ ತೋರಿಸಿದರೆ ಸದ್ಯದ ಸನ್ನಿವೇಶವೊಂದನ್ನು ಹಠಾತ್ತನೆ ಒಡೆದು ಚೂರು ಚೂರು ಮಾಡಿದಂತಾಗುವುದೆಂದು ಬಗೆದು ರಾಹುಲ ಮೌನ ಧರಿಸಿ ಮುನ್ನಡೆದ. ರಸ್ತೆ ತಿರುವು ಬಂದಿದ್ದರಿಂದ ಕುಂದಾ ರಾಹುಲನತ್ತ ನೋಡಿದಳು. "ಒಳ್ಳೆಯದು ಮತ್ತೆ ಭೆಟ್ಟಿಯಾಗೋಣ, ಇಂದಿನ ಸಂಜೆಯ ಸಲುವಾಗಿ." ಎಂದು ಹೇಳಿ ಒಮ್ಮೆಲೇ ತನ್ನ ದಾರಿ ಹಿಡಿದುಬಿಟ್ಟ. ಕುಂದಾ ಅಲ್ಲಿಯೇ ನಿಂತು ಅವನು ಕಣ್ಮರೆಯಾಗುವವರೆವಿಗೂ ತನ್ನನ್ನು ನೋಡುತ್ತಿರುವವೆಂಬುದು ಅವನ ಬೆನ್ನಿಗೆ ತಾನಾಗಿಯೇ ಗೊತ್ತಾಗಿತ್ತು. ಆದರೆ ಆತನ ಕಣ್ಣುಗಳು ಮಾತ್ರ ಹೊರಳಿ ನೋಡಲೇಯಿಲ್ಲ.

ಇನ್ನು ಕುಂದಾ ಅವಳ ಮಾವೆಯುವರು. ಮಾಂಶೀ ರಾಹುಲನನ್ನು ಸುಮ್ಮನೆ ಬಿಡಲಾರರು. ಆದರೆ ಅವರದೇನು ತಪ್ಪು ? ಇದೆಲ್ಲಾ ಅವರ ಪ್ರೇರಣೆ, ಅವರ ಯೋಜನೆ, ಅವರೇ ಹೆಣೆದ ಬಲೆ. ರಾಹುಲ ಬರೆ

ನಿಮ್ಮ ಮಗಳ
ಜೀವನದ ಅತಿ
ಸಂತೋಷದ
ಕ್ಷಣವೇ ನಿಮ್ಮ ಅತಿ
ದುರ್ಭರ ಕ್ಷಣ
ವಾಗಬಹುದು!



ಅಂದು
ನಿಮ್ಮಲ್ಲಿ
ಹಣವಿರುತ್ತದೆಯೋ?

ಇಂದು 5000 ರೂ. ಗಳನ್ನು ಕರ್ಣಾಟಕ ಬ್ಯಾಂಕ್‌ನಲ್ಲಿ ಇಟ್ಟರೆ, ಅದು ನಿಮ್ಮ ಮಗಳ 21ನೇ ವಯಸ್ಸಿಗೆ (ಈಗ ಆಕೆಗೆ 6 ವರ್ಷ ವಯಸ್ಸಿದ್ದರೆ) 22,440 ರೂ. ಗಳಾಗಿ ವೃದ್ಧಿಸಿರುತ್ತದೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ಇಂದೇ ವಿಚಾರಿಸಿ.

ನಿಮ್ಮ ಉಳಿತಾಯ ಸಂಗ್ರಹಕ್ಕೆ

ಕರ್ಣಾಟಕ
ಬ್ಯಾಂಕ್ ಲಿ.

ಮಂಗಳೂರು

ಛೇರ್‌ಮನ್ ! ಕೆ. ಎಸ್ ಎನ್ ಅಡಿಗ

ಕರ್ಣಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ್ ಮತ್ತು ಗೋವಾದಲ್ಲಿ 150 ಕ್ಕೂ ಹೆಚ್ಚಿನ ಶಾಖೆಗಳಿವೆ.

CHAITRA-KB-11

ಬಲೆಯಲ್ಲಿ ಸಿಕ್ಕ ನಿರಪರಾಧಿ ಮೀನು! ಆದರೆ ಆತ ತನ್ನ ಜವಾಬ್ದಾರಿಯನ್ನು ಇಷ್ಟು ಸರಳವಾಗಿ ತಪ್ಪಿಸಿಕೊಳ್ಳಬಹುದೇ? ಇಂದು ಸಂಜೆ ಆತ ಮಾಡಿದ ಪ್ಲಾನ್ ಸ್ವಲ್ಪ ಬೇರೆಯಾಗಿತ್ತು: ಇಂದು ಪ್ರೇಮದಾಟ, ಮುಂದಿನ ಸಲ ಮುಂದಿನ ಆಟ. ಅಷ್ಟೇ, ಬೆಳಗಾವಿಗೆ ಬಂದಾಗ ಇರಲಿ ಒಂದು ಇಂಟರೆಸ್ಟ್. ಅವನ ಯೋಜನೆ ತೀರಾ ಆತ್ಮನಿಷ್ಠವಾಗಿತ್ತು. ಆತ್ಮಕೇಂದ್ರಿತವಾಗಿತ್ತು. ಬೇರಾವ ತೊಡಕೂ—ಸಂಬಂಧ ಜವಾಬ್ದಾರಿಗಳಿಂದ ಸ್ವತಂತ್ರವಾಗಿತ್ತು. ಅಂತೇ ಸರಳವಾಗಿತ್ತು. ಆದರೂ ತನ್ನ ಹೊಣೆಗೇಡಿತನದ ಬಗ್ಗೆ ತನ್ನ ಕುರುಡುತನದ ಬಗ್ಗೆ ತನ್ನನ್ನೇ ಹಳಿದುಕೊಂಡ ರಾಹುಲ... ಕೆಲವು ವರ್ಷಗಳಾದರೂ ಯಾವ ತೊಡಕಿಲ್ಲದೇ, ಯಾವ ನಿರ್ಬಂಧವಿಲ್ಲದೆ, ಸ್ವತಂತ್ರನಾಗಿ ಸ್ವಚ್ಛಂದವಾಗಿ, ಜೀವಕ್ಕೊಂದು ದಿಕ್ಕು ಸಿಗುವತನಕ, ಜೀವಕ್ಕೊಂದು ಬೇರು ಮೊಳೆಯುವತನಕ, ಯಾರ ಗೊಡವೆಯೂ ಇಲ್ಲದೆ ಯಾರ ಪರಿವೆಯೂ ಇಲ್ಲದೆ ತನ್ನಷ್ಟಕ್ಕೆ ತಾನು ನಿಶ್ಚಿಂತೆಯಿಂದ ಜಗತ್ತನ್ನೆಲ್ಲಾ ತಿರುಗುತ್ತಾ, ತರತರಹದ ಅನುಭವಗಳನ್ನು ಸಂಗ್ರಹಿಸುತ್ತಾ ತಿರುಗುವ ಅವನು ಮಾಡಿದ ನಿಶ್ಚಯವೆಲ್ಲಿ? ಈ ಹುಚ್ಚು ಸಂಬಂಧ ಹುಟ್ಟಿಸುವ, ಬೆಳೆಸುವ, ತೊಡಕಾಗಿಸುವ, ಕೈ-ಕೈಯಾಟ ಮೈ-ಮೈಯಾಟವಾಡುವ ಹುಚ್ಚು ಹಂಬಲವೆಲ್ಲಿ? ಏನಿಲ್ಲ. ಮಾಂಶಿಯು—ಕುಂದಾಳ ಮನೆಯವರ ಯೋಜನೆಗೆ ಸ್ವಲ್ಪವೂ ಅವಕಾಶ ಕೊಡಬಾರದು. ನಾಳೆ ನೇರವಾಗಿ ಮುಂಬಯಿ ಮುಂಬಯಿಗೆ ಹೋದ ಮೇಲೆ ಬರೇ ಅಭ್ಯಾಸ ನಂತರ ಸಾಧ್ಯವಾದರೆ...

*

ಅದೇ ದಿನ ರಾತ್ರಿ ಮಾಂಶಿ ರಾಹುಲನ ಕೋಣೆಗೆ ಬಂದು ಅವನ ಮನಸ್ಸನ್ನು ಉಲ್ಲಸಿತಗೊಳಿಸಲು ಆ ಮಾತು ಈ ಮಾತು ತೆಗೆದು ಹರಟೆ ಹೊಡೆಯುವಾಗ ಸಾವಕಾಶವಾಗಿ ಕುಂದಾಳ ವಿಷಯ ತೆಗೆದಳು.

"ಒಳ್ಳೆಯ ಹುಡುಗಿ—ವಾರಕ್ಕೆರಡು ದಿನ ಇಲ್ಲಿಗೆ ಬರದಿದ್ದರೆ ನಮಗೆ ಮನಸ್ಸೇ ನಿಲ್ಲದು. ರಾಹುಲ, ನಿನಗೇನನ್ನಿಸುತ್ತಾಳೆ?"

"ಊಂ? ಇದ್ದಾಳೆ— ಒಂದು ಥರ ಚೆನ್ನಾಗಿದ್ದಾಳೆ"

"ನಿನ್ನ ಮೇಲೆ ಅವಳು ಪಾಪ, ಮನಸ್ಸು ಹಾಕಿದ್ದಾಳೆ."

"ಹಾಕಿದ್ದಾಳು"

"ನಿನ ಈ ಹೊಸ ಹೊಣೆಯ ದೃಷ್ಟಿಯಿಂದ ನೋಡಿದರೆ ಕುಂದಾ ಬಹಳ ಯೋಗ್ಯವಾದ ಹೆಣ್ಣು.. ನನಗನಿಸಿದ್ದನ್ನು ನಾನು ಹೇಳಿದೆ. ನಿನಗೆ ತಿಳಿದಂತೆ ನೀ ಮಾಡು," ಎಂದು ಮುಗಿಸಿದರು ಮಾಂಶಿ.

ರಾಹುಲ ಬೆಡ್ಡಿಂಗ್ ಕಟ್ಟುತ್ತ ಹೇಳಿದ, "ಮಾಂಶಿ, ನಾನು ಮುಂಬಯಿಯಿಂದ ಇಲ್ಲಿಗೆ ಬಂದಾಗ ಇನ್ನೂ ಏಳೆಂಟು ವರ್ಷ ಲಗ್ನದ ವಿಚಾರವನ್ನೇ ಮಾಡಬಾರದೆಂದು ಮಾಡಿದ್ದೆನಲ್ಲಾ .."

"ಯಾಕೆ? ಏಳೆಂಟು ವರ್ಷ ಏನು ಮಾಡುವವನಿದ್ದಿ?"

"ಜೀವನ ಎಂದರೇನು ಎಂಬುದನ್ನು ಶೋಧಿಸುವವನಿದ್ದೇನೆ," ರಾಹುಲ ಸ್ವಲ್ಪ ನಾಟಕೀಯವಾಗಿ ನುಡಿದ.

"ಹ್ಯಾಗಪ್ಪಾ ಶೋಧಿಸುವವನಿದ್ದಿ?"

"ಜಗತ್ತೆಲ್ಲಾ ತಿರುಗಾಡಿ."

"ಎಲ್ಲಿ ಹೋದರೂ ಜೀವನವೆಂದರೆ ಒಂದೇ ಯಪ್ಪಾ— ಜನ್ಮ, ಬೆಳವಣಿಗೆ, ಲಗ್ನ, ಮಕ್ಕಳು, ಕೆಲಸ, ಸಾವು, ಮತ್ತೇನಿದೆ? ಶೋಧಿಸುವುದೇನಿಗೆ ಮಣ್ಣು— ಜೀವನ ನೀನಿದ್ದಲ್ಲಿ ನೀನಿದ್ದಂತೆಯೇ ಇರುತ್ತದೆ."

"ಆದರೆ ಮಾಂಶಿ, ಲಗ್ನದ ಮಾತೇಕೆ ಇಷ್ಟು ಬೇಗ?"

"ಅಂದರೆ? ಬರೇ ಆಟವಾಡಿ, ಆಕೆಯ ಮೂಗಿಗೆ ತುಪ್ಪ ಹಚ್ಚಿ ಕೂಡಿಸಬೇಕೂಂತಿಯೇನೂ ಹುಡುಗಿಯನ್ನ?"

"ನಿನಗ್ಯಾರು ಹೇಳಿದರು?

"ಯಾರ್ಯಾಕೆ ಹೇಳಬೇಕು, ನಾನೇ ನೋಡುತ್ತಿಲ್ಲವೇ? ಅವಳ ತಂದೆ-ತಾಯಿಗೆ ಈಗಲೇ


ರುಚಿಕರ, ಪುಷ್ಟಿಕರ
ಬ್ರಿಟಾನಿಯಾ ಗ್ಲಾಕ್ಸೊ ಬಿಸ್ಕಿಟ್
BRITANNIA
ಬೆಳೆಯುವ
ಮಕ್ಕಳಿಗೆ ಸ್ವಾದಿಷ್ಟ
ಸಂಗಾತಿ
ಬ್ರಿಟಾನಿಯಾ ಬಿಸ್ಕಿಟ್ ಬಲು ಶ್ರೇಷ್ಠ

ಕಾಳಜಿಯಾಗಿಬಿಟ್ಟಿದೆ."

"ಕಾಳಜಿಯಾಗಲು ನಾನೇನೂ ಮಾಡಿಲ್ಲ."

"ಮಾಡಿಲ್ಲವಂತೆ ರಾಹುಲ. ಇನ್ನು ಏನು ಮಾಡಬೇಕು? ಅವಳು ಗರ್ಭಿಣಿಯಾದ ವೇಳೆ ಲಗ್ನವಾಗುತ್ತಿಯೇನು?- ಎಲ್ಲ ರೀತಿಯಿಂದಲೂ ನಿನ್ನ ಜೀವನ ಸುಖಕರವಾಗಲೆಂದೇ ನನ್ನ ಇಚ್ಛೆ: ರಾತ್ರಿ ಹಗಲು ಯೋಚನೆ- ನಿನ್ನ ಲಗ್ನವಾಗಿ ನೀನು ದಾರಿಗೆ ಹತ್ತಿದರೆ ನನ್ನ ಕೆಲಸ ತೀರೀತು- ನಾನು ಮುಕ್ತಳಾದೆ" ಎಂದಾಗ ಮಾಂಶಿಯ ಕಣ್ಣಲ್ಲಿ ನೀರಿದ್ದುವು. ರಾಹುಲನ ಮನಸ್ಸು ಕಲಕಿತು.

"ಮಾಂಶಿ, ನಿನಗೆ ಬೇಕಾದುದನ್ನು ನೀ ಮಾಡು. ನೀ ಹೇಳಿದಂತೆ ಕೇಳುವೆ." ಎಂದು ರಾಹುಲ ಸಾವಕಾಶವಾಗಿ ಕಿಡಕಿಯ ಹೊರಗಿನ ಕತ್ತಲೆಯತ್ತ ನೋಡಿ ಹೇಳಿದ.

"ಏನಾದರೂ ಮಾಡು ಅಂದರೆ ಮೊದಲು ಲಗ್ನವಾಗು. ಅನಂತರ ಎಲ್ಲಾ ಸರಿ ಹೋಗುವುದು. ನಿನ್ನ ಆಶೆಗಳೂ ಈಡೇರುವುವು. ನಡೆ, ಮೊದಲು ಚಹಾ ಮಾಡಿ ಕೊಡುವೆ, ಸ್ಟೇಷನ್ನಿಗೆ ಕೊಂಚ ಬೇಗ ಹೋದರೆ ನೆಟ್ಟಗೆ," ಎಂದು ನುಡಿದು ಮಾಂಶಿ ಅಡಿಗೆಯ ಮನೆಯತ್ತ ಹೋದಳು.

ಮಾಂಶಿಯೊಡನೆ ಟಾಂಗಾದಲ್ಲಿ ಕುಳಿತು ಅವಳ ಉಪದೇಶ ಕೇಳುತ್ತಾ ಬಂದಾಗ ಸ್ಟೇಶನ್ ಬಂದಿತ್ತು. ಕುಂದಾ ಆಗಲೇ ಬಂದು ಕಾದಿದ್ದಳು. ಅವಸರವಸರವಾಗಿ ಬಂದ ಕುಂದಾ, "ಗಾಡಿ ಬಂದಿದೆ ನಡೆಯಿರಿ, ನಡೆಯಿರಿ" ಎಂದೆನುತ್ತಾ ಬ್ಯಾಗ್ ಹಿಡಿದು ನಡೆದಳು. "ರಾಹುಲ, ಫಸ್ಟ್‌ಕ್ಲಾಸ್ ತಿಕೀಟು ತೆಗೆ, ಸ್ವಲ್ಪ ಆರಾಮು ನಿದ್ರೆ ಮಾಡಬಹುದು." ಇದು ಮಾಂಶಿಯ ಆದೇಶ.

ರಾಹುಲ ಕೂಲಿಯವನಿಗೆ ಅವನ ಅಪೇಕ್ಷೆಗಿಂತಲೂ ಕೊಂಚ ಹೆಚ್ಚಾಗಿ ಹಣ ನೀಡಿ ಡಬ್ಬಿಯಲ್ಲಿ ಜಿಗಿದ. ಕರೆಗಂಟೆ ಬಾರಿಸಿದಾಗ ಡಬ್ಬಿಯಿಂದ ಹೊರಕ್ಕೆ ಬಂದು ಕುಂದಾಳ ಗಲ್ಲಕ್ಕೆ ಚುಂಬನವಿತ್ತು ಚಲಿಸುತ್ತಿದ್ದ ಗಾಡಿಗೆ ಮರಳಿ ಜಿಗಿದ ಸ್ತಂಭಿತಳಾದ ಕುಂದಾ 'ಆ'ಯೆಂದು ಬಾಯ್ತೆರೆದು ನಿಂತೇಯಿದ್ದಳು. ರಾಹುಲ ಕೈ ಬೀಸುತ್ತಲೇಯಿದ್ದ. ಕೊನೆಗೊಮ್ಮೆ ದೂರದಿಂದ ಕುಂದಾಳ ಕೈಯು ಅಲೆದಾಡುತ್ತಿದ್ದುದು ರಾಹುಲನ ಕಣ್ಣಿಗೆ ಬಿತ್ತು.

*

ರೂಮಿನಲ್ಲಿ ಎಲ್ಲಿ ನೋಡಿದರಲ್ಲಿ ಪುಸ್ತಕಗಳು, ಫೈಲುಗಳು, ನೋಟ್ಸುಗಳು-ಕಾಟಿನ ಮೇಲೆ, ಟೇಬಲ್ ಮೇಲೆ, ನೆಲದ ಮೇಲೆ- ಇದು ರಾಹುಲನ ಅಭ್ಯಾಸದ ಕ್ರಮ, ಜಗತ್ತಿನ ಪರಿವೆಯಿಲ್ಲದೆ ಅತ್ಯಂತ ಏಕಾಗ್ರಚಿತ್ತದಿಂದ ಪುಸ್ತಕಗಳನ್ನು ನುಂಗುತ್ತ ಕೂಡ್ರುವುದು. ರಾಹುಲನ ಏಕಾಗ್ರತೆ, ಹಗಲು-ರಾತ್ರಿ, ಕೂತಲ್ಲಿ-ನಿಂತಲ್ಲಿ, ಹೋಟೆಲಿನಲ್ಲಿ-ಸುಡಾಸಿನಲ್ಲಿ ಕೂಡ, ಒಂದೊಂದು ಪುಸ್ತಕವನ್ನು ೨-೩ ತಾಸುಗಳಲ್ಲಿ ಅರಗಿಸಿ ನೀರು ಕುಡಿಯುವ ಶಕ್ತಿ ಇತ್ತು. ಪರೀಕ್ಷೆಗೆ ಹತ್ತು ದಿನವಿದ್ದುದರಿಂದ ಅಭ್ಯಾಸವೆಲ್ಲಾ ಮುಗಿದುತಿತ್ತು.

"ರಾಹುಲ್" ರೂಮು ಬಾಗಿಲಿನಲ್ಲಿ ಅರವಿಂದನ ಕರೆ.

ಹಿಂದಿರುಗಿ ನೋಡಿದಾಗ ಅರವಿಂದನ ಜೊತೆ ವೈದೇಹಿ ಕೂಡ; ರಾಹುಲನ ಮನಸ್ಸಿನಲ್ಲಿ ಅಸೂಯೆಯ ಸುಳಿ ಹರಿದಾಡಿ ಮಾಯವಾಯಿತು.

ಒಳಗೆ ಕರೆದು ಕೂಡಿಸಿದ. ಅನಂತರ ಅರವಿಂದನೇ ಚಹ ಹೇಳಿಬರಲು ಹೊರಗೆ ಹೊರಟ.

ವೈದೇಹಿಯ ಸಾನ್ನಿಧ್ಯದಲ್ಲಿ ರಾಹುಲ ಅಸ್ವಸ್ಥಗೊಂಡ.

"ಅಭ್ಯಾಸ ಹೇಗೆ ಸಾಗಿದೆ ರಾಹುಲ್?" ವೈದೇಹಿಯ ಪ್ರಶ್ನೆ,

"ಎಲ್ಲಾ ಆಗಿದೆ ಎಂಬುದು ಒಂದು ಸಮಾಧಾನ...ಆದರೆ ಪರೀಕ್ಷೆಯಾದ ನಂತರ ಎಲ್ಲಾ ಖಾಲಿಯಾಗಿ ಕಡುಕೆನಿಸುತ್ತದೆ, ನಿಮಗೆ ಹಾಗೆನಿಸುವುದಿಲ್ಲವೆ?"

"ಹಾಂ, ಒಂದೊಂದು ಸಾರೆ ಅನಿಸುತ್ತದೆ ನಿಜ. ಆದರೆ ಅದರ ಜೊತೆಗೇ ಒಂದು ಭಾರ

ಅಂಚೆ ಕಚೇರಿ
ಸೇವಿಂಗ್ಸ ಬ್ಯಾಂಕ್ ಅಕೌಂಟಿಗೆ
ನಿಮ್ಮ ನಾಮಿನೇಷನ್

ಅಂಚೆ ಕಚೇರಿಯಲ್ಲಿ ಸೇವಿಂಗ್ಸ್ ಬ್ಯಾಂಕ್ ಅಕೌಂಟ್ ಇಟ್ಟಿರುವವರು ಈಗ ತಮ್ಮ ವಾರಸುದಾರರನ್ನು ಸೂಚಿಸಬಹುದು.

ನಾಮಿನೇಷನ್ ಆಗಿದ್ದರೆ ಹಣ ಪಾವತಿ ಮಾಡುವುದು ಬೇಗ ಸಾಧ್ಯವಾಗುತ್ತದೆ.

ಈ ಸೌಕರ್ಯದ ಪ್ರಯೋಜನವನ್ನೂ ನೀವು ಈಗಾಗಲೇ ಪಡೆಯದೆ ಇದ್ದರೆ, ಈಗ ಪಡೆಯಿರಿ.

ಹೆಚ್ಚಿನ ವಿವರಗಳಿಗೆ ನಿಮ್ಮ ಅಂಚೆ ಕಚೇರಿಯಲ್ಲಿ ವಿಚಾರಿಸಿ

ಹೆಚ್ಚಿನ ಉತ್ತಮ ಸೇವೆಸಲ್ಲಿಸಲು ನೆರವಾಗಿ

ಪೋಸ್ಟ್ಸ ಅಂಡ್ ಟೆಲಿಗ್ರಾಫ್ಸ

davp 76/477

ಇಳಿಯಿತಲ್ಲಾ ಎಂದು ಸಮಾಧಾನ ಕೊಡ—"

ರಾಹುಲ ಒಮ್ಮಲೇ ಸುಮ್ಮನಾದ. ನಂತರ ತನ್ನ ಮಾಡಿಕೆಯ ತಂತ್ರದ ಜಾಲ ಹೆಣೆಯ-ತೊಡಗಿದ.

"ನೀವು ಈಗಲೇ ಲಗ್ನವಾಗದೇ ಇರಲಿಕ್ಕೆ ಯಾವುದಾದರೂ ಒಳ ಕಾರಣಗಳಿವೆಯೇ?" ಎಂದು ರಾಹುಲ ಕೇಳಿದ.

"ಇಲ್ಲವಲ್ಲ !"

"ಇದರರ್ಥ ಇಷ್ಟೆ-ನಿಮ್ಮ ಮನಸ್ಸಿನ ಯಾವುದೋ ಮೂಲೆಯಲ್ಲಿ ಅರವಿಂದನನ್ನು ಲಗ್ನವಾಗಬಾರದೆಂಬ ವಿಚಾರವಿದೆ..."

ವೈದೇಹಿ ಮುಖಗಂಟು ಹಾಕಿ ಕಿಡಕಿಯ ಕಡೆ ದೃಷ್ಟಿ ಹೊರಳಿಸಿದಳು.

"ನಿಮ್ಮ ಮನಸ್ಸಿಗೊಂದು ನೆಮ್ಮದಿ ದೊರಕಿಸಲು, ಜೀವನಕ್ಕೊಂದು ದಿಶೆ ಕಲ್ಪಿಸಿ ಕೊಳ್ಳಲು ಅರವಿಂದ ಒಂದು ನೆಪ ಮಾತ್ರ-ತಾತ್ಕಾಲಿಕ ಸಾಧನ ಮಾತ್ರ..."

ವೈದೇಹಿ ಕಣ್ಣಿಂದ ನೀರು ಹೊರಚಿಮ್ಮಿ ಬಳಬಳ ಹರಿಯತೊಡಗಿತು. ಅದನ್ನು ಒರೆಸುವ ಗೋಜಿಗೂ ಹೋಗದೆ ಕಲ್ಲಿನಂತೆ ಕುಳಿ-ತಳು.

"ವೈದೇಹಿ ಸಾರಿ, ಯಾವುದೊ ಹುಚ್ಚು ಮಾತಿನ ಭರದಲ್ಲಿ ನಿಮ್ಮ ಮನಸ್ಸಿಗೆ ನೋವು ಮಾಡಿದೆ. ನನ್ನ ಮನಸ್ಸಿನ ಜೋಲಿ ಹೋಗಿ ಏನೋ ಅನ್ನಬಾರದನ್ನು ಅಂದುಬಿಟ್ಟೆ" ಎಂದು ರಾಹುಲ ತನ್ನ ಕರವಸ್ತ್ರದಿಂದ ಅವಳ ಕಂಬನಿ ಒರೆಸಿದ.

"ವೈದೇಹಿ, ನಾನು ಹಾಗೆ-ಒಮ್ಮಲೇ ಹೇಳಲು ನನ್ನ ಒಳ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಇದ್ದ ಆಸ್ಥೆ-ಅಲ್ಲ, ಪ್ರೀತಿಯೇ ಕಾರಣವಾಗಿರ ಬೇಕು-ನನಗೆ ಗೊತ್ತಿಲ್ಲ...ಅರವಿಂದನ ಬಗ್ಗೆ ಅಸೂಯೆಯಿರಬೇಕು...ಆದುದರಿಂದ ನಾನಾ-ಡಿದ ಮಾತಿನಲ್ಲಿ ತಥ್ಯವಿಲ್ಲ. ದಯವಿಟ್ಟು ಕ್ಷಮಿಸಿ" ರಾಹುಲ ಏನೇನೋ ಬಡಬಡಿಸ-ತೊಡಗಿದ.

ವೈದೇಹಿ ಮುಖದ ಮೇಲೆ ಆಶ್ಚರ್ಯ, ಭೀತಿ, ಗೊಂದಲ. ಒಂದರ ಹಿಂದೊಂದರಂತೆ ಮೂಡಿ ಹೋದುವು. ಅವಳ ಕಣ್ಣು ಹೊರಗಿನ ಕದದ ಕಡೆಗೇ ನೆಟ್ಟಿದ್ದುವು.

"ನಿಮ್ಮಂಥ ಹೆಣ್ಣಿದ್ದರೇನೇ ನನ್ನ ಜೀವನಕ್ಕೆ ಅರ್ಥ ಉಂಟಾಗುವುದು... ಸ್ಥೈರ್ಯ ಉಂಟಾಗುವುದು ...ಮಾಧವೀ ಒಂದು ತಪ್ಪಾಗಿದ್ದರೆ-ಕುಂದಾ ಇನ್ನೊಂದು ತಪ್ಪು, ಬೆಂಕಿಯಿಂದ ಜಿಗಿದು ಸುಡುವ ತುಪ್ಪದಲ್ಲಿ ಬಿದ್ದಂತೆ... ನಿಮ್ಮ ವ್ಯಕ್ತಿತ್ವದಲ್ಲಿಯೇ ಜಗತ್ತಿನ ಅಂತರಂಗದಲ್ಲಿರುವ ಜೀವನ ಸತ್ವವಿದೆ-ನನಗೆ-ನನ್ನಂಥವರಿಗೆ- ಪುನರ್ಜನ್ಮ ಕೊಡುವ ಸಂಜೀವಿನಿಯಿದೆ... ನೋಡಿರಿ, ನಿಮ್ಮ ಮುಂದೆ ಮಾತನಾಡುವ ಪ್ರತಿ ಶಬ್ದಕ್ಕೂ ಪಕ್ಕಗಳಿದ್ದಂತೆ ಎನಿಸುತ್ತದೆ ..ನಿಮ್ಮ ಒಂದೊಂದು ಕಣ್ಣ ಹನಿಯೂ ನನ್ನ ರಕ್ತದ ಪುಟಿಯುವ ಹನಿಯಂತೆ- ಹುಂ ! ಇದು ಒಂದು ಹುಚ್ಚು ನನ್ನದು-ಅದು ನನಗೆ ಗೊತ್ತು- ನಾ ಹೇಳುತ್ತಿರುವುದನ್ನು, ಪ್ಲೀಜ್ ಸೀರಿಯಸ್ಸಾಗಿ ತೆಗೆದುಕೊಳ್ಳಬೇಡಿರಿ...ಅಭ್ಯಾಸ ಮಾಡಿ ಮಾಡಿ ತಲೆ ವಿಕ್ಷಿಪ್ತವಾಗಿಬಿಟ್ಟಿದೆ— ಅಬ್‌ನಾರ್ಮಲ್ ಆಗಿಬಿಟ್ಟಿದೆ..." ರಾಹುಲನ ಮಾತು ಬಾಗಿ-ಲಲ್ಲಿ ಸದ್ದಾದಾಗ ನಿಂತಿತು.


ಅರವಿಂದ ಚಹಾ ಜೊತೆ ತಿಂಡಿನೂ ತಂದಿದ್ದರಿಂದ ಮೂರು ಜನರೂ ಕುಳಿತು ಅದು-ಇದು ಹರಟುತ್ತಾ ತಿಂದ ಮೇಲೆ. "ರಾಹುಲ, ನಿನ್ನ ಅಭ್ಯಾಸಕ್ಕೆ ತೊಂದರೆ ಕೊಟ್ಟೆವು ನಾವು; ಬರು-ತ್ತೇವೆ", ಎಂದು ಅರವಿಂದ-ವೈದೇಹಿಯರು ಗುಡ್‌ನೈಟ್—ಗುಡ್‌ಬೈ ಹೇಳಿ ಹೊರಟರು. ರಾಹುಲ್ ಡೆಡ್ ಎಂದು ಗುಡುಗಿ ಪುಸ್ತಕದಲ್ಲಿ ತಲೆಹೊಕ್ಕನು.

ಆದರೂ ರಾಹುಲನ ದೃಷ್ಟಿ ವೈದೇಹಿಯ ಮೇಲಿತ್ತು- ಬಿಳೀ ಸೀರೆಯುಟ್ಟು ಹೊರಟಿದ್ದರಿಂದಲೋ ಏನೋ ಆಕಾಶದಿಂದ ಇಳಿದ, ಹೋಗುತ್ತಿದ್ದ ಗಂಗೆಯಂತೆ ಕಂಡಳು.

ರಾಹುಲ ಎದ್ದು ಬಂದು ಹೊರಗಿನಿಂದ ನೋಡತೊಡಗಿದ. ವೈದೇಹಿ—ಅರ-ವಿಂದರ ಜೋಡಿಯನ್ನೇ ನೋಡತೊಡಗಿದ. ಒಂದು ಸುಂದರ ಬಿಳಿ ಜೋಡಿಗೆ ನಾನು ಕಪ್ಪು ಉಗ್ಗಿದೆನಲ್ಲಾ— ಮಸಿ ಹಚ್ಚಿದೆನಲ್ಲಾ-ಬಹುಶಃ ಇದು ನನ್ನ ವೈದೇಹಿಯ ಕೊನೆ ಭೆಟ್ಟಿಯೇ

ನಿಮ್ಮ ಹೃದಯ ಗೀತೆ ಹಾಡಿಹರಡುವ ಪರಿಮಳ

ಲೀನಾ ಅಗರಬತ್ತಿ



ವಿಶ್ವವಿಖ್ಯಾತವಾದ "ಸುಗಂಧ ಶೃಂಗಾರ್" ತಯಾರಕರ

ನವೀನ ಸೃಷ್ಟಿ "ಲೀನಾ"



ARAVINDA PARIMALA WORKS

MYSORE-570 004

"TOPMOST EXPORT AWARD WIN

MURALI/APW 1276

ಏನೋ ?

ವೈದೇಹಿ, ನಾನು ಹೇಳಿದ್ದನ್ನೆಲ್ಲಾ ಅರವಿಂದನಿಗೆ ಹೇಳಿದರೆ ?– ಅರವಿಂದ ದೂರದಿಂದಲೇ ಕೈ ಮುಗಿದು ಸಾಕಪ್ಪಾ ಈ ಬ್ರಹ್ಮರಾಕ್ಷಸನ ಸಂಗತಿ ಎಂದು ಕಾಲಿಗೆ ಬುದ್ಧಿ ಹೇಳುವ. ಅಪ್ಪಿತಪ್ಪಿಯಾದರೂ ಭೇಟಿಯಾದರೆ ದಟ್ಟಣೆಯಲ್ಲಿ ನುಸುಳಿಹೋಗಿಬಿಡಬಹುದು...ಹ್ಹಹ್ಹಹ್ಹಾ...ಅರವಿಂದಾ. ತಡೆ, ಮಾಡುವೆ ನಿನ್ನ ಮದುವೆ ! ಎಂದು ಬ್ರಹ್ಮರಾಕ್ಷಸನಂತೆ ತನ್ನ ಮನಸ್ಸಿನಲ್ಲಿಯೇ ಗಹಗಹಿಸಿ ನಕ್ಕ.

ಹಿಂದಿರುಗಿ ಬಂದು ಡ್ರಾವರಿನಿಂದ ಕುಂದಾಳ ಫೋಟೊ ಹೊರತೆಗೆದು ಕೂಲಂಕಷವಾಗಿ ನೋಡಿ ಕನಿಕರದಿಂದ, "ಪಾಪ, ಯಾಕೆ ನಿನಗೆ ಈ ಬ್ರಹ್ಮರಾಕ್ಷಸನ ಜೊತೆಯಿರುವ ಮಹಾಪಾಪ ? ಬ್ರಹ್ಮಗಂಟೇ ? ಎಲ್ಲಿದೆ ಆ ಬ್ರಹ್ಮದಂಟು ?... ಎಂದು ಬಿಳಿ ಕಾಗದದ ಮೇಲೆ ಗೀಚತೊಡಗಿದ—

—'Dear Kunda'

"ನಿನಗೆ ಗೊತ್ತಿಲ್ಲಾ ಕುಂದಾ. ನಾನಾರೆಂಬುದು. ನಾನೆ ದರೆ ಸುಂದರ ದೇಹದ, ಸುಂದರ ಮುಖವಾಡ ಧರಿಸಿದ ಒಬ್ಬ ಹೃದಯಹೀನ ರಾಕ್ಷಸ. ನಿನಗೆ ಮೋಸ ಮಾಡಿ ಒಳಗೊಳಗೇ ನಗುತ್ತಿರುವ ಕಪಟ ಕೃಷ್ಣ–ಇಯಾಗೋ! ಆದುದರಿಂದ ನೀನು ಜಾಣೆಯಾಗಿದ್ದರೆ, ನಿನ್ನಲ್ಲಿ ಸ್ವಲ್ಪವಾದರೂ ತಿಳುವಳಿಕೆ ಇದ್ದಲ್ಲಿ, ಇನ್ನೂ ಅವಕಾಶವಿರುವಾಗ ಬೇಗನೇ ಸುರಕ್ಷಿತ ಸ್ಥಳಕ್ಕೆ ಓಡಿಹೋಗು. ಇಂದು ನಾನು ನಿನ್ನನ್ನು ನನ್ನ ಕರಪಂಜರದಿಂದ ಬಿಡಲು ಸಿದ್ಧನಿದ್ದೇನೆ. ಹಾರಿ ಹೋಗು–ಆಕಾಶ ದೊಡ್ಡದಿದೆ. ನಿನ್ನನ್ನು ಬೆಚ್ಚಗೆ ಗುಟುಕು ಹಾಕಿ, ಸಾಕಿ ಸಲಹುವ, ನಿನ್ನ ಜಾತಿಯದೇ ಒಂದು ಗಂಡು ಹಕ್ಕಿ ಹುಡುಕಿ ಹಾಯಾಗಿ ತತ್ತಿ ಹಾಕುತ್ತಾ ಕುಳಿತಿರು–ಅಂದರೆ ನಿನ್ನ ಜೀವನ ಉದ್ಧಾರವಾಗುವುದು...ನಾನೂ ಸ್ವತಂತನಾಗುವೆ..."

ಎಂದು ಬರೆದಿದ್ದ ಪತ್ರವನ್ನು ಚೂರು ಚೂರಾಗಿ ಹರಿದು ಬಿಸುಟು ತಲೆಯ ಕೂದಲಲ್ಲಿ ಬೆರಳು ತೂರಿಸಿ ಕಣ್ಣು ಮುಚ್ಚಿದ.

*

ಲಗ್ನದ ಸಮಾರಂಭವೆಂದರೆ, ರಾಹುಲನಿಗೆ ಶನಿ ಕಾಟವಾಗಿತ್ತು. ಆಮಂತ್ರಣ-ಪತ್ರಿಕೆ ಕಳಿಸುವುದು, ಅರಿವೆ-ಅಂಚಡಿ, ಲಗ್ನದ ಸಾಮಾನು—ಗೀಮಾನು ಕೊಂಡುಕೊಳ್ಳುವುದು, ಊರವಾರದ ಜನರ ಇರುವ-ಉಣ್ಣುವ ವ್ಯವಸ್ಥೆ ಮಾಡುವುದು, ಲಗ್ನಕ್ಕೆ ಬಂದ ಗುರ್ತಿನ-ಗುರ್ತಿಲ್ಲದ ಎಲ್ಲರೊಡನೆ ನಗುತ್ತಾ, ಕೈ ಮುಗಿಯುತ್ತಾ, ಕೈ ಕುಲುಕುತ್ತಾ–ಮುಖ್ಯವಾಗಿ ಮಾಂಶಿಯ ಆಜ್ಞೆಯಂತೆ ನಡೆದುಕೊಳ್ಳುವುದು, ಎಲ್ಲವೂ ಸೇರಿ ರಾಹುಲನನ್ನು ವಿಕ್ಷಿಪ್ತನನ್ನಾಗಿ ಮಾಡಿ "ನನಗೆ ಎಲ್ಲಿಯಾದರೂ ಓಡಿ ಹೋಗಬೇಕೆನ್ನಿಸುತ್ತದೆ, ಮಾಂಶಿ," ಎಂದು ಪಂಜರದಲ್ಲಿ ಸಿಕ್ಕ ಹುಲಿಯಂತೆ ಗರ್ಜಿಸಿದ್ದ. ಸಂಬಂಧಿಕರನ್ನೆಲ್ಲ ಕಳಿಸಿ ಕೊಡುವ ಹೊಣೆಯನ್ನು ಮಾಂಶಿಯೇ ಹೊತ್ತುಕೊಂಡು ಅವರಿಬ್ಬರನ್ನೂ "ಹನಿಮೂನಿಗೆ ಎಂಟು ದಿನ ಹೋಗಿ ಬರ್ರಿ" ಎಂದು ಕಳಿಸಿದ್ದರು. ಎಲ್ಲವನ್ನೂ ಮುಗಿಸಿ ಬಂದ ನಂತರ ರಾಹುಲ, ಕುಂದಾಳ ಬಗ್ಗೆ ಯೋಚಿಸತೊಡಗಿದ್ದ. ತನ್ನನ್ನು ಮೆಚ್ಚಿಸಲು, ಯಾವಾಗಲೂ ಯತ್ನಿಸುವ ಅವಳ ಬಗ್ಗೆ ಕನಿಕರವೆನಿಸುತ್ತಿತ್ತು. ಲಗ್ನವಾದ ದಿನದಿಂದಲೂ ಅವಳು ರಾಹುಲನನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದಳು. ಒಮ್ಮೊಮ್ಮೆ ಬೆದರಿದಂತೆ, ಮತ್ತೊಮ್ಮೆ ಅಸಹಾಯಕಳಂತೆ ತನ್ನನ್ನು ಹಿಂಬಾಲಿಸುವುದನ್ನು ಕಂಡಿದ್ದ. ತನ್ನ ಹೆಜ್ಜೆಯ ಮೇಲೆ ಸಪ್ತಪದಿಯ ರೀತಿ ಹೆಜ್ಜೆ ಇಟ್ಟು–ಮೈಗೆ ಮೈ ಹೊದ್ದಿಸಿ ತನ್ನ ವ್ಯಕ್ತಿತ್ವವನ್ನೇ ಮಣ್ಣಿನ ಮುದ್ದೆ ಮಾಡಿ ಬಿಟ್ಟಿದ್ದಾಳೆ ಎಂದು ಕುಂದಾಳ ಬಗ್ಗೆಯೇ ಯೋಚಿಸುತ್ತಾ ಕುಳಿತಿದ್ದ.

"ರಾಹುಲ, ಏನು ಯೋಚನೆ ನಡೆಸಿದ್ದೀರಿ?" ರಾಹುಲನಿಗೆ ಅಂಟಿಕೊಂಡು ಕುಳಿತ ಕುಂದಾಳ ಪ್ರಶ್ನೆ.

"ಏನಿಲ್ಲ, ಸ್ವಲ್ಪ ಆಯಾಸವಾಗಿದೆ ಅಷ್ಟೇ"

ತನ್ನ ಪಕ್ಕದಲ್ಲಿ ಕುಳಿತಿದ್ದ ಕುಂದಾಳ ಕೈ

ಹೆಮ್ಮೆಯಿಂದ
ನಿಮ್ಮ ಅತಿಥಿಗಳಿಗೆ
ಸತ್ಕರಿಸಲು
ಇದೊಂದೇ
ಇನ್‌ಸ್ಟಂಟ್ ಕಾಫಿ.

ಇದು.



ಅತಿಥಿಗಳು ಅನಿರೀಕ್ಷಿತವಾಗಿ
ಆಗಮಿಸಿದರೆ ನೆಸ್‌ಕಾಫೆ
ತಕ್ಷಣವೇ ನಿಮ್ಮ ರುಚಿಗೆ
ಅನುಗುಣವಾಗಿ ತಯಾರಿಸಲು
ಸಹಕರಿಸುವುದು. ಇದೊಂದೇ
ಇನ್‌ಸ್ಟಂಟ್ ಕಾಫಿ.
100% ಶುದ್ಧವಾದ ಕಾಫಿಯ
ತಯಾರಿಕೆ.
ಉತ್ತಮವಾದ ದಕ್ಷಿಣಭಾರತದ
ಕಾಫಿ ಬೀಜಗಳಿಂದ
ತಯಾರಿಸಿದ್ದು ಮತ್ತು
ಇದೊಂದೇ ನಮ್ಮ ಭಾರತದಲ್ಲಿ
ಲೋಕಪ್ರಖ್ಯಾತವಾದ ಕಾಫಿ.

ಪ್ರಪಂಚದಲ್ಲೆಲ್ಲಾ
ಇದೊಂದೇ ಹೆಚ್ಚು
ಮಾರಾಟವಾಗುವ
ಇನ್‌ಸ್ಟಂಟ್ ಕಾಫಿ.

ನೆಸ್‌ಕಾಫೆ

—100% ಶುದ್ಧವಾದ ಕಾಫಿಯಿಂದ ತಯಾರಿಸಿದ
ಇನ್‌ಸ್ಟಂಟ್ ಕಾಫಿ ಇದೊಂದೇ.

A **NESTLÉ** product

NNCM-24-75 KAN

ತೆಗೆದುಕೊಂಡು ಅವಳ ಅಂಗೈ ಗೆರೆಗಳನ್ನು ನೋಡತೊಡಗಿದ.

"ಏನು ಭವಿಷ್ಯ ನೋಡುವಿರೇನು?"

"ನಮ್ಮ ಭವಿಷ್ಯ ನೋಡುತ್ತಿದ್ದೇನೆ"

"ಬಿಡಿ, ನೋಡಿ ಪ್ರದೇಶದ. ಡ್ಯಾಡಿ ಔಷಧಿ ಕಂಪನಿಯಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಜಾಗವನ್ನು ನಿಮಗಾಗಿ ದೊರಕಿಸಿಟ್ಟಿದ್ದಾರೆ- ಮುಂಬಯಿಯಲ್ಲಿ, ಪ್ರಾರಂಭಕ್ಕೆ ೭೦೦ ರೂ. ಪಗಾರ ಗೊತ್ತೇನು?"

"ನಿನ್ನ ಗೊತ್ತಾಯಿತು— ನಿನ್ನ ಡ್ಯಾಡಿಗೆ ಥ್ಯಾಂಕ್ಸ್ ಹೇಳು"

"ಬಹುಶಃ ವರಳಿಯಲ್ಲಿ ಒಂದು ಓನರ್‌ಶಿಪ್ ಫ್ಲ್ಯಾಟ್ ದೊರೆಯಬಹುದು. ಡ್ಯಾಡಿ ಹಾಗೆ ಇನ್‌ಫ್ಲುಯೆನ್ಶಿಯಲ್!" ಕುಂದಾಳ ಮೂಗಿನ ಮೇಲೆ ಅಭಿಮಾನ ಕುಣಿಯುತ್ತಿತ್ತು.

"ವಂಡರ್‌ಫುಲ್-ಅದೂ ಗೊತ್ತಾಗಿದೆ .."

"ಮತ್ತೇನಾದರೂ ಬೇಕಿದ್ದರೆ ಕೇಳಿರಿ- ಕಂಪನಿ ಕೊಡಬಹುದು- ಒಂದು ವರ್ಷದಲ್ಲಿ ಅದನ್ನು ಮಾಂಶಿ ಹೇಳಿದ್ದಾಳೆ" ಎಂದು ಕುಂದಾಳ ಮುಖವನ್ನೇ ನಿರುಕಿಸತೊಡಗಿದ.

ಕುಂದಾಳೊಡನೆ, ಹನಿಮೂನಿನ ದಿನಗಳಲ್ಲಿ, ಹೋಟಲಿನಲ್ಲಿ ಕಳೆದುದನ್ನು ಜ್ಞಾಪಿಸಿಕೊಂಡ. ಗೋವಾ ಬೀಚಿನಲ್ಲಿ ಸಂಜೆಗತ್ತಲಿನಲ್ಲಿ ತಾನು ಪಡೆದ ಮುತ್ತುಗಳನ್ನು ಜ್ಞಾಪಿಸಿಕೊಂಡ. ಅವನ ದೇಹದಲ್ಲಿ ಖುಷಿಯ ಒಂದು ಲಹರಿ ಹರಿದಾಡಿತು. ಪಕ್ಕದಲ್ಲಿ ಕುಳಿತಿದ್ದ ಕುಂದಾಳನ್ನು ನೋಡುತ್ತಾ, ತಡೆಯಲಾರದೆ ಹಿಂದಿನಿಂದ ಅಪ್ಪಿ ಅವಳ ಕುತ್ತಿಗೆಯಲ್ಲಿ ಮುಖವನ್ನಿಟ್ಟ.

*

ರಾಹುಲನಿಗೆ ತನ್ನ ಪರ್ಸನಲ್ ಸ್ಟೆನೋ-ಟೈಪಿಸ್ಟ್ ಛಾಯಾಳ ರೀತಿ ಇಷ್ಟವಾದುವು. ಅವನಿಗೆ ಆಫೀಸಿನಲ್ಲಿ ಸರಿಯಾದ ಆಧಾರ ಕೊಟ್ಟಳು. ಅವಳ ಮೂಲಕವೇ ಒಂದೆರಡು ದಿನಗಳಲ್ಲಿ ಆಫೀಸಿನ ಎಲ್ಲ ವಿಷಯಗಳನ್ನು ತಿಳಿದುಕೊಂಡಿದ್ದ. ತನ್ನ ಕೆಲಸದಲ್ಲಿ ಚಾಣಾಕ್ಷತೆ ಬೆಳೆಸಿಕೊಂಡಿದ್ದ. ಕಂಪನಿಯ ಮುಂಬಯಿ ಡೈರೆಕ್ಟರಾದ ಮಿ. ಸ್ಮಿಥ್‌ರ ಮೆಚ್ಚುಗೆಯನ್ನು ಪಡೆದ. ಮುಂಬೈಗೆ ಬಂದ ನಂತರ ಮಾಂಶಿಯ ನೇತೃತ್ವದಲ್ಲಿ ವರಳಿ ಫ್ಲಾಟ್‌ನಲ್ಲಿ ನೆಲೆಸಿದ ನಂತರ ಆಫೀಸಾಯಿತು. ಮನೆಯಾಯಿತು; ಆಫೀಸಿನಲ್ಲಿ ಮುಖ್ಯವಾಗಿ ಛಾಯಾಳ ದಕ್ಷ ಮಾರ್ಗದರ್ಶನವಾಯಿತು. ಮನೆಗೆ ಬಂದರೆ ಕುಂದಾಳ ಅಕ್ಕರತೆ ಉಣಿಸುವ ತೃಪ್ತಿಯ ಊಟವಾಯಿತು. ನಡುನಡುವೆ ಸಿನಿಮಾ-ನಾಟಕ-ತಿರುಗಾಟ ಶ್ರೀಮಂತ ಹೋಟಲುಗಳ ಊಟ-ಜಗತ್ತೆಂದರೆ ಅವರು ಮೊನ್ನೆಯೇ ನೋಡಲು ಹೋದ ಔದ್ಯೋಗಿಕ ಪ್ರದರ್ಶನದ ಅಮೇರಿಕನ್ ಸ್ಟಾಲಿನಂತೆ ಸುವ್ಯವಸ್ಥಿತವಾದ, ಓರಣವಾದ, ಚಿಕ್ಕದಿದ್ದರೂ ಚೊಕ್ಕದಾದ ನಗುಮುಖದ ರಂಗ. ಮಂಟಪವಾಗಿಬಿಟ್ಟಿತ್ತು. ಈ ತೃಪ್ತಿಯ ಅಮಲಿನ ಪಾತಳಿಯ ಮೇಲೆಯೇ ಸದಾ ಸಾವಕಾಶವಾಗಿ, ಚೌಪಾಟಿಯ ತೈಲಮಯ ಸಮುದ್ರದಲ್ಲಿಯ ದೋಣಿಯಂತೆ ತೇಲುತ್ತಾ ಹೋಗಬೇಕು- ಅಷ್ಟೇ ಸಾಕು- ಅದೇ ಜೀವನ ಎಂದು ತನ್ನ ಮನಸ್ಸಿಗೆ ಒತ್ತಿ ಒತ್ತಿ ಹೇಳಿ ರಾಹುಲ ತನ್ನ ಜೀವನದಲ್ಲಿ ಮಗ್ನನಾಗಿದ್ದ.

ಆಫೀಸಿಗೆ ಬಂದ ತಕ್ಷಣ, "ಬಹಳ ಸುಂದರವಾದ ನಿಮ್ಮ ರಿಪೋರ್ಟ್, ಲಂಡನ್ ಆಫೀಸಿನಲ್ಲಿ ಇದರ ಪ್ರಶಂಸೆಯಾಗದೆ ಬಿಡದು." ಛಾಯಾಳ ಕಣ್ಣಲ್ಲಿ ಅಭಿಮಾನವಿತ್ತು, ಪ್ರಶಂಸೆಯಿತ್ತು.

ರಾಹುಲ ಒಂದು ಸಣ್ಣ ಮುಗುಳು ನಗೆಯ ಒಳ್ಳಿಯನ್ನು ಕೊನರಿದ "ನಾನು ನಿನ್ನ ಸಲುವಾಗಿಯೇ ಈ ರಿಪೋರ್ಟ್ ಬರೆದದ್ದು- ನೀನು ವಾಹ್ವಾ ಅನಬೇಕೆಂದು, ಲಂಡನ್ನಿನಲ್ಲಿಯ ಆ ಕೆಂಪು ಮೂತಿಯ ಮಂಗಗಳಿಗಾಗಿ ತಪಶೀಲು ಕೊಟ್ಟು ಒಂದೆರಡು ಪ್ರತಿ ಸಲ ಕೊಡುವಂಥಹ ಟಿಪ್ಪಣಿ ಕೊಟ್ಟರೆ ಮುಗೀತಿತ್ತು .."

"ನಿಮ್ಮದು ಏನಾದರೊಂದು ಚೇಷ್ಟೆ, ಲಂಡನ್ನಿಗೆ ಹೋಗಲು ನಿಮ್ಮ ಪ್ರತಿಭೆಯನ್ನು ದಂಡಿಸಿದ್ದೀರಿ." ಈಗಾಗಲೇ ಸ್ಮಿಥ್‌ರು ಹೆಡ್ ಆಫೀಸಿಗೆ ನಿಮ್ಮನ್ನು ಕಳಿಸುವ ಯೋಜನೆ-

ಸಿಂಗರ್

ಅನುಪಮ ಕೊಡುಗೆ

ಕೇವಲ


ರೂ.50

ಕೊಡಿರಿ

(ಒಂದು ಪೈಸೆ ಕೂಡ ಹೆಚ್ಚು ಕೊಡಬೇಕಾಗಿಲ್ಲ)

ಇಂದೇ **ಮೆರಿಟ್*** ಹೊಲಿಗೆ ಮಶೀನು ಮನೆಗೆ ಕೊಂಡುಹೋಗಿರಿ

ಉಳಿದ ಹಣವನ್ನು 4 ತಿಂಗಳುಗಳಲ್ಲಿ ಕೊಡಿರಿ—
ಇದಕ್ಕೆ ಯಾವ ಬಡ್ಡಿಯೂ ಇಲ್ಲ!



ನಿಮ್ಮ ಅತ್ಯಂತ ಸಮೀಪದ ಸಿಂಗರ್ ಅಂಗಡಿಯನ್ನು
ಅಥವಾ ಅಧಿಕೃತ ವ್ಯಾಪಾರಿಯನ್ನು ಇಂದೇ ಸಂದರ್ಶಿಸಿರಿ

* ಸಿಂಗರ್ ಕಂಪೆನಿಯ ಟ್ರೇಡ್‌ಮಾರ್ಕ್.

ಯಿನ್ನು ಮಂಡಿಸಿದ್ದಾರೆ," ಎಂದೆನ್ನುತ್ತಾ ಕ್ಯಾಬಿನ್ನಿನಿಂದ ಹೊರಗೆ ಹೋದ ಛಾಯಾಳ ಉತ್ತ ನಿತಂಬಗಳನ್ನು ವೀಕ್ಷಿಸುತ್ತಿದ್ದ ರಾಹುಲ ತನ್ನಲ್ಲೇ ತಾನು ಹೇಳಿಕೊಂಡ ಛಾಯಾಳನ್ನು ಸಿನಿಮಾಕ್ಕೆ ಕರೆದೊಯ್ಯಬೇಕು, ಅವಳ ವಾತ್ಸಲ್ಯದ ಬಿಸಿಯಲ್ಲಿ ತನ್ನ ಮನಸ್ಸನ್ನು ಸ್ವಲ್ಪ ಕಾಸಿಕೊಳ್ಳಬೇಕು ಎಂದು ಈಗೆರಡು ದಿನದಿಂದ ಯೋಚಿಸುತ್ತಿದ್ದರೂ ಆಫೀಸಿಗೆ ಬಂದ ಮೇಲೆ ವೇಳೆ ಕಳೆದು ಆಗಲೇ ಐದು ಗಂಟೆಯಾಗುತ್ತಿತ್ತು. ಹೀಗೆ ದಿನಗಳು ಕಳೆದು ಹೋಗುತ್ತಿತ್ತು.

ಅಂದು ಸಂಜೆ ಆಫೀಸಿನಿಂದ ಮನೆಗೆ ಬಂದ ರಾಹುಲ ತಿಂಡಿ ತಿಂದು ತನ್ನ ಬೆಡ್‌ರೂಂ ಸೇರಿ ಬೋಲ್ಟ್ ಹಾಕಿ ಯೋಚಿಸುತ್ತಾ ಕುಳಿತಿದ್ದ. ಹೊರಗಡೆ ಡ್ರಾಯಿಂಗ್ ರೂಮಿನಲ್ಲಿ, ಅಡಿಗೆ ಮನೆಯಲ್ಲಿ, ಡೈನಿಂಗ್ ರೂಮಿನಲ್ಲಿ, ಮತ್ತೊಂದು ಬೆಡ್‌ರೂಂನಲ್ಲಿ ಗಲಾಟೆ ನಡೆದೇಯಿತ್ತು. ರಾಹುಲನನ್ನು ಇಂದು ರಾತ್ರಿ ಇಂಗ್ಲೆಂಡಿಗೆ ಕಳಿಸಿ ಕೊಡಲೆಂದು ಬಂದಂಥ ಅವನ ಹಾಗೂ ಕುಂದಾಳ ಸಂಬಂಧಿಕರ ಗಲಾಟೆ ಈಗೆರಡು ದಿನದಿಂದ ನಡೆದೇಯಿದೆ. ಸಂಬಂಧಿಕರಿಗೆ, ಗೆಳೆಯರಿಗೆ, ಆಫೀಸಿನ ಸಹೋದ್ಯೋಗಿಗಳಿಗೆ, ಪರಿಚಿತರಿಗೆ– ಪರದೇಶಕ್ಕೆ ಹೋಗುವ ವಿಚಾರ ಮಾತಾಡಿಯಾಡಿ ರಾಹುಲನಿಗೆ ತುಂಬಾ ಬೇಸರ ಬಂದಿದೆ ಪೀಡಾ–ಒಮ್ಮೆ ವಿಮಾನದಲ್ಲಿ ಕುಳಿತರೆ ಸಾಕು ಎಂದೆನಿಸಿಬಿಟ್ಟಿದೆ. ಈ ಎಲ್ಲಾ ಗಲಾಟೆಯಿಂದ, ಎಲ್ಲ ಬಂಧನಗಳಿಂದ–ಮುಕ್ತಿ ಪಡೆಯುವ ಆ ಕ್ಷಣಕ್ಕಾಗಿ ವಿಮಾನ ಆಕಾಶದಲ್ಲಿ ಉತ್ಕ್ಷೇಪಗೊಳ್ಳುವ ಆ ಕ್ಷಣಕ್ಕಾಗಿ– ರಾಹುಲನ ಜೀವ ಕಾತರಿಸಿ ನಿಂತಿದೆ. ಸಿದ್ಧತೆಯೆಲ್ಲಾ ಮುಗಿದಿದೆ. ಹೊರಗೆ ಹೋದರೆ ಬರೀ ಮಾತು–ಹರಟೆ–ನಗು. ತಲೆ ಬಹಳ ನೋಯುತ್ತಿದೆ, ನಿದ್ದೆ ಮಾಡಿದರೆ ಸರಿಯಾದೀತೆಂದು ಕುಂಟು ನೆಪದಿಂದ ಬೆಡ್‌ರೂಂ ಒಳ ಸೇರಿದ್ದಾನೆ.

ಟೇಬಲ್ ಡ್ರಾ ಬದಿಯಲ್ಲಿ ಎಳೆದ, ಒಳಗೆ ಇಣಕಿ ಕಾಗದದ ಕೆಳಗಿದ್ದ ಚಾಕು ತೆಗೆದು ಅದರ ಅಲಗನ್ನು ಹೊರಕ್ಕೆ ಹಿರಿದ. ಈ ಚಾಕುವಿನ ಅಲಗನ್ನು ಒಮ್ಮೆಲೇ ತನ್ನ ಎದೆಯಲ್ಲಿ ಚುಚ್ಚಿಕೊಂಡರೆ ಹೊರಗಿನ ಗಲಾಟೆಯೆಲ್ಲಾ, ಈ ಜಗತ್ತಿನ ಚಕ್ರವೆಲ್ಲಾ ಗಕ್ಕನೆ ನಿಲ್ಲುವುದು–ಎಂಬ ವಿಚಾರ ಬಂದಿತು. ಚಾಕುವನ್ನು ಮರಳಿ ಅದರ ಸ್ಥಳದಲ್ಲಿಟ್ಟು ಮೇಜಿನ ಮೇಲಿದ್ದ ಕಾಗದದ ಮೇಲೆ ಏನೇನೋ ಗೀಚತೊಡಗಿದ–ಯೋಚನೆ ಸಾಗಿದಂತೆ ಮೊನ್ನೆ ಅರವಿಂದನೊಡನೆ ಏನೇನೋ ಹೇಳಿದ್ದು ನೆನಪಾಯಿತು.

"ಅಲ್ಲ, ಅರವಿಂದ–ನಾನೀಗ ತಿರುಗಿ ಬರುತ್ತೇನೆಂದು ನನಗನ್ನಿಸುತ್ತಿಲ್ಲ."

"ಯಾಕೆ? ಅಲ್ಲಿಯೇ ಇದ್ದು ಬಿಡಬೇಕೆಂದು ಮಾಡಿರುವೆಯಾ?"

"ನಾನೇನೋ ನಿರ್ಧರಿಸಿಲ್ಲ, ಆದರೆ ಯಾವುದೋ ಒಳ ಧ್ವನಿ– ತಿರುಗಿ ಬರಲಾರೆ ತಿರುಗಿ ಬರಲಾರೆ ಎಂದು ಪದೇ ಪದೇ ಹೇಳುತ್ತಿದೆ."

"ಹಾಗಿದ್ದರೆ ನೀನು ಅಲ್ಲಿಯೇ ಇರಲು ನಿಶ್ಚಯಿಸಿದ್ದರೆ ಕುಂದಾ ವಹಿನಿಯನ್ನು ಕರೆಸಿಕೊಳ್ಳುವಿಯಾ ತಾನೇ? ಅಥವಾ..."

"ಅವಳು ಅಲ್ಲಿ ಬಂದರೆ– ಅದಕ್ಕಿಂತ ಮರಳಿ ಬರುವುದೇ ಲೇಸು... ಆದರೆ ಅರವಿಂದ, ಮರಳಿ ಬಂದು ನನ್ನಿಂದೇನಾಗಬೇಕಾಗಿದೆ? ಆಫೀಸು, ಹೆಂಡತಿ, ಮಕ್ಕಳು ತಿರುಗಿ ಈ ಚಕ್ರದಲ್ಲಿ ಸಿಕ್ಕಿ ನಿರ್ಜೀವವಾಗಿ ಬಿಡುವೆ— ಒಂದು ರೀತಿಯಲ್ಲಿ ಸತ್ತುಬಿಡುವೆ."

"ಹಾಗಿದ್ದರೆ– ಇಷ್ಟೆಲ್ಲಾ ವಿಕ್ಷೇಪವೇಕೆ?– ಹದರಣವೇಕೆ?"

"ನನಗೆ ನಾನಾಗಿ ಜೀವಿಸಬೇಕಾಗಿದೆ. ಹಾಗೆ ಜೀವಿಸಲಿಕ್ಕೆ ಇಲ್ಲಿ ನನಗೆ ಸಾಧ್ಯವಿಲ್ಲದಾಗಿದೆ, ಈಗಿದ್ದಂತೆ ನನ್ನ ಜೀವವನ್ನು ಸೀಮಿತಗೊಳಿಸಿ ಒಂದು ನಿರ್ದಿಷ್ಟ ವರ್ತುಳದಲ್ಲಿ ಇದ್ದು ಬಿಡಬಹುದು ನಿಜ– ಹಾಗೆ ಎಷ್ಟೊ ಸಾವಿರಾರು ಜನ ಇರುತ್ತಾರೆ ನಿಜ. ಆದರೆ– ನನಗದು ಅಭ್ಯಾಸವಿಲ್ಲ. ನನ್ನದು ಶಾಪಗ್ರಸ್ತ ಆತ್ಮ– ಅದಕ್ಕೆ ತಕ್ಕಂಥ ಪರಿಸರ ಸಿಕ್ಕರೆ ಮಾತ್ರ ಅದು ವಿಕ್ಷೇಪದಿಂದ ಮುಕ್ತವಾಗಿ–

ಗಾಳಿಯಂತೆ ಸ್ವಚ್ಛಂದ

ಸುಂದರವಾದ ನೀಲಿ ಗಗನ—
ಅದರಲ್ಲಿ ಹಾರಾಡುತ್ತಿರುವ ಪಕ್ಷಿಗಣ.
ಎಷ್ಟು ಸ್ವಚ್ಛಂದ, ಎಷ್ಟೊಂದು ಸ್ವತಂತ್ರ!
ತಂಗಾಳಿಯಂತೆ ಕೋಮಲವಾದ
ಈ ಸೀರೆಗಳನ್ನು ಧರಿಸುವಾಗ
ನಮ್ಮಲ್ಲಿಯೂ ಅದೇ ಸ್ವಚ್ಛಂದತೆಯ ಭಾವನೆ.
ಪ್ರಕೃತಿಯ ಡಿಸೈನ್‌ಗಳಿಗೆ ಮತ್ತು ಬಣ್ಣಗಳಿಗೆ
ಸರಿಹೊಂದುವ ಸೀರೆಗಳು...
ಹಾರುತ್ತಿರುವ ಪಕ್ಷಿಗಳಂತೆ ಸುಂದರ.



MAFATLAL GROUP

ಈ ಸೀರೆಗಳು... ಹೌದು, ಅವು ಮಫತ್‌ಲಾಲ್‌ರವರ ಸೀರೆಗಳು.

ಮಫತ್‌ಲಾಲ್ ಬಟ್ಟೆಗಳ ವಿವಿಧ ರೂಪಗಳು:

ಸೂಟಿಂಗ್‌ಗಳು • ಶರ್ಟಿಂಗ್‌ಗಳು • ಸೀರೆಗಳು
• ಡ್ರೆಸ್ ಮೆಟೀರಿಯಲ್‌ಗಳು • ಶರ್ಟ್‌ಗಳು

ಸುಖ ಸಾಯುಲಿ, ಸಮಾಧಾನ ಸಾಯುಲಿ, ಕನಿಷ್ಠ ಒಂದು ರೀತಿಯ ಶಾಂತಿಯನ್ನಾದರೂ ಅನುಭವಿಸಬಹುದು..." ಯೋಚಿಸುತ್ತಿದ್ದಂತೆ ಪೇಪರ್ ಮೂಲೆಯಲ್ಲಿದ್ದ ಸುದ್ದಿಯನ್ನೋದಿ ಅವಾಕ್ಕಾದ. ಹಾಗೇ ಕಂಗ್ರಾಟ್ಸ್ ಮಾಡೋಣವೆಂದು ಫೋನ್ ಮಾಡಿದ. "ಗುಡ್ ಮಾರ್ನಿಂಗ್ ಮಿಸೆಸ್ ಮಾಧವೀ ಅಜ್ವಾನಿ, ಮದುವೆಯಾಗಿ ಅಮೇರಿಕಾಗೆ ಹೊರಟಿರುವ ಸಮಾಚಾರ ಇದೇ ತಾನೇ ನೋಡಿದೆ. ನಾನ್ಯಾರು ಹೇಳು... ರಾಹುಲ... ಗುಡ್ ನಾನು ಇಂಗ್ಲೆಂಡಿಗೆ ಒಂದು ವರ್ಷದ ಮಟ್ಟಿಗೆ ಕಂಪನಿಯಿಂದ ಹೊರಟಿದ್ದೇನೆ... ನೀನು ಮರಳಿ ಬರುವಾಗ ನನಗೆ ಕಂಪನಿ ಅಡ್ರೆಸ್‌ಗೆ ಪತ್ರ ಬರೆ... ಲಂಡನ್ನಿನಲ್ಲಿ... ಹೊಸ ಜಗತ್ತಿನಲ್ಲಿ ಹೊಸ ರೀತಿಯಲ್ಲಿ ಒಮ್ಮೆ ಭೆಟ್ಟಿಯಾಗೋಣ..." ಎಂದು ರಿಸೀವರ್ ಇಟ್ಟು ಕಣ್ಣು ಮುಚ್ಚಿ ಕುಳಿತು ಯೋಚಿಸತೊಡಗಿದ.

ಯೋಚನೆಯನ್ನು ತುಂಡರಿಸಿ ರಾಹುಲ ಬರೆಯತೊಡಗಿದ, "ನಾನು ನನ್ನ ದಾರಿ ಕಂಡುಕೊಳ್ಳಬೇಕಾಗಿದೆ– ನನ್ನ ದಾರಿ ಬೇರೆ, ನಿನ್ನ ದಾರಿ ಬೇರೆ ಕುಂದಾ...ಆದುದರಿಂದ ನೀನು ಧೈರ್ಯವಾಗಿ ನಿನ್ನ ದಾರಿಯನ್ನು ಕಂಡುಕೊಳ್ಳಲೆತ್ನಿಸು. ನಿನ್ನ ಜೀವನ ಮುರಿಯಿತು... ಹಾಳಾಯಿತು. ಎಂದೆಣಿಸಬೇಡ. ನಿಜವಾಗಿ ನೋಡಿದರೆ ನಾವಿಬ್ಬರೂ ಕೂಡಿಯೇ ಹಾಳಾಗುತ್ತಿದ್ದೇವೆ– ನನ್ನ ರೀತಿಯಲ್ಲಿ ನನ್ನ ವ್ಯಕ್ತಿತ್ವದ ನಿಯಮದ ಪ್ರಕಾರ ನನ್ನತನವನ್ನು ಶೋಧಿಸಬೇಕಾಗಿದೆ... ಅದಕ್ಕಾಗಿಯೇ ನಾನು ಹೋಗುತ್ತಿದ್ದೇನೆ. ನಮ್ಮ ಸಂಬಂಧವ ಮೂಲಕ ನನಗೆ ನನ್ನ ವ್ಯಕ್ತಿತ್ವದ ಸತ್ಯ ಸ್ವರೂಪ ದರ್ಶನ ಸ್ವಲ್ಪ ಮಟ್ಟಿಗಾಗಿದೆ. ನಾನು ನಿನ್ನನ್ನು ಬರೀ ಗಿನಿಪಿಗ್ಗಾಗಿ ಉಪಯೋಗಿಸಿಕೊಂಡೆ ಎಂದೆನ್ನಬಹುದು, ಆದರೆ ಮನುಷ್ಯ ಸಂಬಂಧವೇ ಹಾಗೆ– ಒಬ್ಬರನ್ನೊಬ್ಬರು ಒಂದಿಲ್ಲೊಂದು ರೀತಿ ಗಿನಿಪಿಗ್ಗಾಗಿ ಉಪಯೋಗಿಸಿಕೊಳ್ಳುವ ವಿಧಾನವೇ ಮನುಷ್ಯ ಸಂಬಂಧ! ಆದುದರಿಂದ ನೀನು ನನ್ನನ್ನು ಮುಕ್ತ ಹೃದಯದಿಂದ ಕ್ಷಮಿಸಿಬಿಡು... ನಾನು ಅಕಸ್ಮಾತ್ ವಿಮಾನ ಅಪಘಾತದಲ್ಲಿ ನಾಶವಾಗಿ ಬಿಟ್ಟರೆ! ನಿರ್ನಾಮವಾದೆನೆಂದೇ ಭಾವಿಸಿಬಿಡು–" ತಕ್ಷಣ ಮೊನ್ನೆ ಪ್ರೊ. ವಿಲಿಯಮ್ಸ್ ಹೇಳಿದ್ದು ಜ್ಞಾಪಕಕ್ಕೆ ಬಂತು.

"ನೀನೊಬ್ಬ ಹುಚ್ಚ ರಾಹುಲ್, ನೀನೊಬ್ಬ ವಿಕ್ಷಿಪ್ತ ಮನುಷ್ಯ. ನಿನಗೆ ತಿಳಿದಂತೆಯೇ ನೀನು ಮಾಡುವವ..."

ಮರಳಿ ಬರೆಯತೊಡಗಿದ.

"ನನಗೆ ತಿಳಿದಂತೆಯೇ ನಾನು ಮಾಡಬೇಕು... ನಾನು ಸಧ್ಯ ನಿನ್ನನ್ನು ಬಿಡಬೇಕೆಂದಾಗಲೇ..."

ಹೊರಗೆ ಬಾಗಿಲು ಬಡಿದ ಸದ್ದು. ರಾಹುಲ ಕಾಗದವನ್ನು ಮಡಚಿ ಡ್ರಾಯರಿನಲ್ಲಿಟ್ಟು ಬಾಗಿಲು ತೆಗೆದ.

ಒಳಗೆ ಬಂದ ಕುಂದಾ, "ರಾಹುಲ ಏನು ನಡೆಸಿದ್ದೀರಿ, ಒಳಗೆ–" ಎಂದು ಕೇಳಿದಳು.

"ವಿಚಾರ–ಚಿಂತನೆ."

ಈಗೆಂಥಾ ವಿಚಾರ, ಚಿಂತನೆ? ಇಂಗ್ಲೆಂಡಿಗೆ ಹೋದ ನಂತರ ಅಲ್ಲಿ ಮಾಡುವಿರಂತೆ," ಎಂದೆನ್ನುತ್ತಾ ಅವನೊಡನೆ ಹೋಗಿ ಮಂಚದ ಮೇಲೆ ಕುಳಿತಳು.

"ಕುಂದಾ!" ರಾಹುಲನ ಧ್ವನಿ ನಡುಗಿತು– ನಿನಗೊಂದು ಮಾತು ಹೇಳಬೇಕೆಂದಿರುವೆ.

"ಏನದು?" ಕುಂದಾಳ ಮೋರೆ ಭೀತಿಯಿಂದ ಬಿಳುಚಾಯಿತು.

"ಅದೋ ಆ ಡ್ರಾಯರದಲ್ಲಿದೆ—ಓದಿ ನೋಡು, ನಾನು ಪ್ರಾಮಾಣಿಕವಾಗಿ ಅನಿರುದ್ಧನನ್ನು ಹೇಳಲೇಬೇಕಿತ್ತು–ನನಗೆ ಯಾರನ್ನೂ ವಂಚಿಸುವ ಮನಸ್ಸಿಲ್ಲ, ಆದ್ದರಿಂದ...

"ನಿಮ್ಮ ಮಾತೇ ತಿಳಿಯದು," ಎಂದು ಕುಂದಾ ಹೋಗಿ ಕಾಗದ ತೆಗೆದು ಓದತೊಡಗಿದಳು. ಓದುತ್ತಿದ್ದಂತೆಯೇ ಕಣ್ಣಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು. ಓದುವುದನ್ನು ನಿಲ್ಲಿಸಿ ಹಠಾತ್ತನೆ ಡ್ರಾ ಎಳೆದು ಚಾಕು ತೆಗೆದುಕೊಂಡು ಅದರ ಅಲಗನ್ನು ಹೊರಕ್ಕೆ ಹರಿದಳು. ಅವಳ ಮೇಲೆಯೇ ದೃಷ್ಟಿಯಿಟ್ಟು ನೋಡುತ್ತಿದ್ದ ರಾಹುಲ ಬುದಿಂಗನೆ ಎದ್ದು ಓಡಿ ಹೋಗಿ ಅವಳ

ಕೈಯನ್ನು ಘಟ್ಟಿಯಾಗಿ ಹಿಡಿದ.

"ಇದೇನು ಕುಂದಾ, ಬಿಡು ಆ ಚಾಕು-ಬಿಡು..." ರಾಹುಲ ಕೂಗಿದ.

"ಬಿಡಿರಿ ನನ್ನ ಕೈಯನ್ನು...ನೋಡೋಣ, ನಿಮ್ಮ ದಾರಿ ನಿಮಗೆ...ನನ್ನ ದಾರಿ ನನಗೆ... ನನ್ನ ದಾರಿಯನ್ನು ನಾನು ಕಂಡುಕೊಳ್ಳುವೆ, ನೀವೇಕೆ ಅಡ್ಡ ಬರುವಿರಿ...?" ಕುಂದಾ ರಾಹುಲನಿಂದ ಕೊಸರಿಕೊಳ್ಳಲು ಯತ್ನಿಸಿದಳು.

ಮೈಯಲ್ಲಿ ಭೂತ ಸಂಚಾರವಾದಂತಾಗಿ ಅವಳು ಹೆಣಗಾಡುವುದನ್ನು ನೋಡಿ ರಾಹುಲನಿಗೆ ಭೀತಿಯಾಯಿತು. ತನ್ನ ಮೈಯಲ್ಲಿ ಶಕ್ತಿಯನ್ನು ಒಂದುಗೂಡಿಸಿ ರಾಹುಲ ಕುಂದಾಳನ್ನು ಗಟ್ಟಿಯಾಗಿ ಹಿಡಿದು, ಅವಳ ಕೈಯಲ್ಲಿದ್ದ ಚಾಕುವನ್ನು ಕಸಿದುಕೊಂಡು ಬಾಲ್ಕನಿಯಲ್ಲಿ ಚೆಲ್ಲಿದ. "ಏನಾಯಿತು ಕುಂದಾ ?... ಹೀಗೇಕೆ ಹುಚ್ಚಳಂತೆ ಮಾಡುವಿ?...ಏನೋ ಒಂದು ವಿಚಾರ ಒಂದು ಸಂದರ್ಭದಲ್ಲಿ ಹೊರ ಬಂತು, ಬರೆದೆ. ಅದನ್ನೋದಿ ತಲೆ ಕೆಡಿಸಿಕೊಳ್ಳಬೇಕೆ?... ಹುಚ್ಚಿ, ನಾ ತಿರುಗಿ ಬಂದೇ ಬರುವೆ ನಿನ್ನಂಥ ಸೌಂದರ್ಯದ, ಪ್ರೀತಿಯ ಅಕ್ಷಯಪಾತ್ರೆ ನನಗೆಲ್ಲಿ ಸಿಕ್ಕೀತು?... ಪರದೇಶದ ಅರಣ್ಯದಲ್ಲಿ ಅಡ್ಡಾಡುತ್ತಾ ಕೂಡ್ರಲು ನಾನೇನು ಹುಚ್ಚನೇ, ಸನ್ಯಾಸಿಯೇ? ಅಥವಾ ಬುದ್ಧನೇ, ಕ್ರಿಸ್ತನೇ? ಕುಂದಾ, ನೀನೇನೂ ಕಾಳಜಿ ಮಾಡಬೇಡ, ನೋಡಿಲ್ಲಿ, ನೋಡು ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡು. ನಾನು ಯಾರೂ ಅಲ್ಲ—ಬರೇ ರಾಹುಲ—ನಿನ್ನ ಪತಿ ರಾಹುಲ," ಎಂದು ಕುಂದಾಳ ಮೋರೆಯೆತ್ತಿ ಅವಳ ಮುಂದೆ ತನ್ನ ಮುಖವನ್ನು ಚಾಚಿ ಹಿಡಿದ.

"ನನಗೊತ್ತು ರಾಹುಲ್. ನೀನು-ನೀನು ಮರಳಿ ಎಂದಿಗೂ ಎಂದಿಗೂ ಬರಲಾರೆ..." ಎಂದೆನ್ನುತ್ತಾ ಕುಂದಾ ಕಣ್ಣುಮುಚ್ಚಿ ಕುಸಿಯತೊಡಗಿದಳು.

ರಾಹುಲ ಅವಳನ್ನೆತ್ತಿ ಹಾಸಿಗೆಯಲ್ಲಿ ಮಲಗಿಸಿ, ಅವಳ ಮುಖವನ್ನೇ ನಿರುಕಿಸುತ್ತಾ ಕಲ್ಲಿನಂತೆ ನಿಂತ. ★

ಸುದೈವಿ ಯುವಕ

೧೭೪೪ ರಲ್ಲಿ ಹಣದ ಅಭಾವ, ಸಾಲದ ಹೊರೆ, ಗೆಳೆಯರಿಲ್ಲದ ಏಕಾಕಿತನ, ಕೆಲಸದಲ್ಲಿನ ನೀರಸತೆಗಳಿಂದ ಬೇಸತ್ತು ಜೀವನದಲ್ಲಿ ಜಿಗುಪ್ಸೆಗೊಂಡ ಈಸ್ಟ್ ಇಂಡಿಯಾ ಕಂಪನಿಯ ಇಪ್ಪತ್ತು ವರ್ಷ ವಯಸ್ಸಿನ ಗುಮಾಸ್ತನೊಬ್ಬ ಆತ್ಮಹತ್ಯೆ ಮಾಡಿಕೊಳ್ಳಲು ತನಗೆ ತಾನೆ ಗುಂಡು ಹಾರಿಸಿಕೊಂಡ ಅದೃಷ್ಟವಶಾತ್ ಗುಂಡು ತಾಕಲಿಲ್ಲ. ದೇವರು ತನ್ನನ್ನು ಯಾವುದೊ ಮಹತ್ಕಾರ್ಯಕ್ಕಾಗಿ ಉಳಿಸಿರಬೇಕೆಂದು ಭಾವಿಸಿ ಆತ್ಮಹತ್ಯೆ ಪ್ರಯತ್ನವನ್ನು ಕೈ ಬಿಟ್ಟ ಅವನೇ ಮುಂದೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಸ್ತಿಭಾರ ಹಾಕಿದ ರಾಬರ್ಟ್ ಕ್ಲೈವ್.

ಸಂಗ್ರಹ: ಸಿ. ಎಸ್. ಅಭಿನಂದನ

This magazine owned by the Karnataka Patrika Private Ltd. is printed by Shri K. Janardana and published by Shri D. L. Kerur at the Samyukta Karnatak Press, Koppikar Road, Hubli. Representatives: Bombay: V. S. Mani, Phone: 472794, Calcutta: H. Muzamdar Phone: 46-4238; Madras: P. N. Srinivasan, Phone: 83748; New Delhi P. R. Chopra, Phone: 224130


ಫಾಸ್ಫೋಮಿನ್

ಫಾಸ್ಫೋಮಿನ್ ಕುಟುಂಬದ ಎಲ್ಲರಿಗೂ ಆರೋಗ್ಯಕರ

ಜೀವನದಲ್ಲಿ ಇನ್ನಷ್ಟು ಮೋಜಿನ ಭಾಗ್ಯ ದೊರೆಯುವುದು, ಶರೀರದಲ್ಲಿರೆ ಆರೋಗ್ಯ.




ಫಾಸ್ಫೋಮಿನ್. ಹಸುರು ಬಣ್ಣದ, ಹಣ್ಣಿನ ರುಚಿಯಿರುವ ವಿಟಮಿನ್ ಟಾನಿಕ್, ಫಾಸ್ಫೋಮಿನ್. ಹಸಿವೆಯನ್ನು ಉದ್ದೀಪನಗೊಳಿಸುತ್ತದೆ. ಶಕ್ತಿ ನೀಡುತ್ತದೆ, ದೇಹದಾರ್ಢ್ಯವನ್ನು ಹೆಚ್ಚಿಸುತ್ತದೆ. ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಕುಟುಂಬದ ಎಲ್ಲರನ್ನೂ ಆರೋಗ್ಯವಾಗಿ ಮತ್ತು ಚಟುವಟಿಕೆಯಿಂದ ಇಡುತ್ತದೆ.



SARABHAI CHEMICALS LTD.

KASTURI PRICE : 1–25 Regd. No. KRNG 43
Registered with the Registrar of Newspapers for India under No. 3633/57



COVER PRINTED AT BHARAT PHOTO OFFSET WORKS, DHARWAR-1